RNI No. KARBIL/2001/47147

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

ಭಾಗ–I	ಬೆಂಗಳೂರು, ಬುಧವಾರ, ಸೆಪ್ಟೆಂಬರ್ ೦೪, ೨೦೧೯ (ಭಾದ್ರಪದ ೧೩, ಶಕ ವರ್ಷ ೧೯೪೦)	ನಂ. ೭೪೧
Part–I	Bengaluru, Wednesday, September 04, 2019 (Bhadrapada 13, Shaka Varsha 1940)	No. 741

ಕರ್ನಾಟಕ ಸರ್ಕಾರದ ನಡವಳಿಗಳು

ಸಹಕಾರ ಸಚಿವಾಲಯ

ವಿಷಯ :– ಶ್ರೀ ದಿಗಂಬರ ಜೈನ ಶ್ರೀ ಪಾರ್ಶ್ವನಾಥಸ್ವಾಮಿ ಜಿನ ಮಂದಿರ(ರಿ), ಚಿಕ್ಕಪೇಟೆ, ತುಮಕೂರು ಈ ಸಂಘದ ಆಡಳಿತಾಧಿಕಾರಿ ಅವಧಿಯನ್ನು ವಿಸ್ತರಿಸುವ ಬಗ್ಗೆ.

ಸರ್ಕಾರದ ಆದೇಶ ಸಂಖ್ಯೆ: ಸಇ 04 ಸಸಂನೋ 2019 ಬೆಂಗಳೂರು, ದಿನಾಂಕ:30.08.2019

ಓದಲಾಗಿದೆ:–

1. ಸರ್ಕಾರದ ಆದೇಶ ಸಂಖ್ಯೆ: ಸಇ 04 ಸಸಂನೋ 2019 ಬೆಂಗಳೂರು, ದಿನಾಂಕ:23.01.2019.
2. ಸರ್ಕಾರದ ಆದೇಶ ಸಂಖ್ಯೆ: ಸಇ 04 ಸಸಂನೋ 2019 ಬೆಂಗಳೂರು, ದಿನಾಂಕ:12.02.2019.
3. ಸಹಕಾರ ಸಂಘಗಳ ಉಪ ನಿಬಂಧಕರು, ತುಮಕೂರು ಜಿಲ್ಲೆ, ತುಮಕೂರು ಹಾಗೂ ಆಡಳಿತಾಧಿಕಾರಿ ಶ್ರೀ ದಿಗಂಬರ ಜೈನ ಶ್ರೀ ಪಾರ್ಶ್ವನಾಥಸ್ವಾಮಿ ಜಿನ ಮಂದಿರ(ರಿ) ಇವರ ಪತ್ರ ಸಂಖ್ಯೆ: ಡಿ.ಆರ್.ಟಿ./ಸಸಂ/46/84–85/ಸಿಆರ್–35/2019–20, ದಿನಾಂಕ:26.07.2019

ಪ್ರಸ್ತಾವನೆ:

ಮೇಲೆ (1) ರಲ್ಲಿ ಓದಲಾದ ಆದೇಶದಲ್ಲಿ ಶ್ರೀ ದಿಗಂಬರ ಜೈನ ಶ್ರೀ ಪಾರ್ಶ್ವನಾಥಸ್ವಾಮಿ ಜಿನ ಮಂದಿರ(ರಿ), ಚಿಕ್ಕಪೇಟೆ, ತುಮಕೂರು ಈ ಸಂಘಕ್ಕೆ ಸಹಕಾರ ಸಂಘಗಳ ಸಹಾಯಕ ನಿಬಂಧಕರು, ತುಮಕೂರು ಉಪ ವಿಭಾಗ, ತುಮಕೂರು ಜಿಲ್ಲೆ ಇವರನ್ನು ಆದೇಶ ಹೊರಡಿಸಿದ ದಿನಾಂಕದಿಂದ ಜಾರಿಗೆ ಬರುವಂತೆ ಆರು (6) ತಿಂಗಳ ಅವಧಿಗೆ ಆಡಳಿತಾಧಿಕಾರಿಯನ್ನಾಗಿ ನೇಮಿಸಿ ಆದೇಶಿಸಲಾಗಿರುತ್ತದೆ.

ಮೇಲೆ (2) ರಲ್ಲಿ ಓದಲಾದ ಆದೇಶದಲ್ಲಿ ಸಂಘದ ಆಡಳಿತಾಧಿಕಾರಿಯಾಗಿ ನೇಮಿಸಲಾಗಿದ್ದ ಸಹಕಾರ ಸಂಘಗಳ ಸಹಾಯಕ ನಿಬಂಧಕರು, ತುಮಕೂರು ಉಪ ವಿಭಾಗ, ತುಮಕೂರು ಇವರ ಬದಲಾಗಿ ಸಹಕಾರ ಸಂಘಗಳ ಉಪ ನಿಬಂಧಕರು ಹಾಗೂ ಜಿಲ್ಲಾ ಸಂಘಗಳ ನೋಂದಣಾಧಿಕಾರಿಗಳು ತುಮಕೂರು ಜಿಲ್ಲೆ, ತುಮಕೂರು ಇವರನ್ನು ಆಡಳಿತಾಧಿಕಾರಿಯಾಗಿ ನೇಮಿಸಿ ಆದೇಶಿಸಲಾಗಿರುತ್ತದೆ.

ಮೇಲೆ (3) ರಲ್ಲಿ ಓದಲಾದ ಸಂಘಗಳ ಜಿಲ್ಲಾ ನೋಂದಣಾಧಿಕಾರಿಗಳ ಪತ್ರದಲ್ಲಿ ಸಂಘಕ್ಕೆ ಕಾರ್ಯಕಾರಿ ಸಮಿತಿ ಚುನಾವಣೆ ನಡೆಸಲಾಗಿರುತ್ತದೆಂದು ಆದರೆ ಸಿವಿಲ್ ನ್ಯಾಯಾಲಯ, ತುಮಕೂರು ಇಲ್ಲಿ ಮೂಲ ದಾವಾ ಸಂಖ್ಯೆ:246/2019 ಪ್ರಕರಣ ದಾಖಲಾಗಿ ದಿನಾಂಕ:09.06.2019 ರಂದು ನಡೆಯುವ ಚುನಾವಣಾ ಫಲಿತಾಂಶವನ್ನು ಘೋಷಿಸದಂತೆ ತಡೆಯಾಜ್ಞೆ ನೀಡಲಾಗಿದ್ದು, ಪ್ರಕರಣ ಇತ್ಯರ್ಥಕ್ಕೆ ಬಾಕಿ ಇರುವುದರಿಂದ ಸಂಘದ ಕಾರ್ಯಕಾರಿ ಸಮಿತಿ

ರಚನೆಯಾಗದಿರುವುದರಿಂದ ಆಡಳಿತಾಧಿಕಾರಿ ಅವಧಿ ಮುಗಿದಿದ್ದು, ಈ ಅವಧಿಯನ್ನು ಮುಂದಿನ ಆರು ತಿಂಗಳ ಅವಧಿಗೆ ವಿಸ್ತರಿಸಬೇಕೆಂದು ಕೋರಿರುತ್ತಾರೆ.

ಮೇಲ್ಕಂಡ ಅಂಶಗಳನ್ನು ಪರಿಶೀಲಿಸಿ, ಆಡಳಿತಾಧಿಕಾರಿಗಳು, ಶ್ರೀ ದಿಗಂಬರ ಜೈನ ಶ್ರೀ ಪಾರ್ಶ್ವನಾಥಸ್ವಾಮಿ ಜಿನ ಮಂದಿರ(ರಿ), ಚಿಕ್ಕಪೇಟೆ, ತುಮಕೂರು ಇವರ ಕೋರಿಕೆಯನ್ನು ಪರಿಗಣಿಸಿ, ಸಂಘದ ಆಡಳಿತಾಧಿಕಾರಿ ಅವಧಿಯನ್ನು ದಿನಾಂಕ:23.07.2019 ರಿಂದ ಮುಂದಿನ ಆರು ತಿಂಗಳ ಅವಧಿಗೆ ಅಥವಾ ನ್ಯಾಯಾಲಯದ ಆದೇಶವಾಗಿ ಆಡಳಿತ ಮಂಡಳಿಗೆ ಅಧಿಕಾರ ಹಸ್ತಾಂತರಿಸುವವರೆಗೆ ಇದರಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ವಿಸ್ತರಿಸಲು ಸರ್ಕಾರವು ತೀರ್ಮಾನಿಸಿದೆ. ಆದ್ದರಿಂದ, ಈ ಆದೇಶ.

ಆದೇಶ

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ 1960ರ ಕಲಂ 27–ಎ ರನ್ವಯ ಶ್ರೀ ದಿಗಂಬರ ಜೈನ ಶ್ರೀ ಪಾರ್ಶ್ವನಾಥಸ್ವಾಮಿ ಜಿನ ಮಂದಿರ(ರಿ), ಚಿಕ್ಕಪೇಟೆ, ತುಮಕೂರು ಈ ಸಂಘದ ಆಡಳಿತಾಧಿಕಾರಿ ಅವಧಿಯನ್ನು ದಿನಾಂಕ:23.07.2019 ರಿಂದ ಮುಂದಿನ ಆರು ತಿಂಗಳ ಅವಧಿಗೆ ಅಥವಾ ನ್ಯಾಯಾಲಯದ ಆದೇಶವಾಗಿ ಆಡಳಿತ ಮಂಡಳಿಗೆ ಅಧಿಕಾರ ಹಸ್ತಾಂತರಿಸುವವರೆಗೆ ಇದರಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ವಿಸ್ತರಿಸಿ ಆದೇಶಿಸಿದೆ. ಈ ಆದೇಶವು ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಗೊಂಡ ದಿನಾಂಕದಿಂದ ಜಾರಿಗೆ ಬರುತ್ತದೆ.

ಆಡಳಿತಾಧಿಕಾರಿಗಳು ನೂತನ ಆಡಳಿತ ಮಂಡಳಿಗೆ ಅಧಿಕಾರ ಹಸ್ತಾಂತರಿಸಿ, ಸರ್ಕಾರಕ್ಕೆ ವರದಿ ನೀಡಲು ಸೂಚಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಚೇತನ ಎಂ.
ಸರ್ಕಾರದ ಅಧೀನ ಕಾರ್ಯದರ್ಶಿ–3 (ಪ್ರ),
ಸಹಕಾರ ಇಲಾಖೆ.

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ ಘಟಕ, ಬೆಂಗಳೂರು. (ಪಿ7) ಪ್ರತಿಗಳು: 20

RNI No. KARBIL/2001/47147

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

ಭಾಗ–I	ಬೆಂಗಳೂರು, ಸೋಮವಾರ, ಸೆಪ್ಟೆಂಬರ್ ೦೯, ೨೦೧೯ (ಭಾದ್ರಪದ ೧೮, ಶಕ ವರ್ಷ ೧೯೪೦)	ನಂ. ೭೬೨
Part–I	**Bengaluru, Monday, September 09, 2019 (Bhadrapada 18, Shaka Varsha 1940)**	**No. 762**

PROCEEDINGS OF THE GOVERNMENT OF KARNATAKA
URBAN DEVELOPMENT SECRETARIAT

Sub: Constitution of Committee to probe into the cases of the remaining G-Category sites by the Bangalore Development Authority as per the orders of the Hon'ble High Court in Writ Petition No.23475/2010 C/w 1032/2006 & 36275/2009 (BDA-PIL), dated 09.07.2019.

READ:

1) G.O.No.UDD 341 MNJ 2012(P), Bangalore, dated.03.02.2015.
2) Commissioner, Bangalore Development Authority letter dated 06.01.2018.
3) Government letter No.UDD 174 MNX 2017, dated 02.02.2018.

PREAMBLE:

In Government Order read at (1) above, Government have constituted the Committee under the Chairmanship of Hon'ble Justice A.M.Farooq, Retired High Court Judge to probe into the allotments made in favour of Respondents 4 to 252 in W.P.No.23475/2010 and Respondents 4 to 67 in W.P.No.36275/2009.

The above said committee have submitted the report in 6 volumes on 06.12.2016, 08.12.2016, 05.01.2017, 13.02.2017, 06.03.2017, 06.04.2017, 27.04.2017 respectively. The said Committee has examined 314 cases of allotment out of which, 254 allotments were found in order. In 15 cases passing of orders of Resumption has been recommended and in 45 cases, there are no specific recommendation made by the Committee.

Commissioner, Bangalore Development Authority in their letter dated 06.01.2018 read at (2) above have sent a proposal to Government to constitute fresh committee in terms of the earlier passed in the Writ Petition to consider the cases of the remaining G-Category sites.

In Government letter dated 02.02.2018 read at (3) above Government have given direction to Commissioner, Bangalore Development Authority to obtain the permission from Hon'ble Court for the constitution of the Committee.

Accordingly, Commissioner, Bangalore Development Authority has filed a IA No.1 of 2018 in Writ Appeal No.5453/2013 for constituting a fresh committee in terms of the earlier order passed in Writ Petition to consider the cases of remaining G-Category sites.

Hon'ble High Court in its order dated 09.07.2019 directed the Government to reconstitute the Committee under the Chairmanship of Hon'ble Justice D.V.Shylendra Kumar, Retired High

Court Judge consisting of Justice A.V.Chandrashekar, Retired High Court Judge and Sri.Subhir Hari Singh, IAS, Retired Additional Chief Secretary to Government as Members for this Committee. Hence the following order.

Government Order No.UDD 174 MNX 2017,
Bengaluru, dated 09.09.2019

Government is pleased to constitute the following three member Committee to probe into the cases of the remaining G-Category sites.

1	Hon'ble Justice D.V.Shylendra Kumar, Retired Hon'ble High Court Judge.	Chairman
2	Hon'ble Justice A.V.Chandrashekar, Retired Hon'ble High Court Judge.	Member
3	Sri Subhir Harisingh, I.A.S., Retired Addl. Chief Secretary to Government	Member

All the members would enjoy equal treatment in terms of status and other facilities.

Bangalore Development Authority shall provide all the infrastructure and all other logistic facilities to the Hon'ble Committee (including vehicle, place to work, PA and Computers etc.,). The TA/DA and remuneration, other contingent expenditures etc., as eligible will be met from the funds with BDA.

The Hon'ble Committee will look into all the observation and directions of the Hon'ble High Court dated: 07.11.2014 in I.A.No.1/2014 in W.P.23475/2010 & I.A.No.1/2018 in W.A.No.5453/2013 C/w I.A. No.7/2017 & 1/2019 in W.P.No.23475/2010 & in W.P.No.36275/2009 (BDA-PIL), dated. 09/07/2019 corrected from W.P. No.36275/2009 vide order dated:12-07-2019 and also to consider the cases of remaining 'G' category sites and to submit its report within 3 months from the date the documents are furnished by the BDA and the State Government.

By Order and in the name of the Governor of Karnataka,

K.S.Jagadisha Reddy
Under Secretary to Government,
Urban Development Department (BDA & B-1),

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ ಘಟಕ, ಬೆಂಗಳೂರು. (ಕಿ7) ಪ್ರತಿಗಳು: 100

RNI No. KARBIL/2001/47147

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

ಭಾಗ–I	ಬೆಂಗಳೂರು, ಬುಧವಾರ, ಸೆಪ್ಟೆಂಬರ್ ೧೧, ೨೦೧೯ (ಭಾದ್ರಪದ ೨೦, ಶಕ ವರ್ಷ ೧೯೪೦)	ನಂ. ೭೬೪
Part–I	Bengaluru, Wednesday, September 11, 2019 (Bhadrapada 20, Shaka Varsha 1940)	No. 764

ಕರ್ನಾಟಕ ಸರ್ಕಾರದ ನಡವಳಿಗಳು

ಸಹಕಾರ ಸಚಿವಾಲಯ

ವಿಷಯ:– ಪ್ರಜಾ ಸಂಸ್ಥೆ, ರಾಣಾ ಸಿಂಗ್ ಪೇಟೆ, ಬೆಂಗಳೂರು ಈ ಸಂಘಕ್ಕೆ ಆಡಳಿತಾಧಿಕಾರಿ ನೇಮಿಸುವ ಬಗ್ಗೆ.

ಸರ್ಕಾರದ ಆದೇಶ ಸಂಖ್ಯೆ: ಸಇ 11 ಸಸಂನೋ 2016, ಬೆಂಗಳೂರು, ದಿನಾಂಕ: 07.09.2019

ಓದಲಾಗಿದೆ:–

1. ನೋಂದಣಿ ಮಹಾಪರಿವೀಕ್ಷಕರು ಮತ್ತು ಮುದ್ರಾಂಕ ಆಯುಕ್ತರು, ಬೆಂಗಳೂರು ಇವರ ಪತ್ರ ಸಂಖ್ಯೆ: ಸೊಸೈಟಿ–82/2015–16, ದಿನಾಂಕ: 08.10.2015.
2. ಸರ್ಕಾರದ ಕಾರಣ ಕೇಳುವ ನೋಟೀಸ್ ಸಂಖ್ಯೆ: ಕಂಇ 70 ಮುನೋಸೊ 2015, ದಿನಾಂಕ:26.12.2015.
3. ಸರ್ಕಾರದ ಅಂತಿಮ ನೋಟೀಸ್ ಸಂಖ್ಯೆ: ಕಂಇ 70 ಮುನೋಸೊ 2015 ದಿನಾಂಕ: 11.02.2016.
4. ಅಧ್ಯಕ್ಷರು ಮತ್ತು ಇತರರು, ಪ್ರಜಾ ಸಂಸ್ಥೆ, ರಾಣಾ ಸಿಂಗ್ ಪೇಟೆ ಇವರ ಲಿಖಿತ ಉತ್ತರ ದಿನಾಂಕ: 03/15.02.2016.
5. ಸರ್ಕಾರದ ಆದೇಶ ಸಂಖ್ಯೆ: ಸಇ 11 ಸಸಂನೋ 2016 ಬೆಂಗಳೂರು, ದಿನಾಂಕ:14.07.2016.
6. ಸರ್ಕಾರದ ಆದೇಶ ಸಂಖ್ಯೆ: ಸಇ 11 ಸಸಂನೋ 2016 ಬೆಂಗಳೂರು, ದಿನಾಂಕ:02.02.2017.
7. ಸರ್ಕಾರದ ಆದೇಶ ಸಂಖ್ಯೆ: ಸಇ 11 ಸಸಂನೋ 2016 ಬೆಂಗಳೂರು, ದಿನಾಂಕ:19.05.2017.
8. ಸರ್ಕಾರದ ಆದೇಶ ಸಂಖ್ಯೆ: ಸಇ 11 ಸಸಂನೋ 2016 ಬೆಂಗಳೂರು, ದಿನಾಂಕ:15.11.2017.
9. ಸರ್ಕಾರದ ಆದೇಶ ಸಂಖ್ಯೆ: ಸಇ 11 ಸಸಂನೋ 2016 ಬೆಂಗಳೂರು, ದಿನಾಂಕ:28.06.2018.
10. ಸರ್ಕಾರದ ಆದೇಶ ಸಂಖ್ಯೆ: ಸಇ 11 ಸಸಂನೋ 2016 ಬೆಂಗಳೂರು, ದಿನಾಂಕ:11.12.2018.
11. ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ದಾಖಲಿಸಲಾಗಿರುವ ರಿಟ್ ಅರ್ಜಿ ಸಂಖ್ಯೆ: 22487/17 ಸಿ/ಡಬ್ಲ್ಯೂ 20542/2017 ಪ್ರಕರಣದ ಅಂತಿಮ ಆದೇಶ ದಿನಾಂಕ:19.02.2019.
12. ಸಹಕಾರ ಸಂಘಗಳ ಉಪ ನಿಬಂಧಕರು, 2ನೇ ವಲಯ, ಬೆಂಗಳೂರು ಇವರ ಪತ್ರ ಸಂಖ್ಯೆ: ಡಿಆರ್‌ಬಿ/ಎಸ್‌ಒಆರ್/01/ 2018–19 ದಿನಾಂಕ:05.07.2019.
13. ಸರ್ಕಾರದ ನೋಟೀಸ್ ಸಂಖ್ಯೆ: ಸಇ 11 ಸಸಂನೋ 2016 ದಿನಾಂಕ:31.07.2019.

ಪ್ರಸ್ತಾವನೆ:

ಮೇಲೆ ಓದಲಾದ ಕ್ರಮ ಸಂಖ್ಯೆ: (1)ರ ಪತ್ರದಲ್ಲಿ ಪ್ರಜಾ ಸಂಸ್ಥೆ, ರಾಣಾ ಸಿಂಗ್ ಪೇಟೆ ಈ ಸಂಘದಲ್ಲಿ ಅವ್ಯವಹಾರಗಳು ನಡೆದಿವೆ ಎಂದು ದೂರು ಬಂದಿರುವ ಹಿನ್ನೆಲೆಯಲ್ಲಿ ಶ್ರೀ ಹೆಚ್.ಟಿ.ಶಿವನಂಜಯ್ಯ, ಅಧಿಕ ಜಿಲ್ಲಾ ನೋಂದಣಾಧಿಕಾರಿ ಇವರನ್ನು ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ 1960 ರ ಕಲಂ 25 ರನ್ವಯ

ವಿಚಾರಣಾಧಿಕಾರಿಯನ್ನಾಗಿ ನೇಮಿಸಲಾಗಿದ್ದು, ವಿಚಾರಣಾಧಿಕಾರಿಗಳು ವಿಚಾರಣೆ ನಡೆಸಿ ವರದಿ ಸಲ್ಲಿಸುತ್ತಾ, ಪ್ರಜಾ ಸಂಸ್ಥೆ, ರಾಣಾ ಸಿಂಗ್ ಪೇಟೆ ಸಂಘವು 30 ವರ್ಷಗಳಿಂದ ಕಾಯ್ದೆ ಕಲಂ 13 ರನ್ವಯ ಲೆಕ್ಕಪತ್ರಗಳನ್ನು ನೋಂದಣಾಧಿಕಾರಿಯವರ ಕಛೇರಿಗೆ ಸಲ್ಲಿಸಿರುವುದಿಲ್ಲವೆಂದು ಕಲಂ 11ರನ್ವಯ ದಿನಾಂಕ:06.10.1996ರ ನಂತರ ಸುಮಾರು 18 ವರ್ಷಗಳಿಂದ ಸರ್ವ ಸದಸ್ಯರ ಸಭೆ ನಡೆಸಿರುವುದಿಲ್ಲವೆಂದು, ಬೈಲಾ ಸಂಖ್ಯೆ:7 ರನ್ವಯ ಪ್ರತಿ ವರ್ಷ ಹೊಸದಾಗಿ ಕಾರ್ಯಕಾರಿ ಸಭೆಗೆ ಚುನಾವಣೆ ನಡೆಯಬೇಕಾಗಿದ್ದು, 1996–97ರ ನಂತರ ಕಾರ್ಯಕಾರಿ ಸಮಿತಿಗೆ ಚುನಾವಣೆ ನಡೆದಿರುವುದಿಲ್ಲವೆಂದು ಹಾಗೂ ಶ್ರೀ ಗೋಪಾಲ ಸ್ವಾಮಿ ಕಲ್ಯಾಣ ಮಂಟಪ ಹಾಗೂ ಶ್ರೀ ಬೀರದೇವರ ವ್ಯಾಯಾಮ ಶಾಲೆಗಳಿಂದ ಬರತಕ್ಕ ಆದಾಯಗಳಿಗೆ ಸರಿಯಾಗಿ ಲೆಕ್ಕ ಇಟ್ಟಿರುವುದಿಲ್ಲವೆಂದು ಮತ್ತು ಬೀರೇಶ್ವರ ದೇವಸ್ಥಾನ ಕಟ್ಟಡಕ್ಕೆ ಬಿ.ಬಿ.ಎಂ.ಪಿ. ಯಿಂದ ನೀಲಿ ನಕ್ಷೆ ಅನುಮೋದನೆ ಪಡೆದಿರುವುದಿಲ್ಲವೆಂದು, ಕಟ್ಟಡ ನಿರ್ಮಾಣಕ್ಕೆ ಅಂದಾಜು ಪಟ್ಟಿ ತಯಾರಿಸಿ, ವಾರ್ಷಿಕ ಮಹಾಸಭೆಯಲ್ಲಿ ಅನುಮೋದನೆ ಪಡೆಯದೇ ಪಾರದರ್ಶಕ ಕಾಯ್ದೆಯಂತೆ ಕ್ರಮವಿಡದೆ ವ್ಯವಹರಿಸುತ್ತಿರುವ ಆರೋಪಗಳು ಸಾಬೀತಾಗಿದೆಯೆಂದು ವಿಚಾರಣಾಧಿಕಾರಿಯವರು ಕಲಂ–25(1)ರನ್ವಯ ವಿಚಾರಣಾ ವರದಿಯನ್ನು ಸಲ್ಲಿಸಿರುತ್ತಾರೆ. ಸಂಘವು ನಿಯಮಗಳನ್ನು ಸ್ಪಷ್ಟವಾಗಿ ಉಲ್ಲಂಘನೆ ಮಾಡಿರುವುದಲ್ಲದೇ, ನಿಯಮ ಬಾಹಿರ ಚಟುವಟಿಕೆಗಳನ್ನು ಮುಂದುವರೆಸುತ್ತಿದೆಯಾದ್ದರಿಂದ ಸದರಿ ಸಂಘಕ್ಕೆ ಆಡಳಿತಾಧಿಕಾರಿಯನ್ನು ನೇಮಿಸಲು ಜಿಲ್ಲಾ ನೋಂದಣಾಧಿಕಾರಿಗಳು, ಗಾಂಧಿನಗರ ಇವರು ಅಭಿಪ್ರಾಯ ನೀಡಿ, ಸರ್ಕಾರಕ್ಕೆ ಪ್ರಸ್ತಾವೆ ಸಲ್ಲಿಸಿರುತ್ತಾರೆ.

ಮೇಲೆ ಕ್ರಮ ಸಂಖ್ಯೆ: (2)ರಲ್ಲಿ ಓದಲಾದ ಕಾರಣ ಕೇಳುವ ನೋಟೀಸ್‌ನಲ್ಲಿ ಜಿಲ್ಲಾ ನೋಂದಣಾಧಿಕಾರಿಗಳ ಶಿಫಾರಸ್ಸಿನನ್ವಯ ಸಂಸ್ಥೆಯ ವಿರುದ್ಧ ಸಲ್ಲಿಸಿದ ದೂರುಗಳ ಬಗ್ಗೆ ವಿಚಾರಣೆ ನಡೆಸಿ ನೀಡಿರುವ ವರದಿಯಲ್ಲಿನ ಆರೋಪಗಳು ಸಾಬೀತಾಗಿರುವುದರಿಂದ ಮತ್ತು ಕಾರ್ಯಕಾರಿ ಸಮಿತಿಯನ್ನು ನಿಯಮಾನುಸಾರ ಆಯ್ಕೆ ಮಾಡದಿರುವುದರಿಂದ ಸಂಘಕ್ಕೆ ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ, 1960ರ ಕಲಂ 27(ಎ)ರನ್ವಯ ಆಡಳಿತಾಧಿಕಾರಿಯನ್ನು ಏಕೆ ನೇಮಿಸಬಾರದು? ಎಂಬ ಬಗ್ಗೆ ತಮ್ಮ ಹೇಳಿಕೆಯನ್ನು 15 ದಿನಗಳೊಳಗಾಗಿ ಸರ್ಕಾರಕ್ಕೆ ಸಲ್ಲಿಸುವಂತೆ ಸಂಘದ ಅಧ್ಯಕ್ಷರು/ಕಾರ್ಯದರ್ಶಿಯವರಿಗೆ ತಿಳಿಸಲಾಗಿತ್ತು.

ಮೇಲೆ ಕ್ರಮ ಸಂಖ್ಯೆ: (3)ರಲ್ಲಿ ಓದಲಾದ ಅಂತಿಮ ನೋಟೀಸ್‌ನಲ್ಲಿ ದಿನಾಂಕ:26.12.2015ರ ನೋಟೀಸ್‌ಗೆ ಯಾವುದೇ ಹೇಳಿಕೆ/ವಿವರಣೆಯನ್ನು ನೀಡಿರುವುದಿಲ್ಲವಾದ್ದರಿಂದ 07 ದಿನಗಳ ಒಳಗಾಗಿ ಹೇಳಿಕೆಯನ್ನು ಸಲ್ಲಿಸಲು, ತಪ್ಪಿದಲ್ಲಿ ನಿಮ್ಮ ಹೇಳಿಕೆ ಏನು ಇಲ್ಲವೆಂದು ಭಾವಿಸಿ, ಸಂಘಕ್ಕೆ ಆಡಳಿತಾಧಿಕಾರಿಯನ್ನು ನೇಮಿಸುವ ಬಗ್ಗೆ ಸೂಕ್ತ ಕ್ರಮಕೈಗೊಳ್ಳಲಾಗುವುದು ಎಂದು ತಿಳಿಸಲಾಗಿತ್ತು.

ಮೇಲೆ ಕ್ರಮ ಸಂಖ್ಯೆ: (4)ರಲ್ಲಿ ಓದಲಾದ ಅಧ್ಯಕ್ಷರು ಮತ್ತು ಇತರರು, ಪ್ರಜಾ ಸಂಸ್ಥೆ, ರಾಣಾ ಸಿಂಗ್ ಪೇಟೆ ಇವರು ಸಲ್ಲಿಸಿರುವ ಲಿಖಿತ ಉತ್ತರದಲ್ಲಿ ಸಂಘವು ಯಾವುದೇ ರೀತಿಯಲ್ಲಿ ಕಾನೂನು ಬಾಹಿರ ಅಥವಾ ಸಂಘದ ಹಣವನ್ನು ದುರುಪಯೋಗ ಪಡಿಸಿಕೊಂಡಿರುವುದಿಲ್ಲವೆಂದು ಪ್ರತಿ ವರ್ಷವು ಲೆಕ್ಕಪರಿಶೋಧನೆ ಮಾಡಿಸಿದ್ದು, ವರದಿಗಳಲ್ಲಿ ಯಾವುದೇ ರೀತಿಯಾದ ಹಣದುರುಪಯೋಗ ಅಥವಾ ಇತರ ದುರುಪಯೋಗಗಳ ಕುರಿತು ಪ್ರಸ್ತಾಪಿಸಿರುವುದಿಲ್ಲವೆಂದು, 1985–86ನೇ ಸಾಲಿನಿಂದ ಲೆಕ್ಕಪರಿಶೋಧನೆಯಾಗಿದ್ದರೂ, ಹಿಂದಿನ ಸಂಬಂಧಪಟ್ಟ ವ್ಯಕ್ತಿಗಳು ವರದಿಗಳನ್ನು ನೋಂದಣಿ ಕಛೇರಿಗೆ ಸಲ್ಲಿಸದೇ ಇರುವುದು ನಿಜವಿದ್ದರೂ, ಸಂಘದ ಆಸ್ತಿ ದುರ್ಬಳಕೆ ಅಥವಾ ದುರ್ವಿನಿಯೋಗವಾಗಿರುವುದಿಲ್ಲವೆಂದೂ, 1996ನೇ ಇಸವಿಯಲ್ಲಿ ಸರ್ವ ಸದಸ್ಯರ ಸಭೆ ನಡೆದಿದ್ದು, ಸದರಿ ಸಭೆಗಳಲ್ಲಿ ಸಂಘದ ಆರ್ಥಿಕ ವಿಷಯಗಳ ಬಗ್ಗೆ ಅಥವಾ ಅಕ್ರಮಗಳ ಬಗ್ಗೆ ಯಾವುದೇ ರೀತಿಯ ಕಾನೂನು ಬಾಹಿರ ನಿರ್ಣಯಗಳನ್ನು ತೆಗೆದುಕೊಂಡಿರುವುದಿಲ್ಲವೆಂದು, ವಿಚಾರಣಾ ವರದಿಯಲ್ಲಿ ಆಡಳಿತ ಮಂಡಳಿಯ ಚುನಾವಣೆಯನ್ನು ನಿಯಮದಂತೆ ಮಾಡಿಲ್ಲವೆಂದು, ಸದರಿ ನಿಯಮಗಳನ್ವಯ ಸಂಘಕ್ಕೆ ಯಾವ ರೀತಿಯ ನಷ್ಟ ಉಂಟಾಯಿತು ಅಥವಾ ಇಲ್ಲವೇ ಎಂದು, ಅದಕ್ಕೆ ಚುನಾವಣೆ ನಡೆಸದೇ ಇರುವುದು ಕಾರಣವೆಂದು ಪ್ರಸ್ತಾಪಿಸಿರುವುದಿಲ್ಲವೆಂದು, ದೂರು ಅರ್ಜಿದಾರರು ಕೇವಲ ಊಹಾಪೋಹಗಳ ಆಧಾರದ ಮೇಲೆ ದೂರು ಅರ್ಜಿಯನ್ನು ಸಲ್ಲಿಸಿರುತ್ತಾರೆ ಎಂದು ಕಾರ್ಯಕಾರಿ ಮಂಡಳಿ ಸದಸ್ಯರುಗಳು ಉದ್ದೇಶಪೂರ್ವಕವಾಗಿ ನಿಯಮಗಳನ್ನು ಉಲ್ಲಂಘಿಸಿರುವುದಿಲ್ಲ ಅಥವಾ ಸಂಘದ ಆಸ್ತಿಯನ್ನು ಕದ್ದಿರುವುದಿಲ್ಲ ಅಥವಾ ದಾಖಲಾತಿಗಳನ್ನು ತಿದ್ದಿರುವ ಬಗ್ಗೆ ಯಾವುದೇ ಆರೋಪಗಳಿರುವುದಿಲ್ಲವೆಂದು, ಕಾನೂನು ಅಡಿಯಲ್ಲಿ ನಿಯಮಗಳ ಉಲ್ಲಂಘನೆಯಾಗಿದೆ ಎಂದು ತಪ್ಪುಗಳನ್ನು ತಿದ್ದಿಕೊಳ್ಳಲು ಸಂಘಕ್ಕೆ ಅವಕಾಶ ನೀಡದೇ ಏಕಾಏಕಿ ಆಡಳಿತಾಧಿಕಾರಿಯನ್ನು ನೇಮಿಸುವುದು ಸೂಕ್ತವಲ್ಲವೆಂದು ಹಾಗೂ ಸರ್ವಸದಸ್ಯರ ಸಭೆಗಳ ಅಥವಾ ಚುನಾವಣೆ ನಡೆಸದೆ ಕಾಲವಿಳಂಬವನ್ನು ಉದಾರವಾಗಿ ಮನ್ನಿಸಿ, ಕಾರ್ಯಕಾರಿ ಸಮಿತಿಗೆ ಚುನಾವಣೆ ನಡೆಸಲು ಅವಕಾಶ ನೀಡಬೇಕೆಂದು ಸಂಘದ ಸದಸ್ಯರ ಒತ್ತಾಸೆಯಾಗಿರುತ್ತದೆ ಎಂದು ಕೋರಿರುತ್ತಾರೆ.

ಪ್ರಜಾ ಸಂಸ್ಥೆ, ರಾಣಾ ಸಿಂಗ್ ಪೇಟೆ ಸಂಘದ ಲಿಖಿತ ವಿವರಣೆಯನ್ನು ನಿಯಮಾನುಸಾರ ಸಂಬಂಧಪಟ್ಟ ದಾಖಲೆಗಳೊಂದಿಗೆ ಪರಿಶೀಲಿಸಲಾಗಿ, ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ, 1960ರ ಕಲಂ 11ರನ್ವಯ ಪ್ರತಿ ವರ್ಷ ನಿಗಧಿತ ಅವಧಿಯೊಳಗಾಗಿ ವಾರ್ಷಿಕ ಮಹಾಸಭೆ ನಡೆಸಬೇಕಾಗಿರುವುದು ಕಡ್ಡಾಯವಾಗಿದ್ದು, ವಾರ್ಷಿಕ ಮಹಾಸಭೆಯಲ್ಲಿ ಆಸ್ತಿ–ಜವಾಬ್ದಾರಿ, ಆದಾಯ–ಖರ್ಚು ಇವುಗಳ ಲೆಕ್ಕ ಮತ್ತು ಲೆಕ್ಕಪರಿಶೋಧಕರ ವರದಿಯನ್ನು ವಾರ್ಷಿಕ ಮಹಾಸಭೆಯ ಅನುಮೋದನೆಗೆ ಮಂಡಿಸಿ ಒಪ್ಪಿಗೆ ಪಡೆಯುವುದು ಕಡ್ಡಾಯವಾಗಿರುತ್ತದೆ ಹಾಗೂ ಕಲಂ 13ರನ್ವಯ ಲೆಕ್ಕಪರಿಶೋಧಕರ ವರದಿಯನ್ನು ವಾರ್ಷಿಕ ಮಹಾಸಭೆಯು ಪರಿಶೀಲಿಸಿದ ನಂತರ, ವಾರ್ಷಿಕ ಮಹಾಸಭೆಯ ನಡವಳಿಯನ್ನೊಳಗೊಂಡಂತೆ

ಕಾರ್ಯಕಾರಿ ಸಮಿತಿಯ ಸದಸ್ಯರ ಹೆಸರು, ವಿಳಾಸ ಮತ್ತು ಹುದ್ದೆ ಆಸ್ತಿ–ಜವಾಬ್ದಾರಿ, ಆದಾಯ–ಖರ್ಚು ಇವುಗಳನ್ನೊಳಗೊಂಡ ಎಲ್ಲಾ ಮಾಹಿತಿಗಳೊಂದಿಗೆ ರಿಟರ್ನ್ ಅನ್ನು ನಿಯಮಿತ ಕಾಲಾವಧಿಯೊಳಗೆ ಸಲ್ಲಿಸಬೇಕಾಗಿರುತ್ತದೆ, ಉಪನಿಯಮದಲ್ಲಿ ನಿಗಧಿಪಡಿಸಿದ ಅವಧಿಗೆ ಕಾರ್ಯಕಾರಿ ಸಮಿತಿ/ಆಡಳಿತ ಮಂಡಳಿಗೆ ಚುನಾವಣೆ ನಡೆಸಿ ಪ್ರಜಾತತ್ವದ ಆಧಾರದ ಮೇಲೆ ಸಂಘವನ್ನು ನಡೆಸುವುದು ಕಡ್ಡಾಯವಾಗಿರುತ್ತದೆ. ಆದರೆ, ಪ್ರಜಾ ಸಂಸ್ಥೆ, ರಾಣಾ ಸಿಂಗ್ ಪೇಟೆ ಸಂಘವು 1996ನೇ ಇಸವಿಯ ನಂತರ ನಿಯಮಾನುಸಾರ ಯಾವುದೇ ವಾರ್ಷಿಕ ಮಹಾ ಸಭೆ ನಡೆಸಿಲ್ಲ, 1996–97ನೇ ಸಾಲಿನ ನಂತರ ಕಾನೂನಿನ್ವಯ ಚುನಾಯಿತ ಕಾರ್ಯಕಾರಿ ಸಮಿತಿ/ಆಡಳಿತ ಮಂಡಳಿ ಅಸ್ತಿತ್ವದಲ್ಲಿರುವುದಿಲ್ಲ. ದಿನಾಂಕ:28.09.1996ರಿಂದ ದಿನಾಂಕ:09.11.2014 ರವರೆಗೆ ನಡೆದಿರುವ ಆಡಳಿತ ಮಂಡಳಿ ಸಭೆಗಳು ಕಾನೂನಿಗೆ ವಿರುದ್ದವಾಗಿರುತ್ತವೆ. ದಿನಾಂಕ:01.01.86ರಿಂದ 30 ವರ್ಷಗಳ ಲೆಕ್ಕಪತ್ರಗಳು ಕಾರ್ಯಕಾರಿ ಸಮಿತಿ ಪಟ್ಟಿ ಇವುಗಳನ್ನು ಸಲ್ಲಿಸದೇ ಇರುವುದು ಕಾನೂನಿನ ಸ್ಪಷ್ಟ ಉಲ್ಲಂಘನೆಯಾಗಿರುವುದಿಂದ ಪ್ರಜಾ ಸಂಸ್ಥೆ, ರಾಣಾ ಸಿಂಗ್ ಪೇಟೆ ಈ ಸಂಘಕ್ಕೆ ಮೇಲೆ ಕ್ರ.ಸಂ.(5) ರಲ್ಲಿ ಓದಲಾದ ಆದೇಶದಲ್ಲಿ ಸಹಕಾರ ಸಂಘಗಳ ಉಪ ನಿಬಂಧಕರು, ಎರಡನೇ ವಲಯ, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ಇವರನ್ನು ದಿನಾಂಕ:14.07.2016 ರಿಂದ ಜಾರಿಗೆ ಬರುವಂತೆ ಮುಂದಿನ ಆರು ತಿಂಗಳ ಅವಧಿಗೆ ಆಡಳಿತಾಧಿಕಾರಿಯಾಗಿ ನೇಮಿಸಿ ಆದೇಶಿಸಲಾಗಿರುತ್ತದೆ.

ಮೇಲೆ ಕ್ರಮ ಸಂಖ್ಯೆ: (6)ರಲ್ಲಿ ಓದಲಾದ ಆದೇಶದಲ್ಲಿ ಪ್ರಜಾ ಸಂಸ್ಥೆ, ರಾಣಾ ಸಿಂಗ್ ಪೇಟೆ ಈ ಸಂಘದ ಆಡಳಿತಾಧಿಕಾರಿ ಅವಧಿಯನ್ನು ದಿನಾಂಕ:14.01.2017 ರಿಂದ ಮೂರು ತಿಂಗಳ ಅವಧಿಗೆ ವಿಸ್ತರಿಸಲಾಗಿರುತ್ತದೆ.

ಮೇಲೆ ಕ್ರಮ ಸಂಖ್ಯೆ: (7)ರಲ್ಲಿ ಓದಲಾದ ಆದೇಶದಲ್ಲಿ ಪ್ರಜಾ ಸಂಸ್ಥೆ, ರಾಣಾ ಸಿಂಗ್ ಪೇಟೆ, ಬೆಂಗಳೂರು ಈ ಸಂಘದ ಆಡಳಿತಾಧಿಕಾರಿ ಅವಧಿಯನ್ನು ದಿನಾಂಕ 14.04.2017 ರಿಂದ ಆರು ತಿಂಗಳ ಅವಧಿಗೆ ವಿಸ್ತರಿಸಿ ಆದೇಶಿಸಲಾಗಿರುತ್ತದೆ.

ಮೇಲೆ ಕ್ರ.ಸಂ. (8) ರಲ್ಲಿ ಓದಲಾದ ಆದೇಶದಲ್ಲಿ ಪ್ರಜಾ ಸಂಸ್ಥೆ, ರಾಣಾ ಸಿಂಗ್ ಪೇಟೆ, ಬೆಂಗಳೂರು ಈ ಸಂಘದ ಆಡಳಿತಾಧಿಕಾರಿ ಅವಧಿಯನ್ನು ದಿನಾಂಕ 14.10.2017 ರಿಂದ ಆರು ತಿಂಗಳ ಅವಧಿಗೆ ವಿಸ್ತರಿಸಿ ಆದೇಶಿಸಲಾಗಿರುತ್ತದೆ.

ಮೇಲೆ ಕ್ರ.ಸಂ. (9) ರಲ್ಲಿ ಓದಲಾದ ಆದೇಶದಲ್ಲಿ ಪ್ರಜಾ ಸಂಸ್ಥೆ, ರಾಣಾ ಸಿಂಗ್ ಪೇಟೆ, ಬೆಂಗಳೂರು ಈ ಸಂಘದ ಆಡಳಿತಾಧಿಕಾರಿ ಅವಧಿಯನ್ನು ಪುನಃ ದಿನಾಂಕ 15.04.2018 ರಿಂದ ಆರು ತಿಂಗಳ ಅವಧಿಗೆ ವಿಸ್ತರಿಸಲಾಗಿರುತ್ತದೆ.

ಮೇಲೆ ಕ್ರ.ಸಂ. (10) ರಲ್ಲಿ ಓದಲಾದ ಆದೇಶದಲ್ಲಿ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ: 20542/2017 ಹಾಗೂ ಸಂಖ್ಯೆ:22487/17ನ್ನು ಪ್ರಕರಣಗಳನ್ನು ದಾಖಲಿಸಿದ್ದು ಸಂಘದ ಚುನಾವಣೆಗೆ ತಡೆಯಾಜ್ಞೆ ನೀಡಿರುವುದರಿಂದ ಹಾಗೂ ಈ ಎರಡು ಪ್ರಕರಣಗಳು ನ್ಯಾಯಾಲಯದಲ್ಲಿ ವಿಚಾರಣೆಗೆ ಬಾಕಿ ಇರುವುದರಿಂದ ಪ್ರಜಾ ಸಂಸ್ಥೆ, ರಾಣಾ ಸಿಂಗ್ ಪೇಟೆ, ಬೆಂಗಳೂರು ಈ ಸಂಘದ ಆಡಳಿತಾಧಿಕಾರಿ ಅವಧಿಯನ್ನು ಪುನಃ ದಿನಾಂಕ:15.10.2018 ರಿಂದ ಆರು ತಿಂಗಳ ಅವಧಿಗೆ ವಿಸ್ತರಿಸಲಾಗಿರುತ್ತದೆ.

ಮೇಲೆ ಕ್ರ.ಸಂ. (11) ರಲ್ಲಿ ಓದಲಾದ ರಿಟ್ ಅರ್ಜಿ ಸಂಖ್ಯೆ:22487/17 ಸಿ/ಡಬ್ಲ್ಯೂ 20542/2017 ಪ್ರಕರಣದ ದಿನಾಂಕ:19.02.2019 ರ ತೀರ್ಪಿನಲ್ಲಿ "From perusal of Section 27A(1), It is evident that the State Government is required to conduct an enquiry before appointment of the Registrar in case of exercising the powers under Section 27A(1)(c) of the Act. Admittedly, the aforesaid exercise has not been undertaken by the respondents before passing the impugned orders. The impugned orders are therefore, quashed and set aside. However, the respondents are granted liberty to take an action against the petitioner in accordance with law expeditiously ಎಂದು ಆದೇಶಿಸಲಾಗಿರುತ್ತದೆ.

ಮೇಲೆ ಕ್ರ.ಸಂ. (12) ರಲ್ಲಿ ಓದಲಾದ ಸಂಘಗಳ ನೋಂದಣಾಧಿಕಾರಿಗಳು, 2ನೇ ವಲಯ, ಬೆಂಗಳೂರು ಇವರ ವರದಿಯಲ್ಲಿ ಸಂಘಕ್ಕೆ ಚುನಾವಣೆ ನಡೆಸಲು ಕ್ರಮವಿಟ್ಟು ಚುನಾವಣಾ ಪ್ರಕ್ರಿಯೆ ಪ್ರಾರಂಭಿಸಲಾಗಿದ್ದು, ಈ ಹಂತದಲ್ಲಿ ಸಂಘದ ಕೆಲವು ಸದಸ್ಯರು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂ.: 22487/2017, 20547/2017 ರನ್ವಯ ಅರ್ಜಿಯನ್ನು ಸಲ್ಲಿಸಿ, ಸಂಘದ ಸದಸ್ಯರ ಪಟ್ಟಿಯು ದೋಷಪೂರಿತವಾಗಿದ್ದು, ಆಡಳಿತಾಧಿಕಾರಿಯವರ ಅವಧಿ ಮುಗಿದಿದ್ದರೂ ಆಡಳಿತಾಧಿಕಾರಿಯವರು ಮುಂದುವರೆಯುತ್ತಿದ್ದಾರೆಂದು ದಾವೆಯಲ್ಲಿ ಆರೋಪಿಸಿ, ಸರ್ಕಾರದಿಂದ ಆಡಳಿತಾಧಿಕಾರಿ ನೇಮಿಸಿರುವ ದಿನಾಂಕ::14.07.2016 ರ ಆದೇಶವನ್ನು ವಜಾಮಾಡುವಂತೆ ಕೋರಿರುತ್ತಾರೆಂದು, ಈ ರಿಟ್ ಅರ್ಜಿಯಲ್ಲಿ ವಿಚಾರಣೆ ನಡೆಯುವ ಸಂದರ್ಭದಲ್ಲಿ ಅರ್ಜಿದಾರರು ಸಂಘದ ಲೋಪದೋಷಗಳ ಬಗ್ಗೆ ನಡೆದಿರುವ ಶಾಸನಬದ್ಧ ವಿಚಾರಣೆಯ ಮಾಹಿತಿಯನ್ನು ಮಾನ್ಯ ಗೌ.ಉಚ್ಚ ನ್ಯಾಯಾಲಯಕ್ಕೆ ಸಲ್ಲಿಸದೆ ಸತ್ಯ ಸಂಗತಿಯನ್ನು ಮರೆಮಾಚಿರುವುದರಿಂದ ಮಾನ್ಯ ನ್ಯಾಯಾಲಯವು ಸರ್ಕಾರದಿಂದ ಸಂಘಕ್ಕೆ ಆಡಳಿತಾಧಿಕಾರಿ ನೇಮಿಸಲಾಗಿರುವ ದಿನಾಂಕ:14.07.2016 ರ ಆದೇಶವನ್ನು ವಜಾಗೊಳಿಸಿರುತ್ತದೆಂದು ಹಾಗೂ the respondents are granted liberty to take an action against the petitioner in accordance with law expeditiously ಎಂದು ಆದೇಶಿಸಿರುವುದರಿಂದ ಸಂಘದ ಕಾರ್ಯಕಾರಿ ಸಮಿತಿ ಚಾಲ್ತಿಯಲ್ಲಿಲ್ಲದೇ ಆಡಳಿತಾಧಿಕಾರಿಗಳು ಇದ್ದರೂ ಅನಧಿಕೃತವಾಗಿ 7 ಜನ ಕಾರ್ಯಕಾರಿ ಸಮಿತಿ ಸದಸ್ಯರೆಂದು ಘೋಷಿಸಿಕೊಂಡು ಚುನಾವಣೆಯನ್ನು ಜರುಗಿಸಲು ಮುಂದಾಗಿರುವ ಸಂಘದ ಸದಸ್ಯರುಗಳಾದ ಶ್ರೀ

ಹೆಚ್.ರವಿಕುಮಾರ್, ಶ್ರೀ ಬಿ.ಎನ್.ಬಾಲಕೃಷ್ಣ ಮತ್ತು ಶ್ರೀ ಕೃಷ್ಣಮೂರ್ತಿರವರುಗಳಿಗೆ ನೋಟೀಸ್ ನೀಡಿ, ಸಂಘದ ಬೈಲಾ ಸಂಖ್ಯೆ 7(2) ರಂತೆ ಆಯ್ಕೆಯಾಗಿರುವ ಕಾರ್ಯಕಾರಿ ಸಮಿತಿ ಪಟ್ಟಿಯನ್ನು ಹಾಜರುಪಡಿಸಿ ಸಂಘದ ಪ್ರಭಾರವನ್ನು ಪಡೆಯಲು ಸೂಚಿಸಲಾಗಿರುತ್ತದೆಂದು, ಆದರೆ ಈ ನೋಟೀಸನ್ನು ಕೃಷ್ಣಮೂರ್ತಿ ಹಾಗೂ ಬಾಲಕೃಷ್ಣರವರು ಸ್ವೀಕರಿಸಿದ್ದು, ರವಿಕುಮಾರ್ ರವರ ನೋಟೀಸ್ ಸ್ವೀಕೃತಿಯಾಗದೇ ವಾಪಸ್ಸು ಬಂದಿರುತ್ತದೆ. ಆದರೆ ಇದೇ ಸದಸ್ಯರುಗಳು ಸಂಘದ ವಾರ್ಷಿಕ ಮಹಾ ಸಭೆಯನ್ನು ದಿನಾಂಕ:16.06.2019 ರಂದು ನಡೆಸಿರುವುದಾಗಿ ವಾರ್ಷಿಕ ಮಹಾಸಭೆ ನಡವಳಿಗಳನ್ನು ಕಛೇರಿಗೆ ಸಲ್ಲಿಸಿರುತ್ತಾರೆಂದು ತಿಳಿಸಿರುತ್ತಾರೆ.

ಮುಂದುವರೆದು ಮಾನ್ಯ ಗೌ.ಉಚ್ಚ ನ್ಯಾಯಾಲಯಕ್ಕೆ ನೈಜ ಸಂಗತಿಯನ್ನು ತಿಳಿಸದೇ ಮತ್ತು ಮಾನ್ಯ ನ್ಯಾಯಾಲಯದ ಆದೇಶದನ್ವಯ ನಿಯಮಾನುಸಾರ ಸಂಘದ ಪ್ರಭಾರವನ್ನು ಪಡೆಯದೇ ವಾರ್ಷಿಕ ಮಹಾ ಸಭೆಯನ್ನು ನಡೆಸಿರುವುದಾಗಿ ನಡವಳಿಗಳನ್ನು ಸಲ್ಲಿಸಿರುವುದು ಕಾನೂನು ಬಾಹಿರವಾಗಿರುತ್ತದೆಂದು ಹಾಗೂ ಸದರಿಯವರಿಗೆ ನೀಡಲಾದ ನೋಟೀಸಿಗೆ ಸಮಜಾಯಿಷಿಯನ್ನು ಸಲ್ಲಿಸದೇ ಕರ್ತವ್ಯ ಲೋಪವೆಸಗಿರುತ್ತಾರೆಂದು ಆದ್ದರಿಂದ ಈಗಾಗಲೇ ಸದರಿ ಸಂಘದ ವಿರುದ್ಧ ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ 1960 ರ ಕಲಂ 25(1) ರನ್ವಯ ವಿಚಾರಣೆ ನಡೆದು ಆರೋಪಗಳು ದೃಢಪಟ್ಟಿರುವ ಹಿನ್ನೆಲೆಯಲ್ಲಿ ಸದರಿ ಸಂಘಕ್ಕೆ ಆಡಳಿತಾಧಿಕಾರಿಯನ್ನು ನೇಮಿಸಬೇಕೆಂದು ಸಂಘಗಳ ನೋಂದಣಾಧಿಕಾರಿಗಳು, 2ನೇ ವಲಯ, ಬೆಂಗಳೂರು ಇವರು ಸರ್ಕಾರಕ್ಕೆ ಶಿಫಾರಸ್ಸು ಮಾಡಿರುತ್ತಾರೆ.

ಮೇಲೆ ಕ್ರ.ಸಂ. (13) ರಲ್ಲಿ ಓದಲಾದ ನೋಟೀಸಿನಲ್ಲಿ ಗೌ.ಉಚ್ಚ ನ್ಯಾಯಾಲಯದಲ್ಲಿ ದಾಖಲಿಸಿರುವ ರಿಟ್ ಅರ್ಜಿ ಸಂಖ್ಯೆ:22487/2017 ಮತ್ತು 20547/2017 ಪ್ರಕರಣದ ದಿನಾಂಕ:19.02.2019 ರ ಆದೇಶದ ಹಿನ್ನೆಲೆಯಲ್ಲಿ ಮತ್ತು ಸಂಘಗಳ ನೋಂದಣಾಧಿಕಾರಿಗಳ ವರದಿ/ಶಿಫಾರಸ್ಸಿನನ್ವಯ ಸಂಘಕ್ಕೆ ಆಡಳಿತಾಧಿಕಾರಿ ಏಕೆ ನೇಮಿಸಬಾರದೆಂದು ಸಂಘಕ್ಕೆ ನೋಟೀಸ್ ಜಾರಿ ಮಾಡಲಾಗಿತ್ತು.

ಸದರಿ ನೋಟೀಸಿಗೆ ಯಾವುದೇ ಉತ್ತರವು ಸಂಘದಿಂದ ಸ್ವೀಕೃತವಾಗಿರುವುದಿಲ್ಲ. ಸಹಕಾರ ಸಂಘಗಳ ಉಪ ನಿಬಂಧಕರು, 2ನೇ ವಲಯ, ಬೆಂಗಳೂರು ಇವರು ಸರ್ಕಾರಕ್ಕೆ ಸಲ್ಲಿಸಿರುವ ಶಿಫಾರಸ್ಸಿನ ಅಂಶಗಳನ್ನು ಪರಿಗಣಿಸಿ, ಅರ್ಜಿದಾರರು ಮಾನ್ಯ ಗೌ.ಉಚ್ಚ ನ್ಯಾಯಾಲಯಕ್ಕೆ ನೈಜ ಸಂಗತಿಯನ್ನು ತಿಳಿಸದೇ, ಕಲಂ 25 ರಡಿ ವಿಚಾರಣೆ ನಡೆದಿದ್ದರೂ ಈ ಅಂಶವನ್ನು ಮಾನ್ಯ ನ್ಯಾಯಾಲಯಕ್ಕೆ ಮರೆಮಾಚಿರುವುದು ಸ್ಪಷ್ಟವಾಗಿರುತ್ತದೆ ಹಾಗೂ ಸಂಘದ ಪ್ರಭಾರವನ್ನು ಮಾನ್ಯ ನ್ಯಾಯಾಲಯದ ಆದೇಶದ ರೀತ್ಯಾ ಪಡೆಯಲು ಕ್ರಮವಹಿಸಿರುವುದಿಲ್ಲ. ಸಂಘವು 30 ವರ್ಷಗಳಿಂದ ಕಾಯ್ದೆ ಕಲಂ 13 ರನ್ವಯ ಲೆಕ್ಕಪತ್ರಗಳನ್ನು ನೋಂದಣಾಧಿಕಾರಿಯವರ ಕಛೇರಿಗೆ ಸಲ್ಲಿಸಿರುವುದಿಲ್ಲ. ಕಲಂ 11 ರನ್ವಯ ದಿನಾಂಕ:06.10.1996ರ ನಂತರ ಸುಮಾರು 18 ವರ್ಷಗಳಿಂದ ಸರ್ವಸದಸ್ಯರ ಸಭೆ ನಡೆಸಿರುವುದಿಲ್ಲ. 1996–97 ರ ನಂತರ ಸಂಘದ ಬೈಲಾ ಸಂಖ್ಯೆ:7 ರನ್ವಯ ಪ್ರತಿ ವರ್ಷ ಕಾರ್ಯಕಾರಿ ಸಮಿತಿ ಚುನಾವಣೆ ನಡೆಸಿರುವುದಿಲ್ಲ ಹಾಗೂ ಸಂಘದ ವತಿಯಲ್ಲಿರುವ ಶ್ರೀ ಗೋಪಾಲಸ್ವಾಮಿ ಕಲ್ಯಾಣ ಮಂಟಪ, ಶ್ರೀ ಬೀರದೇವರ ವ್ಯಾಯಾಮ ಶಾಲೆಗಳಿಂದ ಬರತಕ್ಕ ಆದಾಯಗಳಿಗೆ ಸರಿಯಾದ ಲೆಕ್ಕವಿಟ್ಟಿರುವುದಿಲ್ಲ ಹಾಗು ಶ್ರೀ ಬೀರೇಶ್ವರ ದೇವಸ್ಥಾನದ ಕಟ್ಟಡಕ್ಕೆ ಬಿ.ಬಿ.ಎಂ.ಪಿ.ಯಿಂದ ನೀಲಿ ನಕ್ಷೆಯ ಅನುಮೋದನೆ ಪಡೆದಿರುವುದಿಲ್ಲ. ಕಟ್ಟಡ ನಿರ್ಮಾಣಕ್ಕೆ ಅಂದಾಜು ಪಟ್ಟಿ ತಯಾರಿಸಿ ವಾರ್ಷಿಕ ಮಹಾಸಭೆಯಲ್ಲಿ ಅನುಮೋದನೆ ಪಡೆಯದೇ, ಪಾರದರ್ಶಕ ಕಾಯ್ದೆಯಂತೆ ಕ್ರಮವಿಡದೇ ವ್ಯವಹರಿಸುತ್ತಿರುವುದರಿಂದ ಸಂಘದ ಹಾಗೂ ಸದಸ್ಯರ ಹಿತದೃಷ್ಟಿಯಿಂದ ಸಂಘಕ್ಕೆ ಆಡಳಿತಾಧಿಕಾರಿ ನೇಮಿಸಲು ಸರ್ಕಾರವು ತೀರ್ಮಾನಿಸಿದೆ. ಆದ್ದರಿಂದ ಈ ಆದೇಶ.

ಆದೇಶ

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ 1960ರ ಕಲಂ 27(ಎ) ರನ್ವಯ ಪ್ರಜಾ ಸಂಸ್ಥೆ, ರಾಣಾ ಸಿಂಗ್ ಪೇಟೆ, ಬೆಂಗಳೂರು ಈ ಸಂಘಕ್ಕೆ ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಎರಡನೇ ವಲಯ, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ಇವರನ್ನು, ಈ ಆದೇಶವು ರಾಜ್ಯ ಪತ್ರದಲ್ಲಿ ಪ್ರಕಟವಾದ ದಿನಾಂಕದಿಂದ ಜಾರಿಗೆ ಬರುವಂತೆ ಮುಂದಿನ 6 ತಿಂಗಳ ಅವಧಿಗೆ ಆಡಳಿತಾಧಿಕಾರಿಯನ್ನಾಗಿ ನೇಮಿಸಿ ಆದೇಶಿಸಿದೆ.

ಆಡಳಿತಾಧಿಕಾರಿಗಳು ಸದರಿ ಅವಧಿಯಲ್ಲಿ ಸಂಘದಲ್ಲಿನ ನ್ಯೂನ್ಯತೆಗಳನ್ನು ನಿಯಮಾನುಸಾರ ಸರಿಪಡಿಸಿ, ಸಂಘಕ್ಕೆ ಚುನಾವಣೆ ನಡೆಸಿ ನೂತನ ಆಡಳಿತ ಮಂಡಳಿಗೆ ಅಧಿಕಾರ ಹಸ್ತಾಂತರಿಸಿ ಸರ್ಕಾರಕ್ಕೆ ವರದಿ ನೀಡಲು ಸೂಚಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಚೇತನ ಎಂ.
ಸರ್ಕಾರದ ಅಧೀನ ಕಾರ್ಯದರ್ಶಿ–3 (ಪ್ರ),
ಸಹಕಾರ ಇಲಾಖೆ.

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ ಘಟಕ, ಬೆಂಗಳೂರು. (ಪಿ7) ಪ್ರತಿಗಳು: 25

RNI No. KARBIL/2001/47147

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

ಭಾಗ-I	ಬೆಂಗಳೂರು, ಗುರುವಾರ, ಸೆಪ್ಟೆಂಬರ್ ೧೨, ೨೦೧೯ (ಭಾದ್ರಪದ ೨೧, ಶಕ ವರ್ಷ ೧೯೪೦)	ನಂ. ೭೬೯
Part-I	Bengaluru, Thursday, September 12, 2019 (Bhadrapada 21, Shaka Varsha 1940)	No. 769

ಕರ್ನಾಟಕ ಸರ್ಕಾರದ ನಡವಳಿಗಳು

ಸಹಕಾರ ಸಚಿವಾಲಯ

ವಿಷಯ:– ರಾಜ್ಯ ಒಕ್ಕಲಿಗರ ಸಂಘ, ನಂ–148, ಕೆ.ಆರ್. ರಸ್ತೆ, ವಿ.ವಿ. ಪುರಂ, ಬೆಂಗಳೂರು–560004 ಈ ಸಂಘದ ಆಡಳಿತ ಮಂಡಳಿ ಚುನಾವಣೆಗೆ ಚುನಾವಣಾ ವೀಕ್ಷಕರನ್ನು ನೇಮಿಸುವ ಬಗ್ಗೆ.

ಸರ್ಕಾರದ ಆದೇಶ ಸಂಖ್ಯೆ: ಸಇ 112 ಸಸಂನೋ 2018 ಬೆಂಗಳೂರು, ದಿನಾಂಕ: 06.09.2019

ಓದಲಾಗಿದೆ:– 1. ಸರ್ಕಾರದ ಆದೇಶ ಸಂಖ್ಯೆ: ಸಇ 112 ಸಸಂನೋ 2018 ಬೆಂಗಳೂರು, ದಿನಾಂಕ: 20.08.2018, 27.02.2019 ಮತ್ತು 17.08.2019

2. ಮಾನ್ಯ ಗೌ.ಉಚ್ಚ ನ್ಯಾಯಾಲಯದಲ್ಲಿ ದಾಖಲಾಗಿರುವ ರಿಟ್ ಅರ್ಜಿ ಸಂ.: 36772/2018, 384120/2018 ಮತ್ತು 38413/2018 ಸಿ./ಡಬ್ಲ್ಯೂ ರಿ.ಅ.ಸಂ.: 36973–36977/2018 ಪ್ರಕರಣದ ಆದೇಶ ದಿನಾಂಕ: 08.01.2019.

ಪ್ರಸ್ತಾವನೆ:

ಮೇಲೆ (1)ರಲ್ಲಿ ಓದಲಾದ ಆದೇಶದಲ್ಲಿ ಕರ್ನಾಟಕ ಸಂಘಗಳ ನೋಂದಣಿ ಅಧಿನಿಯಮ 1960ರ ಕಲಂ–27(ಎ) ರನ್ವಯ ರಾಜ್ಯ ಒಕ್ಕಲಿಗರ ಸಂಘ, ನಂ–148, ಕೆ.ಆರ್.ರಸ್ತೆ, ವಿ.ವಿ.ಪುರಂ, ಬೆಂಗಳೂರು–560004 ಈ ಸಂಘಕ್ಕೆ ಶ್ರೀ ಹೆಚ್.ಎಸ್.ಅಶೋಕಾನಂದ್, ಐ.ಎ.ಎಸ್.(ನಿವೃತ್ತ) ಇವರನ್ನು ದಿನಾಂಕ:20.08.2018 ರಿಂದ ಜಾರಿಗೆ ಬರುವಂತೆ ಮುಂದಿನ ಆರು ತಿಂಗಳ ಅವಧಿಗೆ ಆಡಳಿತಾಧಿಕಾರಿಯನ್ನಾಗಿ ನೇಮಕ ಮಾಡಲಾಗಿತ್ತು ಹಾಗೂ ಆಡಳಿತಾಧಿಕಾರಿ ಅವಧಿಯನ್ನು ದಿನಾಂಕ:21.02.2019 ರಿಂದ 6 ತಿಂಗಳ ಅವಧಿಗೆ, ಮತ್ತು ದಿನಾಂಕ: 21.08.2019 ರಿಂದ ಮುಂದಿನ ಆರು ತಿಂಗಳ ಅವಧಿಗೆ ವಿಸ್ತರಿಸಿ ಆದೇಶಿಸಲಾಗಿರುತ್ತದೆ.

ಸರ್ಕಾರದ ದಿನಾಂಕ:20.08.2018 ರ ಆಡಳಿತಾಧಿಕಾರಿ ನೇಮಕದ ಆದೇಶವನ್ನು ರದ್ದುಗೊಳಿಸುವಂತೆ ಕೋರಿ ರಾಜ್ಯ ಒಕ್ಕಲಿಗರ ಸಂಘದಿಂದ ಗೌ.ಉಚ್ಚ ನ್ಯಾಯಾಲಯದಲ್ಲಿ ರಿ.ಅ.ಸಂ.:36772/2018, 384120/2018 ಮತ್ತು 38413/2018 ಸಿ.ಡಬ್ಲ್ಯೂ ರಿ.ಅ.ಸಂ.:36973–36977/2018 ಪ್ರಕರಣಗಳನ್ನು ದಾಖಲಿಸಲಾಗಿರುತ್ತದೆ.

ಮೇಲೆ (2) ರಲ್ಲಿ ಓದಲಾದ ಮಾನ್ಯ ಗೌ.ಉಚ್ಚ ನ್ಯಾಯಾಲಯದಲ್ಲಿ ದಾಖಲಾಗಿರುವ ರಿ.ಅ.ಸಂ.:36772/2018, 384120/2018 ಮತ್ತು 38413/2018 ಸಿ.ಡಬ್ಲ್ಯೂ ರಿ.ಅ.ಸಂ.:36973–36977/2018 ಪ್ರಕರಣದಲ್ಲಿ ದಿನಾಂಕ:08.01.2019 ರಂದು ನೀಡಿರುವ ತೀರ್ಪಿನಲ್ಲಿ "However, in view of the peculiar facts and circumstances of the present case, this court is of the considered opinion, that the state Government shall appoint a high ranking Officer forthwith, to oversee the election to the conducted by the Administrator in fair manner in the interest of justice" ಎಂದು ಆದೇಶಿಸಲಾಗಿರುತ್ತದೆ.

ಮೇಲ್ಕಂಡ ಮಾನ್ಯ ನ್ಯಾಯಾಲಯದ ಆದೇಶದನ್ವಯ ರಾಜ್ಯ ಒಕ್ಕಲಿಗರ ಸಂಘ, ಬೆಂಗಳೂರು ಈ ಸಂಘದ ಆಡಳಿತ ಮಂಡಳಿಗೆ ನಡೆಸುವ ಚುನಾವಣೆಯ ಮೇಲ್ವಿಚಾರಣೆಯನ್ನು ನಡೆಸಲು ಚುನಾವಣಾ ವೀಕ್ಷಕರಾಗಿ ಉನ್ನತ ಹುದ್ದೆಯ ಅಧಿಕಾರಿಯೊಬ್ಬರನ್ನು ನೇಮಿಸಲು ಸರ್ಕಾರವು ತೀರ್ಮಾನಿಸಿದೆ. ಆದ್ದರಿಂದ ಈ ಆದೇಶ.

ಆದೇಶ

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ರಿ.ಅ.ಸಂ.:36772/2018, 384120/2018 ಮತ್ತು 38413/2018 ಸಿ.ಡಬ್ಲ್ಯೂ ರಿ.ಅ.ಸಂ.:36973–36977/2018 ಪ್ರಕರಣದಲ್ಲಿನ ದಿನಾಂಕ:08.01.2019 ಆದೇಶದನ್ವಯ ರಾಜ್ಯ ಒಕ್ಕಲಿಗರ ಸಂಘ, ನಂ–148, ಕೆ.ಆರ್.ರಸ್ತೆ, ವಿ.ವಿ.ಪುರಂ, ಬೆಂಗಳೂರು–560004 ಈ ಸಂಘಕ್ಕೆ ಆಡಳಿತಾಧಿಕಾರಿಯವರು ನಡೆಸುವ ಚುನಾವಣೆಯ ಮೇಲ್ವಿಚಾರಣೆ ನಡೆಸಲು ಶ್ರೀ ಕೆ.ಎಸ್.ನವೀನ್, ಸಹಕಾರ ಸಂಘಗಳ ಅಪರ ನಿಬಂಧಕರು, ಸಹಕಾರ ಸಂಘಗಳ ನಿಬಂಧಕರ ಕಛೇರಿ, ಬೆಂಗಳೂರು ಇವರನ್ನು ತಕ್ಷಣದಿಂದ ಜಾರಿಗೆ ಬರುವಂತೆ ಚುನಾವಣಾ ವೀಕ್ಷಕರನ್ನಾಗಿ ನೇಮಿಸಿ ಆದೇಶಿಸಿದೆ.

ಮಾನ್ಯ ನ್ಯಾಯಾಲಯದ ಆದೇಶದನ್ವಯ ಸಂಘದ ಚುನಾವಣೆಯನ್ನು ಪಾರದರ್ಶಕವಾಗಿ ಹಾಗೂ ನಿಯಮಾನುಸಾರ ಜರುಗಿಸಿದ ಬಗ್ಗೆ ಸೂಕ್ತ ಮೇಲ್ವಿಚಾರಣೆ ನಡೆಸಿ, ಸರ್ಕಾರಕ್ಕೆ ವರದಿ ನೀಡಲು ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಹಾಗೂ ಅವರ ಹೆಸರಿನಲ್ಲಿ

ಬಿ.ಎಸ್. ಹರೀಶ್
ವಿಶೇಷ ಕರ್ತವ್ಯಾಧಿಕಾರಿ ಹಾಗೂ ಪದನಿಮಿತ್ತ
ಸರ್ಕಾರದ ಜಂಟಿ ಕಾರ್ಯದರ್ಶಿ
ಸಹಕಾರ ಇಲಾಖೆ

ಸರ್ಕಾರಿ ಮುದ್ರಣಾಲಯ, ಶಿಕಾಪ ಸೌಧ ಘಟಕ, ಬೆಂಗಳೂರು. (ಪ್ರ7) ಪ್ರತಿಗಳು: 25

RNI No. KARBIL/2001/47147

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

ಭಾಗ–I	ಬೆಂಗಳೂರು, ಸೋಮವಾರ, ಸೆಪ್ಟೆಂಬರ್ ೨೩, ೨೦೧೯ (ಆಶ್ವಯುಜ ೦೧, ಶಕ ವರ್ಷ ೧೯೪೦)	ನಂ. ೭೯೯
Part–I	Bengaluru, Monday, September 23, 2019 (Ashwayuja 01, Shaka Varsha 1940)	No. 799

ಪೊಲೀಸ್ ಆಯುಕ್ತರು ಹಾಗೂ ಅಪರ ಜಿಲ್ಲಾ ದಂಡಾಧಿಕಾರಿಗಳು, ಬೆಂಗಳೂರು ನಗರ ರವರ ನಡವಳಿಗಳು

ಉಪಸ್ಥಿತರು : ಭಾಸ್ಕರ್ ರಾವ್, ಐ.ಪಿ.ಎಸ್. ಪೊಲೀಸ್ ಆಯುಕ್ತರು, ಬೆಂಗಳೂರು ನಗರ

ವಿಷಯ : ವಿಧಾನಸಭೆ ಉಪ ಚುನಾವಣೆ–2019 ಸಂಬಂಧ ನಾಮಪತ್ರ ಸಲ್ಲಿಕೆ ಕೇಂದ್ರಗಳ ಬಳಿ ನಿಷೇದಾಜ್ಞೆ ವಿಧಿಸಿರುವ ಬಗ್ಗೆ.

ಪ್ರಸ್ತಾವನೆ :

ಕರ್ನಾಟಕ ರಾಜ್ಯ ಚುನಾವಣಾ ಆಯೋಗವು ವಿವಿಧ ಕಾರಣಗಳಿಂದ ತೆರವಾಗಿರುವ ವಿಧಾನಸಭಾ ಕ್ಷೇತ್ರಗಳಿಗೆ ಉಪ ಚುನಾವಣೆಯನ್ನು ಪ್ರಕಟಿಸಿರುತ್ತದೆ. ಈ ಚುನಾವಣೆ ಪ್ರಕ್ರಿಯೆಯು ದಿನಾಂಕ:21–09–2019 ರಿಂದ 27–10–2019 ರವರೆಗೆ ನಡೆಯಲಿರುತ್ತದೆ. ವಿಧಾನಸಭೆ ಉಪ ಚುನಾವಣೆಗೆ ದಿನಾಂಕ: 23–09–2019 ರಿಂದ 30–09–2019 ರವರೆಗೆ ನಾಮಪತ್ರ ಸಲ್ಲಿಕೆ ಕಾರ್ಯವು ಈ ಕೆಳಕಂಡ ಚುನಾವಣಾಧಿಕಾರಿಗಳ ಕಛೇರಿಗಳಲ್ಲಿ ನಡೆಯುವುದಾಗಿ ತಿಳಿದುಬಂದಿರುತ್ತದೆ.

ಕ್ರ.ಸಂ	ವಿಧಾನಸಭಾ ಕ್ಷೇತ್ರದ ಸಂಖ್ಯೆ ಮತ್ತು ಹೆಸರು	ನಾಮಪತ್ರ ಸಲ್ಲಿಸುವ ಚುನಾವಣಾಧಿಕಾರಿಗಳ ಕಛೇರಿ ವಿಳಾಸ
1	151–ಕೆ.ಆರ್.ಪುರ	ಕಂದಾಯ ಅಧಿಕಾರಿಯವರ ಕಛೇರಿ, ಕೆ.ಆರ್.ಪುರ ವಿಭಾಗ, ಹಳೆ ಮದ್ರಾಸ್ ರಸ್ತೆ, ಬೆಂಗಳೂರು–560036.
2	153–ಯಶವಂತಪುರ	ನಂ.560, 570, 2ನೇ ಮಹಡಿ, ಕರ್ನಾಟಕ ಬ್ಯಾಂಕ್ ಕಟ್ಟಡ, ಕೆಂಗೇರಿ ಉಪನಗರ, ಬೆಂಗಳೂರು–560060
3	156–ಮಹಾಲಕ್ಷ್ಮಿಲೇಔಟ್	ರಾಜಾಜಿನಗರ ಆರ್.ಟಿ.ಓ. ಕಛೇರಿ ಸಂಕೀರ್ಣ, ಬೆಂಗಳೂರು–560010
4	162–ಶಿವಾಜಿನಗರ	ಮತದಾರರ ನೊಂದಣಾಧಿಕಾರಿಗಳ ಕಛೇರಿ, ಕ್ವೀನ್ಸ್ ರಸ್ತೆ, ಬೆಂಗಳೂರು560052.

ಈ ಮೇಲ್ಕಂಡ ಕಛೇರಿಗಳಲ್ಲಿ ನಾಮ ಪತ್ರ ಸಲ್ಲಿಸುವ ಪ್ರಕ್ರಿಯೆಗಳು ನಡೆಯಲಿದ್ದು, ಇಂತಹ ಸಂದರ್ಭಗಳಲ್ಲಿ ಆಯಾ ಅಭ್ಯರ್ಥಿಗಳ ಬೆಂಬಲಿಗರು ಹೆಚ್ಚಿನ ಸಂಖ್ಯೆಯಲ್ಲಿ ಕಛೇರಿಯ ಬಳಿ ಗುಂಪು ಸೇರುವ ಸಾಧ್ಯತೆಗಳಿರುವುದರಿಂದ, ರಸ್ತೆತಡೆ, ಮೆರವಣಿಗೆ, ಪ್ರತಿಭಟನೆ ಮೊದಲಾದ ಚಟುವಟಿಕೆಗಳು ನಡೆಯುವ ಸಂಭವವಿರುತ್ತದೆ. ಇದರಿಂದಾಗಿ ವಾಹನ ಸಂಚಾರ ಹಾಗೂ ಕಾನೂನು ಸುವ್ಯವಸ್ಥೆಗೆ ಭಂಗವುಂಟಾಗಿ ಸರ್ಕಾರಿ ಕಛೇರಿಯ ಕಾರ್ಯಕಲಾಪಗಳಿಗೆ ಅಡಚಣೆ ಉಂಟಾಗುವ ಸಾಧ್ಯತೆ ಇರುತ್ತದೆ ಹಾಗೂ ಕೆಲವು ದುಷ್ಕರ್ಮಿಗಳು ಮತ್ತು ಸಮಾಜಘಾತುಕ ವ್ಯಕ್ತಿಗಳು ಈ ಸಮಯವನ್ನು ಉಪಯೋಗಿಸಿಕೊಂಡು ಸಾರ್ವಜನಿಕ ಮತ್ತು ಸರ್ಕಾರಿ ಆಸ್ತಿಪಾಸ್ತಿಗಳಿಗೆ ಹಾನಿ ಉಂಟುಮಾಡುವ, ವಾಹನ ಸಂಚಾರ ಹಾಗೂ ಸಾರ್ವಜನಿಕರ ಸಂಚಾರಕ್ಕೆ ತೊಂದರೆಯನ್ನುಂಟುಮಾಡುವ ಸಾಧ್ಯತೆಗಳಿರುವುದಾಗಿ ಗುಪ್ತವಾರ್ತೆ ವರದಿಯಿಂದ ತಿಳಿದುಬಂದಿರುವುದರಿಂದಲೂ ಹಾಗೂ ವಿಭಾಗಗಳ ಉಪ ಪೊಲೀಸ್ ಆಯುಕ್ತರುಗಳು ಹಾಗೂ ಬಿ.ಬಿ.ಎಂ.ಪಿ. ಆಯುಕ್ತರು ಮತ್ತು ವಿಶೇಷ ಆಯುಕ್ತರು ರವರುಗಳೊಂದಿಗೆ ಚರ್ಚಿಸಿ, ನಂತರ ನಾನು ಈ ಬಗ್ಗೆ ಖುದ್ದಾಗಿ ವಿಚಾರಣೆ ಮಾಡಿ ಸದರಿ ವಿಷಯಗಳಲ್ಲಿ ಸಾಕಷ್ಟು ಸತ್ಯಾಂಶವಿದೆ ಎಂದು ಖಚಿತಪಡಿಸಿಕೊಂಡಿರುವುದರಿಂದಲೂ, ಈ ಕೆಳಕಂಡ ಆದೇಶ ಹೊರಡಿಸಿರುತ್ತೇನೆ.

ಆದೇಶ ಸಂಖ್ಯೆ: ಎಸ್.ಬಿ/ವಿ.ಸ.ಉಪ ಚುನಾವಣೆ/ನಿಷೇಧಾಜ್ಞೆ/01/2019, ದಿನಾಂಕ: 22–09–2019.

ಈ ದಿಸೆಯಲ್ಲಿ ಶಾಂತಿ ಮತ್ತು ಸುವ್ಯವಸ್ಥೆಯನ್ನು ಕಾಪಾಡಲು ದಂಡ ಪ್ರಕ್ರಿಯಾ ಸಂಹಿತೆಯ 144ನೇ ಕಲಂ ಅನ್ವಯ ಪ್ರದತ್ತವಾದ ಅಧಿಕಾರವನ್ನು ಉಪಯೋಗಿಸಿ ಭಾಸ್ಕರ್ ರಾವ್, ಐ.ಪಿ.ಎಸ್. ಪೊಲೀಸ್ ಆಯುಕ್ತರು, ಬೆಂಗಳೂರು ನಗರ ಆದ ನಾನು ದಿನಾಂಕ: 23–09–2019 ರ ಬೆಳಿಗ್ಗೆ 10–00 ಗಂಟೆಯಿಂದ ದಿನಾಂಕ: 30–09–2019 ರ ಸಂಜೆ 4–00 ಗಂಟೆಯವರೆಗೆ (ದಿನಾಂಕ: 29–09–2019 ಭಾನುವಾರ ಹೊರತು ಪಡಿಸಿ) ಬೆಂಗಳೂರು ನಗರ ಪೊಲೀಸ್ ಕಮೀಷನರೇಟ್ ವ್ಯಾಪ್ತಿಗೆ ಬರುವ ಈ ಕೆಳಕಂಡ ನಾಮಪತ್ರ ಸಲ್ಲಿಕೆ ಕಛೇರಿಗಳಾದ,

ಕ್ರ.ಸಂ	ವಿಧಾನಸಭಾ ಕ್ಷೇತ್ರದ ಸಂಖ್ಯೆ ಮತ್ತು ಹೆಸರು	ನಾಮಪತ್ರ ಸಲ್ಲಿಸುವ ಚುನಾವಣಾಧಿಕಾರಿಗಳ ಕಛೇರಿ ವಿಳಾಸ
1	151–ಕೆ.ಆರ್.ಪುರ	ಕಂದಾಯ ಅಧಿಕಾರಿಯವರ ಕಛೇರಿ, ಕೆ.ಆರ್.ಪುರ ವಿಭಾಗ, ಹಳೆ ಮದ್ರಾಸ್ ರಸ್ತೆ, ಬೆಂಗಳೂರು–560036.
2	153–ಯಶವಂತಪುರ	ನಂ.560, 570, 2ನೇ ಮಹಡಿ, ಕರ್ನಾಟಕ ಬ್ಯಾಂಕ್ ಕಟ್ಟಡ, ಕೆಂಗೇರಿ ಉಪನಗರ, ಬೆಂಗಳೂರು–560060
3	156–ಮಹಾಲಕ್ಷ್ಮಿಲೇಔಟ್	ರಾಜಾಜಿನಗರ ಆರ್.ಟಿ.ಓ. ಕಛೇರಿ ಸಂಕೀರ್ಣ, ಬೆಂಗಳೂರು–560010
4	162–ಶಿವಾಜಿನಗರ	ಮತದಾರರ ನೊಂದಣಾಧಿಕಾರಿಗಳ ಕಛೇರಿ, ಕ್ವೀನ್ಸ್ ರಸ್ತೆ, ಬೆಂಗಳೂರು560052.

ಈ ಮೇಲ್ಕಂಡ ಕಛೇರಿಗಳ ಸುತ್ತಮುತ್ತ 100 ಮೀಟರ್ ವ್ಯಾಪ್ತಿಯಲ್ಲಿ ಈ ಕೆಳಕಂಡ ನಿಬಂಧನೆಗಳಿಗೆ ಒಳಪಡುವಂತೆ ಪ್ರತಿಬಂಧಕಾಜ್ಞೆಯನ್ನು ವಿಧಿಸಿರುತ್ತೇನೆ.

1. ಕಾನೂನು ಭಂಗವುಂಟುಮಾಡುವ ಉದ್ದೇಶದಿಂದ 05 ಕ್ಕಿಂತ ಹೆಚ್ಚು ಜನರು ಗುಂಪು ಸೇರುವುದನ್ನು

2. ಮೆರವಣಿಗೆ ಮತ್ತು ಸಭೆಗಳನ್ನು

3. ಶಸ್ತ್ರಾಸ್ತ್ರಗಳನ್ನು, ದೊಣ್ಣೆಗಳನ್ನು, ಕತ್ತಿಗಳನ್ನು, ಈಟಿಗಳು, ಗದೆಗಳು, ಕಲ್ಲು, ಇಟ್ಟಿಗೆ, ಚಾಕು ಇನ್ನು ಮುಂತಾದ ಮಾರಕಾಸ್ತ್ರಗಳನ್ನು ಅಥವಾ ದೈಹಿಕ ಹಿಂಸೆಯನ್ನುಂಟುಮಾಡುವ ಯಾವುದೇ ವಸ್ತುಗಳನ್ನು ಒಯ್ಯುವುದನ್ನು

4. ಯಾವುದೇ ಸಂರಕ್ಷಾರ್ಹ ಪದಾರ್ಥ ಅಥವಾ ಸ್ಫೋಟಕ ವಸ್ತುಗಳನ್ನು ಸಿಡಿಸುವುದು, ಕಲ್ಲುಗಳನ್ನು, ಕ್ಷಿಪಣಿಗಳನ್ನು ಎಸೆಯುವ ಸಾಧನಗಳ ಅಥವಾ ಉಪಕರಣಗಳನ್ನು ಒಯ್ಯುವಿಕೆಯನ್ನು ಮತ್ತು ಶೇಖರಿಸುವುದನ್ನು,

5. ವ್ಯಕ್ತಿಗಳ ಅಥವಾ ಅವರ ಶವಗಳ ಪ್ರತಿಕೃತಿಗಳ ಪ್ರದರ್ಶನ ಮಾಡುವುದನ್ನು, ಪ್ರಚೋದಿಸಬಹುದಾದ ಬಹಿರಂಗ ಘೋಷಣೆಗಳನ್ನು ಕೂಗುವುದು, ಸಂಜ್ಞೆ ಮಾಡುವುದು, ಹಾಡುವುದು, ಸಂಗೀತ ನುಡಿಸುವುದು, ಚಿತ್ರಗಳನ್ನು, ಸಂಕೇತಗಳನ್ನು, ಬಿತ್ತಿಪತ್ರ ಅಥವಾ ಇತರೆ ಯಾವುದೇ ವಸ್ತುಗಳನ್ನು ಅಥವಾ ಪದಾರ್ಥಗಳನ್ನು ಪ್ರದರ್ಶಿಸುವುದನ್ನು

6. ನಾಮ ಪತ್ರ ಸಲ್ಲಿಸುವ ಕಛೇರಿಗಳ ಸುತ್ತಮುತ್ತ 100 ಮೀಟರ್ ವ್ಯಾಪ್ತಿಯಲ್ಲಿ ಧ್ವನಿವರ್ಧಕಗಳನ್ನು ಬಳಸುವುದನ್ನು ನಿಷೇದಿಸಲಾಗಿದೆ.

ಈ ನಡವಳಿಯನ್ನು ನನ್ನ ಸಹಿ ಮತ್ತು ನನ್ನ ಕಛೇರಿಯ ಮೊಹರಿನಲ್ಲಿ 2019ರ ಸೆಪ್ಟೆಂಬರ್ ಮಾಹೆಯ ದಿನಾಂಕ 22 ರಂದು ಹೊರಡಿಸಲಾಗಿದೆ.

ಭಾಸ್ಕರ್ ರಾವ್
ಪೊಲೀಸ್ ಆಯುಕ್ತರು ಹಾಗೂ
ಅಪರ ಜಿಲ್ಲಾ ದಂಡಾಧಿಕಾರಿಗಳು,
ಬೆಂಗಳೂರು ನಗರ.

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ ಘಟಕ, ಬೆಂಗಳೂರು. (ಪಿ7) ಪ್ರತಿಗಳು:

RNI No. KARBIL/2001/47147

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

ಭಾಗ–I	ಬೆಂಗಳೂರು, ಗುರುವಾರ, ಸೆಪ್ಟೆಂಬರ್ ೨೬, ೨೦೧೯ (ಆಶ್ವಯುಜ ೦೪, ಶಕ ವರ್ಷ ೧೯೪೦)	ನಂ. ೮೦೬
Part–I	Bengaluru, Thursday, September 26, 2019 (Ashwayuja 04, Shaka Varsha 1940)	No. 806

ಕರ್ನಾಟಕ ಸರ್ಕಾರದ ನಡವಳಿಗಳು

ನಗರಾಭಿವೃದ್ಧಿ ಸಚಿವಾಲಯ

ವಿಷಯ:–	ಪೌರಾಡಳಿತ ಸೇವೆಯ ಕಂದಾಯಾಧಿಕಾರಿ ವೃಂದದ ನೌಕರರುಗಳನ್ನು ಕೆ.ಎಂ.ಎ.ಎಸ್. ಮುಖ್ಯಾಧಿಕಾರಿ ಶ್ರೇಣಿ–2 ವೃಂದದಲ್ಲಿ ವಿಲೀನಗೊಳಿಸುವ ಕುರಿತು – ಆದೇಶ.
ಓದಲಾಗಿದೆ:–	1) ಸರ್ಕಾರದ ಆದೇಶ ಸಂಖ್ಯೆ:ನಅಇ 258 ಇಎಂಸಿ 94, ದಿನಾಂಕ 9–12–1998. 2) ಸರ್ಕಾರದ ಆದೇಶ ಸಂಖ್ಯೆ:ನಅಇ 34 ಇಎಂಸಿ 2005, ಬೆಂಗಳೂರು ದಿನಾಂಕ 29–7–2005. 3) ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ ಇವರ ಪತ್ರಗಳ ಸಂಖ್ಯೆ:9009:ಡಿಎಂಎ: 80:ಕೆಎಂಎಎಸ್:2014–15, ದಿನಾಂಕ 30–03–2016, 02–05–2016 ಮತ್ತು 19–05–2016. 4) ದಿನಾಂಕ:25–06–2019 ರಂದು ನಡೆದ ಸಭೆಯ ನಡವಳಿಗಳು. 5) ಸರ್ಕಾರದ ಆದೇಶ ಸಂಖ್ಯೆ:ನಅಇ 80 ಇಎಂಸಿ 2018, ದಿನಾಂಕ 01–07–2019. 6) ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ ಇವರ ಪತ್ರ ಸಂಖ್ಯೆ:9009:ಡಿಎಂಎ: 80:ಕೆಎಂಎಎಸ್, 2014–15, ದಿನಾಂಕ 16–8–2019. 7) ಸರ್ಕಾರದ ಆದೇಶ ಸಂಖ್ಯೆ:ನಅಇ 9 ಡಿಎಂಕೆ 2018, ದಿನಾಂಕ 23–8–2019. 8) ಶ್ರೀ ಬಿ.ಸಿ.ಬಸವರಾಜು, ಕಂದಾಯಾಧಿಕಾರಿ ಇವರ ಮನವಿ ದಿನಾಂಕ 23–08–2019. 9) ದಿನಾಂಕ 03–09–2019 ರಂದು ನಡೆದ ಸಭೆಯ ನಡವಳಿಗಳು. 10) ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ ಇವರ ಪತ್ರಗಳ ಸಂಖ್ಯೆ:9009:ಡಿಎಂಎ: 80:ಕೆಎಂಎಎಸ್, 2014–15, ದಿನಾಂಕ 05–09–2019 ಮತ್ತು 09–09–2019.

ಪ್ರಸ್ತಾವನೆ:–

ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ಸರ್ಕಾರದ ಅದೇಶ ಸಂಖ್ಯೆ:ನಅಇ 258 ಇಎಂಸಿ 94, ದಿನಾಂಕ: 09–12–1998ರ ಕಾರ್ಯಕಾರಿ ಆದೇಶದ ಪ್ರಕಾರ ಐದು ವರ್ಷ ಸೇವೆ ಸಲ್ಲಿಸಿದ ಪುರಸಭಾ ಹಾಗೂ ಪೌರಾಡಳಿತ ನಿರ್ದೇಶನಾಲಯದ ವಿವಿಧ ವೃಂದದ ನೌಕರರನ್ನು ಕೆಎಂಎಎಸ್ ಮುಖ್ಯಾಧಿಕಾರಿ ಶ್ರೇಣಿ–2 ವೃಂದಕ್ಕೆ ಕಾರ್ಯಕಾರಿ ಆದೇಶದ ಮೂಲಕ ವಿಲೀನಗೊಳಿಸಲು ಅವಕಾಶ ಕಲ್ಪಿಸಲಾಗಿದೆ. ಮೇಲೆ ಓದಲಾದ ಕ್ರಮ ಸಂಖ್ಯೆ (2)ರ ಆದೇಶದನ್ವಯ ಪೌರ ಸೇವೆಯ ವಿವಿಧ ವೃಂದದ ನೌಕರರುಗಳನ್ನು ಕೆ.ಎಂ.ಎ.ಎಸ್. ಮುಖ್ಯಾಧಿಕಾರಿ ಶ್ರೇಣಿ–2 ವೃಂದದಲ್ಲಿ ವಿಲೀನಗೊಳಿಸಲು, ಮತ್ತು ಸದರಿ ವೃಂದದ ನೇರ ನೇಮಕಾತಿ ಹುದ್ದೆಗಳನ್ನು ತುಂಬಲು ಈ ಕೆಳಕಂಡಂತೆ ಅನುಪಾತವನ್ನು ನಿಗದಿಪಡಿಸಿ ಆದೇಶಿಸಲಾಗಿದೆ:–

I Direct Recruitment		33 1/3
II By Absorption		66 2/3
1. Managers belongs to Municipal Service	21.50%	
2. Revenue Officers belongs to Municipal Service	21.50%	
3. Senior Health Inspectors belongs to Municipal Service	21.50%	
4. Manager in the office of the Director of Municipal Administration	2.16%	

ಮೇಲೆ ಓದಲಾದ ಕ್ರಮ ಸಂಖ್ಯೆ(3) ರನ್ವಯ ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯರವರು ಪ್ರಸ್ತುತ ನಗರ ಸ್ಥಳೀಯ ಸಂಸ್ಥೆಗಳಲ್ಲಿ ವಿವಿಧ ವೃಂದದಲ್ಲಿ ಐದು ವರ್ಷಕ್ಕಿಂತ ಹೆಚ್ಚಿಗೆ ಸೇವೆ ಸಲ್ಲಿಸುತ್ತಿರುವ ನೌಕರರುಗಳನ್ನು ಕೆ.ಎಂ.ಎ.ಎಸ್. ಮುಖ್ಯಾಧಿಕಾರಿ ಶ್ರೇಣಿ–2 ವೃಂದದಲ್ಲಿ ವಿಲೀನಗೊಳಿಸುವ ಬಗ್ಗೆ ಪ್ರಸ್ತಾವನೆ ಸಲ್ಲಿಸಿದ್ದು, ಅದರಂತೆ ರಾಜ್ಯದಲ್ಲಿ ಒಟ್ಟು 92 ಪಟ್ಟಣ ಪಂಚಾಯತಿಗಳು ಅಸ್ತಿತ್ವದಲ್ಲಿದ್ದು, ಪ್ರಸ್ತುತ ರಾಜ್ಯ ವೃಂದ/ಮೂಲ ವೃಂದದಲ್ಲಿ 46 ಹುದ್ದೆಗಳು ಕೆ.ಎಂ.ಎ.ಎಸ್. ಮುಖ್ಯಾಧಿಕಾರಿ ಶ್ರೇಣಿ–2 ವೃಂದದ ಹುದ್ದೆಗಳು ಖಾಲಿ ಇದ್ದು, ಪೌರ ಸೇವೆಯ ಅರ್ಹ ನೌಕರರನ್ನು ಕೆ.ಎಂ.ಎ.ಎಸ್. ಮುಖ್ಯಾಧಿಕಾರಿ ಶ್ರೇಣಿ–2 ವೃಂದಕ್ಕೆ ವಿಲೀನಗೊಳಿಸಲು ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಿರುತ್ತಾರೆ.

ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ ಇವರು ಸಲ್ಲಿಸಿರುವ ಪ್ರಸ್ತಾವನೆಯನ್ನು ಪರಿಶೀಲಿಸಿ ಮೇಲೆ ಓದಲಾದ ಕ್ರಮ ಸಂಖ್ಯೆ (4 ಮತ್ತು 5)ರನ್ವಯ 34 (ಮೂವತ್ತನಾಲ್ಕು) ಅರ್ಹ ಪೌರ ಸೇವಾ ನೌಕರರುಗಳನ್ನು ಪೌರಾಡಳಿತ ಸೇವೆಯ ಮುಖ್ಯಾಧಿಕಾರಿ ಶ್ರೇಣಿ–2 ವೃಂದದಲ್ಲಿ ವಿಲೀನಗೊಳಿಸಿ ಆದೇಶಿಸಲಾಗಿದೆ.

ಮುಂದುವರೆದು, ಪೌರಾಡಳಿತ ನಿರ್ದೇಶನಾಲಯದಿಂದ ಶಿಫಾರಸುಗೊಂಡಿದ್ದ ಕಂದಾಯಾಧಿಕಾರಿ ವೃಂದಕ್ಕೆ ಸೇರಿದ ಶ್ರೀ ಬಿ.ಸಿ.ಬಸವರಾಜು ಇವರಿಗೆ ಸಂಬಂಧಿಸಿದಂತೆ ಇಲಾಖಾ ವಿಚಾರಣೆ ಬಾಕಿ ಇದ್ದುದರಿಂದ ಮತ್ತು ಶ್ರೀ ಕೆ.ಎಫ್.ಕಟಗಿ ಇವರ ಐದು ವರ್ಷಗಳ ಕಾರ್ಯನಿರ್ವಹಣಾ ವರದಿ ಲಭ್ಯವಿಲ್ಲದ ಕಾರಣ ಇವರನ್ನು ವಿಲೀನ ಪ್ರಕ್ರಿಯೆಯಿಂದ ಕೈಬಿಡಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (6)ರನ್ವಯ ಶ್ರೀ.ಕೆ.ಎಫ್.ಕಟಗಿ ಇವರ ಕಾರ್ಯನಿರ್ವಹಣಾ ವರದಿಗಳನ್ನು ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ ಇವರು ಸರ್ಕಾರಕ್ಕೆ ಕಳುಹಿಸಿರುತ್ತಾರೆ ಮತ್ತು ಶ್ರೀ ಬಿ.ಸಿ.ಬಸವರಾಜು ಇವರ ಮೇಲಿದ್ದ ಇಲಾಖಾ ವಿಚಾರಣೆಯನ್ನು ಮೇಲೆ ಓದಲಾದ ಕ್ರಮ ಸಂಖ್ಯೆ (7)ರ ಆದೇಶದನ್ವಯ ಆರೋಪಮುಕ್ತಗೊಳಿಸಿ ಆದೇಶಿಸಲಾಗಿರುತ್ತದೆ. ಅದರಂತೆ ಶ್ರೀ ಬಿ.ಸಿ.ಬಸವರಾಜು ಇವರು ಮೇಲೆ ಓದಲಾದ ಕ್ರಮ ಸಂಖ್ಯೆ (8)ರ ತಮ್ಮ ಮನವಿಯಲ್ಲಿ ತಮ್ಮನ್ನು ಕೆಎಂಎಎಸ್ ಮುಖ್ಯಾಧಿಕಾರಿ ಶ್ರೇಣಿ–2 ವೃಂದಕ್ಕೆ ವಿಲೀನಗೊಳಿಸುವಂತೆ ಕೋರಿರುತ್ತಾರೆ.

ಅದರಂತೆ ಮೇಲೆ ಓದಲಾದ ಕ್ರಮ ಸಂಖ್ಯೆ (9)ರನ್ವಯ ದಿನಾಂಕ:03–09–2019ರಂದು ನಡೆದ ಸಭೆಯಲ್ಲಿ ಮೇಲ್ಕಂಡ ಕಂದಾಯಾಧಿಕಾರಿ ವೃಂದದ ಅರ್ಹ ನೌಕರರಾದ ಶ್ರೀ ಬಿ.ಸಿ.ಬಸವರಾಜು ಜೇಷ್ಟತಾ ಕ್ರಮ ಸಂಖ್ಯೆ: 178 ಮತ್ತು ಶ್ರೀ ಕೆ.ಎಫ್.ಕಟಗಿ ಇವರ ಜೇಷ್ಟತಾ ಕ್ರಮ ಸಂಖ್ಯೆ:201 ಇವರುಗಳಿಗೆ ಕೆ.ಎಂ.ಎ.ಎಸ್. ಮುಖ್ಯಾಧಿಕಾರಿ ಶ್ರೇಣಿ–2 ವೃಂದದಲ್ಲಿ ವಿಲೀನಗೊಳಿಸಲು ತೀರ್ಮಾನಿಸಲಾಗಿದೆ. ಅಲ್ಲದೆ ದಿನಾಂಕ:03–09–2019ರಂದು ನಡೆದ ಸಭೆಯಲ್ಲಿ ಸೂಚಿಸಿದಂತೆ ಮೇಲೆ ಓದಲಾದ ಕ್ರಮ ಸಂಖ್ಯೆ (10)ರನ್ವಯ ಪೌರಾಡಳಿತ ನಿರ್ದೇಶನಾಲದಿಂದ ಶ್ರೀ ಕೆ.ಎಫ್.ಕಟಗಿ, ಕಂದಾಯಾಧಿಕಾರಿ ಇವರ ನಾಲ್ಕು (4) ವರ್ಷಗಳ ಕಾರ್ಯನಿರ್ವಹಣಾ ವರದಿಗಳನ್ನು ಸರ್ಕಾರಕ್ಕೆ ಸಲ್ಲಿಸಿರುವ ಬಗ್ಗೆ ದೃಢೀಕರಣ ನೀಡಿರುತ್ತಾರೆ.

ಅದರಂತೆ ಕಂದಾಯಾಧಿಕಾರಿ ವೃಂದದಲ್ಲಿ ಕೆ.ಎಂ.ಎ.ಎಸ್. ಮುಖ್ಯಾಧಿಕಾರಿ ಶ್ರೇಣಿ–2 ವೃಂದಕ್ಕೆ ವಿಲೀನಗೊಳಿಸಲು ಖಾಲಿ ಇರುವ ಹುದ್ದೆಗಳ ಮಾಹಿತಿ ಈ ಕೆಳಕಂಡಂತೆ ಇರುತ್ತದೆ:–

ಕ್ರ ಸ	ವೃಂದವಾರು ನೌಕರರ ಮಾಹಿತಿ	ವೃಂದವಾರು ಲಭ್ಯವಿರುವ ಹುದ್ದೆಗಳ ಮಾಹಿತಿ (ರಾಜ್ಯ ವೃಂದದಲ್ಲಿ)	ಅರ್ಹತೆ ಹೊಂದಿರುವ ನೌಕರರ ಸಂಖ್ಯೆ (ರಾಜ್ಯ ವೃಂದದಲ್ಲಿ)
1	ಕಂದಾಯಾಧಿಕಾರಿ ವೃಂದದಿಂದ	**03**	**02**
	ಒಟ್ಟು	**03**	**02**

ಸರ್ಕಾರದ ಆದೇಶ ಸಂಖ್ಯೆ:ನಅಇ 258 ಇಎಂಸಿ 94, ದಿನಾಂಕ 09–12–1998 ಮತ್ತು ಸರ್ಕಾರದ ಆದೇಶ ಸಂಖ್ಯೆ:ನಅಇ 34 ಇಎಂಸಿ 2005, ದಿನಾಂಕ 29–7–2005ರ ಆದೇಶಗಳಲ್ಲಿನ ಮಾರ್ಗಸೂಚಿಗಳನ್ವಯ ಹಾಗೂ ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ ಇವರು ಸಲ್ಲಿಸಿರುವ ಪ್ರಸ್ತಾವನೆಯನ್ವಯ ಪೌರಾಡಳಿತ ಸೇವೆಯ

ಈ ಕೆಳಕಂಡ ಕಂದಾಯಾಧಿಕಾರಿ ವೃಂದದ ನೌಕರರುಗಳು ಕೆಎಂಎಎಸ್ ಮುಖ್ಯಾಧಿಕಾರಿ ಶ್ರೇಣಿ–2ಕ್ಕೆ ವಿಲೀನಗೊಳಿಸಲು ಅರ್ಹರಿರುತ್ತಾರೆ.

ಕಂದಾಯಾಧಿಕಾರಿ ವೃಂದದಿಂದ ಕೆಎಂಎಎಸ್ ಮುಖ್ಯಾಧಿಕಾರಿ ಶ್ರೇಣಿ–2 ವೃಂದಕ್ಕೆ ವಿಲೀನಗೊಳಿಸಲು ಶಿಫಾರಸು ಮಾಡಿರುವ ನೌಕರರ ವಿವರ

ಕ್ರ ಸಂ	ನೌಕರರ ಹೆಸರು	ಕಂದಾಯಾಧಿಕಾರಿ ವೃಂದಕ್ಕೆ ಬಂದ ದಿನಾಂಕ	ಜೇಷ್ಟತಾ ಪಟ್ಟಿಯ ಕ್ರಮ ಸಂಖ್ಯೆ	ವಾರ್ಷಿಕ ಕಾರ್ಯನಿರ್ವಹಣಾ ವರದಿಯ ಲಭ್ಯತೆ
1	ಶ್ರೀ ಬಿ.ಸಿ.ಬಸವರಾಜು	14–12–2011	178	2013–14 ರಿಂದ 2017–18
2	ಶ್ರೀ ಕೆ.ಎಫ್.ಕಟಗಿ	28–11–2012	201	2013–14 ರಿಂದ 2017–18

ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ, ಬೆಂಗಳೂರು ಇವರು ಪೌರ ಸೇವೆಯ ಕಂದಾಯಾಧಿಕಾರಿ ವೃಂದದ ನೌಕರರುಗಳನ್ನು ಕೆ.ಎಂ.ಎ.ಎಸ್. ಮುಖ್ಯಾಧಿಕಾರಿ ಶ್ರೇಣಿ–2 ವೃಂದದ ಹುದ್ದೆಗಳಿಗೆ ವಿಲೀನಗೊಳಿಸಲು ಸಲ್ಲಿಸಿರುವ ಪ್ರಸ್ತಾವನೆಯನ್ನು ಸರ್ಕಾರದ ಹಂತದಲ್ಲಿ ಅವರುಗಳ ಸೇವಾ ಮಾಹಿತಿಗಳು/ಅಗತ್ಯ ದಾಖಲೆಗಳು, ಸೇವಾ ವಿವರಗಳನ್ನು ಪರಿಶೀಲಿಸಿ, ಸದರಿ ನೌಕರರುಗಳನ್ನು ಕೆಎಂಎಎಸ್ ಮುಖ್ಯಾಧಿಕಾರಿ ಶ್ರೇಣಿ–2 ವೃಂದಕ್ಕೆ ವಿಲೀನಗೊಳಿಸಲು ದಿನಾಂಕ 03–09–2019ರಂದು ನಡೆದ ಸಭೆಯಲ್ಲಿ ತೀರ್ಮಾನಿಸಲಾಗಿದೆ. ಆದ್ದರಿಂದ ಈ ಕೆಳಕಂಡ ಆದೇಶ.

ಸರ್ಕಾರದ ಆದೇಶ ಸಂಖ್ಯೆ: ನಅಇ 80 ಇಎಂಸಿ 2018(ಭಾಗ–4), ಬೆಂಗಳೂರು, ದಿನಾಂಕ: 25–09–2019

ಪ್ರಸ್ತಾವನೆಯಲ್ಲಿ ಕೂಲಂಕಷವಾಗಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಕರ್ನಾಟಕ ಪುರಸಭೆಗಳ ಅಧಿನಿಯಮ 1964ರ ಕಲಂ 365(1)(2)(ಎ) ಪ್ರಕಾರ ಮೇಲೆ ತಿಳಿಸಿರುವ ಪೌರಸೇವೆಯ ಕಂದಾಯಾಧಿಕಾರಿ ವೃಂದದ ಈ ಕೆಳಗಿನ ಪಟ್ಟಿಯಲ್ಲಿ ಹೆಸರಿಸಿರುವ **ಇಬ್ಬರು (02)** ನೌಕರರುಗಳನ್ನು ಅವರ ಸೇವಾ ಜೇಷ್ಟತೆಯನ್ನು ಪರಿಗಣಿಸಿ, ತಕ್ಷಣದಿಂದ ಜಾರಿಗೆ ಬರುವಂತೆ **ಕರ್ನಾಟಕ ಪೌರಾಡಳಿತ ಸೇವೆಯ ವೃಂದದ ಅಧಿಕಾರಿಗಳೆಂದು ವೇತನ ಶ್ರೇಣಿ ರೂ.33450–62600/–ರ ಮುಖ್ಯಾಧಿಕಾರಿ ಶ್ರೇಣಿ–2ರ ಹುದ್ದೆಯಲ್ಲಿ** ಸ್ಥಾನಪನ್ನ ಆಧಾರದ ಮೇಲೆ ಅವರುಗಳ ಅಂತಿಮ ವೇತನವನ್ನೊಳಗೊಂಡಂತೆ (ಈ ಅಧಿಕಾರಿಗಳ ಹಿಂದಿನ ಹುದ್ದೆಯ ವೇತನ ಶ್ರೇಣಿಯು ಮುಖ್ಯಾಧಿಕಾರಿ ಶ್ರೇಣಿ–2 ವೃಂದದ ವೇತನ ಶ್ರೇಣಿಗಿಂತ ಹೆಚ್ಚಿನ ವೇತನ ಶ್ರೇಣಿಯನ್ನು ಹೊಂದಿದಲ್ಲಿ ಆ ವೇತನ ಶ್ರೇಣಿಯಲ್ಲಿಯೇ ಅವರ ವೇತನವನ್ನು ಮುಂದುವರೆಸಿ) ಎಲ್ಲಾ ಸೇವಾ ಸೌಲಭ್ಯಗಳನ್ನು ನೀಡಿ, ಕೆ.ಎಂ.ಎ.ಎಸ್. ಅಧಿಕಾರಿಗಳಿಗೆ ಅನ್ವಯವಾಗುವ ಸೇವಾ ನಿಯಮಾವಳಿಗೊಳಪಟ್ಟು ಹಾಗೂ ಈ ಆದೇಶದಲ್ಲಿ ವಿಧಿಸಿರುವ ಷರತ್ತಿಗೆ ಒಳಪಟ್ಟು ವಿಲೀನಗೊಳಿಸಿ, ಹಾಲಿ ಕರ್ತವ್ಯ ನಿರ್ವಹಿಸುತ್ತಿರುವ ಸ್ಥಳದಲ್ಲಿಯೇ ಮುಂದಿನ ಆದೇಶದವರೆಗೆ ಮುಂದುವರೆಸಿ ಆದೇಶಿಸಲಾಗಿದೆ.

ಕಂದಾಯಾಧಿಕಾರಿ ವೃಂದದಿಂದ ಕೆಎಂಎಎಸ್ ಮುಖ್ಯಾಧಿಕಾರಿ ಶ್ರೇಣಿ–2 ವೃಂದಕ್ಕೆ ವಿಲೀನಗೊಳಿಸಿರುವ ಅಧಿಕಾರಿ/ನೌಕರರ ಹೆಸರು

ಕ್ರ ಸಂ	ನೌಕರರ ಹೆಸರು	ದಿನಾಂಕ 01–01–2019ಕ್ಕೆ ಇರುವಂತೆ ಜೇಷ್ಟತಾ ಪಟ್ಟಿಯ ಕ್ರಮ ಸಂಖ್ಯೆ
1	ಶ್ರೀ ಬಿ.ಸಿ.ಬಸವರಾಜು	178
2	ಶ್ರೀ ಕೆ.ಎಫ್.ಕಟಗಿ.	201

ಷರತ್ತುಗಳು:–

1. ಈ ಮೇಲ್ಕಂಡ ನೌಕರರುಗಳು ಸರ್ಕಾರದ ಆದೇಶ ಸಂಖ್ಯೆ:ನಅಇ 258 ಇಎಂಸಿ 94, ದಿನಾಂಕ: 9–12–1998 ರಲ್ಲಿ ತಿಳಿಸಿರುವಂತೆ ಮುಖ್ಯಾಧಿಕಾರಿ ಶ್ರೇಣಿ–2 ಹುದ್ದೆಗೆ ನಿಗಧಿಪಡಿಸಿರುವ ಎಲ್ಲಾ ಇಲಾಖಾ ಪರೀಕ್ಷೆಗಳನ್ನು ಮುಖ್ಯಾಧಿಕಾರಿ ಶ್ರೇಣಿ–2 ಹುದ್ದೆಯಲ್ಲಿ ವಿಲೀನಗೊಳಿಸಿದ / ಈ ಆದೇಶ ಹೊರಡಿಸಿದ ದಿನಾಂಕದಿಂದ ಎರಡು ವರ್ಷದೊಳಗಾಗಿ ಉತ್ತೀರ್ಣರಾಗತಕ್ಕದ್ದು.

2. ಮೇಲ್ಕಂಡ ಕಂದಾಯಾಧಿಕಾರಿ ವೃಂದಗಳಲ್ಲಿ ವಿಲೀನಗೊಂಡಿರುವ ನೌಕರರುಗಳ ವಿರುದ್ಧ ಅಧೀನ ಕಛೇರಿಗಳಲ್ಲಿ / ಸರ್ಕಾರದ ಹಂತದಲ್ಲಿ ದಿನಾಂಕ 03–09–2019ರ ಅವಧಿಯೊಳಗೆ ಯಾವುದಾದರೂ

ಇಲಾಖಾ ವಿಚಾರಣೆ ಪ್ರಕ್ರಿಯೆ ಹೂಡಿರುವುದು ಕಂಡು ಬಂದಲ್ಲಿ ಸದರಿಯವರ ವಿಲೀನಾತಿಯನ್ನು ರದ್ದುಗೊಳಿಸಲಾಗುವುದು ಅಥವಾ ಹಿಂಪಡೆಯಲಾಗುವುದು.

3. ಈ ಆದೇಶದಲ್ಲಿ ಕೆ.ಎಂ.ಎ.ಎಸ್. ಮುಖ್ಯಾಧಿಕಾರಿ ಶ್ರೇಣಿ–2 ಹುದ್ದೆಯಲ್ಲಿ ವಿಲೀನಗೊಳಿಸಿರುವ ನೌಕರರುಗಳಿಗೆ ರಾಜ್ಯದ ಪಟ್ಟಣ ಪಂಚಾಯತಿ/ಪುರಸಭೆಗಳಲ್ಲಿ ಮುಖ್ಯಾಧಿಕಾರಿ ಹುದ್ದೆಗಳಿಗೆ ನೇಮಕಗೊಳಿಸುವ ಸಂದರ್ಭದಲ್ಲಿ ಸರ್ಕಾರದೊಂದಿಗೆ ಸಮಾಲೋಚಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಎ.ವಿಜಯಕುಮಾರ್
ಸರ್ಕಾರದ ಅಧೀನ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ.

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ ಘಟಕ, ಬೆಂಗಳೂರು. (ಪಿ7) ಪ್ರತಿಗಳು: 25

RNI No. KARBIL/2001/47147

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

ಭಾಗ–III	ಬೆಂಗಳೂರು, ಬುಧವಾರ, ಸೆಪ್ಟೆಂಬರ್ ೦೪, ೨೦೧೯ (ಭಾದ್ರಪದ ೧೩, ಶಕ ವರ್ಷ ೧೯೪೦)	ನಂ. ೭೪೫
Part–III	Bengaluru, Wednesday, September 04, 2019 (Bhadrapada 13, Shaka Varsha 1940)	No. 745

ನಗರಾಭಿವೃದ್ಧಿ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ನಅಇ 16 ಎಂಎಲ್ಆರ್ 2019, ಬೆಂಗಳೂರು, ದಿನಾಂಕ: 04.09.2019.

ಸರ್ಕಾರದ ಮಾರ್ಗಸೂಚಿ ಸಂಖ್ಯೆ:ನಅಇ 240 ಎಂಎಲ್ಆರ್ 2013 ದಿನಾಂಕ:18.12.2013 ರಲ್ಲಿ ಹಾಗೂ ತಿದ್ದುಪಡಿ ಆದೇಶ ಸಂಖ್ಯೆ:ನಅಇ 21 ಎಂಎಲ್ಆರ್ 2016 ದಿನಾಂಕ:09.02.2016ರಲ್ಲಿ ಸ್ಪಷ್ಟಪಡಿಸಿರುವಂತೆ, ಸರ್ಕಾರವು ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಕರ್ನಾಟಕ ಪುರಸಭೆ ಕಾಯ್ದೆ 1964ರ ಕಲಂ 13 ರನ್ವಯ (Karnataka Act 22 of 1964) ಹಾಗೂ ಸರ್ಕಾರದ ಅಧಿಸೂಚನೆ ಸಂಖ್ಯೆ: ಸಂವ್ಯಶಾಇ 13 ಶಾಸನ 2012, ಬೆಂಗಳೂರು, ದಿನಾಂಕ:30.08.2012 ರನ್ವಯ (Karnataka Act No. 32 of 2012) ಈ ಕೆಳಕಂಡ ನಗರ ಸ್ಥಳೀಯ ಸಂಸ್ಥೆಗೆ ಸಂಬಂಧಿಸಿದಂತೆ ವಾರ್ಡುವಾರು ಕರಡು ಮೀಸಲಾತಿಯನ್ನು ಪ್ರಕಟಿಸಲಾಗಿದೆ.

1. **ಹುಳಿಯಾರು ಪಟ್ಟಣ ಪಂಚಾಯಿತಿ** ವಾರ್ಡುಗಳ ಸಂಖ್ಯೆ: **16 (ಹದಿನಾರು)**
2. ಪ್ರತಿ ವಾರ್ಡುಗಳ ವ್ಯಾಪ್ತಿಯ ವಿವರಗಳನ್ನು ಅನುಬಂಧದ ಕಲಂ 3 ರಲ್ಲಿ ಸ್ಪಷ್ಟಪಡಿಸಲಾಗಿದೆ.
3. ಪ್ರತಿ ವಾರ್ಡಿಗೆ ತಲಾ ಒಂದು ಸ್ಥಾನವನ್ನು ಮೀಸಲಿಡಲಾಗಿದೆ.
4. ಪ್ರತಿ ವಾರ್ಡಿಗೆ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ / ಹಿಂದುಳಿದ ವರ್ಗ/ ಸಾಮಾನ್ಯ ಸ್ಥಾನವನ್ನು ಮತ್ತು ಆಯಾ ವರ್ಗದ ಮಹಿಳೆಯರ ಸ್ಥಾನವನ್ನು ಅನುಬಂಧದ ಕಲಂ 4 ರಲ್ಲಿ ನಿಗದಿಪಡಿಸಿದೆ.

ಈ ಅಧಿಸೂಚನೆಯ ಮೂಲಕ ಕರಡು ಮೀಸಲಾತಿಯನ್ನು ಸಾರ್ವಜನಿಕರ ಅವಗಾಹನೆಗಾಗಿ ಪ್ರಕಟಿಸಲಾಗಿದೆ. ಈ ಅಧಿಸೂಚನೆಯನ್ನು ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಿಸಿದ ದಿನಾಂಕದಿಂದ 15 ದಿನಗಳ ತರುವಾಯ ಈ ಅಧಿಸೂಚನೆಯನ್ನು ಪರಿಗಣನೆಗೆ ತೆಗೆದುಕೊಳ್ಳಲಾಗುವುದು. ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಯಾವುದೇ ಆಕ್ಷೇಪಣೆಯನ್ನು ಸಲ್ಲಿಸಲು ಇಚ್ಛಿಸುವ ವ್ಯಕ್ತಿಗಳು ಅದನ್ನು ಲಿಖಿತದಲ್ಲಿ ಕಾರಣ ಸಹಿತವಾಗಿ ದಾಖಲೆಗಳೊಂದಿಗೆ ನಿಗದಿತ ದಿನಾಂಕಕ್ಕೆ ಮೊದಲು **ತುಮಕೂರು ಜಿಲ್ಲಾಧಿಕಾರಿಗಳಿಗೆ** ಸಲ್ಲಿಸಬೇಕೆಂದು ಈ ಮೂಲಕ ಸೂಚಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಎ. ವಿಜಯಕುಮಾರ್
ಸರ್ಕಾರದ ಅಧೀನ ಕಾರ್ಯದರ್ಶಿ
ನಗರಾಭಿವೃದ್ಧಿ ಇಲಾಖೆ

ಅನುಬಂಧ

ಹುಳಿಯಾರು ಪಟ್ಟಣ ಪಂಚಾಯಿತಿ

ಕ್ರ ಸಂ	ವಾರ್ಡ್ ಸಂಖ್ಯೆ ಮತ್ತು ಹೆಸರು	ಚೆಕ್ಕುಬಂದಿ	ವಾರ್ಡ್‌ಗೆ ಒಳಪಡುವ ಪ್ರದೇಶಗಳು	ಮೀಸಲಾತಿ
1	2	3		4
1	ವಾರ್ಡ್ ನಂ 1	**ಪೂರ್ವ :** ಪಟ್ಟಣ ಪಂಚಾಯಿತಿ ಗಡಿ ಹಾಗೂ ಬಳ್ಳೆಕಟ್ಟೆ ಗಡಿ. **ಪಶ್ಚಿಮ :** ಕಿಡ್ಜಿಶಾಲೆ, ಮಾರುತಿ ಶಾಲೆ **ಉತ್ತರ :** ಎನ್.ಹೆಚ್.234 ರಸ್ತೆಯಿಂದ ಬರುವ ದಕ್ಷಿಣ ಭಾಗ. **ದಕ್ಷಿಣ :** ಅಪ್ಪಸಾಬಿ ಅಣೆ.	ಎಪಿಎಂಸಿ ಹಿಂಭಾಗ, ಬಸವೇಶ್ವರ ನಗರ, ಆಜಾದ್ ನಗರ, ಉರ್ದುಸ್ಕೂಲ್, ಬಸವೇಶ್ವರ ಸ್ಕೂಲ್, ತೆಂಗಿನ ನಾರಿನ ಕಾರ್ಖಾನೆ, ಪೆಟ್ರೋಲ್ ಬಂಕ್, ಶಾರದ ಸ್ಕೂಲ್, ಅಪ್ಪಸಾಬಿ ಅಣೆ. ಬಸವೇಶ್ವರ ನಗರ, ಕಿಡ್ಜಿ ಸ್ಕೂಲ್‌ನ ಪೂರ್ವ ಭಾಗದ ಮನೆಗಳು. ಮಾರುತಿ ಶಾಮಿಯಾನ ಕಟ್ಟಡ.	ಹಿಂದುಳಿದ ವರ್ಗ–ಎ (ಮಹಿಳೆ)
2	ವಾರ್ಡ್ ನಂ 2	**ಪೂರ್ವ:** ಕಿಡ್ಜಿ ಸ್ಕೂಲ್ ಮಾರುತಿ ಸ್ಕೂಲ್ **ಪಶ್ಚಿಮ:** ನೀಲದಾಸಪ್ಪನವರ ಮನೆ ಹಾಗೂ ಸಾಬ್‌ಜಾನ್ಸಾಬ್ ಸಾಬ್‌ರ ಮನೆ ರಸ್ತೆ **ಉತ್ತರ:** ಎನ್.ಹೆಚ್.234 ರಸ್ತೆಯಿಂದ ಬರುವ ದಕ್ಷಿಣ ಭಾಗ. **ದಕ್ಷಿಣ:** ಬಸವನ ತೊರೆ.	ಕಿಡ್ಜಿಶಾಲೆ ಪಶ್ಚಿಮ ಭಾಗ, ಮಾರುತಿ ಶಾಮಿಯಾನ ಕಟ್ಟಡದ ಪಶ್ಚಿಮ ಭಾಗ, ನೂರಾನಿ ಮಸೀದಿ ರಸ್ತೆಯ ಉತ್ತರ ಭಾಗ, ಇಂದಿರಾಗಾಂಧಿ ಸ್ಕೂಲ್ ಉತ್ತರ ಹಾಗೂ ಪೂರ್ವ ಭಾಗ, ಇಂದಿರಾನಗರ, ಎಸ್.ಬಿ.ಐ.ಬ್ಯಾಂಕ್, ಕಿಡ್ಜಿಶಾಲೆ, ಮಹಮದ್ ಸಾಬ್‌ಜಾನ್‌ಸಾಬರ ಮನೆ ಮತ್ತು ರಬ್ಬಾನಿ ಟೈಲರ್ ಮನೆಯಿಂದ ಪೂರ್ವ ಭಾಗ. ಜಾಫರ್ ಸಾಬರ ಮನೆಯ ಪೂರ್ವ ಭಾಗ.	ಸಾಮಾನ್ಯ
3	ವಾರ್ಡ್ ನಂ 3	**ಪೂರ್ವ:** ಇಂದಿರಾಗಾಂದಿ ಸ್ಕೂಲ್ ಹಾಗೂ ಮಹಮದ್ ರಫೀಕ್ ಮನೆ **ಪಶ್ಚಿಮ:** ಬೆಂಕಿ ಗಣೇಶ ದೇವಸ್ಥಾನದ ಹಿಂಭಾಗದ ರಸ್ತೆ ಬಾಲಾಜಿ ಟಾಕೀಸ್ ಕಾಂಪೌಂಡ್ ಪೂರ್ವ ಭಾಗ. **ಉತ್ತರ:** ಎನ್.ಹೆಚ್.234 ರಸ್ತೆಯಿಂದ ಬರುವ ದಕ್ಷಿಣ ಭಾಗ. **ದಕ್ಷಿಣ:** ಬಸವನ ತೊರೆ.	ಇಂದಿರಾಗಾಂಧಿ ಸ್ಕೂಲ್ ಮುಂಭಾಗದಿಂದ ಉತ್ತರದ ಕಡೆ ಹಾಗೂ ಪಶ್ಚಿಮದ ಕಡೆ, ಜಾಪರ್‌ಸಾಬ್‌ರ ಮನೆ, ಮಹಮದ್‌ರಫಿಕ್ ಮನೆಯಿಂದ ಪಶ್ಚಿಮದ ಕಡೆ, ಬಾಲಾಜಿ ಟಾಕೀಸ್ ಕಾಂಪೌಂಡ್‌ನ ಪೂರ್ವಭಾಗ, ಬೀರದೇವರ ಕಟ್ಟೆಯ ಪೂರ್ವಭಾಗ, (ಡಾ॥ರಾಜ್ ಕುಮಾರ್ ಮನೆ ರಸ್ತೆ) ಬೆಂಕಿಗಣೇಶ ದೇವಸ್ಥಾನದ ಪೂರ್ವಭಾಗ. ಬಸವನತೊರೆ, ಇಂದಿರಾನಗರ, ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆ, ಸರ್ಕಾರಿಉರ್ದು ಶಾಲೆ, ಅಂಗನವಾಡಿ ಕೇಂದ್ರ.	ಸಾಮಾನ್ಯ
4	ವಾರ್ಡ್ ನಂ 4	**ಪೂರ್ವ:** ಬೆಂಕಿಗಣೇಶ ದೇವಸ್ಥಾನದ ಹಿಂಭಾಗ ಪಶ್ಚಿಮದ ಕಡೆ ಮನೆಗಳು ಹಾಗೂ ಬಾಲಾಜಿ ಟಾಕೀಸ್ ಕಾಂಪೌಂಡ್. **ಪಶ್ಚಿಮ:** ಡಿಸಿಸಿ ಬ್ಯಾಂಕ್ ಹಿಂಬಾಗದ ರಸ್ತೆಯ ಪೂರ್ವದ ಭಾಗದ ಮನೆಗಳು (ಬೀರದೇವರ ಕಟ್ಟೆಯ ರಸ್ತೆ). **ಉತ್ತರ:** ಎನ್.ಹೆಚ್.234 ರಸ್ತೆಯಿಂದ ಬರುವ ದಕ್ಷಿಣಭಾಗ. **ದಕ್ಷಿಣ:** ಬಸವನ ತೊರೆ.	ಬಾಲಾಜಿಟಾಕೀಸ್ ಹಾಗೂ ಬೆಂಕಿಗಣೇಶದ ದೇವಸ್ಥಾನದ ಹಿಂಭಾಗದ ಮನೆಗಳು ಪಶ್ಚಿಮದ ಕಡೆ ಬಸವನತೊರೆವರೆಗೆ, ಡಿಸಿಸಿಬ್ಯಾಂಕ್ ಹಿಂಭಾಗದರಸ್ತೆಯ (ಬೀರದೇವರ ಕಟ್ಟೆಯ ರಸ್ತೆಯ ಪೂರ್ವ ಭಾಗದ ಮನೆಗಳು, ಇಂದಿರಾನಗರ.	ಹಿಂದುಳಿದ ವರ್ಗ – ಎ
5	ವಾರ್ಡ್ ನಂ 5	**ಪೂರ್ವ:** ಡಿಸಿಸಿ ಬ್ಯಾಂಕ್ ಹಿಂಭಾಗದ ಬೀರದೇವರ ಕಟ್ಟೆ ರಸ್ತೆಯ ಪಶ್ಚಿಮ ಭಾಗ. **ಪಶ್ಚಿಮ:** ನಂದಿಹಳ್ಳಿ ರಸ್ತೆಯ ಪೂರ್ವ ಭಾಗ ಹಾಗೂ ಗಂಗಮಾಳಮ್ಮ ದೇವಸ್ಥಾನದ ಪಶ್ಚಿಮ ಭಾಗದ ಮನೆಗಳು.	ನಂದಿಹಳ್ಳಿ ರಸ್ತೆಯ ಪೂರ್ವಭಾಗದ ಮನೆಗಳು, ಜ್ಞಾನಜ್ಯೋತಿ ಸ್ಕೂಲ್, ಡಿಸಿಸಿಬ್ಯಾಂಕ್ ಹಿಂಭಾಗದ ರಸ್ತೆಯ ಪಶ್ಚಿಮ ಭಾಗದ ಮನೆಗಳು, ನಂದಿಹಳ್ಳಿ ರಸ್ತೆಯ ಗಂಗಮಾಳಮ್ಮ ದೇವಸ್ಥಾನದ ಅಕ್ಕಪಕ್ಕದ ಮನೆಗಳು (ಮುಳ್ಳುತಂತಿ) ಪಶ್ಚಿಮ ಹಾಗೂ ದಕ್ಷಿಣಭಾಗದ ಮನೆಗಳು, ಎಸ್.ಬಿ.ಐ.ಬ್ಯಾಂಕ್, ಕೆನರಾಬ್ಯಾಂಕ್, ವಿಜಯನಗರ ಬಡಾವಣೆ.	ಸಾಮಾನ್ಯ (ಮಹಿಳೆ)

		ಉತ್ತರ: ಎನ್.ಹೆಚ್.234 ರಸ್ತೆಯಿಂದ ಬರುವ ದಕ್ಷಿಣ ಭಾಗ. **ದಕ್ಷಿಣ:** ಬಸವತೊರೆ.		
6	ವಾರ್ಡ್ ನಂ 6	**ಪೂರ್ವ:** ನಂದಿಹಳ್ಳಿ ರಸ್ತೆ **ಪಶ್ಚಿಮ:** ತಿಮ್ಲಾಪುರ ಕೆರೆಕೋಡಿಯ ದೊಡ್ಡಒಣಕಾಲುವೆಯ ಪೂರ್ವ ಭಾಗ. **ಉತ್ತರ:** ಎನ್.ಹೆಚ್.234 ರಸ್ತೆಯಿಂದ ಬರುವ ದಕ್ಷಿಣ ಭಾಗ. **ದಕ್ಷಿಣ:** ತಿಮ್ಲಾಪುರ ಕೆರೆಕೋಡಿ.	ಪೊಲೀಸ್ ಸ್ಟೇಷನ್ ಹಿಂಭಾಗದ ಗಂಗಮಾಳಮ್ಮ ದೇವಸ್ಥಾನದ ಉತ್ತರ ಭಾಗದ ಮುಳ್ಳುತಂತಿಯ ಉತ್ತರ ಭಾಗ, ದೊಡ್ಡಒಣಕಾಲುವೆ ಹಾಗೂ ಎನ್.ಹೆಚ್.234 ರಸ್ತೆಯಿಂದ ಪೂರ್ವ ಹಾಗೂ ದಕ್ಷಿಣ ಭಾಗ, ಚರ್ಚ್, ಪೊಲೀಸ್ ಸ್ಟೇಷನ್, ಬ್ರಹ್ಮಕುಮಾರಿ ವಿಶ್ವವಿದ್ಯಾನಿಲಯ, ನಾಡಕಛೇರಿ, ಎಂಜಿಎಂ ಕಾನ್ವಂಟ್, ಪೊಲೀಸ್ ವಸತಿ ಗೃಹಗಳು, ತೀಮ್ಲಾಪುರ ಕೆರೆ ಕೋಡಿ.	ಪರಿಶಿಷ್ಟ ಪಂಗಡ
7	ವಾರ್ಡ್ ನಂ 7	**ಪೂರ್ವ:** ಬಸ್‌ಸ್ಟಾಂಡ್ ರಸ್ತೆ ಎನ್.ಹೆಚ್.150/ಎ (ಹಿರಿಯೂರು ರಸ್ತೆ). **ಪಶ್ಚಿಮ:** ದೊಡ್ಡಒಣಕಾಲುವೆ. **ಉತ್ತರ:** ವಾಸವಿ ಸ್ಕೂಲ್ ಕಾಂಪೌಂಡ್ ಮತ್ತು ವಾಸವಿ ಸ್ಕೂಲ್ ಮುಂಬಾಗದ ರಸ್ತೆ . **ದಕ್ಷಿಣ:** ಎನ್.ಹೆಚ್.234 ರಸ್ತೆಯಿಂದ ಬರುವ ಉತ್ತರ ಭಾಗ.	ತಿಪಟೂರು ರಸ್ತೆಯ ಪೂರ್ವ ಭಾಗದಲ್ಲಿ ಡಾಬಾದಿಂದ ಉತ್ತರ ಭಾಗದ ಮನೆಗಳು, ದೊಡ್ಡ ಒಣಕಾಲುವೆಯ ಪೂರ್ವಭಾಗದ ಮನೆಗಳು, ವಾಸವಿಸ್ಕೂಲ್ ಕಾಂಪೌಂಡ್ ಮುಂಭಾಗದ ರಸ್ತೆಯ ದಕ್ಷಿಣ ಭಾಗ, ಎನ್.ಹೆಚ್.150/ಎ (ಹಿರಿಯೂರು ರಸ್ತೆ)ವರೆಗೆ, ಸೀತಾರಾಮ ಕಲ್ಯಾಣ ಮಂಟಪ, ಕನಕದಾಸ ಪ್ರೌಡಶಾಲೆ, ಕಾಳಿಕಾಂಬ ದೇವಸ್ಥಾನ ಶಾಮಿಲ್, ಪೆಟ್ರೋಲ್ ಬಂಕ್. ಎನ್.ಹೆಚ್.234 ಉತ್ತರದ ಭಾಗ.	ಹಿಂದುಳಿದ ವರ್ಗ–ಬಿ
8	ವಾರ್ಡ್ ನಂ 8	**ಪೂರ್ವ:** ಹುಳಿಯಾರುಕೆರೆ ಹಾಗೂ ತಿಪಟೂರು ರಸ್ತೆಯ ಪಶ್ಚಿಮಭಾಗ ಹಾಗೂ ಡಾಬಾದಿಂದ ದಕ್ಷಿಣದ ಕಡೆಯಿರುವ ಪೂರ್ವಭಾಗದ ಮನೆಗಳು. **ಪಶ್ಚಿಮ:** ವಳಗೆರೆಹಳ್ಳಿ ಗಡಿ ಹಾಗೂ ಕೇಶವಾಪುರ ಗಡಿ. **ಉತ್ತರ:** ವೈ ಎಸ್ ಪಾಳ್ಯ ಮತ್ತು ತಮ್ಮಡಿಹಳ್ಳಿ ಗಡಿ. **ದಕ್ಷಿಣ :** ತಿಮ್ಲಾಪುರ ಗಡಿ.	ವಳಗೆರೆಹಳ್ಳಿ ಹಾಗೂ ತೋಟದಮನೆಗಳು, ಕೇಶವಾಪುರ ಹಾಗೂ ತೋಟದಮನೆಗಳು, ತಿಪಟೂರು ರಸ್ತೆಯ ಪೂರ್ವ ಭಾಗದಲ್ಲಿನ ಡಾಬಾದಿಂದ ದಕ್ಷಿಣ ಭಾಗದ ಮನೆಗಳು ಹಾಗೂ ತಿಪಟೂರು ರಸ್ತೆಯ ಪಶ್ಚಿಮ ಭಾಗದ ಮನೆಗಳು, ಹೆಂಚಿನ ಕಾರ್ಖಾನೆ, ಕೆ.ಪಿ.ಟಿಸಿ.ಎಲ್. ವಳಗೆರೆಹಳ್ಳಿ, ಸರ್ಕಾರಿ ಪ್ರಾಥಮಿಕ ಪಾಠಶಾಲೆ ಹಾಗೂ ಅಂಗನವಾಡಿ ಕೇಂದ್ರ, ಶನಿದೇವರ ದೇವಸ್ಥಾನ	ಹಿಂದುಳಿದ ವರ್ಗ–ಎ (ಮಹಿಳೆ)
9	ವಾರ್ಡ್ ನಂ 9	**ಪೂರ್ವ:** ಎನ್ ಹೆಚ್ 150(ಎ) ಹಿರಿಯೂರು ರಸ್ತೆ **ಪಶ್ಚಿಮ:** ಸುಬದಾರ್ ಪಾಳ್ಯ ಹಾಗೂ ಪಂಚಾಯಿತಿ ಗಡಿ. **ಉತ್ತರ:** ಕೆಂಕೆರೆ ಗಡಿ ಹಾಗೂ ಪಂಚಾಯಿತಿ ಗಡಿ. **ದಕ್ಷಿಣ:** ಹುಳಿಯಾರು ಕೆರೆ ಅಂಗಳ.	ವೈ ಎಸ್ ಪಾಳ್ಯ ರಸ್ತೆಯ ಪೂರ್ವ ಮತ್ತು ಪಶ್ಚಿಮ ಭಾಗದ ಮನೆಗಳು, ವೈ ಎಸ್ ಪಾಳ್ಯದ ಹೊಸೂರು ಹಾಗೂ ಉರ್ದುಶಾಲೆ, ಅಂಗನವಾಡಿ ಕೇಂದ್ರ, ಸರ್ಕಾರಿ ಪ್ರೌಡಶಾಲೆ, ಮಾತಾ ಚಾರಿಟಬಲ್ ಟ್ರಸ್ಟ್, ಗಣೇಶ ದೇವಸ್ಥಾನ, ಪಿಯು ಕಾಲೇಜು.	ಸಾಮಾನ್ಯ
10	ವಾರ್ಡ್ ನಂ 10	**ಪೂರ್ವ:** ಸೋಮಜ್ಜನಪಾಳ್ಯ ಮತ್ತು ಕೆ ಸಿ ಪಾಳ್ಯ. **ಪಶ್ಚಿಮ:** ಎನ್.ಹೆಚ್.150/ಎ ರಸ್ತೆಯ ಪೂರ್ವಭಾಗ (ಹಿರಿಯೂರು ರಸ್ತೆ). **ಉತ್ತರ:** ಕೆಂಕೆರೆ ಮತ್ತು ಗೌಡಗೆರೆ ಗಡಿ ಹಾಗೂ ಪಟ್ಟಣ ಪಂಚಾಯಿತಿ ಗಡಿ **ದಕ್ಷಿಣ:** ಸೋಮಜ್ಜನಪಾಳ್ಯದ ರಸ್ತೆಯ ಉತ್ತರ ಭಾಗ.	ಕೋಡಿಪಾಳ್ಯ, ಕಾಂಕಾಳಿ ಮತ್ತು ತುಳಜಾಭವಾನಿ ದೇವಸ್ಥಾನ ಸರ್ಕಾರಿ ಡಿಗ್ರಿ ಕಾಲೇಜು, ಲಿಂಗಪ್ಪನಪಾಳ್ಯ, ಕಾಮಶೇಟ್ಟಿಪಾಳ್ಯ, ರಾಮ ದೇವರ ದೇವಸ್ಥಾನ, ಬನಶಂಕರಿ ದೇವಸ್ಥಾನ, ಯಲ್ಲಮ್ಮದೇವರ ದೇವಸ್ಥಾನ, ಎಲ್‌ಪಿ.ಎಸ್ ಸ್ಕೂಲ್, ಅಂಗನವಾಡಿ ಕೇಂದ್ರ.	ಸಾಮಾನ್ಯ

11	ವಾರ್ಡ್ ನಂ 11	**ಪೂರ್ವ:** ಎನ್.ಹೆಚ್.234 (ಶಿರಾ ರಸ್ತೆ)ಹಾಗೂ ಪಟ್ಟಣ ಪಂಚಾಯಿತಿ ಗಡಿ. **ಪಶ್ಚಿಮ:** ಲಿಂಗಪ್ಪನಪಾಳ್ಯ ಹಾಗೂ ಎನ್. ಹೆಚ್. 150/ಎ (ಹಿರಿಯೂರು ರಸ್ತೆ). **ಉತ್ತರ:** ಕೆ.ಸಿ.ಪಾಳ್ಯ. **ದಕ್ಷಿಣ:** ಎನ್.ಹೆಚ್.234 ರಸ್ತೆಯ ಉತ್ತರ ಭಾಗ ಹಾಗೂ ಗಾಂಧೀಪೇಟೆಯ ಉತ್ತರ ಭಾಗ.	ಸೋಮಜ್ಜನಪಾಳ್ಯ, ಕೆಂಚಾಂಬನಗರ, ಎನ್.ಹೆಚ್.234 ರಸ್ತೆಯ ಉತ್ತರ ಭಾಗ, ಅಮಾನಿಕೆರೆ, ಗಾಂದಿಪೇಟೆಯ ಪಂಚಾಯ್ತಿ ಮುಂಭಾಗದ ಪಶು ಆಸ್ಪತ್ರೆ ಮುಂಭಾಗದ ಅಮಾನಿಕೆರೆ ಮನೆಗಳು ಉತ್ತರದ ಭಾಗದ ಕಡೆ, ಸರ್ಕಾರಿ ಪ್ರಾಥಮಿಕ ಪಾಠಶಾಲೆ ಹಾಗೂ ಅಂಗನವಾಡಿ ಕೇಂದ್ರ, ಆಂಜನೇಯ ಸ್ವಾಮಿ ದೇವಾಲಯ, ಅಂತರಘಟ್ಟೆ ಅಮ್ಮನವರ ದೇವಾಲಯ, ಶಾಮಿಲ್,	ಹಿಂದುಳಿದ ವರ್ಗ – ಎ
12	ವಾರ್ಡ್ ನಂ 12	**ಪೂರ್ವ:** ರಾಮ್ ಗೋಪಾಲ್ ಸರ್ಕಲ್ **ಪಶ್ಚಿಮ:** ಎಡಿ ಕಾಲೋನಿ ರಸ್ತೆಯ ಪೂರ್ವ ಭಾಗದ ಮನೆಗಳು. **ಉತ್ತರ:** ದುರ್ಗಮ್ಮನ ದೇವಸ್ಥಾನದ ರಸ್ತೆಯ ದಕ್ಷಿಣ ಭಾಗ ಹಾಗೂ ಗಾಂಧಿಪೇಟೆ ರಸ್ತೆಯ ರಾಮ್ ಗೋಪಾಲ್‌ಸರ್ಕಲ್ ರಸ್ತೆಯ ದಕ್ಷಿಣ ಭಾಗ. **ದಕ್ಷಿಣ:** ಎನ್.ಹೆಚ್.234 ರಸ್ತೆಯ ಉತ್ತರ ಭಾಗ	ಎನ್.ಹೆಚ್.234 ರಸ್ತೆಯ ಉತ್ತರ ಭಾಗದ ಮನೆಗಳು, ಎಕೆಕಾಲೋನಿ ರಸ್ತೆಯ ಎರಡೂ ಕಡೆಯ ಮನೆಗಳು ಪೂರ್ವದಕಡೆ, ದುರ್ಗಮ್ಮನ ಗುಡಿ ಬೀದಿಯಿಂದ ಕೇಶವಾ ಸ್ಕೂಲ್ ರಸ್ತೆವರೆಗೆ ದಕ್ಷಿಣ ಭಾಗದ ಮನೆಗಳು, ಕೇಶವಾ ಸ್ಕೂಲ್ ರಸ್ತೆಯಿಂದ ಗಾಂಧಿಪೇಟೆಯ ರಸ್ತೆಯ ರಾಮ್ ಗೋಪಾಲ್ ಸರ್ಕಲ್ ವರೆಗೆ ದಕ್ಷಿಣ ಭಾಗದ ಮನೆಗಳು, ಎಕೆ ಕಾಲೋನಿಯ ದುರ್ಗಪರಮೇಶ್ವರಿ ದೇವಸ್ಥಾನ, ರೇಣುಕಾ ಯಲ್ಲಮ್ಮ ದೇವಸ್ಥಾನ, ಹಟ್ಟಿ ಮರಿಯಮ್ಮ ದೇವಸ್ಥಾನ. ಜಬೀ ಸಾಬರ ಮನೆ ಬೀದಿ. ಮೊಟ್ಟೆ ಖಿಲಂದರ್‌ಸಾಬ್ ಮನೆ ಬೀದಿಯ ದಕ್ಷಿಣ ಭಾಗ.	ಪರಿಶಿಷ್ಟ ಜಾತಿ
13	ವಾರ್ಡ್ ನಂ 13	**ಪೂರ್ವ:** ಎಡಿ ಕಾಲೋನಿ ಬೀದಿಯ ಪಶ್ಚಿಮಭಾಗ ಹಾಗೂ ಶಿವರಾಮಣ್ಣನ ಬೀದಿ ಪಶ್ಚಿಮಭಾಗ. **ಪಶ್ಚಿಮ:** ಎನ್.ಹೆಚ್.150/ಎ(ಹಿರಿಯೂರು ರಸ್ತೆ). **ಉತ್ತರ:** ಬ್ರಾಹ್ಮಣರ ಬೀದಿ ದಕ್ಷಿಣ ಭಾಗ. **ದಕ್ಷಿಣ:** ಎನ್.ಹೆಚ್.234 ರಸ್ತೆಯ ಉತ್ತರದ ಭಾಗ.	ಬ್ರಾಹ್ಮಣರ ಬೀದಿಯ ದಕ್ಷಿಣ ಭಾಗದ ಮನೆಗಳು, ಕೆಂಚಾಂಬ ದೇವಸ್ಥಾನದ ರಸ್ತೆಯ ಪಶ್ಚಿಮ ಭಾಗದ ಮನೆಗಳು, ಶಿವರಾಮಯ್ಯನ ಮನೆ ಸೇರಿದಂತೆ ಪಶ್ಚಿಮಭಾಗದ ಮನೆಗಳು, ದುರ್ಗಮ್ಮನ ದೇವಸ್ಥಾನ ರಸ್ತೆಯ ದಕ್ಷಿಣ ಭಾಗದ ಮನೆಗಳು, ಎನ್.ಹೆಚ್.234 ರಸ್ತೆಯ ಉತ್ತರ ಭಾಗದ ಮನೆಗಳು, ಎನ್.ಹೆಚ್.150/ಎ ಯ ಪೂರ್ವ ಭಾಗದ ಮನೆಗಳು, ಬೀರದೇವರ ದೇವಸ್ಥಾನ, ರೇವಣಸಿದ್ದೇಶ್ವರ ಮಠ, ಹುಳಿಯಾರಮ್ಮನ ದೇವಸ್ಥಾನ, ದುರ್ಗಪರಮೇಶ್ವರಿ ದೇವಸ್ಥಾನ, ರಾಮ ಮಂದಿರ, ಶಿರಾ ಟೌನ್ ಕೋ–ಆಪರೇಟೀವ್ ಬ್ಯಾಂಕ್, ಸರ್ಕಾರಿ ಆಸ್ಪತ್ರೆ, ದುರ್ಗಮ್ಮನ ಗುಡಿ ಬೀದಿ, ಎಡಿಕಾಲೋನಿ, ಕೋಟೇ ಬೀದಿ ಸಣ್ಣದುರ್ಗಮ್ಮನ ದೇವಸ್ಥಾನ, ಡಾ/ರಾಜ್‌ಕುಮಾರ್ ರಸ್ತೆ. ಬಿಸಿಎಂ ಹಾಸ್ಟೇಲ್, ಕೃಷಿ ಇಲಾಖೆ, ಅಂಬೇಡ್ಕರ್ ಭವನ, ಗಾಂಧಿ ಭವನ, ಕೆಇಬಿ ವಸತಿ ಗೃಹಗಳು, ಸರ್ಕಾರಿ ಆಸ್ಪತ್ರೆ ವಸತಿ ಗೃಹಗಳು, ಸ್ಪಂದನ ನರ್ಸಿಂಗ್ ಹೋಂ, ಎಂಪಿಎಸ್, ಹಾಗೂ ಹೆಚ್‌ಪಿಜಿಎಸ್ ಶಾಲೆ, ಬಾಲಕಿಯರ ಪದವಿ ಪೂರ್ವ ಕಾಲೇಜು.	ಸಾಮಾನ್ಯ (ಮಹಿಳೆ)
14	ವಾರ್ಡ್ ನಂ 14	**ಪೂರ್ವ:** ಕೇಶವಾ ಸ್ಕೂಲ್ ರಸ್ತೆ. **ಪಶ್ಚಿಮ:** ಆಚಾರ್ ಬೀದಿಯ ಶಿವರಾಮಣ್ಣನ ಮನೆ ರಸ್ತೆಯ ಪೂರ್ವ ಭಾಗ. **ಉತ್ತರ:** ಸರ್ಕಾರಿ ಆಸ್ಪತ್ರೆಯ ರಸ್ತೆ., ಲಿಂಗಾಯಿತರ ಬೀದಿ ಮತ್ತು ಉರ್ದು ಸ್ಕೂಲ್ ರಸ್ತೆ. **ದಕ್ಷಿಣ:** ದುರ್ಗಮ್ಮನ ಗುಡಿ ಬೀದಿ ರಸ್ತೆಯ ಉತ್ತರ ಭಾಗ.	ಲಕ್ಷಿ ದೇವಸ್ಥಾನದಿಂದ ಲಿಂಗಾಯಿತರ ಬೀದಿಯ ದಕ್ಷಿಣ ಭಾಗ, ದುರ್ಗಮ್ಮನ ಗುಡಿ ಬೀದಿ ರಸ್ತೆಯ ಉತ್ತರ ಭಾಗದ ಮನೆಗಳು ಹಾಗೂ ಕೇಶವಾ ಸ್ಕೂಲ್ ರಸ್ತೆಯವರೆಗೆ ಪಶ್ಚಿಮ ಭಾಗದ ಮನೆಗಳು, ಶಿವರಾಮಯ್ಯನ ಮನೆಯ ಮುಂಭಾಗದ ರಸ್ತೆಯ ಪೂರ್ವಭಾಗದ ಮನೆಗಳು. ಲಕ್ಷ್ಮೀ ದೇವಸ್ಥಾನ ಬೀದಿಯ ಉತ್ತರದ ಕಡೆ ಉರ್ದು ಸ್ಕೂಲ್ ರಸ್ತೆಯ ದಕ್ಷಿಣದ ಕಡೆ ಕೇಶವಾ ಸ್ಕೂಲ್‌ರಸ್ತೆಯ ಪಶ್ಚಿಮ ಭಾಗದ ಮನೆಗಳು, ಕೇಶವಾ ಸ್ಕೂಲ್, ಶಾದಿ ಮಹಲ್, ಟಿಪ್ಪು ಭವನ, ಬನಶಂಕರಿ ದೇವಸ್ಥಾನ.	ಹಿಂದುಳಿದ ವರ್ಗ–ಎ

15	ವಾರ್ಡ್ ನಂ 15	**ಪೂರ್ವ:** ಲಕ್ಷ್ಮೀ ದೇವರ ದೇವಸ್ಥಾನದ ರಸ್ತೆ. **ಪಶ್ಚಿಮ:** ಎನ್.ಹೆಚ್.150/ಎ ರಸ್ತೆ (ಹಿರಿಯೂರು ರಸ್ತೆ). **ಉತ್ತರ:** ಹುಳಿಯಾರು ಅಮಾನಿಕೆರೆ **ದಕ್ಷಿಣ:** 150(ಎ) ರಸ್ತೆಯಿಂದ ಪೂರ್ವದ ಕಡೆ ಬ್ರಾಹ್ಮಣರ ಬೀದಿ ರಸ್ತೆಯ ಉತ್ತರಭಾಗ, ಸರ್ಕಾರಿ ಆಸ್ಪತ್ರೆ ರಸ್ತೆಯ ಉತ್ತರ ಭಾಗ ಹಾಗೂ ಉರ್ದು ಸ್ಕೂಲ್ ರಸ್ತೆಯ ಉತ್ತರ ಭಾಗ	ಗಾಂದಿಪೇಟೆ ರಸ್ತೆಯ ಉತ್ತರ ಹಾಗೂ ದಕ್ಷಿಣ ಭಾಗದ ಮನೆಗಳು ಹಾಗೂ ಶನಿದೇವರ ದೇವಸ್ಥಾನದವರೆಗೆ, ಸಿದ್ದಪ್ಪ ಶೇಟ್ಟರ ಮನೆ ಸೇರಿದಂತೆ ಪೂರ್ವ ಭಾಗದ ಮತ್ತು ಪಶ್ಚಿಮ ಭಾಗದ ಮನೆಗಳು, ಕೆಂಚಾಂಭ ದೇವಸ್ಥಾನ ಬೀದಿಯ ಪೂರ್ವ ಹಾಗೂ ಪಶ್ಚಿಮ ಭಾಗದ ಮನೆಗಳು, ಆಸ್ಪತ್ರೆ ರಸ್ತೆಯ ಲಕ್ಷ್ಮೀ ದೇವಸ್ಥಾನದವರೆಗೆ ಉತ್ತರ ಭಾಗದ ಮನೆಗಳು, ಗಾಂದಿಪೇಟೆ, ಶನಿದೇವರ ದೇವಸ್ಥಾನ, ಯೋಗಿ ನಾರಾಯಣ ಐಟಿಐ ಕಾಲೇಜು, ಬಿಸಿಎಂ ಹಾಸ್ಟೆಲ್, ಭಗಿರಥ ಸಮುದಾಯ ಭವನ, ಉಣ್ಣೆ ಬಸವಣ್ಣನ ದೇವಸ್ಥಾನ, ಗಣೇಶನ ದೇವಸ್ಥಾನ, ಅಯ್ಯಪ್ಪ ಸ್ವಾಮಿ ದೇವಸ್ಥಾನ, ವೀರಬದ್ರೇಶ್ವರ ಸ್ವಾಮಿ ದೇವಸ್ಥಾನ, ವಿರಕ್ತ ಮಠ, ಷರಿಫ್ ಮೊಹಲ್ಲಾ, ಉರ್ದು ಪ್ರಾಥಮಿಕ ಹಾಗೂ ಪ್ರೌಡಶಾಲೆ, ಕೆಂಚಾಂಭ ದೇವಸ್ಥಾನದ ರಸ್ತೆಯ ಪೂರ್ವ ಹಾಗೂ ಪಶ್ಚಿಮ ಭಾಗದ ಮನೆಗಳು, ಬ್ರಾಹ್ಮಣರ ಬೀದಿ ಉತ್ತರ ಭಾಗದ ಮನೆಗಳು, ಹುಳಿಯಾರಮ್ಮನ ದೇವಸ್ಥಾನ, ರಂಗನಾಥ ಸ್ವಾಮಿ ದೇವಸ್ಥಾನ, ಬಸ್ ನಿಲ್ದಾಣ, ಜಾಮಿಯಾ ಮಸೀದಿ, ಎಣ್ಣೆ ಮಿಲ್, ರೋಟರಿ ಭಾಲಭವನ, ಎನ್ ಹಚ್ 150(ಎ) ಹಿರಿಯೂರು ರಸ್ತೆ.	ಸಾಮಾನ್ಯ (ಮಹಿಳೆ)
16	ವಾರ್ಡ್ ನಂ 16	**ಪೂರ್ವ:** ಎನ್ ಹೆಚ್ 150(ಎ) ಹಿರಿಯೂರು ರಸ್ತೆ **ಪಶ್ಚಿಮ:** ಹುಳಿಯಾರು ಕೆರೆ **ಉತ್ತರ:** ಹುಳಿಯಾರು ಕೆರೆ **ದಕ್ಷಿಣ:** ವಾಸವಿ ಸ್ಕೂಲ್ ರಸ್ತೆಯ ಉತ್ತರ ಭಾಗ	ಶಂಕರಾಪುರ ರಸ್ತೆಯ ಉತ್ತರ ಹಾಗೂ ದಕ್ಷಿಣ ಭಾಗದ ಮನೆಗಳು, ವಾಸವಿ ಸ್ಕೂಲ್ ರಸ್ತೆಯ ಉತ್ತರ ಭಾಗದ ಮನೆಗಳು, ವಾಸವಿ ಸ್ಕೂಲ್ ಎನ್ ಹೆಚ್ 150(ಎ) ರಸ್ತೆ, ಶಾಮಿಲ್, ಸವಿತಾ ಸಮಾಜದ ಭವನ.	ಸಾಮಾನ್ಯ (ಮಹಿಳೆ)

ಎ. ವಿಜಯಕುಮಾರ್
ಸರ್ಕಾರದ ಅಧೀನ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ ಘಟಕ, ಬೆಂಗಳೂರು. (ಕಿ7) ಪ್ರತಿಗಳು: 25

RNI No. KARBIL/2001/47147

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

ಭಾಗ – III Part – III	ಬೆಂಗಳೂರು, ಬುಧವಾರ, ಸೆಪ್ಟೆಂಬರ್ ೦೪, ೨೦೧೯ (ಭಾದ್ರಪದ ೧೩, ಶಕ ವರ್ಷ ೧೯೪೦) Bengaluru, Wednesday, September 04, 2019 (Bhadrapada 13, Shaka Varsha 1940)	ನಂ. ೭೪೬ No. 746

ಕರ್ನಾಟಕ ವಿಧಾನಸಭೆ ಸಚಿವಾಲಯ

ಅಧಿಸೂಚನೆ

ಕ್ರಮ ಸಂಖ್ಯೆ: ಕವಿಸಸ/ಆ–1/48/ಜ್ಯೇ.ಪು./2017 (ಭಾಗ ಕಡತ), ಬೆಂಗಳೂರು, ದಿನಾಂಕ: 03.09.2019

ವಿಷಯ: ಮಾನ್ಯ ಸರ್ವೋಚ್ಚ ನ್ಯಾಯಾಲಯದ ಬಿ.ಕೆ.ಪವಿತ್ರ ಪ್ರಕರಣ ಸಂಖ್ಯೆ:ಎಂಎ 1151/2018ರ ದಿನಾಂಕ:10.05.2019ರಲ್ಲಿನ ತೀರ್ಪಿನನ್ವಯ ಹಾಗೂ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯ ಆದೇಶದಲ್ಲಿನ ಸೂಚನೆಗಳಂತೆ ಕರ್ನಾಟಕ ವಿಧಾನಸಭೆ ಸಚಿವಾಲಯದ ಎಲ್ಲಾ ವೃಂದಗಳ (**ಮಾತೃ ವೃಂದ**) ಪರಿಷ್ಕರಿಸಿದ ಅಂತಿಮ ಜ್ಯೇಷ್ಠತಾ ಪಟ್ಟಿ ಪ್ರಕಟಿಸುವ ಬಗ್ಗೆ.

ಉಲ್ಲೇಖ: 1. ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ/186/ಎಸ್.ಆರ್.ಎಸ್/2018, ದಿನಾಂಕ:15.05.2019.
2. ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ/186/ಎಸ್.ಆರ್.ಎಸ್/2018, ದಿನಾಂಕ:27.02.2019.
3. ಈ ಸಚಿವಾಲಯದ ಅಧಿಸೂಚನೆ ಸಂಖ್ಯೆ:ಕವಿಸಸ/ಆ–1/48/ಜ್ಯೇಪು/2017, ದಿನಾಂಕ:12.01.2018.
4. ಈ ಸಚಿವಾಲಯದ ಅಧಿಸೂಚನೆ ಸಂಖ್ಯೆ:ಕವಿಸಸ/ಆ–1/48/ಜ್ಯೇ.ಪು./2017(ಭಾಗ ಕಡತ), ದಿನಾಂಕ:14.06.2019.
5. ಈ ಸಚಿವಾಲಯದ ಅಧಿಕೃತ ಜ್ಞಾಪನ ಸಂಖ್ಯೆ:ಕವಿಸಸ/ಆ–1/48/ಜ್ಯೇ.ಪು/2017,ದಿನಾಂಕ:31.08.2019

ಸರ್ಕಾರಿ ಸೇವೆಗಳಲ್ಲಿನ ಮುಂಬಡ್ತಿಯಲ್ಲಿ ಮೀಸಲಾತಿಗೆ ಸಂಬಂಧಿಸಿದಂತೆ, ಮಾನ್ಯ ಸರ್ವೋಚ್ಚ ನ್ಯಾಯಾಲಯವು ಸಿವಿಲ್ ಅಪೀಲು ಸಂಖ್ಯೆ:2368/2011, ಬಿ.ಕೆ.ಪವಿತ್ರ ಮತ್ತು ಇತರರು ವಿರುದ್ಧ ಕೇಂದ್ರ ಸರ್ಕಾರ ಮತ್ತು ಇತರರು ಹಾಗೂ ಅದಕ್ಕೆ ಸಂಬಂಧಿಸಿದ ರಿವ್ಯೂ ಅರ್ಜಿ ಮತ್ತು ರಿಟ್ ಅರ್ಜಿಗಳಲ್ಲಿನ ಪ್ರಕರಣ ಸಂಖ್ಯೆ:ಎಂ.ಎ 1151/2018 ಇವುಗಳ ಕುರಿತು ದಿನಾಂಕ:10.05.2019ರಂದು ನೀಡಿದ ಅಂತಿಮ ತೀರ್ಪಿನಲ್ಲಿ ಈ ಕೆಳಗಿನಂತೆ ಆದೇಶಿಸಿರುತ್ತದೆ.

"K Conclusion

144 For the above reasons, we have come to the conclusion that the challenge to the constitutional validity of the Reservation Act 2018 is lacking in substance. Following the decision in BK Pavitra I, the State government duly carried out the exercise of colating and analysing data on the compelling factors adverted to by the Constitution Bench in Nagaraj. The Reservation Act 2018 has cured the deficiency which was noticed by BK Pavitra I in respect of the Reservation Act 2002. The Reservation Act 2018 does not amount to asurpation of judicial power by the state legislature. It is Nagaraj and Jarnail compliant. The Reservation Act 2018 is a valid exercise of the enabling power conferred by Article 16(4A) of the Constitution.

145 We therefore find no merit in the batch of writ petitions as the constitutional validity of the Reservation Act 2018 has been upheld. They shall stand dismissed. Accordingly, the review petitions and miscellaneous application shall also stand dismissed in view of the judgement in the present case. There shall be no order as to costs. All pending applications are disposed off."

ಅದರಂತೆ ಮೇಲ್ಕಂಡ ತೀರ್ಪನ್ನು ಜಾರಿಗೊಳಿಸಲು ಉಲ್ಲೇಖ(1)ರಲ್ಲಿ ಸರ್ಕಾರವು ಆದೇಶ ಹೊರಡಿಸಿರುತ್ತದೆ. ಸದರಿ ಆದೇಶದಲ್ಲಿ 2017ರ ಅಧಿನಿಯಮವನ್ನು ಅನುಷ್ಠಾನಗೊಳಿಸುವುದಕ್ಕೆ ಸಂಬಂಧಿಸಿದಂತೆ ಹೊರಡಿಸಲಾಗಿದ್ದ ಉಲ್ಲೇಖ(2)ರ ಆದೇಶದಲ್ಲಿ ಒಳಗೊಂಡಿರುವ ಸೂಚನೆಗಳನ್ನು ಸಹ ಅನುಸರಿಸಲು ತಿಳಿಸಲಾಗಿರುತ್ತದೆ.

ಆ ರೀತ್ಯಾ, ದಿನಾಂಕ:27.04.1978ರಿಂದ ಈ ಸಚಿವಾಲಯದಲ್ಲಿ ಮುಂಬಡ್ತಿಗಾಗಿ ಅನುಸರಿಸುತ್ತಾ ಬಂದಿರುವ ಮೀಸಲಾತಿ ಅನ್ವಯ ಪ್ರತಿ ವರ್ಷದ ಜ್ಯೇಷ್ಠತಾ ಪಟ್ಟಿಗಳನ್ನು ಪರಾಮರ್ಶಿಸಿ, ದಿನಾಂಕ 07.06.2019ರಂದು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ ಹಾಗೂ ಹೈದರಾಬಾದ್–ಕರ್ನಾಟಕ ವಿಶೇಷ ಕೋಶದ ಅಧಿಕಾರಿಗಳೊಂದಿಗೆ ಸಮಾಲೋಚಿಸಿದಂತೆ ಹಾಗೂ ಕರ್ನಾಟಕ ಸರ್ಕಾರಿ ನೌಕರರ (ಜ್ಯೇಷ್ಠತೆ) ನಿಯಮಗಳು, 1957ರ ನಿಯಮ 10ರಲ್ಲಿ ಇತರ ಅಂಶಗಳು ಒಳಗೊಂಡಂತೆ, ಉಲ್ಲೇಖಿತ(4)ರನ್ವಯ ಕರಡು ಜ್ಯೇಷ್ಠತಾ ಪಟ್ಟಿಯನ್ನು ಪ್ರಕಟಿಸಿ, ಸದರಿ ಕರಡು ಪರಿಷ್ಕೃತ ಜ್ಯೇಷ್ಠತಾ ಪಟ್ಟಿಗೆ ಈ ಸಚಿವಾಲಯದ ಬಾಧಿತ ಅಧಿಕಾರಿ/ನೌಕರರು ಅಧಿಸೂಚನೆ ಪ್ರಕಟಗೊಂಡ ದಿನಾಂಕದಿಂದ 10 ದಿನಗಳೊಳಗಾಗಿ ತಮ್ಮ ಆಕ್ಷೇಪಣೆ/ಅಭಿಪ್ರಾಯವನ್ನು ಸಲ್ಲಿಸಲು ಅವಕಾಶ ನೀಡಲಾಗಿತ್ತು.

ಅದರಂತೆ, ಈ ಸಚಿವಾಲಯದ ಕೆಲವು ಅಧಿಕಾರಿ/ನೌಕರರುಗಳು ಆಕ್ಷೇಪಣೆ/ಮನವಿಗಳನ್ನು ಸಲ್ಲಿಸಿದ್ದು, ಸದರಿ ಮನವಿಗಳನ್ನು ಪರಿಶೀಲಿಸಲಾಗಿರುತ್ತದೆ. ಕರ್ನಾಟಕ ಸರ್ಕಾರದ ಸೂಚನೆಗಳನ್ವಯ ಜ್ಯೇಷ್ಠತಾ ಪಟ್ಟಿಗಳ ಪುನರಾವಲೋಕನೆಯು ರೋಸ್ಟರ್ ಮೀಸಲಾತಿಗೆ ಸಂಬಂಧಿಸಿದಂತೆ ಮಾತ್ರ ಸೀಮಿತಗೊಂಡಿರುವುದರಿಂದ, ಸದರಿ ಆಕ್ಷೇಪಣೆಗಳಲ್ಲಿ ಕೆಲವು ಅಧಿಕಾರಿ/ನೌಕರರುಗಳು ತಮ್ಮ ವೈಯಕ್ತಿಕ ಹುದ್ದೆಯ ಮುಂಬಡ್ತಿ ಪುನರಾವಲೋಕನ ಮಾಡುವಂತೆ ಕೋರಿ ಮನವಿ ನೀಡಿರುವುದು ಪ್ರತ್ಯೇಕವಾದ ವಿಷಯವಾಗಿರುವುದರಿಂದ, ಸದರಿ ಮನವಿಗಳನ್ನು ಕೈಬಿಡಲಾಗಿದೆ. ಮುಂದುವರೆದಂತೆ, ಸೇವಾ ವಿಷಯಕ್ಕೆ ಸಂಬಂಧಿಸಿದಂತೆ ಹುಟ್ಟಿದ/ಕರ್ತವ್ಯಕ್ಕೆ ಹಾಜರಾದ/ಅರ್ಹತಾ ದಿನಾಂಕಗಳಿಗೆ, ವಿದ್ಯಾರ್ಹತೆ/ಇತರೆ ವಿಷಯಗಳಿಗೆ ಸಂಬಂಧಿಸಿದ ಮನವಿಗಳನ್ನು ನಿಯಮಾನುಸಾರ ಪರಿಶೀಲಿಸಿ ಕ್ರಮ ಕೈಗೊಳ್ಳಲಾಗಿದೆ.

ಕರ್ನಾಟಕ ಸರ್ಕಾರದ ದಿನಾಂಕ:03.06.2019ರ ಸುತ್ತೋಲೆಯನ್ವಯ ಈ ಸಚಿವಾಲಯದ ಜ್ಯೇಷ್ಠತಾ ಪಟ್ಟಿ ಪ್ರಕಟಿಸಿರುವುದಿಲ್ಲವೆಂದು ಕೆಲವು ಅಧಿಕಾರಿಗಳು ಹಾಗೂ ನೌಕರರುಗಳು ಸಲ್ಲಿಸಿದ ಆಕ್ಷೇಪಣೆಯನ್ನು ನಿಯಮಾನುಸಾರ ಪರಿಶೀಲಿಸಲಾಗಿದ್ದು, ಸರ್ಕಾರದ ಸುತ್ತೋಲೆಯನ್ವಯ ಉಲ್ಲೇಖಿತ(5)ರ ಅಧಿಕೃತ ಜ್ಞಾಪನದಲ್ಲಿ ರಿಕ್ತ ಸ್ಥಾನಗಳ ಹಾಗೂ ಮುಂಬಡ್ತಿಯ ಅರ್ಹತಾ ದಿನಾಂಕಕ್ಕೆ ಸಂಬಂಧಿಸಿದ ಎಲ್ಲಾ ವೃಂದಗಳ ಪ್ರತ್ಯೇಕವಾದ ಜ್ಯೇಷ್ಠತಾ ಪಟ್ಟಿಯನ್ನು ಪ್ರಕಟಿಸಲಾಗಿರುತ್ತದೆ. ಅದರಂತೆ, 1978ರಿಂದ ಈ ಸಚಿವಾಲಯದಲ್ಲಿ ಮೀಸಲಾತಿಯನ್ವಯ ನೀಡಲಾದ ಎಲ್ಲಾ ವೃಂದಗಳ

ಮುಂಬಡ್ತಿಯ ಅರ್ಹತಾ ದಿನಾಂಕಗಳಲ್ಲಿ ಯಾವುದೇ ವ್ಯತ್ಯಾಸ ಕಂಡು ಬರುವುದಿಲ್ಲ. ಆದುದರಿಂದ, ಕರ್ನಾಟಕ ಸರ್ಕಾರಿ ನೌಕರರ(ಜೇಷ್ಠತೆ) ನಿಯಮಗಳು, 1957ರ ನಿಯಮ 10ರಲ್ಲಿ ಇತರೆ ಅಂಶಗಳನ್ನೊಳಗೊಂಡಂತೆ ದಿನಾಂಕ:01.08.2019ರಲ್ಲಿದ್ದಂತೆ ಈ ಸಚಿವಾಲಯದ ಎಲ್ಲಾ ವೃಂದಗಳ(**ಮಾತೃ ವೃಂದ**) ಪರಿಷ್ಕೃತ ಅಂತಿಮ ಜ್ಯೇಷ್ಠತಾ ಪಟ್ಟಿಯನ್ನು ಈ ಅನುಬಂಧದಲ್ಲಿ ಪ್ರಕಟಿಸಲಾಗಿದೆ.

ಸಭಾಧ್ಯಕ್ಷರ ಆದೇಶಾನುಸಾರ,

ಎಂ.ವಿದ್ಯಾಶ್ರೀ
ಅಧೀನ ಕಾರ್ಯದರ್ಶಿ,
ಕರ್ನಾಟಕ ವಿಧಾನಸಭೆ ಸಚಿವಾಲಯ.

ಕರ್ನಾಟಕ ನಾಗರಿಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು, 1957ಅನ್ನು ತಿದ್ದುಪಡಿ ಮಾಡುವುದಕ್ಕಾಗಿ ಈ ಮುಂದಿನ ಕರಡು ನಿಯಮಗಳನ್ನು, ಕರ್ನಾಟಕ ರಾಜ್ಯ ನಾಗರಿಕ ಸೇವಾ ಅಧಿನಿಯಮ, 1978 (1990 ಕರ್ನಾಟಕ ಅಧಿನಿಯಮ ಸಂಖ್ಯೆ 14)ರ 3ನೇ ಪ್ರಕರಣದ 2ನೇ ಉಪ–ಪ್ರಕರಣದ (ಎ) ಖಂಡವು ಅಗತ್ಯಪಡಿಸಿರುವಂತೆ, ಕರ್ನಾಟಕ ವಿಶೇಷ ರಾಜ್ಯಪತ್ರದ ದಿನಾಂಕ: 02.03.2019ರ ಭಾಗ–IVಎ (ಪಿ.ಆರ್ ಸಂಖ್ಯೆ 157)ಯಲ್ಲಿನ ಅಧಿಸೂಚನೆ ಸಂಖ್ಯೆ ಡಿಪಿಎಆರ್ 06 ಎಸ್‌ಡಿಇ 2012, ದಿನಾಂಕ: 02.03.2019ರಲ್ಲಿ ಪ್ರಕಟಿಸಿದ್ದು, ಸರ್ಕಾರಿ ರಾಜ್ಯಪತ್ರದಲ್ಲಿ ಅದು ಪ್ರಕಟಗೊಂಡ ದಿನಾಂಕದಿಂದ ಹದಿನೈದು ದಿನಗಳ ಒಳಗಾಗಿ, ಅದರಿಂದ ಬಾಧಿತರಾಗುವ ಸಂಭವವಿರುವ ಎಲ್ಲಾ ವ್ಯಕ್ತಿಗಳಿಂದ ಆಕ್ಷೇಪಣೆಗಳು ಮತ್ತು ಸಲಹೆಗಳನ್ನು ಆಹ್ವಾನಿಸಿರುವುದರಿಂದ,

ಸದರಿ ವಿಶೇಷ ರಾಜ್ಯಪತ್ರವು ದಿನಾಂಕ: 02.03.2019ರಂದು ಸಾರ್ವಜನಿಕರಿಗೆ ಲಭ್ಯವಾಗುವಂತೆ ಮಾಡಿರುವುದರಿಂದ,

ಮತ್ತು ಈ ಸಂಬಂಧವಾಗಿ, ಸರ್ಕಾರವು ಯಾವುದೇ ಆಕ್ಷೇಪಣೆಗಳು ಮತ್ತು ಸಲಹೆಗಳನ್ನು ಸ್ವೀಕರಿಸಿಲ್ಲದಿರುವುದರಿಂದ,

ಕರ್ನಾಟಕ ರಾಜ್ಯ ನಾಗರಿಕ ಸೇವಾ ಅಧಿನಿಯಮ, 1978(1990 ಕರ್ನಾಟಕ ಅಧಿನಿಯಮ ಸಂಖ್ಯೆ 14)ರ 8ನೇ ಪ್ರಕರಣದೊಂದಿಗೆ ಓದಲಾದ 3ನೇ ಪ್ರಕರಣದ 1ನೇ ಉಪ–ಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ಈ ಮೂಲಕ ಮುಂದಿನ ನಿಯಮಗಳನ್ನು ರಚಿಸುತ್ತದೆ. ಈ ನಿಯಮಗಳ ಆಂಗ್ಲ ಆವೃತ್ತಿಯನ್ನು The Karnataka Civil Services(Classification, Control and Appeal) (Amendment)Rules, 2019 ಎಂದು ದಿನಾಂಕ: 30.05.2019ರ ಕರ್ನಾಟಕ ರಾಜ್ಯ ಪತ್ರದ ವಿಶೇಷ ರಾಜ್ಯಪತ್ರದಲ್ಲಿ ಪ್ರಕಟಿಸಲಾಗಿದ್ದು, ಇವುಗಳ ಕನ್ನಡ ಅನುವಾದವನ್ನು ಮರು ಪ್ರಕಟಿಸಲಾಗಿದೆ.

ನಿಯಮಗಳು

1. ಶೀರ್ಷಿಕೆ ಮತ್ತು ಪ್ರಾರಂಭ:– (1) ಈ ನಿಯಮಗಳನ್ನು ಕರ್ನಾಟಕ ನಾಗರಿಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) (ತಿದ್ದುಪಡಿ) ನಿಯಮಗಳು, 2019 ಎಂದು ಕರೆಯತಕ್ಕದ್ದು.

(2) ಈ ನಿಯಮಗಳು ದಿನಾಂಕ: 30.05.2019ರಿಂದ ಜಾರಿಗೆ ಬಂದಿರುವುದಾಗಿ ಭಾವಿಸತಕ್ಕದ್ದು.

2. ಅನುಸೂಚಿ IIರ ತಿದ್ದುಪಡಿ:– ಕರ್ನಾಟಕ ನಾಗರಿಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು, 1957ರ, (ಇದರಲ್ಲಿ ಇನ್ನು ಮುಂದೆ ಸದರಿ ನಿಯಮಗಳು ಎಂಬುದಾಗಿ ಉಲ್ಲೇಖಿಸಲಾಗಿದೆ), ಅನುಸೂಚಿ IIರಲ್ಲಿನ **"ಕರ್ನಾಟಕ ಸರ್ಕಾರದ ಸಚಿವಾಲಯ"** ಶೀರ್ಷಿಕೆ ಮತ್ತು ಅದಕ್ಕೆ ಸಂಬಂಧಿಸಿದ ನಮೂದುಗಳಿಗೆ ಬದಲಾಗಿ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:

ಹುದ್ದೆಗಳ ಪ್ರವರ್ಗ	ನೇಮಕಾತಿ ಅಧಿಕಾರ ಹೊಂದಿರುವ ಪ್ರಾಧಿಕಾರಿ	ದಂಡನೆಗಳನ್ನು ವಿಧಿಸುವುದಕ್ಕೆ ಅಧಿಕಾರ ಹೊಂದಿರುವ ಪ್ರಾಧಿಕಾರಿ ಮತ್ತು ಅವರು ವಿಧಿಸಬಹುದಾದ ದಂಡನೆಗಳು		ಮೇಲ್ಮನವಿ ಪ್ರಾಧಿಕಾರಿ
		ಪ್ರಾಧಿಕಾರಿ	ದಂಡನೆಗಳು	
1	2	3	4	5
** ಕರ್ನಾಟಕ ಸರ್ಕಾರದ ಸಚಿವಾಲಯ				
ಹಿರಿಯ ಸಹಾಯಕರು, ಸಹಾಯಕರು, ಶೀಘ್ರಲಿಪಿಗಾರರು, ಕಿರಿಯ ಸಹಾಯಕರು, ಹಿರಿಯ ಬೆರಳಚ್ಚುಗಾರರು, ಬೆರಳಚ್ಚುಗಾರರು ಮತ್ತು ಸಚಿವಾಲಯದ ಎಲ್ಲಾ ಇಲಾಖೆಗಳಲ್ಲಿನ ಇತರ ಎಲ್ಲಾ ಗ್ರೂಪ್–ಸಿ ಹುದ್ದೆಗಳು (ನಿವಾಸಿ ಆಯುಕ್ತರು, ಕರ್ನಾಟಕ ಭವನ, ನವದೆಹಲಿ, ಇವರ ಕಾರ್ಯಾಲಯವನ್ನು ಹೊರತುಪಡಿಸಿ.	ಸರ್ಕಾರದ ಪ್ರಧಾನ ಕಾರ್ಯದರ್ಶಿ/ ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ	ಸರ್ಕಾರದ ಸಂಬಂಧಪಟ್ಟ ಇಲಾಖೆಯ ಉಪ–ಕಾರ್ಯದರ್ಶಿ/ ಜಂಟಿ ಕಾರ್ಯದರ್ಶಿ/ ಅಪರ–ಕಾರ್ಯದರ್ಶಿ ಮತ್ತು / ಅಥವಾ ವಿಶೇಷ ಕಾರ್ಯದರ್ಶಿ	(ii) ರಿಂದ (ivಎ)	ಸರ್ಕಾರದ ಸಂಬಂಧಪಟ್ಟ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿ/ ಪ್ರಧಾನ ಕಾರ್ಯದರ್ಶಿ/ ಕಾರ್ಯದರ್ಶಿ
		ಸರ್ಕಾರದ ಉಪ–ಕಾರ್ಯದರ್ಶಿ/ ಜಂಟಿ ಕಾರ್ಯದರ್ಶಿ/ ಅಪರ–ಕಾರ್ಯದರ್ಶಿ ಮತ್ತು / ಅಥವಾ ವಿಶೇಷ ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ	(ii) ರಿಂದ (ivಎ)	ಸರ್ಕಾರದ ಪ್ರಧಾನ ಕಾರ್ಯದರ್ಶಿ/ ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ
		ಸರ್ಕಾರದ ಪ್ರಧಾನ ಕಾರ್ಯದರ್ಶಿ/ ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ	(v) ರಿಂದ (viii)	**ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ**
ನಿವಾಸಿ ಆಯುಕ್ತರು, ಕರ್ನಾಟಕ ಭವನ, ನವದೆಹಲಿ, ಇವರ ಕಾರ್ಯಾಲಯದಲ್ಲಿನ ಸಹಾಯಕ ಸಂಪರ್ಕಾಧಿಕಾರಿ, ಸಹಾಯಕರು, ಶೀಘ್ರಲಿಪಿಗಾರರು, ಗುಮಾಸ್ತ–ಕಂ–ಬೆರಳಚ್ಚುಗಾರರು, ಮತ್ತುಎಲ್ಲಾ ಗ್ರೂಪ್–ಸಿ ಹುದ್ದೆಗಳು	ನಿವಾಸಿ ಆಯುಕ್ತರು, ಕರ್ನಾಟಕ ಭವನ, ನವದೆಹಲಿ.	ಉಪ–ನಿವಾಸಿ ಆಯುಕ್ತರು, ಕರ್ನಾಟಕ ಭವನ, ನವದೆಹಲಿ.	(ii) ರಿಂದ (ivಎ)	ನಿವಾಸಿ ಆಯುಕ್ತರು, ಕರ್ನಾಟಕ ಭವನ, ನವದೆಹಲಿ.
		ನಿವಾಸಿ ಆಯುಕ್ತರು, ಕರ್ನಾಟಕ ಭವನ, ನವದೆಹಲಿ.	(v) ರಿಂದ (viii)	**ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ**

ಮುಖ್ಯಮಂತ್ರಿ/ ಸಚಿವರು/ ರಾಜ್ಯಸಚಿವರ ಆಪ್ತ ಶಾಖೆ

ಕರ್ನಾಟಕ ಸರ್ಕಾರದ ಸಚಿವಾಲಯದ ಗ್ರೂಪ್–ಸಿ ನೌಕರರ ಸಂಬಂಧವಾಗಿ	ಸರ್ಕಾರದ ಪ್ರಧಾನ ಕಾರ್ಯದರ್ಶಿ/ ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ	ಸರ್ಕಾರದ ಪ್ರಧಾನ ಕಾರ್ಯದರ್ಶಿ/ ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ	(ii) ರಿಂದ (viii)	ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ
ಕ್ಷೇತ್ರ ಇಲಾಖೆಗಳಿಂದ ನಿಯೋಜಿಸಲಾಗುವ ಗ್ರೂಪ್–ಸಿ ನೌಕರರ ಸಂಬಂಧವಾಗಿ	ಸರ್ಕಾರದ ಪ್ರಧಾನ ಕಾರ್ಯದರ್ಶಿ/ ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ	ಸರ್ಕಾರದ ಪ್ರಧಾನ ಕಾರ್ಯದರ್ಶಿ/ ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ	(ii) ರಿಂದ (ivಎ)	ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ

ಮುಖ್ಯ ಚುನಾವಣಾಧಿಕಾರಿಯವರ ಕಚೇರಿ

ಕರ್ನಾಟಕ ಸರ್ಕಾರದ ಸಚಿವಾಲಯದ ಗ್ರೂಪ್–ಸಿ ನೌಕರರ ಸಂಬಂಧವಾಗಿ	ಸರ್ಕಾರದ ಪ್ರಧಾನ ಕಾರ್ಯದರ್ಶಿ/ ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ	ಸರ್ಕಾರದ ಪ್ರಧಾನ ಕಾರ್ಯದರ್ಶಿ/ ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ	(ii) ರಿಂದ (viii)	ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ
ಕ್ಷೇತ್ರ ಇಲಾಖೆಗಳಿಂದ ನಿಯೋಜಿಸಲಾಗುವ ವಾಹನ ಚಾಲಕರ ಸಂಬಂಧವಾಗಿ	ಸರ್ಕಾರದ ಪ್ರಧಾನ ಕಾರ್ಯದರ್ಶಿ/ ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ	ಸರ್ಕಾರದ ಪ್ರಧಾನ ಕಾರ್ಯದರ್ಶಿ/ ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ	(ii) ರಿಂದ (ivಎ)	ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ

ಪರಂತು, ಅಪರ ಮುಖ್ಯ ಕಾರ್ಯದರ್ಶಿ ಅಥವಾ ಮುಖ್ಯ ಕಾರ್ಯದರ್ಶಿಯು ನೇಮಕ ಪ್ರಾಧಿಕಾರಿಯಾಗಿರುವಂತಹ ಉದ್ಯೋಗಿಗಳ ಸಂಬಂಧವಾಗಿ, ಸರ್ಕಾರದ ಪ್ರಧಾನ ಕಾರ್ಯದರ್ಶಿ/ ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ, ಇವರು ನಿಯಮ 8ರ (v) ರಿಂದ (viii)ರವರೆಗಿನ ಉಪಖಂಡದಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ಮುಖ್ಯ ದಂಡನೆಗಳನ್ನು ವಿಧಿಸತಕ್ಕದ್ದಲ್ಲ.

ವಿವರಣೆ

(i) "ಸರ್ಕಾರದ ಸಂಬಂಧಪಟ್ಟ ಉಪ–ಕಾರ್ಯದರ್ಶಿ/ ಜಂಟಿ ಕಾರ್ಯದರ್ಶಿ/ ಅಪರ ಕಾರ್ಯದರ್ಶಿ ಮತ್ತು/ ಅಥವಾ ವಿಶೇಷ–ಕಾರ್ಯದರ್ಶಿ" ಎಂದರೆ, ಈ ನಿಯಮಗಳ ಅಡಿಯಲ್ಲಿ ಕ್ರಮ ಕೈಗೊಳ್ಳುವ ಸಮಯದಲಿ ಅಧಿಕಾರಿಯು ಕಾರ್ಯನಿರ್ವಹಿಸುತ್ತಿರುವಂತಹ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯನ್ನು ಹೊರತುಪಡಿಸಿದಂತೆ, ಸಚಿವ ಸಂಪುಟ ವ್ಯವಹಾರಗಳ ಇಲಾಖೆಯೂ ಸೇರಿದಂತೆ ಇಲಾಖೆಯ ಆಡಳಿತ ಪ್ರಭಾರಿಯಾಗಿರುವ ಪದನಿಮಿತ್ತ ಉಪ–ಕಾರ್ಯದರ್ಶಿ/ ಪದನಿಮಿತ್ತ ಜಂಟಿ ಕಾರ್ಯದರ್ಶಿ/ ಪದನಿಮಿತ್ತ ಅಪರ ಕಾರ್ಯದರ್ಶಿ/ ಪದನಿಮಿತ್ತ ವಿಶೇಷ ಕಾರ್ಯದರ್ಶಿ ಸೇರಿದಂತೆ, ಸರ್ಕಾರದ ಉಪ–ಕಾರ್ಯದರ್ಶಿ/ ಜಂಟಿ ಕಾರ್ಯದರ್ಶಿ/ ಅಪರ ಕಾರ್ಯದರ್ಶಿ ಮತ್ತು/ಅಥವಾ ವಿಶೇಷ ಕಾರ್ಯದರ್ಶಿ.

(ii) "ಸರ್ಕಾರದ ಉಪ/ಜಂಟಿ/ಅಪರ ಕಾರ್ಯದರ್ಶಿ ಮತ್ತು/ಅಥವಾ ವಿಶೇಷ ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ" ಎಂದರೆ, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯಲ್ಲಿ, ಕಾಲಮ್–1ರಲ್ಲಿ ನಿರ್ದಿಷ್ಟಪಡಿಸಿದ ಗ್ರೂಪ್–ಸಿ ನೌಕರರ ಸೇವಾ ಷರತ್ತುಗಳಿಗೆ ಸಂಬಂಧಿಸಿದ ವಿಷಯಗಳ ಪ್ರಭಾರಿಯಾಗಿರುವ, ಸರ್ಕಾರದ ಉಪ/ಜಂಟಿ/ಅಪರ ಮತ್ತು/ಅಥವಾ ವಿಶೇಷ ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ.

3. **ಅನುಸೂಚಿ IIIರ ತಿದ್ದುಪಡಿ:**– ಸದರಿ ನಿಯಮಗಳ ಅನುಸೂಚಿ IIIರಲ್ಲಿ, "ಕರ್ನಾಟಕ ಸರ್ಕಾರದ ಸಚಿವಾಲಯ" ಶೀರ್ಷಿಕೆಗೆ ಮತ್ತು ಅದಕ್ಕೆ ಸಂಬಂಧಿಸಿದ ನಮೂದುಗಳಿಗೆ ಬದಲಾಗಿ ಈ ಮುಂದಿನಂತೆ ಸೇರಿಸತಕ್ಕದ್ದು, ಎಂದರೆ:–

ಹುದ್ದೆಗಳ ಪ್ರವರ್ಗ	ನೇಮಕಾತಿ ಅಧಿಕಾರ ಹೊಂದಿರುವ ಪ್ರಾಧಿಕಾರಿ	ದಂಡನೆಗಳನ್ನು ವಿಧಿಸುವುದಕ್ಕೆ ಅಧಿಕಾರ ಹೊಂದಿರುವ ಪ್ರಾಧಿಕಾರಿ ಮತ್ತು ಅವರು ವಿಧಿಸಬಹುದಾದ ದಂಡನೆಗಳು		ಮೇಲ್ಮನವಿ ಪ್ರಾಧಿಕಾರಿ
		ಪ್ರಾಧಿಕಾರಿ	ದಂಡನೆಗಳು	
1	2	3	4	5
ಸಚಿವಾಲಯದ ಎಲ್ಲಾ ಇಲಾಖೆಗಳಲ್ಲಿನ ಎಲ್ಲಾ ಗ್ರೂಪ್–ಡಿ ಹುದ್ದೆಗಳು (ನಿವಾಸಿ ಆಯುಕ್ತರು, ಕರ್ನಾಟಕ ಭವನ, ನವದೆಹಲಿ, ಇವರ ಕಾರ್ಯಾಲಯವನ್ನು ಹೊರತುಪಡಿಸಿ).	ಸರ್ಕಾರದ ಉಪ–ಕಾರ್ಯದರ್ಶಿ/ ಜಂಟಿ ಕಾರ್ಯದರ್ಶಿ/ ಅಪರ ಕಾರ್ಯದರ್ಶಿ ಮತ್ತು/ಅಥವಾ ವಿಶೇಷ ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಆಡಳಿತ)	ಸರ್ಕಾರದ ಸಂಬಂಧಪಟ್ಟ ಇಲಾಖೆಯ ಅಧೀನ/ ಉಪ–ಕಾರ್ಯದರ್ಶಿ/ ಜಂಟಿ ಕಾರ್ಯದರ್ಶಿ/ ಅಪರಕಾರ್ಯದರ್ಶಿ ಮತ್ತು / ಅಥವಾ ವಿಶೇಷ ಕಾರ್ಯದರ್ಶಿ	(i) ರಿಂದ (ivಎ)	ಸರ್ಕಾರದ ಸಂಬಂಧಪಟ್ಟ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿ/ ಪ್ರಧಾನ ಕಾರ್ಯದರ್ಶಿ/ ಕಾರ್ಯದರ್ಶಿ
		ಸರ್ಕಾರದ ವಿಶೇಷ ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ	(v) ರಿಂದ (viii)	ಸರ್ಕಾರದ ಪ್ರಧಾನ ಕಾರ್ಯದರ್ಶಿ/ ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ
ನಿವಾಸಿ ಆಯುಕ್ತರು, ಕರ್ನಾಟಕ ಭವನ, ನವದೆಹಲಿ, ಇವರ ಕಾರ್ಯಾಲಯದಲ್ಲಿನ ರವಾನೆ ಚಾಲಕ, ಜವಾನರು ಮತ್ತು ಎಲ್ಲಾ ಗ್ರೂಪ್–ಡಿ ಹುದ್ದೆಗಳು	ನಿವಾಸಿ ಆಯುಕ್ತರು, ಕರ್ನಾಟಕ ಭವನ, ನವದೆಹಲಿ	ಸಂಪರ್ಕಾಧಿಕಾರಿ	(i) ರಿಂದ (ivಎ)	ನಿವಾಸಿ ಆಯುಕ್ತರು, ಕರ್ನಾಟಕ ಭವನ, ನವದೆಹಲಿ
		ನಿವಾಸಿ ಆಯುಕ್ತರು, ಕರ್ನಾಟಕ ಭವನ, ನವದೆಹಲಿ	(v) ರಿಂದ (viii)	**ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ**

ಮುಖ್ಯಮಂತ್ರಿ/ ಸಚಿವರು/ ರಾಜ್ಯ ಸಚಿವರ ಆಪ್ತ ಶಾಖೆ

ಕರ್ನಾಟಕ ಸರ್ಕಾರದ ಸಚಿವಾಲಯದ ಗ್ರೂಪ್–ಡಿ ನೌಕರರ ಸಂಬಂಧವಾಗಿ	ಸರ್ಕಾರದ ಉಪ/ ಜಂಟಿ/ ಅಪರ ಕಾರ್ಯದರ್ಶಿ ಮತ್ತು/ ಅಥವಾ ವಿಶೇಷ ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ(ಆಡಳಿತ)	ರಾಜ್ಯದ ಮುಖ್ಯ ಮಂತ್ರಿ/ ಸಚಿವ/ ರಾಜ್ಯ ಸಚಿವರ ಆಪ್ತ ಕಾರ್ಯದರ್ಶಿ	(i) ರಿಂದ (ivಎ)	ಸರ್ಕಾರದ ಉಪ/ ಜಂಟಿ/ ಅಪರ ಕಾರ್ಯದರ್ಶಿ ಮತ್ತು/ ಅಥವಾ ವಿಶೇಷ ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಆಡಳಿತ)
		ಸರ್ಕಾರದ ವಿಶೇಷ ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ	(v) ರಿಂದ (viii)	ಸರ್ಕಾರದ ಪ್ರಧಾನ ಕಾರ್ಯದರ್ಶಿ/ ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ
ಕ್ಷೇತ್ರ ಇಲಾಖೆಗಳಿಂದ ನಿಯೋಜಿಸಲಾಗುವ ಗ್ರೂಪ್–ಡಿ ನೌಕರರ ಸಂಬಂಧವಾಗಿ	**ಸರ್ಕಾರದ ಉಪ/ ಜಂಟಿ/ಅಪರ ಕಾರ್ಯದರ್ಶಿ ಮತ್ತು/ ಅಥವಾ ವಿಶೇಷ ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಆಡಳಿತ)**	**ಸರ್ಕಾರದ ಉಪ/ ಜಂಟಿ/ಅಪರ ಕಾರ್ಯದರ್ಶಿ ಮತ್ತು/ ಅಥವಾ ವಿಶೇಷ ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಆಡಳಿತ)**	**(i) ರಿಂದ (ivಎ)**	**ಸರ್ಕಾರದ ಪ್ರಧಾನ ಕಾರ್ಯದರ್ಶಿ/ ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ**

ಕರ್ನಾಟಕ ಸರ್ಕಾರದ ಸಚಿವಾಲಯದ ಗ್ರೂಪ್–ಡಿ ಸಿಬ್ಬಂದಿಯ ಸಂಬಂಧವಾಗಿ ಮುಖ್ಯ ಚುನಾವಣಾಧಿಕಾರಿಯ ಕಚೇರಿ

ಎಲ್ಲಾ ಗ್ರೂಪ್–ಡಿ ಹುದ್ದೆಗಳು	ಸರ್ಕಾರದ ಉಪ/ ಜಂಟಿ/ಅಪರ ಕಾರ್ಯದರ್ಶಿ ಮತ್ತು/ ಅಥವಾ ವಿಶೇಷ ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಆಡಳಿತ)	ಸರ್ಕಾರದ ಅಧೀನ ಕಾರ್ಯದರ್ಶಿ (ಚುನಾವಣೆ)	(i) ರಿಂದ (ivಎ)	ಮುಖ್ಯ ಚುನಾವಣಾಧಿಕಾರಿ
		ಸರ್ಕಾರದ ವಿಶೇಷ ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ	(**v**) ರಿಂದ (**viii**)	ಸರ್ಕಾರದ ಪ್ರಧಾನ ಕಾರ್ಯದರ್ಶಿ/ ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ

ಪರಂತು, ಸರ್ಕಾರದ ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ಅಥವಾ ಅದೇ ಶ್ರೇಣಿಯ ಅಥವಾ ಅದಕ್ಕಿಂತ ಮೇಲಿನ ಶ್ರೇಣಿಯ ಅಧಿಕಾರಿಯಿಂದ ನೇಮಕಗೊಂಡಿರುವ ಉದ್ಯೋಗಿಗಳ ಸಂಬಂಧವಾಗಿ, ಸರ್ಕಾರದ ಉಪ/ಜಂಟಿ/ಅಪರ ಮತ್ತು/ಅಥವಾ ವಿಶೇಷ ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ(ಆಡಳಿತ) ಇವರು ನಿಯಮ 8ರ (v) ರಿಂದ (viii)ರವರೆಗಿನ ಉಪಖಂಡದಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ಕಠಿಣ ದಂಡನೆಗಳನ್ನು ವಿಧಿಸತಕ್ಕದ್ದಲ್ಲ.

ವಿವರಣೆ

(i) **"**ಅಧೀನ–ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ**"** ಎಂದರೆ, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯಲ್ಲಿ, ಕರ್ನಾಟಕ ಸರ್ಕಾರದ ಸಚಿವಾಲಯದ ಗ್ರೂಪ್–ಡಿ ನೌಕರರ ಸೇವಾ ಷರತ್ತುಗಳಿಗೆ ಸಂಬಂಧಿಸಿದ ವಿಷಯಗಳ ಪ್ರಭಾರಿಯಾಗಿರುವ, ಸರ್ಕಾರದ ಅಧೀನ ಕಾರ್ಯದರ್ಶಿ.

(ii) **"**ಸಂಬಂಧಪಟ್ಟ ಅಧೀನ ಕಾರ್ಯದರ್ಶಿ**"** ಎಂದರೆ, ಈ ನಿಯಮಗಳ ಅಡಿಯಲ್ಲಿ ಕ್ರಮ ಕೈಗೊಳ್ಳುವ ಸಮಯದಲ್ಲಿ ಸಂಬಂಧಪಟ್ಟ ಗ್ರೂಪ್–ಡಿ ಸಿಬ್ಬಂದಿಯು ಕಾರ್ಯನಿರ್ವಹಿಸುತ್ತಿರುವಂತಹ, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯನ್ನು ಹೊರತುಪಡಿಸಿ ಸಚಿವ ಸಂಪುಟ ವ್ಯವಹಾರಗಳ ಇಲಾಖೆಯೂ ಸೇರಿದಂತೆ, ಸಚಿವಾಲಯದಲ್ಲಿನ ಯಾವುದೇ ಇಲಾಖೆಯ ಪದನಿಮಿತ್ತ ಅಧೀನ ಕಾರ್ಯದರ್ಶಿ ಸೇರಿದಂತೆ ಅಧೀನ ಕಾರ್ಯದರ್ಶಿ. ಮತ್ತು ಕಾರ್ಯದರ್ಶಿಯ ಆಪ್ತ ಶಾಖೆಯ ಗ್ರೂಪ್–ಡಿ ಸಿಬ್ಬಂದಿಯ ಸಂದರ್ಭದಲ್ಲಿ, ಸರ್ಕಾರದ ವಿಶೇಷ ಕಾರ್ಯದರ್ಶಿ ಮತ್ತು / ಅಥವಾ ಅಪರ ಕಾರ್ಯದರ್ಶಿ, ಜಂಟಿ ಕಾರ್ಯದರ್ಶಿ ಮತ್ತು ಉಪ–ಕಾರ್ಯದರ್ಶಿ, ಆ ಇಲಾಖೆಯ ಆಪ್ತ ಶಾಖೆಯ ಪ್ರಭಾರಿಯಾಗಿರುವ, ಇಲಾಖೆಯ ಅಧೀನ ಕಾರ್ಯದರ್ಶಿ.

ಕರ್ನಾಟಕದ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಎ.ವಿ. ಶೈಲಜ
ಸರ್ಕಾರದ ಅಧೀನ ಕಾರ್ಯದರ್ಶಿ,
ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ,
(ಸೇವಾ ನಿಯಮಗಳು–2)

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ ಘಟಕ, ಬೆಂಗಳೂರು. (ಪಿ7) ಪ್ರತಿಗಳು: ೬೦೦

RNI No. KARBIL/2001/47147

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

ಭಾಗ–IVA	ಬೆಂಗಳೂರು,. ಮಂಗಳವಾರ, ಸೆಪ್ಟೆಂಬರ್ ೨೪, ೨೦೧೯ (ಆಶ್ವಯುಜ ೦೨, ಶಕ ವರ್ಷ ೧೯೪೦)	ನಂ. ೮೦೩
Part–IVA	Bengaluru, Tuesday, September 24, 2019 (Ashwayuja 02, Shaka Varsha 1940)	No. 803

ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಅಪಜೀ 230 ಇಪಿಸಿ 2017(i), ಬೆಂಗಳೂರು, ದಿನಾಂಕ: 21.09.2019.

ಸರ್ಕಾರದ ಅಧಿಸೂಚನೆ ಸಂಖ್ಯೆ: ಅಪಜೀ 230 ಇಪಿಸಿ 2017, ದಿನಾಂಕ: 20.06.2019ರಲ್ಲಿ ಡಾ: ಕೆ. ಸುಧಾಕರ್, ಮಾಜಿ ಶಾಸಕರು, ಪೆರೇಸಂದ್ರ ಗ್ರಾಮ ಮತ್ತು ಅಂಚೆ, ಮುಡಿಕಲ್ಲು ಹೋಬಳಿ, ಚಿಕ್ಕಬಳ್ಳಾಪುರ ತಾಲ್ಲೂಕು, ಚಿಕ್ಕಬಳ್ಳಾಪುರ ಜಿಲ್ಲೆ ಇವರನ್ನು ಜಲ (ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ) ಕಾಯ್ದೆ, 1974 ರ ಸೆಕ್ಷನ್ 4(2) ರನ್ವಯ ತಕ್ಷಣದಿಂದ ಜಾರಿಗೆ ಬರುವಂತೆ ಮತ್ತು ಮುಂದಿನ ಆದೇಶದವರೆಗೆ ಹಾಗೂ ಜಲ (ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ) ಕಾಯ್ದೆ, 1974ರ ಕಲಂ 5 (6) ರನ್ವಯ ಶ್ರೀ ಸಿ. ಜಯರಾಮ್, ಭಾ.ಅ.ಸೇ. (ನಿವೃತ್ತ), ನಂ. 41, ಎಂ.ಸಿ.ಎಚ್.ಎಸ್., 14ನೇ ಮುಖ್ಯ ರಸ್ತೆ, 4ನೇ ಸೆಕ್ಟರ್, ಎಚ್.ಎಸ್.ಆರ್. ಲೇಔಟ್, ಬೆಂಗಳೂರು–560103 ಇವರ ರಾಜೀನಾಮೆಯನ್ನು ಅಂಗೀಕರಿಸಿದ ನಂತರ ಬಾಕಿ ಉಳಿದಿರುವ ಅವಧಿಗೆ ಅಂದರೆ ಗರಿಷ್ಠ ದಿನಾಂಕ: 04.03.2022 ರವರೆಗೆ, ಇದರಲ್ಲಿ ಯಾವುದು ಮೊದಲು ಅಲ್ಲಿಯವರೆಗೆ ಕರ್ನಾಟಕ ರಾಜ್ಯ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿಯ ಅಧ್ಯಕ್ಷರನ್ನಾಗಿ ಸಂಪುಟ ದರ್ಜೆಯ ಸ್ಥಾನಮಾನದೊಂದಿಗೆ ನಾಮ ನಿರ್ದೇಶನ ಮಾಡಲಾಗಿತ್ತು. ಡಾ: ಕೆ. ಸುಧಾಕರ್, ಮಾಜಿ ಶಾಸಕರು ಇವರು ದಿನಾಂಕ: 21.09.2019ರಂದು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಅಧ್ಯಕ್ಷರ ಹುದ್ದೆಗೆ ರಾಜೀನಾಮೆಯನ್ನು ಸಲ್ಲಿಸಿರುತ್ತಾರೆ. ಡಾ: ಕೆ. ಸುಧಾಕರ್, ಮಾಜಿ ಶಾಸಕರು ಇವರು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಅಧ್ಯಕ್ಷರ ಹುದ್ದೆಗೆ ಸಲ್ಲಿಸಿರುವ ರಾಜೀನಾಮೆಯನ್ನು ಈ ಕೂಡಲೇ ಜಾರಿಗೆ ಬರುವಂತೆ ಅಂಗೀಕರಿಸಿ ಆದೇಶಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಬಾಲಚಂದಿರಾಮ ಗೋ ಹುಣಶಾಳ
ಸರ್ಕಾರದ ಅಧೀನ ಕಾರ್ಯದರ್ಶಿ
(ಪರಿಸರ ಮತ್ತು ಜೀವಿಶಾಸ್ತ್ರ)
ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ

ಅಧಿಸೂಚನೆ

ಸಂಖ್ಯೆ: ಅಪಜೀ 230 ಇಪಿಸಿ 2017(ii), ಬೆಂಗಳೂರು, ದಿನಾಂಕ: 21.09.2019

ಸರ್ಕಾರದ ಅಧಿಸೂಚನೆ ಸಂಖ್ಯೆ: ಅಪಜೀ 230 ಇಪಿಸಿ 2017, ದಿನಾಂಕ: 20.06.2019ರಲ್ಲಿ ಜಲ (ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ) ಕಾಯ್ದೆ, 1974 ರ ಸೆಕ್ಷನ್ 4(2)ರನ್ವಯ ಸಂಪುಟ ದರ್ಜೆಯ ಸ್ಥಾನಮಾನದೊಂದಿಗೆ ಕರ್ನಾಟಕ ರಾಜ್ಯ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿಯ ಅಧ್ಯಕ್ಷರನ್ನಾಗಿ ನಾಮ ನಿರ್ದೇಶನ ಮಾಡಲಾಗಿದ್ದ ಡಾ: ಕೆ. ಸುಧಾಕರ್, ಮಾಜಿ ಶಾಸಕರು, ಪೆರೇಸಂದ್ರ ಗ್ರಾಮ ಮತ್ತು ಅಂಚೆ, ಮುಡಿಕಲ್ಲು ಹೋಬಳಿ, ಚಿಕ್ಕಬಳ್ಳಾಪುರ ತಾಲ್ಲೂಕು, ಚಿಕ್ಕಬಳ್ಳಾಪುರ ಜಿಲ್ಲೆ ಇವರು ಕರ್ನಾಟಕ ರಾಜ್ಯ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿಯ ಅಧ್ಯಕ್ಷರ ಸ್ಥಾನಕ್ಕೆ ದಿನಾಂಕ: 21.09.2019 ರಂದು ಸಲ್ಲಿಸಿರುವ ರಾಜೀನಾಮೆಯನ್ನು ಅಂಗೀಕರಿಸಿರುವ ಹಿನ್ನೆಲೆಯಲ್ಲಿ ಜಲ (ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ) ಕಾಯ್ದೆ, 1974 ರ ಸೆಕ್ಷನ್ 4(2) ರನ್ವಯ ತಕ್ಷಣದಿಂದ ಜಾರಿಗೆ ಬರುವಂತೆ ಮತ್ತು ಮುಂದಿನ ಆದೇಶದವರೆಗೆ ಡಾ: ಸಂದೀಪ್ ದವೆ, ಭಾ.ಆ.ಸೇ., ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಇಲಾಖೆ ಇವರನ್ನು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಅಧ್ಯಕ್ಷರನ್ನಾಗಿ ನಾಮ ನಿರ್ದೇಶನ ಮಾಡಿ ಆದೇಶಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಬಾಲಚಂದಿರಾಮ ಗೋ ಹುಣಶಾಳ
ಸರ್ಕಾರದ ಅಧೀನ ಕಾರ್ಯದರ್ಶಿ
(ಪರಿಸರ ಮತ್ತು ಜೀವಿಶಾಸ್ತ್ರ)
ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ ಘಟಕ, ಬೆಂಗಳೂರು. (ಪಿ7) ಪ್ರತಿಗಳು: 100

RNI No. KARBIL/2001/47147



ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

ಭಾಗ–IVA	ಬೆಂಗಳೂರು, ಬುಧವಾರ, ಸೆಪ್ಟೆಂಬರ್ ೨೫, ೨೦೧೯ (ಆಶ್ವಯುಜ ೦೩, ಶಕ ವರ್ಷ ೧೯೪೦)	ನಂ. ೮೦೪
Part–IVA	Bengaluru, Wednesday, September 25, 2019 (Ashwayuja 03, Shaka Varsha 1940)	No. 804

Revenue Secretariat
Notification
No. RD 20 GRC 2017 (P2), Bengaluru, Dated 25th September, 2019

Whereas, upon report of the Competent Authority after due investigation of complaint of depositors it has come to the notice of the Government, that the M/s I Monetary Advisory (IMA) and its group entities are involved in fraudulent transactions by clandestinely and illegally collecting deposits or money from the general public and thereafter have failed to return the same either after maturity or on demand made by the depositors or complainants with promised interest and other assured benefits and thereby have failed to render the services promised to them.

And whereas, it has further come to the notice of the Government that the M/s I Monetary Advisory (IMA) and its group entities and people associating with them have been acquiring lands, movable and immovable properties, cash and others from and out of the deposits or money so collected, from the depositors or complainants and thereby deviating from the intended purposes of accepting the deposits or money.

And whereas, The Government has reason to believe that the actions of the M/s I Monetary Advisory (IMA) and its group entities and people associating with them are acting in and detrimental to the interest of the depositors or complaints whose intention was to defraud the innocent depositors, and it has become necessary to protect the interest of the depositors of the M/s I Monetary Advisory (IMA) and its group entities.

And whereas, now the Government after considering the report of the Competent Authority and satisfying itself about the urgent need to protect the interest of the depositors and in exercise of the powers conferred by sub - section (2) of section 3 of the Karnataka Protection of interest of Depositors in Financial Establishment Act, 2004 (Karnataka Act 30 of 2005) hereby makes the following order, namely.-

"ORDER

Now therefore, in exercise of the powers conferred by sub - section (2) of section 3 of the Karnataka Protection of interest of Depositors in Financial Establishment Act, 2004 (Karnataka Act 30 of 2005), the Government under the circumstances stated above having satisfied that in order to protect the interest of depositors it is necessary to attach the movable and immovable properties believed to belong to M/s I Monetary Advisory (IMA) and its group entities, therefore, the Government hereby attaches all movable and immovable properties as specified in Annexures-1, 2, 3, 4, 5, 6, 7 and 8 to this order believed to have been acquired by the M/s I Monetary Advisory (IMA) and its group entities either in its own name or in the name of any other person from and out of the deposits collected by the M/s I Monetary Advisory (IMA) and its group entities and where it transpires that such money or such other properties of the said financial establishment, or the personal assets of the promoters, partners, directors, managers or members or any other person of

the said financial establishment is not sufficient for the repayment of the deposits or interest or such other assured benefits to the depositors.

Note: All the aforesaid properties, from the date of publication of this order in the Official Gazette, shall forthwith vest with the Competent Authority, who has been appointed by the Government, pending further orders from the Special Court.

By Order and in the name of the
Governor of Karnataka

K.R. RAVIKUMAR
Under Secretary to Government
Revenue Department (Special Cell)
Telephone No: 080-22032691
E-mail:ussplcell-rev@karnataka.gov.in

ಅನುಬಂಧ–1

ಕ್ರ. ಸಂ	ಸ್ವತ್ತಿನ ವಿವರ	ದಾಖಲೆಗಳ ಪ್ರಕಾರ ಸ್ವತ್ತಿನ ಮಾಲೀಕ	ದಾಖಲಾತಿ ವಿವರ	ಪ್ರಸ್ತುತ ಮಾರುಕಟ್ಟೆ ದರ (ರೂ.ಗಳಲ್ಲಿ)	ಖರೀದಿ ದರ (ರೂ.ಗಳಲ್ಲಿ)	ಷರಾ
1	2	3	4	5	6	7
1	ಬಿ.ಬಿ.ಐಂ.ಪಿ. ವಾರ್ಡ್ ನಂ. 86, ಮುನ್ಸಿಪಲ್ ಸಂಖ್ಯೆ 12 (ಹಳೆ ನಂ. 26) ದಕ್ಷಿಣ ಭಾಗ, ಪಿ.ಐ.ಡಿ. 86–28–12 ಮಾರುತಿ ಸೇವಾನಗರ, ಕ್ಲೈನ್ ರೋಡ್, ಕೂಕ್ ಟೌನ್, ಬೆಂಗಳೂರು 1230 ಚದರ ಅಡಿಗಳ ಶೆಡ್ **<u>ಡೀಡ್‌ನಂತೆ ಚಕ್ಕುಬಂದಿ:</u>** ಪೂರ್ವಕ್ಕೆ: ಕ್ಲೈನ್ ರಸ್ತೆ ಪಶ್ಚಿಮಕ್ಕೆ: ಖಾಸಗಿ ಸ್ವತ್ತು (ಹಿಂದೆ ಡೇವಿಡಫಿ ಮತ್ತು ಡಾ: ರಂಗನಾಥನ್ ರವರಿಗೆ ಸೇರಿದ ಸ್ವತ್ತು) ಉತ್ತರಕ್ಕೆ: ಖಾಸಗಿ ಸ್ವತ್ತು (ಹಿಂದೆ ಡಿಕೋಸ್ಟಸ್‌ರವರ ಸ್ವತ್ತು ದಕ್ಷಿಣಕ್ಕೆ: ಇದೇ ಸ್ವತ್ತಿನ ಉಳಿದ ಭಾಗ	ಸೈಯದ್ ಮುಜಾಹಿದ್ ಬಿನ್ ಸೈಯದ್ ಹಶಮ್ India Financial association of Seventh Day Adventists, 1230 ಚದರ ಅಡಿಗಳ ಶೆಡ್	ಲೀಸ್‌ಗೆ ನೀಡಿದವರು: ಸೈಯದ್ ಮುಜಾಹಿದ್ ಬಿನ್ ಸೈಯದ್ ಹಶಮ್ ಲೀಸ್‌ಗೆ ಪಡೆದವರು: ಕೆ.ಮೊಹಮ್ಮದ್ ಅಶ್ರಫ್ ಬಿನ್ ಕೆ.ವಿ. ಅಬೂತಿ ಹಾಜಿ ಲೀಸ್ ಡೀಡ್ ನಂ. 1978/2018–19 ಲೀಸ್ ಡೀಡ್ ದಿನಾಂಕ:17–07–2018 ಹಿರಿಯ ಉಪನೋಂದಣಾಧಿಕಾರಿಗಳು, ಹಲಸೂರು, ಬೆಂಗಳೂರು ಇಲ್ಲಿ ಲೀಸ್ ಡೀಡ್ ಡಾಕ್ಯುಮೆಂಟ್ ನೋಂದಣಿಯಾಗಿರುತ್ತದೆ.	61,48,770/–	–	ರೂ. 40,000/– ಗಳಿಗೆ ಗುತ್ತಿಗೆಗೆ ಪಡೆಯಲಾಗಿರುತ್ತದೆ.
2	ನಂ.49, ಮಾಧವರಾಯ ಮೊದಲಿಯಾರ್ ರಸ್ತೆ, ಫ್ರೇಜರ್ ಟೌನ್, ವಾರ್ಡ್ ಸಂಖ್ಯೆ 91, ಪುಲಕೇಶಿನಗರ, ಬೆಂಗಳೂರು ಪಿ.ಐ.ಡಿ. 91–2–49 2400 ಅಡಿ ಅಳತೆಯ ನಿವೇಶನ **<u>ಡೀಡ್‌ನಂತೆ ಚಕ್ಕುಬಂದಿ:</u>** ಪೂರ್ವಕ್ಕೆ: ನಂ. 48ರ ಆವರಣ ಪಶ್ಚಿಮಕ್ಕೆ: ನಂ. 50ರ ಆವರಣ ಉತ್ತರಕ್ಕೆ: ಮಾಧವರಾಯ ಮೊದಲಿಯಾರ್ ರಸ್ತೆ ದಕ್ಷಿಣಕ್ಕೆ: ಕನ್ಸರ್ವೆನ್ಸಿ ಲೇನ್	(1)ಹೆಚ್.ಮುಜಾಮಿಲ್ ಅಹಮದ್ (2)ಹೆಚ್.ಮುಬಷೀರ್ ಅಹಮದ್ (3)ಹೆಚ್.ಮುತಾಹಿರ್ ಅಹಮದ್ **ಇವರುಗಳ ಹೆಸರಿಗಿರುತ್ತೆ,** **2400 ಅಡಿ ಅಳತೆಯ ನಿವೇಶನ**	ಲೀಸ್‌ಗೆ ನೀಡಿದವರು:(1)ಹೆಚ್.ಮುಜಾಮಿಲ್ ಅಹಮದ್ (2)ಹೆಚ್.ಮುಬಷೀರ್ ಅಹಮದ್ (3)ಹೆಚ್.ಮುತಾಹಿರ್ ಅಹಮದ್ ಎಲ್ಲರೂ ಬಿನ್ ಹೆಚ್.ಬಷೀರ್ ಅಹಮದ್ ಲೀಸ್‌ಗೆ ಪಡೆದವರು: ಸಾದ್ ಅನೀಸ್ ಬಿನ್ ಅನೀಸ್ ಉರ್ ರೆಹಮಾನ್ ಲೀಸ್ ಡೀಡ್ ನಂ. 2120/2015–16 ಲೀಸ್ ಡೀಡ್ ದಿನಾಂಕ:13–08–2015 ಹಿರಿಯ ಉಪನೋಂದಣಾಧಿಕಾರಿಗಳು, ಹಲಸೂರು, ಬೆಂಗಳೂರು ಇಲ್ಲಿ ಲೀಸ್ ಡೀಡ್ ಡಾಕ್ಯುಮೆಂಟ್ ನೋಂದಣಿಯಾಗಿರುತ್ತದೆ.	1,64,78,400/–	–	ರೂ. 80,000/– ಗಳಿಗೆ ಗುತ್ತಿಗೆ ಪಡೆಯಲಾಗಿರುತ್ತದೆ.

ಕ್ರ. ಸಂ	ಸ್ವತ್ತಿನ ವಿವರ	ದಾಖಲೆಗಳ ಪ್ರಕಾರ ಸ್ವತ್ತಿನ ಮಾಲೀಕ	ದಾಖಲಾತಿ ವಿವರ	ಪ್ರಸ್ತುತ ಮಾರುಕಟ್ಟೆ ದರ (ರೂ.ಗಳಲ್ಲಿ)	ಖರೀದಿ ದರ (ರೂ.ಗಳಲ್ಲಿ)	ಷರಾ
1	2	3	4	5	6	7
3	ಫ್ಲಾಟ್ ನಂ. ಟಿ–303, 3ನೇ ಮಹಡಿ, "ಇಟ್ಟಿನಾ ಶಿವಾಸ್" ಸರ್ವೆ ನಂ. 65/2ಬಿ, ಸಿಎಂಸಿ ಖಾತೆ ನಂ. 759 & 708/1, ಅಗರ ವಿಲೇಜ್, ಬೇಗೂರು ಹೋಬಳಿ, ಬೆಂಗಳೂರು ದಕ್ಷಿಣ ತಾಲ್ಲೂಕು ಫ್ಲಾಟ್ 1631 ಚದರ ಅಡಿಗಳು ಕ್ರಯಪತ್ರದಲ್ಲಿರುವಂತೆ ಪೂರಾ ಸ್ವತ್ತಿಗೆ ಚಕ್ಕುಬಂದಿ: ಪೂರ್ವಕ್ಕೆ: ಸರ್ವೆ ನಂ. 65/1 ಪಶ್ಚಿಮಕ್ಕೆ: ಸರ್ವೆ ನಂ. 65/2ಬಿ ಉತ್ತರಕ್ಕೆ: ಡಿಫೆನ್ಸ್ ಸ್ವತ್ತು ದಕ್ಷಿಣಕ್ಕೆ: ರಸ್ತೆ	ಬಿ.ವಿ.ರೇಖಾ ಬಿನ್ ಜಿ.ವಿ.ನಾಯಕ್‌ರವರ ಹೆಸರಿನಲ್ಲಿದ್ದು, ಫ್ಲಾಟ್ 1631 ಚದರ ಅಡಿಗಳು	ಪರ್ಚೇಸರ್:ಬಿ.ವಿ.ರೇಖಾ ಬಿನ್ ಜಿ.ವಿ.ನಾಯಕ್ ವೆಂಡರ್:(1)ವಿ.ಮುನಿರಾಜು ಬಿನ್ ವೆಂಕಟ ಗಿರಿಯಪ್ಪ ಮತ್ತು ಎ.ಆರ್.ಮುಕುಂದರೆಡ್ಡಿ ಬಿನ್ ರಾಮಯ್ಯರೆಡ್ಡಿ ಇವರ ಪರವಾಗಿ ಜಿ.ಪಿ.ಎ. ಹೋಲ್ಡರ್ ಐ.ಮಹಾಬಲೇಶ್ವರಪ್ಪ (2)ಮೆ: ಇಟ್ಟಿನಾ ಪ್ರಾಪರ್ಟೀಸ್ ಪ್ರೈ.ಲಿ.,ನ ನಿರ್ದೇಶಕರಾದ ಐ.ಮಹಾಬಲೇಶ್ವರಪ್ಪ ಇವರ ಪರವಾಗಿ ಎಸ್.ಪಿ.ಎ ಹೋಲ್ಡರ್ ಲೀಲಾವತಿ ಕೋಂ ಪಿ.ಆರ್.ಕೆ.ಸತ್ಯನಾರಾಯಣ ದಸ್ತಾವೇಜು ಸಂಖ್ಯೆ: 3734/2005–06 ಸೇಲ್ ಡೀಡ್ ದಿನಾಂಕ:3–6–2005 ಹಿರಿಯ ಉಪನೋಂದಣಾಧಿಕಾರಿಗಳು, ಬೆಂಗಳೂರು ದಕ್ಷಿಣ ತಾಲ್ಲೂಕು ಇಲ್ಲಿ ಶುದ್ದ ಕ್ರಯಪತ್ರದ ಡಾಕ್ಯುಮೆಂಟ್ ನೋಂದಣಿ ಯಾಗಿರುತ್ತದೆ.	85,34,500/–	11,92,000/–	
4	ಒಂದು ಡ್ಯುಪ್ಲೆಕ್ಸ್ ಮನೆ ಸೈಟ್ ನಂಬರ್ ನಂ. 1221/ಎ, ಸಾರಕ್ಕಿ, 2ನೇ ಫೇಸ್, ಬಿ.ಬಿ.ಎಂ.ಪಿ. ದಾಖಲೆಗಳ ಪ್ರಕಾರ ಹೊಸ ನಂ. 1221/ಎ, 2ನೇ 'ಎ' ಕ್ರಾಸ್, ಜೆ.ಪಿ.ನಗರ, 2ನೇ ಫೇಸ್, ಬೆಂಗಳೂರು ಪಿ.ಐ.ಡಿ. ನಂ. 57–88–1221/ಎ, ವಾರ್ಡ್ ನಂ. 57ರಲ್ಲಿ ನಿರ್ಮಿಸಿದೆ. ಇದರ ಅಳತೆ ಪೂರ್ವ– ಪಶ್ಚಿಮ (8.9+9.0)/2 ಉತ್ತರ–ದಕ್ಷಿಣ (16.6+17.1)/2 ಒಟ್ಟು 149.96 ಚದರ ಮೀಟರ್ ಇರುತ್ತದೆ. ಕ್ರಯಪತ್ರದಂತೆ ಚಕ್ಕುಬಂದಿ: ಪೂರ್ವಕ್ಕೆ: ಸೈಟ್ ನಂ. 1221 ಪಶ್ಚಿಮಕ್ಕೆ: ಸೈಟ್ ನಂ. 1222 ಉತ್ತರಕ್ಕೆ: ಸೈಟ್ ನಂ. 1244 ದಕ್ಷಿಣಕ್ಕೆ: ರಸ್ತೆ	ರೇಖಾ ರಮ್ಯ ನಾಯಕ್ ಬಿನ್ ಜಿ.ವಿ.ನಾಯಕ್ ರವರ ಹೆಸರಿನಲ್ಲಿದ್ದು, ಒಟ್ಟು 149.96 ಚದರ ಮೀಟರ್ ಇರುತ್ತದೆ.	ಪರ್ಚೇಸರ್: ರೇಖಾ ರಮ್ಯ ನಾಯಕ್ ಬಿನ್ ಜಿ.ವಿ.ನಾಯಕ್ ವೆಂಡರ್ಸ್:(1)ಮಲ್ಲಮ್ಮ ಕೋಂ ಲೇಟ್ ರಾಮದಾಸ್ (2)ಲಕ್ಷ್ಮೀನಾರಾಯಣಕುಮಾರ್ ಬಿನ್ ಲೇಟ್ ರಾಮದಾಸ್ (3)ಆರ್.ಪದ್ಮಶ್ರೀ ಬಿನ್ ಲೇಟ್ ರಾಮದಾಸ್ (4)ಆರ್.ಪ್ರಮೀಳ ಬಿನ್ ಲೇಟ್ ರಾಮದಾಸ್ (5)ನೇತ್ರಾವತಿ ಪರಮೇಶ್ವರ್ ಬಿನ್ ಲೇಟ್ ರಾಮದಾಸ್ ಇವರುಗಳ ಪರವಾಗಿ ಜಿ.ಪಿ.ಎ. ಹೋಲ್ಡರ್ ತಾಯಿ ಮಲ್ಲಮ್ಮ ದಸ್ತಾವೇಜು ಸಂಖ್ಯೆ: 3572/2012–13 ಸೇಲ್ ಡೀಡ್ ದಿನಾಂಕ:19–10–2012 ಹಿರಿಯ ಉಪನೋಂದಣಾಧಿಕಾರಿಗಳು, ಜಯನಗರ, ಬೆಂಗಳೂರು ಇಲ್ಲಿ ಶುದ್ದ ಕ್ರಯಪತ್ರದ ಡಾಕ್ಯುಮೆಂಟ್ ನೋಂದಣಿ ಯಾಗಿರುತ್ತದೆ.	1,01,22,500/–	55,00,000/–	

ಕ್ರ. ಸಂ	ಸ್ವತ್ತಿನ ವಿವರ	ದಾಖಲೆಗಳ ಪ್ರಕಾರ ಸ್ವತ್ತಿನ ಮಾಲೀಕ	ದಾಖಲಾತಿ ವಿವರ	ಪ್ರಸ್ತುತ ಮಾರುಕಟ್ಟೆ ದರ (ರೂ.ಗಳಲ್ಲಿ)	ಖರೀದಿ ದರ (ರೂ.ಗಳಲ್ಲಿ)	ಷರಾ
1	2	3	4	5	6	7
5	ನಂ. 19, (ಹಳೆ ನಂ. 56/ಎ) (ಮಾರೇನಳ್ಳಿ ಗ್ರಾಮ ಸರ್ವೆ ನಂ.32 ರಲ್ಲಿ) 3ನೇ ಕ್ರಾಸ್ ರಸ್ತೆ, ಮಾರೇನಳ್ಳಿ ವಿಲೇಜ್, 2ನೇ ಫೇಸ್, ಜೆ.ಪಿ.ನಗರ, ಬೆಂಗಳೂರು ವಾರ್ಡ್ ನಂ. 57, ಪಿ.ಐ.ಡಿ. 57–304–19 ಹೊಸ ಸಂಖ್ಯೆ ಪಿ.ಐ.ಡಿ. 177– ಡಬ್ಲ್ಯೂ–0044–7. ಅಳತೆ 30*40 ನಿವೇಶನ ಇರುತ್ತದೆ. ಕ್ರಯಪತ್ರದಂತೆ ಚಕ್ಕುಬಂದಿ ಪೂರ್ವಕ್ಕೆ: ಸೈಟ್ ನಂ. 57 ಪಶ್ಚಿಮಕ್ಕೆ: ಸೈಟ್ ನಂ. 56 ಉತ್ತರಕ್ಕೆ: ರಸ್ತೆ ದಕ್ಷಿಣಕ್ಕೆ: ಸೈಟ್ ನಂ. 52/ಎ	ರೇಖಾ ರಮ್ಯ ನಾಯಕ್ ಕೋಂ ಪಿ.ಡಿ.ಕುಮಾರ್ ಹೆಸರಿನಲ್ಲಿದ್ದು ಇದರ ಅಳತೆ 30*40 ನಿವೇಶನ ಇರುತ್ತದೆ.	ಪರ್ಚೇಸರ್: ರೇಖಾ ರಮ್ಯ ನಾಯಕ್ ಕೋಂ ಪಿ.ಡಿ.ಕುಮಾರ್ ವೆಂಡರ್ಸ್: ಯುವರಾಜ ಬಿನ್ ಲೇಟ್ ಕೆ.ವಿ. ಪದ್ಮನಾಭ ದಸ್ತಾವೇಜು ಸಂಖ್ಯೆ: 3812/2015–16 ಸೇಲ್ ಡೀಡ್ ದಿನಾಂಕ:13–08–2015 ಹಿರಿಯ ಉಪನೋಂದಣಾಧಿಕಾರಿಗಳು, ಜಯನಗರ, ಬೆಂಗಳೂರು ಇಲ್ಲಿ ಶುದ್ಧ ಕ್ರಯಪತ್ರದ ಡಾಕ್ಯುಮೆಂಟ್ ನೋಂದಣಿ ಯಾಗಿರುತ್ತದೆ.	77,42,400/–	31,00,000/–	
6	(a)ಸರ್ವೆ ನಂ. 42/ಬಿ ಪೈಕಿ, ತೌಡೂರು ಗ್ರಾಮ, ಅರಸಿಕೇರಿ ಹೋಬಳಿ, ಹರಪ್ಪನಹಳ್ಳಿ ತಾಲ್ಲೂಕು, ದಾವಣಗೆರೆ ಜಿಲ್ಲೆ 2 ಎಕರೆ ಖುಷ್ಕಿ ಜಮೀನು ಇರುತ್ತದೆ. ಕ್ರಯಪತ್ರದಲ್ಲಿನ ಚಕ್ಕುಬಂದಿ: ಪೂರ್ವಕ್ಕೆ: ಸ.ನಂ. 53 ಓಂಕಾರಿ ನಾಯ್ಕ ಹಾಗೂ ಟೋಗ್ಯಾನಾಯ್ಕ ಇವರ ಜಮೀನು ಪಶ್ಚಿಮಕ್ಕೆ: ಸ.ನಂ.42/ಎ ಲಿಂಗಾನಾಯ್ಕನ ಜಮೀನು ಉತ್ತರಕ್ಕೆ:ಸ.ನಂ. 44 ತಿಮ್ಮಪ್ಪನ ಜಮೀನು ದಕ್ಷಿಣಕ್ಕೆ: ಇದೇ ಸ.ನಂ. ಪೈಕಿ ಪಿ.ದೊಡ್ಡನಾಯ್ಕ ಇವರ ಜಮೀನು	ಪಿ.ಡಿ.ಕುಮಾರ್ ಬಿನ್ ಪಿ.ದೊಡ್ಡನಾಯಕರವರ ಹೆಸರಿನಲ್ಲಿ 2 ಎಕರೆ ಖುಷ್ಕಿ ಜಮೀನು ಇರುತ್ತದೆ.	ಪರ್ಚೇಸರ್: ಪಿ.ಡಿ.ಕುಮಾರ ಬಿನ್ ಪಿ.ದೊಡ್ಡನಾಯ್ಕ ವೆಂಡರ್: ಪಿ.ಧನಕಾನಾಯ್ಕ ಬಿನ್ ಲೇಟ್ ಕೃಷ್ಣನಾಯ್ಕ ದಸ್ತಾವೇಜು ಸಂಖ್ಯೆ: 1685/2009–10 ನೋಂದಣಿ ದಿನಾಂಕ:30–12–2009 ಉಪನೋಂದಣಾಧಿಕಾರಿಗಳು, ಹರಪನಹಳ್ಳಿ ಇಲ್ಲಿ ಕ್ರಯಪತ್ರದ ಡಾಕ್ಯುಮೆಂಟ್ ನೋಂದಣಿಯಾಗಿರುತ್ತದೆ.	3,00,000/–	1,20,000/–	

ಕ್ರ. ಸಂ	ಸ್ವತ್ತಿನ ವಿವರ	ದಾಖಲೆಗಳ ಪ್ರಕಾರ ಸ್ವತ್ತಿನ ಮಾಲೀಕ	ದಾಖಲಾತಿ ವಿವರ	ಪ್ರಸ್ತುತ ಮಾರುಕಟ್ಟೆ ದರ (ರೂ.ಗಳಲ್ಲಿ)	ಖರೀದಿ ದರ (ರೂ.ಗಳಲ್ಲಿ)	ಷರಾ
1	2	3	4	5	6	7
	(b)ಸರ್ವೆ ನಂ. 42/ಬಿ ಪೈಕಿ, ತೌಡೂರು ಗ್ರಾಮ, ಅರಸಿಕೇರಿ ಹೋಬಳಿ, ಹರಪನಹಳ್ಳಿ ತಾಲ್ಲೂಕು, ದಾವಣಗೆರೆ ಜಿಲ್ಲೆ. 1 ಎಕರೆ 87 ಸೆಂಟ್ಸ್ ಜಮೀನು ಇರುತ್ತದೆ. ದಾನಪತ್ರದಲ್ಲಿನ ಚಕ್ಕುಬಂದಿ: ಪೂರ್ವಕ್ಕೆ: ಸ.ನಂ. 53 ಓಂಕಾರನಾಯ್ಕ ಹಾಗೂ ಟೋಗ್ಯಾನಾಯ್ಕ ಇವರ ಜಮೀನು ಪಶ್ಚಿಮಕ್ಕೆ: ಸ.ನಂ.42/ಎ ಲಿಂಗಾನಾಯ್ಕನ ಜಮೀನು ಉತ್ತರಕ್ಕೆ: ಇದೇ ಸ.ನಂ. ಪೈಕಿ ಪಿ.ಧನಕ ನಾಯ್ಕನ ಜಮೀನು ದಕ್ಷಿಣಕ್ಕೆ: ಆರ್.ಡಿ.ಮುರಳೀಧರ ಇವರ ಜಮೀನು	ಪಿ.ಡಿ.ಕುಮಾರ ಬಿನ್ ಪಿ.ದೊಡ್ಡನಾಯಕರವರ ಹೆಸರಿನಲ್ಲಿ 1 ಎಕರೆ 87 ಸೆಂಟ್ಸ್ ಜಮೀನು ಇರುತ್ತದೆ.	ಬರೆಸಿಕೊಂಡವರು: ಪಿ.ಡಿ.ಕುಮಾರ ಬಿನ್ ಪಿ.ದೊಡ್ಡನಾಯ್ಕ ಬರೆದುಕೊಟ್ಟವರು: ಪಿ.ದೊಡ್ಡನಾಯ್ಕ ಬಿನ್ ಲೇಟ್ ಕೃಷ್ಣನಾಯ್ಕ ದಸ್ತಾವೇಜು ಸಂಖ್ಯೆ: 1686/2009–10 ನೋಂದಣಿ ದಿನಾಂಕ:30–12–2009 ಉಪನೋಂದಣಾಧಿಕಾರಿಗಳು, ಹರಪನಹಳ್ಳಿ ಇಲ್ಲಿ ದಾನಪತ್ರದ ಡಾಕ್ಯುಮೆಂಟ್ ನೋಂದಣಿಯಾಗಿರುತ್ತದೆ.	2,81,000/–	–	ದಾನಪತ್ರ
7	ಸರ್ವೆ ನಂ. 100, ಹುಲಿಕಟ್ಟೆ ಗ್ರಾಮ, ಆನಗೂಡು ಹೋಬಳಿ, ದಾವಣಗೆರೆ ತಾಲ್ಲೂಕು ಮತ್ತು ಜಿಲ್ಲೆ. 2 ಎಕರೆ 17 ಗುಂಟೆ, ಖುಷ್ಕಿ ಜಮೀನು ಇರುತ್ತದೆ. ಕ್ರಯಪತ್ರದಲ್ಲಿನ ಚಕ್ಕುಬಂದಿ: ಪೂರ್ವಕ್ಕೆ: ಚನ್ನಬಸಪ್ಪ ಬಿನ್ ಮುನಿಯಪ್ಪನವರ ಜಮೀನು ಪಶ್ಚಿಮಕ್ಕೆ: ಮಹೇಶ್ವರಪ್ಪ ಬಿನ್ ಗುರುಬಸಪ್ಪನವರ ಜಮೀನು ಉತ್ತರಕ್ಕೆ: ಇದೇ ಸ.ನಂ. ಪೈಕಿ ನಮ್ಮ ಬಾಬ್ತು ಉಳಿದ ಜಮೀನು ದಕ್ಷಿಣಕ್ಕೆ: ಮುರಿಗೆಪ್ಪನವರ ಜಮೀನು	ಬಿ.ವಿ.ರೇಖಾ ಕೋಂ ಪಿ.ಡಿ.ಕುಮಾರ್ ಹೆಸರಿನಲ್ಲಿ 2 ಎಕರೆ 17 ಗುಂಟೆ, ಖುಷ್ಕಿ ಜಮೀನು ಇರುತ್ತದೆ.	ಪರ್ಚೇಸರ್: ಬಿ.ವಿ.ರೇಖಾ ಕೋಂ ಪಿ.ಡಿ.ಕುಮಾರ್ ವೆಂಡರ್: ಕಮಲಮ್ಮ ಕೋಂ ಲೇಟ್ ಚಂದ್ರನಾಯ್ಕ ಮತ್ತು ಲೋಕೇಶ್ ನಾಯ್ಕ ಬಿನ್ ಲೇಟ್ ಚಂದ್ರನಾಯ್ಕ ದಸ್ತಾವೇಜು ಸಂಖ್ಯೆ: 9842/2007–08 ದಸ್ತಾವೇಜು ದಿನಾಂಕ:11–2–2008 ಹಿರಿಯ ಉಪನೋಂದಣಾಧಿಕಾರಿಗಳು, ದಾವಣಗೆರೆ ಇಲ್ಲಿ ಶುದ್ದ ಕ್ರಯಪತ್ರದ ಡಾಕ್ಯುಮೆಂಟ್ ನೋಂದಣಿ ಯಾಗಿರುತ್ತದೆ.	7,27,500/–	82,500/–	

ಕ್ರ. ಸಂ	ಸ್ವತ್ತಿನ ವಿವರ	ದಾಖಲೆಗಳ ಪ್ರಕಾರ ಸ್ವತ್ತಿನ ಮಾಲೀಕ	ದಾಖಲಾತಿ ವಿವರ	ಪ್ರಸ್ತುತ ಮಾರುಕಟ್ಟೆ ದರ (ರೂ.ಗಳಲ್ಲಿ)	ಖರೀದಿ ದರ (ರೂ.ಗಳಲ್ಲಿ)	ಷರಾ
1	2	3	4	5	6	7
8	ಸರ್ವೆ ನಂ. 251/ಬಿ, ತೌಡೂರು ಗ್ರಾಮ, ಅರಸಿಕೇರಿ ಹೋಬಳಿ, ಹರಪನಹಳ್ಳಿ ತಾಲ್ಲೂಕು, ದಾವಣಗೆರೆ ಜಿಲ್ಲೆ. 2 ಎಕರೆ 35 ಗುಂಟೆ, ಖುಷ್ಕಿ ಜಮೀನು ಇರುತ್ತದೆ. ದಸ್ತಾವೇಜಿನಲ್ಲಿನ ಚಕ್ಕಬಂದಿ: ಪೂರ್ವಕ್ಕೆ: ಲಚ್ಚಿಬಾಯಿ ಇವರ ಜಮೀನು ಪಶ್ಚಿಮಕ್ಕೆ: ದಾರಿ ಉತ್ತರಕ್ಕೆ: ಮಂಜ್ಯಾನಾಯ್ಕ ಇವರ ಜಮೀನು ದಕ್ಷಿಣಕ್ಕೆ: ಗಜಪತಿನಾಯ್ಕ ಇವರ ಜಮೀನು	ಪಿ.ಡಿ.ಕುಮಾರ್ ಬಿನ್ ಪಿ.ದೊಡ್ಡನಾಯಕ್‌ರವರ ಹೆಸರಿನಲ್ಲಿ 2 ಎಕರೆ 35 ಗುಂಟೆ, ಖುಷ್ಕಿ ಜಮೀನು ಇರುತ್ತದೆ.	ಪಿ.ಡಿ.ಕುಮಾರ್ ಬಿನ್ ಪಿ.ದೊಡ್ಡನಾಯಕ ರವರಿಗೆ ಪಾಲು ವಿಭಾಗ ಪತ್ರದ ದಸ್ತಾವೇಜು ಸಂಖ್ಯೆ: 5422/2015–16 ದಿನಾಂಕ:1–2–2016 ರಂತೆ ಬಂದಿರುತ್ತದೆ. ಉಪನೋಂದಣಾಧಿಕಾರಿಗಳು, ಹರಪ್ಪನಹಳ್ಳಿ ಇಲ್ಲಿ ದಸ್ತಾವೇಜು ನೋಂದಣಿಯಾಗಿರುತ್ತದೆ.	3,52,500/–	ವಿಭಾಗ ಪತ್ರ	
9	ಸರ್ವೆ ನಂ. 38/ಬಿ, ತೌಡೂರು ಗ್ರಾಮ, ಅರಸಿಕೇರಿ ಹೋಬಳಿ, ಹರಪನಹಳ್ಳಿ ತಾಲ್ಲೂಕು, ದಾವಣಗೆರೆ ಜಿಲ್ಲೆ. 2 ಎಕರೆ ಖುಷ್ಕಿ ಜಮೀನು ಇರುತ್ತದೆ.	ಪಿ.ಡಿ.ಕುಮಾರ ಬಿನ್ ಪಿ.ದೊಡ್ಡನಾಯಕರವರ ಹೆಸರಿನಲ್ಲಿ 2 ಎಕರೆ ಖುಷ್ಕಿ ಜಮೀನು ಇರುತ್ತದೆ.	ಪಿ.ಡಿ.ಕುಮಾರ ಬಿನ್ ಪಿ.ದೊಡ್ಡನಾಯಕ ರವರಿಗೆ ಪಾಲು ವಿಭಾಗ ಪತ್ರದ ಮೂಲಕ ಬಂದಿದ್ದು, ಎಂ.ಆರ್. 23/2006–07ರಂತೆ ಖಾತೆ ದಾಖಲಾಗಿರುತ್ತದೆ.	3,00,000/–	ವಿಭಾಗ ಪತ್ರ	
10	ಕೃಷಿ ಜಮೀನು ಕೋಲಾರ ಜಿಲ್ಲೆ, ಕೋಲಾರ ತಾಲ್ಲೂಕು, ಕಸಬಾ ಹೋಬಳಿ ಬಸವನತ್ತ ಗ್ರಾಮದ ಸರ್ವೆ ನಂ. 31ರಲ್ಲಿ 0–14.08 ಗುಂಟೆ ಜಮೀನು	ಆರ್.ಟಿ.ಸಿ. ಪ್ರಕಾರ ಎಮ್.ಆರ್. ನಂ. 15/2010–11 ದಿನಾಂಕ: 7–7–2011	ಎನ್.ಮಂಜುನಾಥ ಬಿನ್ ಲೇಟ್ ಎಸ್. ನಾರಾಯಣ ಇವರಿಗೆ ಕೋಲಾರ ತಾಲ್ಲೂಕು ಕಸಬಾ ಹೋಬಳಿ ಬಸವನತ್ತ ಗ್ರಾಮದ ಸ.ನಂ. 31ರಲ್ಲಿ 0–14.08 ಗುಂಟೆ ಜಮೀನು ಫವತಿ ವಾರಸು ಮುಖಾಂತರ ಎಂ.ಆರ್. ನಂ. 15/2010–11ರಂತೆ ಖಾತೆ ಬಂದಿರುತ್ತದೆ.	18,12,500/–	ಫವತಿ ವಾರಸು	

ಕ್ರ. ಸಂ	ಸ್ವತ್ತಿನ ವಿವರ	ದಾಖಲೆಗಳ ಪ್ರಕಾರ ಸ್ವತ್ತಿನ ಮಾಲೀಕ	ದಾಖಲಾತಿ ವಿವರ	ಪ್ರಸ್ತುತ ಮಾರುಕಟ್ಟೆ ದರ (ರೂ.ಗಳಲ್ಲಿ)	ಖರೀದಿ ದರ (ರೂ.ಗಳಲ್ಲಿ)	ಷರಾ
1	2	3	4	5	6	7
11	ಬೆಂಗಳೂರು ಗ್ರಾಂ ಜಿಲ್ಲೆ, ನೆಲಮಂಗಲ ತಾಲ್ಲೂಕು, ಕಸಬಾ ಹೋಬಳಿ, ಮಲ್ಲರಬಾಣವಾಡಿ ಗ್ರಾಮ ಮೂಲ ಸರ್ವೆ ನಂ. 28, ಹಾಲಿ ಸರ್ವೆ ನಂ. 28/1ರಲ್ಲಿ 2 ಎಕರೆ 01.08 ಜಮೀನು ಕೈಗಾರಿಕಾ ಉದ್ದೇಶಕ್ಕಾಗಿ ಭೂ ಪರಿವರ್ತನೆ ಆಗಿರುತ್ತದೆ. ಕ್ರಯಪತ್ರದಲ್ಲಿನ ಚಕ್ಕುಬಂದಿ: ಪೂರ್ವಕ್ಕೆ: ರಸ್ತೆ ಮತ್ತು ಲಾ.ಹಿ. 4, 5ರ ಜಮೀನು (ಬೆಂಗಳೂರು–ಹಾಸನ ರಸ್ತೆ, ಎನ್.ಹೆಚ್–48 ಸರ್ವಿಸ್ ರಸ್ತೆ) ಪಶ್ಚಿಮಕ್ಕೆ:ಬಾವಿಕೆರೆ ಗ್ರಾಮದ ಗಡಿ ಉತ್ತರಕ್ಕೆ:ಲಾ.ಹಿ. ನಂ. 6ರ ಜಮೀನು ದಕ್ಷಿಣಕ್ಕೆ: ಹಂಚೀಪುರದ ಗಡಿ	ಶ್ರೀಮತಿ ಎನ್.ಆರ್.ನಾಗರತ್ನ ಬಿನ್ ಲೇಟ್ ಎನ್.ವಿ. ರಾಜಪ್ಪ (ಆರೋಪಿಯ ಹೆಂಡತಿ)ರವರ ಹೆಸರಿನಲ್ಲಿ 2 ಎಕರೆ 01.08 ಜಮೀನು ಇರುತ್ತದೆ.	ಪರ್ಚೇಸರ್: ಎನ್.ಆರ್.ನಾಗರತ್ನ ಬಿನ್ ಲೇಟ್ ಎನ್.ವಿ.ರಾಜಪ್ಪ ವೆಂಡರ್: ಎಂ.ಸುಧಾಕರ್ ಬಿನ್ ಡಿ.ಮಣಿ ಮತ್ತು ಎಸ್.ಶಾಲು @ ಎಸ್.ರಾಜೇಶ್ವರಿ ಕೋಂ ಎಂ.ಸುಧಾಕರ್ ಮತ್ತು ಮೈನರ್ ಮಕ್ಕಳಾದ ಎಸ್.ಹರಿಣಿ, ಎಸ್.ಮನೀಷಾ ಪರವಾಗಿ ಗಾರ್ಡಿಯನ್ ತಂದೆ ಎಂ.ಸುಧಾಕರ್ ದಸ್ತಾವೇಜು ಸಂಖ್ಯೆ: 7712/2016–17 ಸೇಲ್ ಡೀಡ್ ದಿನಾಂಕ:5–11–2016 ಉಪನೋಂದಣಾಧಿಕಾರಿಗಳು, ನೆಲಮಂಗಲ ಇಲ್ಲಿ ಶುದ್ಧ ಕ್ರಯಪತ್ರದ ಡಾಕ್ಯುಮೆಂಟ್ ನೋಂದಣಿಯಾಗಿರುತ್ತದೆ.	4,10,55,625/–	1,50,00,000/–	
12	ಬೆಂಗಳೂರು ಗ್ರಾಂ ಜಿಲ್ಲೆ, ನೆಲಮಂಗಲ ತಾಲ್ಲೂಕು, ಕಸಬಾ ಹೋಬಳಿ, ಮಲ್ಲರಬಾಣವಾಡಿ ಗ್ರಾಮ ಸರ್ವೆ ನಂ. 28/2ರಲ್ಲಿ 2–07.1/2 ಎ.ಗುಂ. ಜಮೀನು ಕೈಗಾರಿಕಾ ಉದ್ದೇಶಕ್ಕಾಗಿ ಭೂ ಪರಿವರ್ತನೆ ಆಗಿರುತ್ತದೆ. ಕ್ರಯಪತ್ರದಲ್ಲಿನ ಚಕ್ಕುಬಂದಿ: ಪೂರ್ವಕ್ಕೆ: ಲಾ.ಸ.ನಂ 29ರ ಜಮೀನು ಪಶ್ಚಿಮಕ್ಕೆ: ಲಾ.ಹಿ. ನಂ. 1ರ ಜಮೀನು ಉತ್ತರಕ್ಕೆ: ಬಾವಿಕೆರೆ ಗಡಿ, ದಕ್ಷಿಣಕ್ಕೆ:ರಸ್ತೆ	ಶ್ರೀಮತಿ ಎನ್.ಆರ್.ನಾಗರತ್ನ ಕೋಂ ಎಲ್.ಸಿ. ನಾಗರಾಜ್ (ಆರೋಪಿಯ ಹೆಂಡತಿ) ರವರ ಹೆಸರಿನಲ್ಲಿ 2–07.1/2 ಎ.ಗುಂ. ಜಮೀನು ಇರುತ್ತದೆ.	ಪರ್ಚೇಸರ್: ಎನ್.ಆರ್.ನಾಗರತ್ನ ಬಿನ್ ಎಲ್.ಸಿ.ನಾಗರಾಜ ವೆಂಡರ್: ಮಂಜುನಾಥ್ ಬಿ.ಎನ್. ಬಿನ್ ನರಸಿಂಹಯ್ಯ ದಸ್ತಾವೇಜು ಸಂಖ್ಯೆ: 6440/2018–19 ಸೇಲ್ ಡೀಡ್ ದಿನಾಂಕ:17–9–2018 ಉಪನೋಂದಣಾಧಿಕಾರಿಗಳು, ನೆಲಮಂಗಲ ಇಲ್ಲಿ ಶುದ್ಧ ಕ್ರಯಪತ್ರದ ಡಾಕ್ಯುಮೆಂಟ್ ನೋಂದಣಿಯಾಗಿರುತ್ತದೆ.	4,40,78,125/–	1,60,00,000/–	

ಕ್ರ. ಸಂ	ಸ್ವತ್ತಿನ ವಿವರ	ದಾಖಲೆಗಳ ಪ್ರಕಾರ ಸ್ವತ್ತಿನ ಮಾಲೀಕ	ದಾಖಲಾತಿ ವಿವರ	ಪ್ರಸ್ತುತ ಮಾರುಕಟ್ಟೆ ದರ (ರೂ.ಗಳಲ್ಲಿ)	ಖರೀದಿ ದರ (ರೂ.ಗಳಲ್ಲಿ)	ಷರಾ
1	2	3	4	5	6	7
13	ಬೆಂಗಳೂರು ಗ್ರಾಂ ಜಿಲ್ಲೆ, ನೆಲಮಂಗಲ ತಾಲ್ಲೂಕು, ಕಸಬಾ ಹೋಬಳಿ, ಮಲ್ಲರಬಾಣವಾಡಿ ಗ್ರಾಮ ಮೂಲ ಸರ್ವೆ ನಂ. 28, ಹಳೆ ಸರ್ವೆ ನಂ. 28/1, ಈಗ ಹಾಲಿ ಸರ್ವೆ ನಂ. 28/6 ರಲ್ಲಿ 2–07.12 ಎ.ಗುಂ. ಜಮೀನು ಮತ್ತು 0–05 ಗುಂಟೆ ಖರಾಜು ಜಮೀನು ಇರುತ್ತದೆ ಕ್ರಯಪತ್ರದಲ್ಲಿನ ಚಕ್ಕುಬಂದಿ: ಪೂರ್ವಕ್ಕೆ: ಬೆಂಗಳೂರು–ಹಾಸನ ರಸ್ತೆ (ಹಳೇ ಎನ್.ಎಚ್. 48 ಸರ್ವಿಸ್ ರಸ್ತೆ) ಪಶ್ಚಿಮಕ್ಕೆ: ಬಾವಿಕೆರೆ ಗಡಿ ಉತ್ತರಕ್ಕೆ: ಸರ್ವೆ ನಂ. 28/2ರ ಸ್ವತ್ತು ದಕ್ಷಿಣಕ್ಕೆ: ಸರ್ವೆ ನಂ. 28/1ರ ಸ್ವತ್ತು	ಶ್ರೀಮತಿ ಎನ್.ಆರ್.ನಾಗರತ್ನ ಬಿನ್ ಲೇಟ್ ಎನ್.ವಿ. ರಾಜಪ್ಪ (ಆರೋಪಿಯ ಹೆಂಡತಿ) ರವರ ಹೆಸರಿನಲ್ಲಿ 2–07.12 ಎ.ಗುಂ. ಜಮೀನು ಮತ್ತು 0–05 ಗುಂಟೆ ಖರಾಜು ಜಮೀನು ಇರುತ್ತದೆ	ಪರ್ಚೇಸರ್: ಎನ್.ಆರ್.ನಾಗರತ್ನ ಬಿನ್ ಲೇಟ್ ಎನ್.ವಿ.ರಾಜಪ್ಪ ವೆಂಡರ್: ಎಂ.ಬಾಬು ಬಿನ್ ಡಿ.ಮಣಿ ಮತ್ತು ಡಿ.ಧನಲಕ್ಷ್ಮೀ ಕೋಂ ಎಂ.ಬಾಬು ಮತ್ತು ಮೈನರ್ ಮಕ್ಕಳಾದ ಬಿ.ಲಿಷಾ ಮತ್ತು ಬಿ.ಐಶ್ವರ್ಯ ಪರವಾಗಿ ಮೈನರ್ ಗಾರ್ಡಿಯನ್ ತಂದೆ ಎಂ.ಬಾಬು ದಸ್ತಾವೇಜು ಸಂಖ್ಯೆ: 4598/2016–17 ಸೇಲ್ ಡೀಡ್ ದಿನಾಂಕ: 19–8–2016 ಉಪನೋಂದಣಾಧಿಕಾರಿಗಳು, ನೆಲಮಂಗಲ ಇಲ್ಲಿ ಶುದ್ಧ ಕ್ರಯಪತ್ರದ ಡಾಕ್ಯುಮೆಂಟ್ ನೋಂದಣಿಯಾಗಿರುತ್ತದೆ.	4,42,04,065/–	2,23,76,500/–	
14	ಒಂದು ಡೂಪ್ಲೆಕ್ಸ್ ಮನೆ ನಂ. 257/ಸಿ (ಬಿ.ಡಿ.ಎ. ನಿರ್ಮಿತ) 1ನೇ ಸ್ಟೇಜ್, 2ನೇ ಬ್ಲಾಕ್, ಹೆಣ್ಣೂರು–ಬಳ್ಳಾರಿ ರೋಡ್ ಲೇಔಟ್, ಎಚ್.ಬಿ.ಆರ್. ಲೇಔಟ್, ಬೆಂಗಳೂರು ಬಿ.ಬಿ.ಎಂ.ಪಿ. ಖಾತಾ ನಂ. 765/257/ಸಿ, ವಾರ್ಡ್ ನಂ. 24, ಇದರ ಅಳತೆ ಪೂರ್ವ ಪಶ್ಚಿಮ: 9.00 ಮೀಟರ್, ಉತ್ತರ–ದಕ್ಷಿಣ: (13.25+12.70)/2 ಮೀಟರ್ ಒಟ್ಟು ವಿಸ್ತೀರ್ಣ 116.77 ಚ.ಮೀ (1257 ಚ.ಅಡಿ) ಇರುತ್ತದೆ. ಕ್ರಯಪತ್ರದಲ್ಲಿನ ಚಕ್ಕುಬಂದಿ: ಪೂರ್ವಕ್ಕೆ: ಸೈಟ್ ನಂ. 257/ಡಿ ಪಶ್ಚಿಮಕ್ಕೆ: ಸೈಟ್ ನಂ. 257/ಬಿ ಉತ್ತರಕ್ಕೆ: ರಸ್ತೆ ದಕ್ಷಿಣಕ್ಕೆ: ಸೈಟ್ ನಂ. 255	ಮೊಹಮ್ಮದ್ ಹನೀಫ್ ಅಪ್ಸರ್ ಹಜೀಜೀರವರ ಹೆಸರಿನಲ್ಲಿದ್ದು, ಇದರ ಅಳತೆ ಪೂರ್ವ ಪಶ್ಚಿಮ: 9.00 ಮೀಟರ್, ಉತ್ತರ–ದಕ್ಷಿಣ: (13.25+12.70)/2 ಮೀಟರ್ ಒಟ್ಟು ವಿಸ್ತೀರ್ಣ 116.77 ಚ.ಮೀ (1257 ಚ.ಅಡಿ) ಇರುತ್ತದೆ.	ಪರ್ಚೇಸರ್: ಮೊಹಮ್ಮದ್ ಹನೀಫ್ ಅಪ್ಸರ್ ಹಜೀಜೀ ಬಿನ್ ಮೊಹಮ್ಮದ್ ಮೂಸಾ ವೆಂಡರ್: ಮೊಹಮ್ಮದ್ ಅರ್ಬಾಜ್ ಮರ್ಚೆಂಟ್ ಬಿನ್ ಮೊಹಮ್ಮದ್ ಜಾವಿದ್ ಮರ್ಚೆಂಟ್ ದಸ್ತಾವೇಜು ಸಂಖ್ಯೆ: 4164/2017–18 ಸೇಲ್ ಡೀಡ್ ದಿನಾಂಕ: 12–12–2017 ಹಿರಿಯ ಉಪನೋಂದಣಾಧಿಕಾರಿಗಳು, ಹಲಸೂರು, ಬೆಂಗಳೂರು ಇಲ್ಲಿ ಶುದ್ಧ ಕ್ರಯಪತ್ರದ ಡಾಕ್ಯುಮೆಂಟ್ ನೋಂದಣಿ ಯಾಗಿರುತ್ತದೆ.	1,18,19,835/–	1,05,00,000/–	

ಕ್ರ. ಸಂ	ಸ್ವತ್ತಿನ ವಿವರ	ದಾಖಲೆಗಳ ಪ್ರಕಾರ ಸ್ವತ್ತಿನ ಮಾಲೀಕ	ದಾಖಲಾತಿ ವಿವರ	ಪ್ರಸ್ತುತ ಮಾರುಕಟ್ಟೆ ದರ (ರೂ.ಗಳಲ್ಲಿ)	ಖರೀದಿ ದರ (ರೂ.ಗಳಲ್ಲಿ)	ಷರಾ
1	2	3	4	5	6	7
15	ಬೆಂಗಳೂರು ಪೂರ್ವ ತಾಲ್ಲೂಕು, ಕೆ.ಆರ್.ಪುರ ಹೋಬಳಿ, ದಾಸರಹಳ್ಳಿ ಗ್ರಾಮ ಪಂಚಾಯಿತಿ ರಾಚೇನಹಳ್ಳಿ ಗ್ರಾಮದ ಸರ್ವೆ ನಂ. 113/1ರಲ್ಲಿ ರಚಿತವಾಗಿರುವ ಸೈಟ್ ನಂ. 97/9, ಬಿ.ಬಿ.ಎಂ.ಪಿ. ಹೊಸ ಖಾತೆ ನಂ. 529, ಹಳೆ ಖಾತಾ ನಂ. 1817ರಲ್ಲಿ ವಿಸ್ತೀರ್ಣ ಪೂರ್ವ–ಪಶ್ಚಿಮ: 40 ಅಡಿ ಮತ್ತು ಉತ್ತರ–ದಕ್ಷಿಣ: 30 ಅಡಿ ಒಟ್ಟು 1200 ಚದರ ಅಡಿ ಅಳತೆಯ ಸೈಟ್ ಇರುತ್ತದೆ. ದಸ್ತಾವೇಜಿನಲ್ಲಿರುವ ಚಕ್ಕುಬಂದಿ: ಪೂರ್ವಕ್ಕೆ: ರಸ್ತೆ ಪಶ್ಚಿಮಕ್ಕೆ: ಎಂಸಿಇಸಿಹೆಚ್‌ಎಸ್ ಲೇಔಟ್‌ನ ಸೈಟ್ ನಂ. 99, ಉತ್ತರಕ್ಕೆ: ಸೈಟ್ ನಂ. 97/10 ದಕ್ಷಿಣಕ್ಕೆ: ಸೈಟ್ ನಂ. 97/8	ಅಬ್ಬಾಸ್ ಮಹಮ್ಮದ್ ಖಾನ್ ಈತನ ಹೆಸರಿನಲ್ಲಿ ವಿಸ್ತೀರ್ಣ ಪೂರ್ವ–ಪಶ್ಚಿಮ: 40 ಅಡಿ ಮತ್ತು ಉತ್ತರ–ದಕ್ಷಿಣ: 30 ಅಡಿ ಒಟ್ಟು 1200 ಚದರ ಅಡಿ ಅಳತೆಯ ಸೈಟ್ ಇರುತ್ತದೆ. (ದಾನಪತ್ರ)	ಬರೆಸಿಕೊಂಡವರು: ಅಬ್ಬಾಸ್ ಮೊಹಮ್ಮದ್ ಖಾನ್ ಬಿನ್ ಲೇಟ್ ಇಲಿಯಾಸ್ ಮೊಹಮ್ಮದ್ ಖಾನ್ ಬರೆದುಕೊಟ್ಟವರು: ಫಕ್ರುನ್ನೀಸಾ ಖಾತೂನ್ ಕೋಂ ಲೇಟ್ ಇಲಿಯಾಸ್ ಮೊಹಮ್ಮದ್ ಖಾನ್ ದಸ್ತಾವೇಜು ಸಂಖ್ಯೆ: 3034/2013–14 ಡೀಡ್ ದಿನಾಂಕ: 13–08–2013 ಉಪನೋಂದಣಾಧಿಕಾರಿಗಳು, ಹಲಸೂರು, ಬೆಂಗಳೂರು ಇಲ್ಲಿ ದಾನಪತ್ರ ಡಾಕ್ಯುಮೆಂಟ್ ನೋಂದಣಿ ಯಾಗಿರುತ್ತದೆ.	58,52,842/–	ದಾನಪತ್ರ	
16	ಬೆಂಗಳೂರು ಪೂರ್ವ ತಾಲ್ಲೂಕು, ಕೆ.ಆರ್.ಪುರ ಹೋಬಳಿ, ತಣಿಸಂದ್ರ ಗ್ರಾಮದಲ್ಲಿರುವ ಸೈಟ್ ನಂ. 206, ಹೌಸ್‌ಲಿಸ್ಟ್ ಖಾತಾ ನಂ. 706ರಲ್ಲಿ ವಿಸ್ತೀರ್ಣ ಪೂರ್ವ–ಪಶ್ಚಿಮ: 30 ಅಡಿ ಮತ್ತು ಉತ್ತರ–ದಕ್ಷಿಣ: 40 ಅಡಿ ಒಟ್ಟು 1200 ಚದರ ಅಡಿ ಅಳತೆಯ ಸೈಟ್ ಇರುತ್ತದೆ. ದಸ್ತಾವೇಜಿನಂತೆ ಚಕ್ಕುಬಂದಿ: ಪೂರ್ವಕ್ಕೆ: ಸೈಟ್ ನಂ. 207 ಪಶ್ಚಿಮಕ್ಕೆ: ಸೈಟ್ ನಂ. 203 ಉತ್ತರಕ್ಕೆ: ರಸ್ತೆ ದಕ್ಷಿಣಕ್ಕೆ: ಸೈಟ್ ನಂ. 205	ಶಾಜೀಯಾ ಫಾತೀಮಾ ಕೋಂ ಅಬ್ಬಾಸ್ ಮಹಮ್ಮದ್ ಖಾನ್ ಇವರ ಹೆಸರಿನಲ್ಲಿ ಪೂರ್ವ–ಪಶ್ಚಿಮ: 30 ಅಡಿ ಮತ್ತು ಉತ್ತರ–ದಕ್ಷಿಣ: 40 ಅಡಿ ಒಟ್ಟು 1200 ಚದರ ಅಡಿ ಅಳತೆಯ ಸೈಟ್ ಇರುತ್ತದೆ.	ಪರ್ಚೇಸರ್: ಶಾಜೀಯಾ ಫಾತಿಮಾ ಕೋಂ ಅಬ್ಬಾಸ್ ಮೊಹಮ್ಮದ್ ಖಾನ್ ವೆಂಡರ್: ರಾಹುಲ್ ಪರ್ಣಮಿ ಬಿನ್ ಐ.ಕೆ.ಪರ್ಣಮಿ ಮತ್ತು ಕೀರ್ತಿ ಪರ್ಣಮಿ ಕೋಂ ರಾಹುಲ್ ಪರ್ಣಮಿ ದಸ್ತಾವೇಜು ಸಂಖ್ಯೆ: 3505/2009–10 ಡೀಡ್ ದಿನಾಂಕ: 30–11–2009. ಉಪನೋಂದಣಾಧಿಕಾರಿಗಳು, ಬಾಣಸವಾಡಿ ಬೆಂಗಳೂರು ಇಲ್ಲಿ ಕನ್ವೆಯನ್ಸ್ ಡೀಡ್ ಡಾಕ್ಯುಮೆಂಟ್ ನೋಂದಣಿ ಯಾಗಿರುತ್ತದೆ.	58,52,843/–	4,80,000/–	

ಕ್ರ. ಸಂ	ಸ್ವತ್ತಿನ ವಿವರ	ದಾಖಲೆಗಳ ಪ್ರಕಾರ ಸ್ವತ್ತಿನ ಮಾಲೀಕ	ದಾಖಲಾತಿ ವಿವರ	ಪ್ರಸ್ತುತ ಮಾರುಕಟ್ಟೆ ದರ (ರೂ.ಗಳಲ್ಲಿ)	ಖರೀದಿ ದರ (ರೂ.ಗಳಲ್ಲಿ)	ಷರಾ
1	2	3	4	5	6	7
17	ಬೆಂಗಳೂರು ಪೂರ್ವ ತಾಲ್ಲೂಕು, ಕೆ.ಆರ್.ಪುರಂ ಹೋಬಳಿ, ತಣಿಸಂದ್ರ ಗ್ರಾಮದ ಭೂಪರಿವರ್ತಿತ ಸ.ನಂ. 84/5 ಮತ್ತು 100/4ರಲ್ಲಿ ರಚಿತವಾಗಿರುವ ಸೈಟ್ ನಂ. 3 ಮತ್ತು 4, ಹಳೆ ಖಾತಾ ನಂ. 257/ಎ ಹೊಸ ಖಾತಾ ನಂ. 3478 ಹಾಲಿ ಖಾತಾ ನಂ. 6014ರಲ್ಲಿ ವಿಸ್ತೀರ್ಣ ಪೂರ್ವ–ಪಶ್ಚಿಮ: 60 ಅಡಿ ಮತ್ತು ಉತ್ತರ–ದಕ್ಷಿಣ: 40 ಅಡಿ ಒಟ್ಟು 2400 ಚದರ ಅಡಿಗಳ ಸೈಟ್ ಇರುತ್ತದೆ. ಕ್ರಯಪತ್ರದಲ್ಲಿನ ಚಕ್ಕುಬಂದಿ: ಪೂರ್ವಕ್ಕೆ: ಸೈಟ್ ನಂ. 5 ಪಶ್ಚಿಮಕ್ಕೆ: ಸೈಟ್ ನಂ. 2 ಉತ್ತರಕ್ಕೆ: 30 ಅಡಿ ರಸ್ತೆ ದಕ್ಷಿಣಕ್ಕೆ: ಕೆಂಪಣ್ಣನವರ ಸ್ವತ್ತು	ಅಬ್ಬಾಸ್ ಮಹಮ್ಮದ್ ಖಾನ್ ಈತನ ಹೆಸರಿನಲ್ಲಿ ವಿಸ್ತೀರ್ಣ ಪೂರ್ವ–ಪಶ್ಚಿಮ: 60 ಅಡಿ ಮತ್ತು ಉತ್ತರ–ದಕ್ಷಿಣ: 40 ಅಡಿ ಒಟ್ಟು 2400 ಚದರ ಅಡಿಗಳ ಸೈಟ್ ಇರುತ್ತದೆ.	ಪರ್ಚೇಸರ್: ಅಬ್ಬಾಸ್ ಮೊಹಮ್ಮದ್ ಖಾನ್ ಬಿನ್ ಲೇಟ್ ಇಲಿಯಾಸ್ ಮೊಹಮ್ಮದ್ ಖಾನ್ ವೆಂಡರ್: ಆರ್.ಚೇತನ್ ಬಿನ್ ಎಂ.ರಾಜಗೋಪಾಲ್ ದಸ್ತಾವೇಜು ಸಂಖ್ಯೆ: 13642/2013–14 ಡೀಡ್ ದಿನಾಂಕ: 09–01–2014. ಉಪನೋಂದಣಾಧಿಕಾರಿಗಳು, ಶಿವಾಜಿನಗರ (ಬಾಣಸವಾಡಿ) ಬೆಂಗಳೂರು ಇಲ್ಲಿ ಶುದ್ದ ಕ್ರಯಪತ್ರದ ಡಾಕ್ಯುಮೆಂಟ್ ನೋಂದಣಿ ಯಾಗಿರುತ್ತದೆ.	1,17,04,800/–	31,20,000/–	
			ಒಟ್ಟು	**21,73,68,205**	**7,74,71,000**	

ಸಂಖ್ಯೆ: ಕಂಇ 20 ಜಿಆರ್‌ಸಿ 2017(ಪಿ2)

(ಕೆ. ಆರ್. ರವಿಕುಮಾರ್)
ಸರ್ಕಾರದ ಅಧೀನ ಕಾರ್ಯದರ್ಶಿ
ಕಂದಾಯ ಇಲಾಖೆ (ವಿಶೇಷ ಕೋಶ)

ಅನುಬಂಧ–2

ಜಪ್ತು ಮಾಡಿರುವ ನಗದು ವಿವರಗಳು

ಕ್ರ. ಸಂ.	ಪಿ.ಎಫ್ ಸಂಖ್ಯೆ ಮತ್ತು ದಿನಾಂಕ	ನಗದು ರೂ.ಗಳಲ್ಲಿ
1	05/2019 17–06–2019	2,69,000/–
2	14/2019 24–06–2019	31,300/–
3	24/2019 28–06–2019	41,560/–
4	32/2019 02–07–2019	4,390/–
5	33/2019 02–07–2019	4,35,440/–
6	36/2019 02–07–2019	2,22,430/–
7	37/2019 02–07–2019	59,450/–
8	40/2019 03–07–2019	60,780/–
9	43/2019 04–07–2019	54,200/–
10	45/2019 04–07–2019	40,260/–
11	46/2019 05–07–2019	1,00,985/–
12	48/2019 05–07–2019	1,53,650/–
13	49/2019 05–07–2019	47,180/–
14	52/2019 06–07–2019	39,200/–
15	53/2019 06–07–2019	44,880/–
16	58/2019 09–07–2019	18,61,600/–
17	62/2019 12–07–2019	2,50,00,000/–
18	69/2019 20–07–2019	53,030/–
	ಒಟ್ಟು	2,85,19,335/–

ಸಂಖ್ಯೆ: ಕಂಇ 20 ಜಿಆರ್‌ಸಿ 2017(ಪಿ2)

(ಕೆ. ಆರ್. ರವಿಕುಮಾರ್)
ಸರ್ಕಾರದ ಅಧೀನ ಕಾರ್ಯದರ್ಶಿ
ಕಂದಾಯ ಇಲಾಖೆ (ವಿಶೇಷ ಕೋಶ)

ಅನುಬಂಧ–3

ಜಪ್ತು ಮಾಡಿರುವ ಡಿ.ಡಿ ವಿವರಗಳು

ಕ್ರ. ಸಂ.	ಪಿ.ಎಫ್ ಸಂಖ್ಯೆ ಮತ್ತು ದಿನಾಂಕ	ಡಿಡಿ
1	59/2019 10–07–2019	ಫೆಡರಲ್ ಬ್ಯಾಂಕ್ ಡಿಡಿ ನಂ.133664, ರೂ. 20,51,000/–
2	61/2019 11–07–2019	ಯುಟಿಐ ಬ್ಯಾಂಕ್ ಡಿಡಿ ನಂ.881930, ರೂ. 1,50,00,000/–
3	70/2019 20–07–2019	ಆಕ್ಸಿಸ್ ಬ್ಯಾಂಕ್ ಡಿಡಿ ನಂ.63339 ರೂ.4,62,70,000/–
4	82/2019 29–07–2019	ಡಿಡಿ ನಂ.436663 ರೂ.35,00,000/–
5	94/2019 06–08–2019	ಕರ್ನಾಟಕ ಸ್ಟೇಟ್ ಕೋ ಆಪ್ ಅಪೆಕ್ಸ್ ಬ್ಯಾಂಕ್ ಲಿಮಿಟೆಡ್ ಡಿಡಿ ನಂ.614259 ರೂ.2,00,000/–
6	94/2019 06–08–2019	ಕಾರ್ಪೊರೇಷನ್ ಬ್ಯಾಂಕ್ ಡಿಡಿ ನಂ.886080, ರೂ.1,00,000/–
7	118/2019 26–08–2019	ಯುನೈಟೆಡ್ ಬ್ಯಾಂಕ್ ಆಫ್ ಇಂಡಿಯಾ ಡಿಡಿ ನಂಬರ್ 564806, ರೂ.2,00,00,000/–
8	118/2019 26–08–2019	ಐಸಿಐಸಿಐ ಬ್ಯಾಂಕ್ ಡಿಡಿ ನಂ.516972, ರೂ.10,00,000/–
9	122/2019 28–08–2019	ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಡಿಡಿ ನಂ.395680, ರೂ.5,31,000/–
	ಒಟ್ಟು	**ರೂ. 8,86,52,000/–**

ಸಂಖ್ಯೆ: ಕಂಇ 20 ಜಿಆರ್‌ಸಿ 2017(ಪಿ2)

(ಕೆ. ಆರ್. ರವಿಕುಮಾರ್)
ಸರ್ಕಾರದ ಅಧೀನ ಕಾರ್ಯದರ್ಶಿ
ಕಂದಾಯ ಇಲಾಖೆ (ವಿಶೇಷ ಕೋಶ)

ಅನುಬಂಧ–4

ಜಪ್ತು ಮಾಡಿರುವ ವಾಹನಗಳ ವಿವರಗಳು

ಕ್ರ. ಸಂ.	ವಾಹನದ ನೊಂದಣಿ ಸಂಖ್ಯೆ	ಪಿ.ಎಫ್. ನಂಬರ್	ವಾಹನದ ವಿವರ	ಅಂದಾಜು ಮೌಲ್ಯ ರೂ.ಗಳಲ್ಲಿ
1	ಕೆಎ–03–ಎಇ–2148	23/2019	ಟಾಟಾ ಏಸ್	4,00,000/–
2	ಕೆಎ–05–ಎಂಡಬ್ಲ್ಯೂ–7422	26/2019	ಟಯೋಟಾ ಇನ್ನೋವಾ ಕ್ರಿಸ್ಟಾ	20,00,000/–
3	ಕೆಎ–03–ಎಇ–6697	28/2019	ಟಾಟಾ ಏಸ್	4,00,000/–
4	ಕೆಎ–05–ಎಮ್–0850	29/2019	ಟಯೋಟಾ ಫಾರ್ಚೂನರ್	25,00,000/–
5	ಕೆಎ–51–ಎಂಹೆಚ್–0667	60/2019	ಹೋಂಡಾ ಜಾಜ್	6,00,000/–
ಒಟ್ಟು ಮೌಲ್ಯ				59,00,000/–

ಸಂಖ್ಯೆ: ಕಂಇ 20 ಜಿಆರ್‌ಸಿ 2017(ಪಿ2)

(ಕೆ. ಆರ್. ರವಿಕುಮಾರ್)
ಸರ್ಕಾರದ ಅಧೀನ ಕಾರ್ಯದರ್ಶಿ
ಕಂದಾಯ ಇಲಾಖೆ (ವಿಶೇಷ ಕೋಶ)

ಅನುಬಂಧ–5

ಜಪ್ತು ಮಾಡಿರುವ ಬ್ಯಾಂಕ್ ಖಾತೆಗಳ ವಿವರಗಳು

Sl. No.	Bank Name	Account Holder Name	Account Number	Branch	Balance
1	Bandhan Bank	I Monetary Advisory Pvt Ltd	10190001551919	Malleshwaram	Rs. 38,200.00
2	Yes Bank	I Monetary Advisory Pvt Ltd	002263700000618	Kasturba Road	Rs. 0.00
3	Yes Bank	IMA Jewels	002263700000761	Kasturba Road	Rs. 0.00
4	Citi Bank	Mohammed Mansoor Khan	5840412808	M.G.Road	Rs. 0.00
5	ICICI Bank	I Monetary Advisory Pvt Ltd	625205020033	Cantonment	Rs. 0.00
6	ICICI Bank	Adapt Fitness	625205020524	Cantonment	Rs. 32,781.65
7	Kotak Mahindra Bank	I Monetary Advisory Pvt Ltd	4311696839	Lavelle Road	Rs. 0.00
8	Kotak Mahindra Bank	IMA Jewels	08045174517	Lavelle Road	Rs. 0.00
9	Kotak Mahindra Bank	IMA Bullion Trading Services Limited	4811450023	Infantry Road	Rs. 0.00
10	Kotak Mahindra Bank	I Monetary Advisory Council	211450496	Infantry Road	Rs. 0.00
11	Kotak Mahindra Bank	I Monetary Advisory Pvt Ltd	0612475470	Infantry Road	Rs. 0.00
12	Kotak Mahindra Bank	IMA Publishers Pvt Ltd	0812339879	Infantry Road	Rs. 0.00
13	Kotak Mahindra Bank	IMAW Jewellery LLP	0812330968	Infantry Road	Rs. 0.00
14	HDFC Bank	I Monetary Advisory Pvt Ltd	17482320000216	Wilson Garden	Rs. 3,95,469.36
15	HDFC Bank	IMA Publishers Pvt Ltd	50200021607704	Wilson Garden	Rs. 1.66
16	HDFC Bank	IMA Finance	50200023708855	Wilson Garden	Rs. 0.00
17	Axis Bank	I Monetary Advisory Pvt Ltd	917020041048152	Cunningham Road	Rs. 0.00
18	Axis Bank	IMA Jewels	917020037787306	Cunningham Road	Rs. 47,500.00
19	Axis Bank	I Monetary Advisory Pvt Ltd	918020099987330	Cunningham Road	Rs. 0.00
20	Axis Bank	IMAW Jewellery LLP	917020072590950	Cunningham Road	Rs. 0.00
21	Axis Bank	IMA IP Bullion and Trading LLP	917020072591034	Cunningham Road	Rs. 0.00
22	Axis Bank	IMA Women Empowerment Business Module LLP	917020073360510	Cunningham Road	Rs. 0.00

23	Axis Bank	MMK Institute of Education LLP	917020072372529	Cunningham Road	Rs. 0.00
24	Axis Bank	IMA Credit Co-operative Society Ltd	917020083829379	Cunningham Road	Rs. 0.00
25	Axis Bank	IMA Publishers Pvt Ltd	917020082424982	Cunningham Road	Rs. 0.00
26	Axis Bank	IMAFL Health Care Services Pvt Ltd	918020027151439	Cunningham Road	Rs. 200.17
27	Axis Bank	IMA Jewels	918020028826457	Cunningham Road	Rs. 0.00
28	Axis Bank	IMA Infrastructure Developers	918020004970741	Cunningham Road	Rs. 0.00
29	Axis Bank	Mulberry Greens Unit	918020110687917	Cunningham Road	Rs. 34,995.17
30	Axis Bank	Nasir Hussain	917010039172196	Cunningham Road	Rs. 1,697.00
31	Axis Bank	Nizamuddin.A	917010039172057	Cunningham Road	Rs. 14,827.57
32	Axis Bank	ADAPT Fitness	918020086127314	Cunningham Road	Rs. 0.00
33	Axis Bank	IMA Credit Co-operative Society Ltd	917020052292003	Kalyan Nagar	Rs. 0.00
34	RBL Bank	ADAPT Fitness	409886226613	Koramangala	Rs. 44,281.14
35	RBL Bank	I Monetary Advisory Pvt Ltd	409000930067	Koramangala	Rs. 0.00
36	RBL Bank	IMA Gold Finances	409000933587	Koramangala	Rs. 0.00
37	RBL Bank	IMA Credit Co-operative Society Ltd	409000934443	Koramangala	Rs. 0.00
38	RBL Bank	IMAFL Health Care Services Pvt Ltd	409000999909	Koramangala	Rs. 0.00
39	RBL Bank	IMA Jewels	409001000581	Koramangala	Rs. 0.00
40	RBL Bank	IMA Jewels	409000626340	Koramangala	Rs. 0.00
41	RBL Bank	I Monetary Advisory Pvt Ltd	409000625466	Koramangala	Rs. 0.00
42	RBL Bank	Nasir Hussain	309886788333	Koramangala	Rs. 725.00
43	South Indian Bank	IMA Credit Co-operative Society Ltd	0715073000000043	Brigade Road	Rs. 0.00
				Total Balance	Rs. 6,10,678.72

ಸಂಖ್ಯೆ: ಕಂಇ 20 ಜಿಆರ್‌ಸಿ 2017(ಪಿ2)

(ಕೆ. ಆರ್. ರವಿಕುಮಾರ್)
ಸರ್ಕಾರದ ಅಧೀನ ಕಾರ್ಯದರ್ಶಿ
ಕಂದಾಯ ಇಲಾಖೆ (ವಿಶೇಷ ಕೋಶ)

ಅನುಬಂಧ–6
ಜಪ್ತು ಮಾಡಿರುವ ನಗದು ಹಣದ ವಿವರಗಳು

ಕ್ರ.ಸಂ.	ಪಿ.ಎಫ್ ಸಂಖ್ಯೆ ಮತ್ತು ದಿನಾಂಕ	ನಗದು
1	68(A)/2019 – 19–07–2019	ರೂ. 58,350/–

ಸಂಖ್ಯೆ: ಕಂಇ 20 ಜಿಆರ್‌ಸಿ 2017(ಪಿ2)

(ಕೆ. ಆರ್. ರವಿಕುಮಾರ್)
ಸರ್ಕಾರದ ಅಧೀನ ಕಾರ್ಯದರ್ಶಿ
ಕಂದಾಯ ಇಲಾಖೆ (ವಿಶೇಷ ಕೋಶ)

ಅನುಬಂಧ–7
ಜಪ್ತು ಮಾಡಿರುವ ನಕಲಿ ಚಿನ್ನದ ಬಿಸ್ಕೆಟ್‌ಗಳ ವಿವರಗಳು

ಕ್ರ.ಸಂ.	ಪಿ.ಎಫ್ ಸಂಖ್ಯೆ ಮತ್ತು ದಿನಾಂಕ	ವಿವರ
1	96/2019–07–08–2019	5880 ನಕಲಿ ಚಿನ್ನದ ಬಿಸ್ಕೆಟ್‌ಗಳು, ಇವುಗಳ ಒಟ್ಟು ತೂಕ 303.07 ಕೆ.ಜಿ. ಆಗಿರುತ್ತೆ. ಇವುಗಳ ಮೇಲೆ MMTC.PAMP, 100g GOLD 999.0 ಎಂದು ನಮೂದಿಸಿರುತ್ತೆ. ಅವುಗಳ ಮೌಲ್ಯ ಅಂದಾಜು ರೂ. 1,50,000/– ಗಳಾಗುತ್ತದೆ.

ಸಂಖ್ಯೆ: ಕಂಇ 20 ಜಿಆರ್‌ಸಿ 2017(ಪಿ2)

(ಕೆ. ಆರ್. ರವಿಕುಮಾರ್)
ಸರ್ಕಾರದ ಅಧೀನ ಕಾರ್ಯದರ್ಶಿ
ಕಂದಾಯ ಇಲಾಖೆ (ವಿಶೇಷ ಕೋಶ)

ಅನುಬಂಧ–8

ಜಪ್ತು ಮಾಡಿರುವ ಚಿನ್ನ ಮತ್ತು ಬೆಳ್ಳಿಯ ಆಭರಣ/ವಸ್ತುಗಳ ವಿವರಗಳು

ಕ್ರ. ಸಂ.	ಜಪ್ತು ಮಾಡಿದ ಸ್ಥಳ	ಜಪ್ತು ಮಾಡಿದ ಮಾಲಿನ ವಿವರ	ಅಂದಾಜು ಮೌಲ್ಯ ರೂ.ಗಳಲ್ಲಿ	ಪಿ.ಎಫ್. ಸಂಖ್ಯೆ ಮತ್ತು ದಿನಾಂಕ
1	ಕುಂಡಲೀಕ ಮಹದೇವ ಏರುಂಡೆ & ನಾರಾಯಣ ಮಾರುತಿರವರ ವಾಸದ ಮನೆ ನಂ. 7, ಮುರುಗಾ ಪಿಳ್ಳೈ ಸ್ಟ್ರೀಟ್, ಶಿವಾಜಿನಗರ, ಬೆಂಗಳೂರು.	2 ಕೆ.ಜಿ 324.80 ಗ್ರಾಂ ತೂಕದ ಬಂಗಾರದ ಗಟ್ಟಿ	ರೂ. 71,50,000/–	ಪಿ.ಎಫ್ ನಂ. 58/2019 ದಿನಾಂಕ: 09–07–2109
2	ಮಲ್ಪರಿ ಗ್ರೀನ್ಸ್ ಕಛೇರಿ, ನಂ. 111, ಗಣೇಶ ಟವರ್ಸ್, 1ನೇ ಮಹಡಿ, ಇನ್‌ಫೆಂಟ್ರಿ ರಸ್ತೆ, ಬೆಂಗಳೂರು	300 ಬೆಳ್ಳಿಯ ನಾಣ್ಯಗಳು	ರೂ. 60,000/–	ಪಿ.ಎಫ್ ನಂ. 69/2019 ದಿನಾಂಕ: 20–07–2019
3	ನಂ. 25, ಐ.ಎಂ.ಎ. ಗೋಲ್ಡ್ ಷಾಪ್, ಲೇಡಿ ಕರ್ಜನ್ ರಸ್ತೆ, ಶಿವಾಜಿನಗರ, ಬೆಂಗಳೂರು	ಒಟ್ಟು 03 ಗ್ರಾಂ ತೂಕವಿರುವ 12 ಚಿಕ್ಕ ಚಿಕ್ಕ ಚಿನ್ನದ ತುಂಡುಗಳು	ರೂ. 10,000/–	ಪಿ.ಎಫ್ ನಂ. 73/2019 ದಿನಾಂಕ: 24–07–2019
4	ನಂ. 5, ಲೇಡಿ ಕರ್ಜನ್ ರಸ್ತೆ, ಶಿವಾಜಿನಗರ, ಬೆಂಗಳೂರು.	6 ಕೆ.ಜಿ. 608 ಗ್ರಾಂ ತೂಕದ ಬೆಳ್ಳಿಯ ಆಭರಣಗಳು	ರೂ. 2,64,320/–	ಪಿ.ಎಫ್ ನಂ. 106/2019 ದಿನಾಂಕ: 12–08–2019
5	ಐ ಮಾನಿಟರಿ ಅಡ್ವೈಸರಿ ಜ್ಯುವೆಲ್ಲರಿ ನಂ. 47 & 48, 11ನೇ ಮೈನ್, ಪೋಸ್ಟ್ ಆಫೀಸ್ ಎದುರು, ಜಯನಗರ 4ನೇ ಬ್ಲಾಕ್, ಬೆಂಗಳೂರು.	37 ಕೆ.ಜಿ. 189 ಗ್ರಾಂ ತೂಕದ ಬೆಳ್ಳಿ ವಸ್ತುಗಳು	ರೂ. 16,73,500/–	ಪಿ.ಎಫ್ ನಂ.117/2019 ದಿನಾಂಕ: 24–08–2019
		ಒಟ್ಟು	**ರೂ. 91,57,820/–**	

ಸಂಖ್ಯೆ: ಕಂಇ 20 ಜಿಆರ್‌ಸಿ 2017(ಪಿ2)

(ಕೆ. ಆರ್. ರವಿಕುಮಾರ್)
ಸರ್ಕಾರದ ಅಧೀನ ಕಾರ್ಯದರ್ಶಿ
ಕಂದಾಯ ಇಲಾಖೆ (ವಿಶೇಷ ಕೋಶ)

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ ಘಟಕ, ಬೆಂಗಳೂರು. (ಪಿ7) ಪ್ರತಿಗಳು: 100

RNI No. KARBIL/2001/47147

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

ಭಾಗ–IVA	ಬೆಂಗಳೂರು, ಗುರುವಾರ, ಸೆಪ್ಟೆಂಬರ್ ೨೬, ೨೦೧೯ (ಆಶ್ವಯುಜ ೦೪, ಶಕ ವರ್ಷ ೧೯೪೦)	ನಂ. ೮೦೭
Part–IVA	Bengaluru, Thursday, September 26, 2019 (Ashwayuja 04, Shaka Varsha 1940)	No. 807

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸಚಿವಾಲಯ

ಅಧಿಸೂಚನೆ–I

ಸಂಖ್ಯೆ: ಸಿಆಸುಇ 204 ಸೇವನೆ 2018, ಬೆಂಗಳೂರು, ದಿನಾಂಕ:26.09.2019

ಕರ್ನಾಟಕ ನಾಗರಿಕ ಸೇವಾ (ಸ್ಪರ್ಧಾತ್ಮಕ ಪರೀಕ್ಷೆಗಳ ಮೂಲಕ ನೇರ ನೇಮಕಾತಿ ಮತ್ತು ಆಯ್ಕೆ) (ಸಾಮಾನ್ಯ) ನಿಯಮಗಳು, 2006 ಇದನ್ನು ಮತ್ತಷ್ಟು ತಿದ್ದುಪಡಿ ಮಾಡುವುದಕ್ಕೆ ದಿನಾಂಕ: 26.07.2019ರ ಅಧಿಸೂಚನೆ ಸಂಖ್ಯೆ: ಸಿಆಸುಇ 204 ಸೇವನೆ 2018ರಲ್ಲಿ ಪ್ರಕಟಿಸಿರುವ ಈ ಮುಂದಿನ ನಿಯಮಗಳ ಕರಡನ್ನು ಅಧಿಕೃತ ರಾಜ್ಯಪತ್ರದಲ್ಲಿ ಇದರ ಪ್ರಕಟಣೆಯ ದಿನಾಂಕದಿಂದ 15 ದಿನಗಳೊಳಗಾಗಿ ಅದರಿಂದ ಬಾಧಿತರಾಗುವ ಸಂಭವವಿರುವ ಎಲ್ಲ ವ್ಯಕ್ತಿಗಳಿಂದ ಆಕ್ಷೇಪಣೆಗಳನ್ನು ಮತ್ತು ಸಲಹೆಗಳನ್ನು ಆಹ್ವಾನಿಸಿ ದಿನಾಂಕ: 26.07.2019ರ ಕರ್ನಾಟಕ ರಾಜ್ಯಪತ್ರದ ಭಾಗ–IVಎ ರಲ್ಲಿ ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ ಅಧಿನಿಯಮ, 1978ರ (1990ರ ಕರ್ನಾಟಕ ಅಧಿನಿಯಮ 14) 3ನೇ ಪ್ರಕರಣದ (2)ನೇ ಉಪ ಪ್ರಕರಣದ (ಎ)ಖಂಡವನ್ನು ಪ್ರಕರಣ 8ರೊಂದಿಗೆ ಓದಿಕೊಂಡು ಅದರಲ್ಲಿ ಅಗತ್ಯಪಡಿಸಲಾದಂತೆ ಪ್ರಕಟಿಸಲಾಗಿರುವುದರಿಂದ;

ಸದರಿ ರಾಜ್ಯಪತ್ರವನ್ನು ದಿನಾಂಕ: 26.07.2019ರಂದು ಸಾರ್ವಜನಿಕರಿಗೆ ಲಭ್ಯವಾಗುವಂತೆ ಮಾಡಿರುವುದರಿಂದ;

ಮತ್ತು, ಸದರಿ ಕರಡಿನ ಬಗ್ಗೆ ಯಾವುದೇ ಆಕ್ಷೇಪಣೆ/ಸಲಹೆಯು ಸ್ವೀಕೃತವಾಗದಿರುವುದರಿಂದ;

ಈಗ, ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ ಅಧಿನಿಯಮ, 1978 (1990ರ ಕರ್ನಾಟಕ ಅಧಿನಿಯಮ, 14)ರ 3ನೇ ಪ್ರಕರಣದ (1)ನೇ ಉಪ ಪ್ರಕರಣವನ್ನು 8ನೇ ಪ್ರಕರಣದೊಂದಿಗೆ ಓದಿಕೊಂಡಂತೆ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ಈ ಕೆಳಕಂಡ ನಿಯಮಗಳನ್ನು ರಚಿಸುತ್ತದೆ, ಎಂದರೆ:–

ನಿಯಮಗಳು

1. ಹೆಸರು ಮತ್ತು ಪ್ರಾರಂಭ.– (1) ಈ ನಿಯಮಗಳನ್ನು ಕರ್ನಾಟಕ ಸಿವಿಲ್ ಸೇವೆಗಳ (ಸ್ಪರ್ಧಾತ್ಮಕ ಪರೀಕ್ಷೆಗಳು ಹಾಗೂ ಆಯ್ಕೆಯ ಮೂಲಕ ನೇರ ನೇಮಕಾತಿ) (ಸಾಮಾನ್ಯ) (ತಿದ್ದುಪಡಿ) ನಿಯಮಗಳು, 2019 ಎಂದು ಕರೆಯತಕ್ಕದ್ದು.

(2) ಈ ನಿಯಮಗಳು, ಅಧಿಕೃತ ರಾಜ್ಯಪತ್ರದಲ್ಲಿ ಅವುಗಳ ಅಂತಿಮ ಪ್ರಕಟಣೆಯ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

2. ನಿಯಮ 8ರ ತಿದ್ದುಪಡಿ.– ಕರ್ನಾಟಕ ಸಿವಿಲ್ ಸೇವೆಗಳ (ಸ್ಪರ್ಧಾತ್ಮಕ ಪರೀಕ್ಷೆಗಳು ಹಾಗೂ ಆಯ್ಕೆಯ ಮೂಲಕ ನೇರ ನೇಮಕಾತಿ) (ಸಾಮಾನ್ಯ) ನಿಯಮಗಳು, 2006ರ (ಇದರಲ್ಲಿ ಇನ್ನು ಮುಂದೆ ಸದರಿ ನಿಯಮಗಳೆಂದು ಉಲ್ಲೇಖಿಸಲಾಗಿದೆ) 8ನೇ ನಿಯಮದಲ್ಲಿ,–

(i) (3)ನೇ ಉಪ–ನಿಯಮದಲ್ಲಿ, "ಆಯ್ಕೆ ಪಟ್ಟಿಯು, ಅದರ ಪ್ರಕಟಣೆಯ ದಿನಾಂಕದಿಂದ ಒಂದು ವರ್ಷದ ಅವಧಿಯವರೆಗೆ ಜಾರಿಯಲ್ಲಿರತಕ್ಕದ್ದು" ಎಂಬ ಪದಗಳಿಗೆ ಬದಲಾಗಿ, **"ಆಯ್ಕೆ ಪಟ್ಟಿಯು, ಅದರ ಪ್ರಕಟಣೆಯ ದಿನಾಂಕದಿಂದ ಎರಡು ವರ್ಷಗಳ ಅವಧಿಯವರೆಗೆ** ಅಥವಾ ಮುಂದಿನ ಆಯ್ಕೆಯ ಆಧಾರದ ಮೇಲೆ ಸಿದ್ಧಪಡಿಸಿದ ಆಯ್ಕೆ ಪಟ್ಟಿಯ ಪ್ರಕಟಣೆಯ ದಿನಾಂಕದವರೆಗೆ ಇವುಗಳಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಜಾರಿಯಲ್ಲಿರತಕ್ಕದ್ದು" ಎಂಬ ಪದಗಳನ್ನು ಪ್ರತ್ಯಾಯೋಜಿಸತಕ್ಕದ್ದು; ಮತ್ತು

(ii) (4)ನೇ ಉಪ–ನಿಯಮಕ್ಕೆ ಈ ಮುಂದಿನದನ್ನು ಪ್ರತ್ಯಾಯೋಜಿಸತಕ್ಕದ್ದು, ಎಂದರೆ:–

"(4) ಆಯೋಗವು, (1)ನೇ ಉಪ–ನಿಯಮದ ಮೇರೆಗೆ ಆಯ್ಕೆ ಪಟ್ಟಿಯನ್ನು ಸಿದ್ಧಪಡಿಸಿದ ರೀತಿಯಲ್ಲಿಯೇ ಗ್ರೂಪ್–ಎ ಮತ್ತು ಗ್ರೂಪ್–ಬಿ ವೃಂದದಲ್ಲಿರುವ ತಾಂತ್ರಿಕ ಮತ್ತು ತಾಂತ್ರಿಕೇತರ ಹುದ್ದೆಗಳ ಆಯ್ಕೆಗಾಗಿ, (1)ನೇ ಉಪ–ನಿಯಮದ ಮೇರೆಗೆ ಸಿದ್ಧಪಡಿಸಿರುವ ಪಟ್ಟಿಯಲ್ಲಿ ಸೇರಿರದ, ಅಭ್ಯರ್ಥಿಗಳ ಹೆಚ್ಚುವರಿ ಪಟ್ಟಿಯನ್ನು ಸಿದ್ಧಪಡಿಸತಕ್ಕದ್ದು.

(5) ಆಯೋಗವು, (2)ನೇ ಉಪ–ನಿಯಮದ ಮೇರೆಗೆ ಆಯ್ಕೆ ಪಟ್ಟಿಯನ್ನು ಸಿದ್ಧಪಡಿಸಿರುವ ರೀತಿಯಲ್ಲಿಯೇ ಗ್ರೂಪ್–ಸಿ ವೃಂದದಲ್ಲಿನ ಚಾಲಕ ವೃಂದದ ಹುದ್ದೆಗಳನ್ನು ಹೊರತುಪಡಿಸಿ, ಗ್ರೂಪ್ ಸಿ ವೃಂದದಲ್ಲಿರುವ ತಾಂತ್ರಿಕ ಮತ್ತು ತಾಂತ್ರಿಕೇತರ ಹುದ್ದೆಗಳ ಆಯ್ಕೆಗಾಗಿ, (2)ನೇ ಉಪ–ನಿಯಮದ ಮೇರೆಗೆ ಸಿದ್ಧಪಡಿಸಿರುವ ಪಟ್ಟಿಯಲ್ಲಿ ಸೇರಿರದ, ಅಭ್ಯರ್ಥಿಗಳ ಹೆಚ್ಚುವರಿ ಪಟ್ಟಿಯನ್ನು ಸಿದ್ಧಪಡಿಸತಕ್ಕದ್ದು.

(6) ಗ್ರೂಪ್-ಎ, ಗ್ರೂಪ್–ಬಿ ಮತ್ತು ಗ್ರೂಪ್–ಸಿ ವೃಂದದಲ್ಲಿರುವ ಯಾವುದೇ ತಾಂತ್ರಿಕ ಹುದ್ದೆಯ ಆಯ್ಕೆಗಾಗಿ (4)ನೇ ಉಪ–ನಿಯಮ ಅಥವಾ (5)ನೇ ಉಪ–ನಿಯಮದ ಮೇರೆಗೆ ಸಿದ್ಧಪಡಿಸಿದ ಹೆಚ್ಚುವರಿ ಪಟ್ಟಿಯಲ್ಲಿ ಸೇರಿಸಬಹುದಾದ ಅಭ್ಯರ್ಥಿಗಳ ಒಟ್ಟು ಸಂಖ್ಯೆಯು, (1)ನೇ ಉಪ–ನಿಯಮ ಅಥವಾ (2)ನೇ ಉಪ–ನಿಯಮದ ಮೇರೆಗೆ ಸಿದ್ಧಪಡಿಸಿರುವ ಆಯ್ಕೆ ಪಟ್ಟಿಯಲ್ಲಿ ಸೇರಿಸಿರುವ ಅಭ್ಯರ್ಥಿಗಳ ಒಟ್ಟು ಸಂಖ್ಯೆಯಲ್ಲಿ ಶೇಕಡಾ ಐವತ್ತರಷ್ಟನ್ನು ಮೀರತಕ್ಕದ್ದಲ್ಲ.

(7) ಗ್ರೂಪ್–ಎ, ಗ್ರೂಪ್–ಬಿ ಮತ್ತು ಗ್ರೂಪ್–ಸಿ ವೃಂದದಲ್ಲಿರುವ ಯಾವುದೇ ತಾಂತ್ರಿಕೇತರ ಹುದ್ದೆಯ ಆಯ್ಕೆಗಾಗಿ (4)ನೇ ಉಪ–ನಿಯಮ ಅಥವಾ (5)ನೇ ಉಪ–ನಿಯಮದ ಮೇರೆಗೆ ಸಿದ್ಧಪಡಿಸಿರುವ ಹೆಚ್ಚುವರಿ ಪಟ್ಟಿಯಲ್ಲಿ ಸೇರಿಸಬಹುದಾದ ಅಭ್ಯರ್ಥಿಗಳ ಒಟ್ಟು ಸಂಖ್ಯೆಯು, (1)ನೇ ಉಪ–ನಿಯಮ ಅಥವಾ (2)ನೇ ಉಪ–ನಿಯಮದ ಮೇರೆಗೆ ಸಿದ್ಧಪಡಿಸಿರುವ ಆಯ್ಕೆ ಪಟ್ಟಿಯಲ್ಲಿ ಸೇರಿಸಿರುವ ಅಭ್ಯರ್ಥಿಗಳ ಒಟ್ಟು ಸಂಖ್ಯೆಯಲ್ಲಿ ಶೇಕಡಾ ಮೂವತ್ತರಷ್ಟನ್ನು ಮೀರತಕ್ಕದ್ದಲ್ಲ.

(8) (4), (5), (6) ಮತ್ತು (7)ನೇ ಉಪ–ನಿಯಮಗಳ ಮೇರೆಗೆ ಆಯೋಗವು ಸಿದ್ಧಪಡಿಸಿರುವ ಹೆಚ್ಚುವರಿ ಪಟ್ಟಿಯು, ಅದರ ಪ್ರಕಟಣೆಯ ದಿನಾಂಕದಿಂದ ಎರಡು ವರ್ಷಗಳ ಅವಧಿಯ ತರುವಾಯ ಅಥವಾ ಮುಂದಿನ ಆಯ್ಕೆಯ ಆಧಾರದ ಮೇಲೆ ಸಿದ್ಧಪಡಿಸಿರುವ ಪಟ್ಟಿಯ ಪ್ರಕಟಣೆಯ ದಿನಾಂಕದಂದು, ಇವುಗಳಲ್ಲಿ ಯಾವುದು ಮೊದಲೋ ಆ ದಿನದಂದು ಪ್ರವರ್ತನೆಯಲ್ಲಿರುವುದು ನಿಂತುಹೋಗತಕ್ಕದ್ದು."

3. **ನಿಯಮ 9ರ ತಿದ್ದುಪಡಿ**.– ಸದರಿ ನಿಯಮಗಳ 9ನೇ ನಿಯಮದಲ್ಲಿ, (3)ನೇ ಉಪ–ನಿಯಮಕ್ಕೆ ಬದಲಾಗಿ ಈ ಮುಂದಿನದನ್ನು ಪ್ರತ್ಯಾಯೋಜಿಸತಕ್ಕದ್ದು, ಎಂದರೆ:–

"(3) ಅಂತಿಮ ಪಟ್ಟಿಯಲ್ಲಿರುವ ಅಭ್ಯರ್ಥಿಗಳು, ಸಂದರ್ಭಾನುಸಾರ, ನಿರ್ದಿಷ್ಟಪಡಿಸಿದ ಅಥವಾ ಕರ್ತವ್ಯಕ್ಕೆ ಹಾಜರಾಗಲು ವಿಸ್ತರಿಸಿದ ಅವಧಿಯೊಳಗೆ ಕರ್ತವ್ಯಕ್ಕೆ ವರದಿ ಮಾಡಿಕೊಳ್ಳದಿರುವ ಸಂದರ್ಭದಲ್ಲಿ, ನೇಮಕಾತಿ ಪ್ರಾಧಿಕಾರವು, 8ನೇ ನಿಯಮದ (4)ನೇ ಉಪ–ನಿಯಮ ಅಥವಾ (5)ನೇ ಉಪ–ನಿಯಮದ ಮೇರೆಗೆ ಆಯೋಗವು ಸಿದ್ಧಪಡಿಸಿದ ಹೆಚ್ಚುವರಿ ಪಟ್ಟಿಯಿಂದ ಅಭ್ಯರ್ಥಿಗಳನ್ನು ನೇಮಕ ಮಾಡಿಕೊಳ್ಳಬಹುದು. ಅಂಥ ಸಂದರ್ಭದಲ್ಲಿ, ಹೆಚ್ಚುವರಿ ಪಟ್ಟಿಯಿಂದ ನೇಮಕ ಮಾಡಬಹುದಾದ ಅಭ್ಯರ್ಥಿಯು, ಕರ್ತವ್ಯಕ್ಕೆ ವರದಿ ಮಾಡಿಕೊಳ್ಳದಿರುವ ಆ ಅಭ್ಯರ್ಥಿಯು ಸೇರಿರುವಂತಹ ಅದೇ ಲಂಬಾಂತರ (Vertical) ಮತ್ತು ಸಮಾನಾಂತರ (Horizontal) ಮೀಸಲಾತಿ ಪ್ರವರ್ಗಕ್ಕೆ ಸೇರಿದವನಾಗಿರತಕ್ಕದ್ದು.

4. **ನಿಯಮ 10ರ ತಿದ್ದುಪಡಿ**.– ಸದರಿ ನಿಯಮಗಳ 10ನೇ ನಿಯಮದಲ್ಲಿ,

(i) (3)ನೇ ಉಪ–ನಿಯಮಕ್ಕೆ ಬದಲಾಗಿ ಈ ಮುಂದಿನದನ್ನು ಪ್ರತ್ಯಾಯೋಜಿಸತಕ್ಕದ್ದು, ಎಂದರೆ:–

"(3) (ಎ) ನೇಮಕಾತಿ ಪ್ರಾಧಿಕಾರವು, (1)ನೇ ಉಪ–ನಿಯಮಕ್ಕೆ ಅನುಸಾರವಾಗಿ ಆಯ್ಕೆಯಾದ ಅಭ್ಯರ್ಥಿಗಳ ಪಟ್ಟಿಯನ್ನು ಸಿದ್ಧಪಡಿಸತಕ್ಕದ್ದು. ಅಂಥ ಪಟ್ಟಿಯಲ್ಲಿ ಸೇರಿಸಬಹುದಾದ ಅಭ್ಯರ್ಥಿಗಳ ಸಂಖ್ಯೆಯು, ಅಧಿಸೂಚಿಸಿದ ಖಾಲಿ ಹುದ್ದೆಗಳ ಸಂಖ್ಯೆಗೆ ಸಮನಾಗಿರತಕ್ಕದ್ದು. ಇದನ್ನು ಕರ್ನಾಟಕ ರಾಜ್ಯಪತ್ರದಲ್ಲಿ ಮತ್ತು ನೇಮಕಾತಿ ಪ್ರಾಧಿಕಾರದ ವೆಬ್‌ಸೈಟ್‌ನಲ್ಲಿ ಅಥವಾ ಅಭ್ಯರ್ಥಿಗಳ ಮಾಹಿತಿಗಾಗಿ ಸೂಕ್ತವೆಂದು ಭಾವಿಸಬಹುದಾದಂಥ ಇತರೆ ಪ್ರಸಾರ ಮಾಧ್ಯಮದಲ್ಲಿ ಪ್ರಕಟಿಸತಕ್ಕದ್ದು. ನೇಮಕಾತಿ ಪ್ರಾಧಿಕಾರವು ಆಯ್ಕೆಯಾದ ಅಭ್ಯರ್ಥಿಗಳಿಗೆ, ಆಯ್ಕೆಯ ವಿಷಯವನ್ನು ನೋಂದಾಯಿತ ಅಂಚೆಯ ಮೂಲಕ ತಿಳಿಸತಕ್ಕದ್ದು. ಆಯ್ಕೆ ಪಟ್ಟಿಯಲ್ಲಿ ಯಾರ ಹೆಸರುಗಳನ್ನು ಸೇರಿಸಲಾಗಿದೆಯೋ ಅಂಥ ಅಭ್ಯರ್ಥಿಗಳನ್ನು, ನೇಮಕಾತಿ ಪ್ರಾಧಿಕಾರವು ಕರ್ನಾಟಕ ಸಿವಿಲ್ ಸೇವೆಗಳ (ಸಾಮಾನ್ಯ ನೇಮಕಾತಿ) ನಿಯಮಗಳು, 1977ರ ಉಪಬಂಧಗಳಿಗನುಸಾರವಾಗಿ ಅಂಥ ಪ್ರತಿಯೊಬ್ಬ ಅಭ್ಯರ್ಥಿಯ ಸೂಕ್ತತೆ ಮತ್ತು ದೈಹಿಕ ಸಾಮರ್ಥ್ಯದ ಬಗ್ಗೆ ಅದಕ್ಕೆ ಸ್ವತಃ ಮನವರಿಕೆಯಾದ ತರುವಾಯ, ಆಯ್ಕೆ ಪಟ್ಟಿಯಲ್ಲಿ ಅವರ ಹೆಸರುಗಳು ಯಾವ ಕ್ರಮದಲ್ಲಿರುವುವೋ ಅದರಂತೆ ನೇಮಕ ಮಾಡತಕ್ಕದ್ದು.

(ಬಿ) (ಎ) ಖಂಡದ ಮೇರೆಗೆ ಸಿದ್ಧಪಡಿಸಲಾದ ಆಯ್ಕೆಯಾದ ಅಭ್ಯರ್ಥಿಗಳ ಪಟ್ಟಿಯು, **ಅದರ ಪ್ರಕಟಣೆಯ ದಿನಾಂಕದಿಂದ ಎರಡು ವರ್ಷಗಳ ಅವಧಿಯವರೆಗೆ** ಅಥವಾ ಮುಂದಿನ ಆಯ್ಕೆಯ ಆಧಾರದ ಮೇಲೆ ಸಿದ್ಧಪಡಿಸಿದ ಪಟ್ಟಿಯ ಪ್ರಕಟಣೆಯ ದಿನಾಂಕದವರೆಗೆ, ಇದರಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಜಾರಿಯಲ್ಲಿರತಕ್ಕದ್ದು."

(ii) (4)ನೇ ಉಪ–ನಿಯಮಕ್ಕೆ ಬದಲಾಗಿ ಈ ಮುಂದಿನದನ್ನು ಪ್ರತ್ಯಾಯೋಜಿಸತಕ್ಕದ್ದು, ಎಂದರೆ:–

"(4) (ಎ) ನೇಮಕಾತಿ ಪ್ರಾಧಿಕಾರವು, (1)ನೇ ಉಪ–ನಿಯಮದ ಮೇರೆಗೆ ಆಯ್ಕೆ ಪಟ್ಟಿಯನ್ನು ಸಿದ್ಧಪಡಿಸಿದ ರೀತಿಯಲ್ಲಿಯೇ, (3)ನೇ ಉಪ–ನಿಯಮದ ಮೇರೆಗೆ ಸಿದ್ಧಪಡಿಸಿರುವ ಪಟ್ಟಿಯಲ್ಲಿ ಸೇರಿರದ ಅಭ್ಯರ್ಥಿಗಳ ಹೆಚ್ಚುವರಿ ಪಟ್ಟಿಯನ್ನು ಸಿದ್ಧಪಡಿಸತಕ್ಕದ್ದು. ನಿರ್ದಿಷ್ಟಪಡಿಸಿದ ಅಥವಾ ಕರ್ತವ್ಯಕ್ಕೆ ವರದಿ ಮಾಡಿಕೊಳ್ಳಲು ವಿಸ್ತರಿಸಿದ ಅವಧಿಯೊಳಗೆ ಅಂತಿಮ ಪಟ್ಟಿಯಲ್ಲಿರುವ ಅಭ್ಯರ್ಥಿಗಳು ಕರ್ತವ್ಯಕ್ಕೆ ವರದಿ ಮಾಡಿಕೊಳ್ಳದಿರುವ ಸಂದರ್ಭದಲ್ಲಿ, ನೇಮಕಾತಿ ಪ್ರಾಧಿಕಾರವು ಸಿದ್ಧಪಡಿಸಿದ ಹೆಚ್ಚುವರಿ ಪಟ್ಟಿಯಲ್ಲಿನ ಅಭ್ಯರ್ಥಿಗಳಿಗೆ ನೇಮಕಾತಿ ಆದೇಶಗಳನ್ನು ನೀಡಬಹುದು. ಅಂಥ ಸಂದರ್ಭದಲ್ಲಿ, ಹೆಚ್ಚುವರಿ ಪಟ್ಟಿಯಿಂದ ನೇಮಕಾತಿ ಆದೇಶಗಳನ್ನು ಯಾವ ಅಭ್ಯರ್ಥಿಗೆ ನೀಡಬೇಕೋ ಅಂಥ ಅಭ್ಯರ್ಥಿಯು ಕರ್ತವ್ಯಕ್ಕೆ ವರದಿ ಮಾಡಿಕೊಳ್ಳದಿರುವ ಆ ಅಭ್ಯರ್ಥಿಯು

ಸೇರಿರುವಂತಹ ಅದೇ ಲಂಬಾಂತರ (Vertical) ಮತ್ತು ಸಮಾನಾಂತರ (Horizontal) ಮೀಸಲಾತಿ ಪ್ರವರ್ಗಕ್ಕೆ ಸೇರಿದವನಾಗಿರತಕ್ಕದ್ದು.

(ಬಿ) (ಎ) ಖಂಡದ ಮೇರೆಗೆ ಸಿದ್ಧಪಡಿಸಿರುವ ಹೆಚ್ಚುವರಿ ಪಟ್ಟಿಯಲ್ಲಿ ಸೇರಿಸಬಹುದಾದ ಅಭ್ಯರ್ಥಿಗಳ ಸಂಖ್ಯೆಯು, (3)ನೇ ಉಪ–ನಿಯಮದ ಮೇರೆಗೆ ಸಿದ್ಧಪಡಿಸಿರುವ ಪಟ್ಟಿಯಲ್ಲಿ ಸೇರಿರುವ ಅಭ್ಯರ್ಥಿಗಳ ಒಟ್ಟು ಸಂಖ್ಯೆಯಲ್ಲಿ ಶೇಕಡಾ ಮೂವತ್ತರಷ್ಟನ್ನು ಮೀರತಕ್ಕದ್ದಲ್ಲ.

(ಸಿ) ನೇಮಕಾತಿ ಪ್ರಾಧಿಕಾರವು (4)ನೇ ಉಪ–ನಿಯಮದ ಮೇರೆಗೆ ಸಿದ್ಧಪಡಿಸಿರುವ ಹೆಚ್ಚುವರಿ ಪಟ್ಟಿಯು, ಅದರ ಪ್ರಕಟಣೆಯ ದಿನಾಂಕದಿಂದ ಎರಡು ವರ್ಷಗಳ ಅವಧಿಯವರೆಗೆ ಅಥವಾ ಮುಂದಿನ ಆಯ್ಕೆಯ ಆಧಾರದ ಮೇಲೆ ಸಿದ್ಧಪಡಿಸಿದ ಪಟ್ಟಿಯ ಪ್ರಕಟಣೆಯ ದಿನಾಂಕದಂದು ಅಥವಾ ಆ ದಿನಾಂಕಕ್ಕೆ ಮೊದಲು, ಇದರಲ್ಲಿ ಯಾವುದು ಮೊದಲೋ ಆ ದಿನದಂದು ಪ್ರವರ್ತನೆಯಲ್ಲಿರುವುದು ನಿಂತುಹೋಗತಕ್ಕದ್ದು.

5. ಚಾಲ್ತಿಯಲ್ಲಿರುವ ನೇಮಕಾತಿ ಪ್ರಕ್ರಿಯೆಗಳಿಗೆ ತಿದ್ದುಪಡಿ ನಿಯಮಗಳ ಅನ್ವಯ.– ಈ ನಿಯಮಗಳಲ್ಲಿ ಇರುವುದು ಯಾವುದೂ, ಈಗಾಗಲೇ ಆರಂಭವಾಗಿರುವ ಮತ್ತು ಕರ್ನಾಟಕ ಸಿವಿಲ್ ಸೇವೆಗಳ (ಸ್ಪರ್ಧಾತ್ಮಕ ಪರೀಕ್ಷೆಗಳು ಹಾಗೂ ಆಯ್ಕೆಯ ಮೂಲಕ ನೇರ ನೇಮಕಾತಿ) (ಸಾಮಾನ್ಯ) (ತಿದ್ದುಪಡಿ) ನಿಯಮಗಳು, 2019ರ ಪ್ರಾರಂಭದ ದಿನಾಂಕದಂದು ಬಾಕಿ ಉಳಿದಿರುವ ಯಾವುದೇ ಹುದ್ದೆಗಳ ನೇಮಕಾತಿಯ ಪ್ರಕ್ರಿಯೆಗಳಿಗೆ ಅನ್ವಯವಾಗತಕ್ಕದ್ದಲ್ಲ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಎಸ್. ಆರ್.ಬಸವರಾಜಯ್ಯ
ಸರ್ಕಾರದ ಉಪ ಕಾರ್ಯದರ್ಶಿ
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ
(ಸೇವಾ ನಿಯಮಗಳು–I)

PERSONNEL AND ADMINISTRATIVE REFORMS SECRETARIAT
NOTIFICATION I
NO: DPAR 204 SCR 2018, Bengaluru, Dated: 26.09.2019

Whereas the draft of the Karnataka Civil Services Direct Recruitment by Competitive Examinations and Selection) (General) Rules, 2006 was published as required by clause (a) of sub-section (2) of Section 3 read with Section 8 of the Karnataka State Civil Services Act, 1978 (Karnataka Act 14 of 1990) in Notification No. DPAR 204 SCR 2018 dated: 26.07.2019 in Part IV-A of the Karnataka Gazette Extraordinary dated: 26.07.2019 inviting objections and suggestions from all persons likely to be affected thereby within fifteen days from the date of publication of the draft in the Official Gazette.

Whereas, the said Gazette was made available to the public on 26.07. 2019.

And whereas, no objections and suggestions have been received in this behalf by the State Government.

Now, therefore, in exercise of the powers conferred by sub-section (1) of Section 3 read with Section 8 of the Karnataka State Civil Services Act, 1978 (Karnataka Act 14 of 1990), the Government of Karnataka hereby makes the following rules, namely;

RULES

1. Title and Commencement.- (1) These rules may be called the Karnataka Civil Services (Direct Recruitment by Competitive Examinations and Selection) (General) (Amendment) Rules, 2019.

(2) They shall come into force from the date of their final publication in the Official Gazette.

2. Amendment of rule 8.- In the Karnataka Civil Services (Direct Recruitment by Competitive Examinations and Selection) (General) Rules, 2006 (hereinafter referred to as the said rules), in rule 8,-

(i) in sub-rule (3), for the words “The select list shall be in force for a period of one year from the date of its publication”, the words, "The selection list shall be in force **for a period of two years from the date of its publication** or up to the date of publication of a selected list prepared on the basis of the next selection, whichever is earlier” shall be substituted; and

(ii) for sub-rule (4), the following shall be substituted, namely:-

“(4) The Commission shall prepare an additional list of candidates, not included in the list prepared under sub-rule (1), for selection to technical and non-technical posts in Group-A and Group-B in the manner selection list is prepared under sub-rule (1).

(5) The Commission shall prepare an additional list of candidates, not included in the list prepared under sub-rule (2) for selection to technical and non-technical posts in Group-C excluding posts in the cadres of drivers in Group-C, in the manner select list is prepared under sub-rule (2).

(6) The total number of candidates to be included in an additional list prepared under sub-rule (4) or sub-rule (5) for selection to any technical post in Group-A, Group-B and Group-C shall not exceed fifty percent of the total number of candidates included in the list prepared under sub-rule (1) or sub-rule (2).

(7) The total number of candidates to be included in an additional list prepared under sub-rule (4) or sub-rule (5) for selection to any non-technical post in Group-A, Group-B and Group-C shall not exceed thirty percent of the total number of candidates included in the list prepared under sub-rule (1) or sub-rule (2).

(8) An additional list prepared by the Commission under sub-rules (4), (5), (6) and (7) shall cease to be operative after a period of two years from the date of its publications or on the date of publication of a list prepared on the basis of the next selection whichever is earlier."

3. Amendment of rule 9.- In rule 9 of the said rules, for sub-rule (3), the following shall be substituted, namely:-

"(3) An appointing authority may appoint candidates from the additional list prepared by the Commission under sub-rule (4) or sub-rule (5) of rule 8, to the extent the candidates from the final list do not report for duty within the specified or extended period of joining time, as the case may be. In such a case, a candidate to be assigned from the additional list shall belong to the same category of vertical and horizontal reservation to which the candidate who did not report for duty belonged."

4. Amendment of rule 10.- In rule 10 of the said rules,

(i) for sub-rule (3), the following shall be substituted, namely:-

Vanijya Therige Karyalaya, Gandhinagar, Bengaluru,

NOTIFICATION (17 / 2019)

No. KGST.CR.01/17-18, Bengaluru, Dated: 11.10.2019

In exercise of the powers conferred by section 168 of the Karnataka Goods and Services Tax Act, 2017 (Karnataka Act 27 of 2017) (hereafter in this notification referred to as the said Act) read with sub-rule (5) of rule 61 of the Karnataka Goods and Services Tax Rules, 2017 (hereafter in this notification referred to as the said rules), on the recommendations of the Council, it is hereby specified that the return in **FORM GSTR-3B** of the said rules for each of the months from October, 2019 to March, 2020 shall be furnished electronically through the common portal, on or before the twentieth day of the month succeeding such month.

2. **Payment of taxes for discharge of tax liability as per FORM GSTR-3B.**– Every registered person furnishing the return in **FORM GSTR-3B** of the said rules shall, subject to the provisions of section 49 of the said Act, discharge his liability towards tax, interest, penalty, fees or any other amount payable under the said Act by debiting the electronic cash ledger or electronic credit ledger, as the case may be, not later than the last date, as specified in the first paragraph, on which he is required to furnish the said return.

SRIKAR M.S.
Commissioner of Commercial Taxes
(Karnataka) Bengaluru

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ ಘಟಕ, ಬೆಂಗಳೂರು. (ಕಿ7) ಪ್ರತಿಗಳು: ೫೦

RNI No. KARBIL/2001/47147

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

ಭಾಗ–IVA Part–IVA	ಬೆಂಗಳೂರು, ಶುಕ್ರವಾರ, ಅಕ್ಟೋಬರ್ ೧೧, ೨೦೧೯ (ಆಶ್ವಯುಜ ೧೯, ಶಕ ವರ್ಷ ೧೯೪೦) **Bengaluru, Friday, October 11, 2019 (Ashwayuja 19, Shaka Varsha 1940)**	ನಂ. ೮೪೬ **No. 846**

Office of the Commissioner of Commercial Taxes (Karnataka)
Vanijya Therige Karyalaya, Gandhinagar, Bengaluru,

NOTIFICATION (18 / 2019)

No. KGST.CR.01/17-18, Bengaluru, Dated: 11.10.2019

In exercise of the powers conferred by the second proviso to sub-section (1) of section 37 read with section 168 of the Karnataka Goods and Services Tax Act, 2017 (Karnataka Act 27 of 2017) (hereafter in this notification referred to as the said Act), on the recommendations of the Council, the time limit for furnishing the details of outward supplies in **FORM GSTR-1** of the Karnataka Goods and Services Tax Rules, 2017, by such class of registered persons having aggregate turnover of more than 1.5 crore rupees in the preceding financial year or the current financial year, for each of the months from October, 2019 to March, 2020 is hereby extended till the eleventh day of the month succeeding such month.

2. The time limit for furnishing the details or return, as the case may be, under sub-section (2) of section 38 of the said Act, for the months of October, 2019 to March, 2020 shall be subsequently notified in the Official Gazette.

SRIKAR M.S.
Commissioner of Commercial Taxes
(Karnataka) Bengaluru

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ ಘಟಕ, ಬೆಂಗಳೂರು. (ಪಿ7) ಪ್ರತಿಗಳು: ೫೦

RNI No. KARBIL/2001/47147

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

ಭಾಗ–IVA Part–IVA	ಬೆಂಗಳೂರು, ಶನಿವಾರ, ಅಕ್ಟೋಬರ್ ೧೨, ೨೦೧೯ (ಆಶ್ವಯುಜ ೨೦, ಶಕ ವರ್ಷ ೧೯೪೦) Bengaluru, Saturday, October 12, 2019 (Ashwayuja 20, Shaka Varsha 1940)	ನಂ. ೮೪೭ No. 847

KARNATAKA LEGISLATIVE ASSEMBLY SECRETARIAT

NOTIFICATION

No. KLA/LGA/Bill/11/2019, Bengaluru, Dated: 12.10.2019

The following Bill was introduced in Legislative Assembly on 12.10.2019.

ಕರ್ನಾಟಕ ವಿಧಾನ ಸಭೆ
ಹದಿನೈದನೇ ವಿಧಾನಸಭೆ
ಐದನೇ ಅಧಿವೇಶನ

ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ (ತಿದ್ದುಪಡಿ) ವಿಧೇಯಕ, 2019

(2019ರ ವಿಧಾನಸಭೆಯ ವಿಧೇಯಕ ಸಂಖ್ಯೆ–11)

ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017ನ್ನು (2017ರ ಕರ್ನಾಟಕ ಅಧಿನಿಯಮ 27) ಮತ್ತಷ್ಟು ತಿದ್ದುಪಡಿ ಮಾಡಲು ಒಂದು ವಿಧೇಯಕ.

ಇಲ್ಲಿ ಇನ್ನುಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ಸರಕು ಮತ್ತು ಸೇವಗಳ ತೆರಿಗೆ ಅಧಿನಿಯಮ, 2017ನ್ನು (2017ರ ಕರ್ನಾಟಕ ಅಧಿನಿಯಮ, 27) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಎಪ್ಪತ್ತನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:–

1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.–(1) ಈ ಅಧಿನಿಯಮವನ್ನು ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ (ತಿದ್ದುಪಡಿ) ಅಧಿನಿಯಮ, 2019 ಎಂದು ಕರೆಯತಕ್ಕದ್ದು.

(2) ಅನ್ಯಥಾ ಉಪಬಂಧಿಸಿದುದನ್ನುಳಿದು, ಈ ಅಧಿನಿಯಮದ ಉಪಬಂಧಗಳು ಸರ್ಕಾರವು, ಸರ್ಕಾರಿ ರಾಜ್ಯಪತ್ರದಲ್ಲಿ ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದ ಅಂಥ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

2. ಪ್ರಕರಣ 2ರ ತಿದ್ದುಪಡಿ.– ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017ರ (ಇಲ್ಲಿ ಇನ್ನುಮುಂದೆ ಮೂಲ ಅಧಿನಿಯಮವೆಂದು ಉಲ್ಲೇಖಿಸಲಾಗಿದೆ) ಪ್ರಕರಣ 2ರ ಖಂಡ (4)ರಲ್ಲಿ "ಪೂರ್ವಭಾವಿ ನಿರ್ಣಯದ ಅಪೀಲು ಪ್ರಾಧಿಕಾರ" ಪದಗಳ ತರುವಾಯ, ", ಪೂರ್ವಭಾವಿ ನಿರ್ಣಯದ ರಾಷ್ಟ್ರೀಯ ಅಪೀಲು ಪ್ರಾಧಿಕಾರ" ಪದಗಳನ್ನು ಅಲ್ಪವಿರಾಮ ಚಿಹ್ನೆಯೊಂದಿಗೆ ಸೇರಿಸತಕ್ಕದ್ದು.

3. ಪ್ರಕರಣ 10ರ ತಿದ್ದುಪಡಿ.– ಮೂಲ ಅಧಿನಿಯಮದ ಪ್ರಕರಣ 10ರಲ್ಲಿ,–

(1) ಉಪ ಪ್ರಕರಣ (1)ರಲ್ಲಿ, ಎರಡನೇ ಪರಂತುಕದ ತರುವಾಯ ಕೆಳಕಂಡ ವಿವರಣೆಯನ್ನು ಸೇರಿಸತಕ್ಕದ್ದು, ಅಂದರೆ:–

"ವಿವರಣೆ.– ಎರಡನೇ ಪರಂತುಕದ ಉದ್ದೇಶಗಳಿಗಾಗಿ, ಬಡ್ಡಿ ಅಥವಾ ರಿಯಾಯಿತಿಯ ಮೂಲಕ ಪ್ರತಿಫಲವು ಪ್ರತಿನಿಧಿಸಿರುವಷ್ಟರ ಮಟ್ಟಿಗೆ ಠೇವಣಿಗಳು, ಸಾಲಗಳು ಅಥವಾ ಮುಂಗಡಗಳನ್ನು ನೀಡುವುದರ ಮೂಲಕ ಒದಗಿಸಲಾದ ಸೇವೆಗಳ ವಿನಾಯಿತಿ ಪೂರೈಕೆಯ ಮೌಲ್ಯವನ್ನು ರಾಜ್ಯದಲ್ಲಿಯ ವಹಿವಾಟಿನ ಮೌಲ್ಯವನ್ನು ನಿರ್ಧರಿಸುವಾಗ ಪರಿಗಣನೆಗೆ ತೆಗೆದುಕೊಳ್ಳತಕ್ಕದ್ದಲ್ಲ."

(2) ಉಪ ಪ್ರಕರಣ (2)ರಲ್ಲಿ,–

(ಎ) ಖಂಡ (ಡಿ)ಯಲ್ಲಿ ಕೊನೆಯಲ್ಲಿ ಬರುವ "ಅಥವಾ" ಎಂಬ ಪದವನ್ನು ಬಿಟ್ಟುಬಿಡತಕ್ಕದ್ದು;

(ಬಿ) ಖಂಡ (ಇ)ಯಲ್ಲಿ "ಉತ್ಪಾದಕನಾಗಿರಬಾರದು." ಎಂಬ ಪದಕ್ಕೆ "ಉತ್ಪಾದಕನಾಗಿರಬಾರದು; ಅಥವಾ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(ಸಿ) ಖಂಡ (ಇ)ಯ ತರುವಾಯ, ಕೆಳಕಂಡ ಖಂಡವನ್ನು ಸೇರಿಸತಕ್ಕದ್ದು, ಎಂದರೆ:–

"(ಎಫ್) ಅವನು ಸಾಂದರ್ಭಿಕ ತೆರಿಗೆದಾಯಕ ವ್ಯಕ್ತಿಯಾಗಲಿ ಅಥವಾ ಅನಿವಾಸಿ ತೆರಿಗೆದಾಯಕ ವ್ಯಕ್ತಿಯಾಗಲಿ ಆಗಿರಬಾರದು:"

(3) ಉಪ ಪ್ರಕರಣ (2)ರ ತರುವಾಯ, ಮುಂದಿನ ಉಪ ಪ್ರಕರಣವನ್ನು ಸೇರಿಸತಕ್ಕದ್ದು, ಎಂದರೆ:–

(2ಎ) ಈ ಅಧಿನಿಯಮದಲ್ಲಿ ಒಳಗೊಂಡಿರುವುದಕ್ಕೆ ವಿರುದ್ಧವಾದುದು ಏನೇ ಇದ್ದರೂ, ಆದರೆ ಪ್ರಕರಣ 9ರ ಉಪ ಪ್ರಕರಣ (3) ಮತ್ತು (4)ರ ಉಪಬಂಧಗಳಿಗೆ ಒಳಪಟ್ಟು, ಆತನ ಹಿಂದಿನ ಹಣಕಾಸು ವರ್ಷದಲ್ಲಿ ಐವತ್ತು ಲಕ್ಷ ರೂಪಾಯಿಗಳನ್ನು ಮೀರದಿರುವ ಸಮಗ್ರ ವಹಿವಾಟು ಹೊಂದಿರುವ, ಉಪ ಪ್ರಕರಣ (1) ಮತ್ತು ಉಪ ಪ್ರಕರಣ (2)ರ ಅಡಿಯಲ್ಲಿ ತೆರಿಗೆ ಸಂದಾಯ ಮಾಡುವುದಕ್ಕೆ ಆಯ್ಕೆ ಮಾಡಿಕೊಳ್ಳಲು ಅರ್ಹನಲ್ಲದ, ಒಬ್ಬ ನೋಂದಾಯಿತ ವ್ಯಕ್ತಿಯು, ಪ್ರಕರಣ 9ರ ಉಪ ಪ್ರಕರಣ (1) ರ ಅಡಿಯಲ್ಲಿ ಅವನು ಸಂದಾಯ ಮಾಡಬೇಕಾದ ತೆರಿಗೆಯ ಬದಲು ನಿಯಮಿಸಲಾದ ಅಂಥ ದರದಲ್ಲಿ ಲೆಕ್ಕ ಹಾಕಲಾದ, ಆದರೆ ರಾಜ್ಯದಲ್ಲಿಯ ವಹಿವಾಟಿನ ಶೇಕಡ ಮೂರನ್ನು ಮೀರದ ಒಂದು ತೆರಿಗೆ ಮೊತ್ತವನ್ನು ಸಂದಾಯ ಮಾಡಲು, ಆತನು ಈ ಕೆಳಗಿನವನಾಗಿರದಿದ್ದರೆ, ಆಯ್ಕೆ ಮಾಡಿಕೊಳ್ಳಬಹುದು–

(ಎ) ಈ ಅಧಿನಿಯಮದ ಅಡಿಯಲ್ಲಿ ತೆರಿಗೆ ವಿಧಿಸಲಾಗದಂತಹ ಸರಕು ಅಥವಾ ಸೇವೆಗಳ ಪೂರೈಕೆಯಲ್ಲಿ ತೊಡಗಿರುವವನು;

(ಬಿ) ಸರಕು ಅಥವಾ ಸೇವೆಗಳ ಯಾವುದೇ ಅಂತರ–ರಾಜ್ಯ ಪೂರೈಕೆಗಳನ್ನು ಮಾಡುವುದರಲ್ಲಿ ತೊಡಗಿರುವವನು;

(ಸಿ) ಪ್ರಕರಣ 52ರ ಅಡಿಯಲ್ಲಿ ತೆರಿಗೆ ಸಂಗ್ರಹಿಸುವುದು ಅಗತ್ಯವಿರುವಂತಹ ಒಬ್ಬ ವಿದ್ಯುನ್ಮಾನ ವಾಣಿಜ್ಯ ನಿರ್ವಾಹಕನ ಮೂಲಕ ಸರಕು ಅಥವಾ ಸೇವೆಗಳ ಯಾವುದೇ ಪೂರೈಕೆಯಲ್ಲಿ ತೊಡಗಿರುವವನು;

(ಡಿ) ಪರಿಷತ್ತಿನ ಶಿಫಾರಸುಗಳ ಮೇಲೆ ಸರ್ಕಾರವು ಅಧಿಸೂಚಿಸಬಹುದಾದ ಅಂಥ ಸರಕುಗಳ ಒಬ್ಬ ತಯಾರಿಕೆದಾರ ಅಥವಾ ಅಂಥ ಸೇವೆಗಳ ಪೂರೈಕೆದಾರ; ಮತ್ತು

(ಇ) ಒಬ್ಬ ಸಾಂದರ್ಭಿಕ ತೆರಿಗೆದಾಯಕ ವ್ಯಕ್ತಿ ಅಥವಾ ಅನಿವಾಸಿ ತೆರಿಗೆದಾಯಕ ವ್ಯಕ್ತಿ:

ಪರಂತು, ಒಬ್ಬರಿಗಿಂತ ಹೆಚ್ಚು ನೋಂದಾಯಿತ ವ್ಯಕ್ತಿಗಳು ಆದಾಯ ತೆರಿಗೆ ಅಧಿನಿಯಮ, 1961 (1961ರ ಕೇಂದ್ರ ಅಧಿನಿಯಮ 43)ರ ಅಡಿಯಲ್ಲಿ ನೀಡಲಾದ ಒಂದೇ ಶಾಶ್ವತ ಖಾತೆ ಸಂಖ್ಯೆಯನ್ನು (PAN) ಹೊಂದಿರುವಲ್ಲಿ, ಅಂಥ ಎಲ್ಲ ನೋಂದಾಯಿತ ವ್ಯಕ್ತಿಗಳು ಈ ಉಪ ಪ್ರಕರಣದ ಅಡಿಯಲ್ಲಿ ತೆರಿಗೆ ಸಂದಾಯ ಮಾಡಲು ಆಯ್ಕೆ ಮಾಡಿಕೊಳ್ಳದ ಹೊರತು, ಆ ನೋಂದಾಯಿತ ವ್ಯಕ್ತಿಯು ಈ ಉಪ ಪ್ರಕರಣದ ಅಡಿ ತೆರಿಗೆ ಸಂದಾಯ ಮಾಡುವುದನ್ನು ಆಯ್ಕೆ ಮಾಡಲು ಅರ್ಹನಾಗತಕ್ಕದ್ದಲ್ಲ.";

(4) ಉಪ ಪ್ರಕರಣ (3)ರಲ್ಲಿ, "ಉಪಪ್ರಕರಣ (1)ರ" ಎಂಬ ಪದಗಳು, ಆವರಣ ಚಿಹ್ನೆ ಮತ್ತು ಅಕ್ಷರಗಳ ತರುವಾಯ, ಅವು ಬರುವ ಎರಡೂ ಕಡೆಯ ಜಾಗಗಳಲ್ಲಿ, "ಅಥವಾ ಸಂದರ್ಭಾನುಸಾರವಾಗಿ ಉಪ ಪ್ರಕರಣ (2ಎ)ರ" ಎಂಬ ಪದಗಳು, ಆವರಣ ಚಿಹ್ನೆ ಮತ್ತು ಅಕ್ಷರಗಳನ್ನು ಸೇರಿಸತಕ್ಕದ್ದು;

(5) ಉಪ ಪ್ರಕರಣ (4)ರಲ್ಲಿ, "ಉಪಪ್ರಕರಣ (1)ರ" ಎಂಬ ಪದಗಳು, ಆವರಣ ಚಿಹ್ನೆ ಮತ್ತು ಅಕ್ಷರಗಳ ತರುವಾಯ "ಅಥವಾ ಸಂದರ್ಭಾನುಸಾರವಾಗಿ ಉಪ ಪ್ರಕರಣ (2ಎ)ರ" ಎಂಬ ಪದಗಳು, ಆವರಣ ಚಿಹ್ನೆ ಮತ್ತು ಅಕ್ಷರಗಳನ್ನು ಸೇರಿಸತಕ್ಕದ್ದು;

(6) ಉಪ ಪ್ರಕರಣ (5)ರಲ್ಲಿ, "ಉಪಪ್ರಕರಣ (1)ರ" ಎಂಬ ಪದಗಳು, ಆವರಣ ಚಿಹ್ನೆ ಮತ್ತು ಅಕ್ಷರಗಳ ತರುವಾಯ "ಅಥವಾ ಸಂದರ್ಭಾನುಸಾರವಾಗಿ ಉಪ ಪ್ರಕರಣ (2ಎ)ರ" ಎಂಬ ಪದಗಳು, ಆವರಣ ಚಿಹ್ನೆ ಮತ್ತು ಅಕ್ಷರಗಳನ್ನು ಸೇರಿಸತಕ್ಕದ್ದು;

(7) ಉಪ ಪ್ರಕರಣ (5)ರ ತರುವಾಯ ಕೆಳಗಿನ ವಿವರಣೆಗಳನ್ನು ಸೇರಿಸತಕ್ಕದ್ದು, ಎಂದರೆ:–

"**ವಿವರಣೆ 1**.– ಈ ಪ್ರಕರಣದ ಅಡಿಯಲ್ಲಿ ತೆರಿಗೆ ಸಂದಾಯ ಮಾಡಲು ಒಬ್ಬ ವ್ಯಕ್ತಿಯ ಅರ್ಹತೆಯನ್ನು ನಿರ್ಧರಿಸುವುದಕ್ಕಾಗಿ ಅವನ ಸಮಗ್ರ ವಹಿವಾಟನ್ನು ಲೆಕ್ಕ ಹಾಕುವ ಉದ್ದೇಶಗಳಿಗಾಗಿ, "ಸಮಗ್ರ ವಹಿವಾಟು" ಪದಾವಳಿಯು ಒಂದು ಹಣಕಾಸಿನ ವರ್ಷದ ಏಪ್ರಿಲ್ 1ನೆಯ ದಿನದಿಂದ ಅವನು ಈ ಅಧಿನಿಯಮದ ಅಡಿಯಲ್ಲಿ ನೋಂದಣಿಗೆ ಬಾಧ್ಯನಾಗುವ ದಿನಾಂಕದವರೆಗೆ ಅಂಥ ವ್ಯಕ್ತಿಯಿಂದ ಮಾಡಿರುವ ಪೂರೈಕೆಗಳ ಮೌಲ್ಯವನ್ನು ಒಳಗೊಂಡಿರತಕ್ಕದ್ದು, ಆದರೆ ಬಡ್ಡಿ ಅಥವಾ ರಿಯಾಯಿತಿಯ ಮೂಲಕ ಪ್ರತಿಫಲವು ಪ್ರತಿನಿಧಿಸಿರುವಷ್ಟರ ಮಟ್ಟಿಗೆ ಠೇವಣಿಗಳು, ಸಾಲಗಳು ಅಥವಾ ಮುಂಗಡಗಳನ್ನು ನೀಡುವುದರ ಮೂಲಕ ಒದಗಿಸಲಾದ ಸೇವೆಗಳ ವಿನಾಯಿತಿ ಪೂರೈಕೆಯ ಮೌಲ್ಯವನ್ನು ಒಳಗೊಂಡಿರತಕ್ಕದ್ದಲ್ಲ.

ವಿವರಣೆ 2.– ಈ ಪ್ರಕರಣದ ಅಡಿಯಲ್ಲಿ ಒಬ್ಬ ವ್ಯಕ್ತಿಯು ಸಂದಾಯ ಮಾಡಬೇಕಾದ ತೆರಿಗೆಯನ್ನು ನಿರ್ಧರಿಸುವ ಉದ್ದೇಶಗಳಿಗಾಗಿ, "ರಾಜ್ಯದಲ್ಲಿಯ ವಹಿವಾಟು" ಪದಾವಳಿಯು ಕೆಳಗಿನ ಪೂರೈಕೆಗಳ ಮೌಲ್ಯವನ್ನು ಒಳಗೊಂಡಿರತಕ್ಕದ್ದಲ್ಲ, ಎಂದರೆ:–

(i) ಒಂದು ಹಣಕಾಸಿನ ವರ್ಷದ ಏಪ್ರಿಲ್ 1ನೆಯ ದಿನದಿಂದ ಅಂಥ ವ್ಯಕ್ತಿಯು ಈ ಅಧಿನಿಯಮದ ಅಡಿಯಲ್ಲಿ ನೋಂದಣಿಗೆ ಬಾಧ್ಯನಾಗುವ ದಿನಾಂಕದವರೆಗೆ ಮಾಡಿರುವ ಪೂರೈಕೆಗಳು; ಮತ್ತು

(ii) ಬಡ್ಡಿ ಅಥವಾ ರಿಯಾಯಿತಿಯ ಮೂಲಕ ಪ್ರತಿಫಲವು ಪ್ರತಿನಿಧಿಸಿರುವಷ್ಟರ ಮಟ್ಟಿಗೆ ಠೇವಣಿಗಳು, ಸಾಲಗಳು ಅಥವಾ ಮುಂಗಡಗಳನ್ನು ನೀಡುವುದರ ಮೂಲಕ ಒದಗಿಸಲಾದ ಸೇವೆಗಳ ವಿನಾಯಿತಿ ಪೂರೈಕೆಗಳು".

4. ಪ್ರಕರಣ 22ರ ತಿದ್ದುಪಡಿ.– ಮೂಲ ಅಧಿನಿಯಮದ ಪ್ರಕರಣ 22ರಲ್ಲಿ, ಉಪ ಪ್ರಕರಣ (1)ರಲ್ಲಿ, ಎರಡನೆಯ ಪರಂತುಕದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:–

"ಅಲ್ಲದೆ ಪರಂತು, ಸರ್ಕಾರವು ಪರಿಷತ್ತಿನ ಶಿಫಾರಸುಗಳ ಅನ್ವಯ, ಅಧಿಸೂಚಿಸಬಹುದಾದ ಅಂಥ ಷರತ್ತುಗಳು ಮತ್ತು ಮಿತಿಗಳಿಗೆ ಒಳಪಟ್ಟು, ಪ್ರತ್ಯೇಕವಾಗಿ ಸರಕುಗಳ ಪೂರೈಕೆಯಲ್ಲಿ ತೊಡಗಿರುವ ಪೂರೈಕೆದಾರನ ಪ್ರಕರಣದಲ್ಲಿ, ಸಮಗ್ರ ವಹಿವಾಟನ್ನು ಇಪ್ಪತ್ತು ಲಕ್ಷ ರೂಪಾಯಿಗಳಿಂದ ನಲವತ್ತು ಲಕ್ಷ ರೂಪಾಯಿಗಳನ್ನು ಮೀರದ ಅಂಥ ಮೊತ್ತಕ್ಕೆ ಹೆಚ್ಚಿಸಬಹುದು.

ವಿವರಣೆ.– ಈ ಉಪ ಪ್ರಕರಣದ ಉದ್ದೇಶಗಳಿಗಾಗಿ, ಒಬ್ಬ ವ್ಯಕ್ತಿಯು ಬಡ್ಡಿ ಅಥವಾ ರಿಯಾಯಿತಿಯ ಮೂಲಕ ಪ್ರತಿಫಲವು ಪ್ರತಿನಿಧಿಸಿರುವಷ್ಟರ ಮಟ್ಟಿಗೆ ಠೇವಣಿಗಳು, ಸಾಲಗಳು ಅಥವಾ ಮುಂಗಡಗಳನ್ನು ನೀಡುವುದರ ಮೂಲಕ ಒದಗಿಸಲಾದ ಸೇವೆಗಳ ವಿನಾಯಿತಿ ಪೂರೈಕೆಗಳಲ್ಲಿ ತೊಡಗಿಸಿಕೊಂಡಿದ್ದರೂ ಸಹಿತ ಅವನನ್ನು ಪ್ರತ್ಯೇಕವಾಗಿ ಸರಕುಗಳ ಪೂರೈಕೆಯಲ್ಲಿ ತೊಡಗಿರುವವನು ಎಂದು ಪರಿಗಣಿಸತಕ್ಕದ್ದು.".

5. ಪ್ರಕರಣ 25ರ ತಿದ್ದುಪಡಿ.– ಮೂಲ ಅಧಿನಿಯಮದ ಪ್ರಕರಣ 25ರಲ್ಲಿ, ಉಪ ಪ್ರಕರಣ (6)ರ ನಂತರ, ಈ ಮುಂದಿನ ಉಪ ಪ್ರಕರಣಗಳನ್ನು ಸೇರಿಸತಕ್ಕದ್ದು, ಅಂದರೆ:–

"(6ಎ) ನಿಯಮಿಸಬಹುದಾದ ಅಂಥ ನಮೂನೆ ಮತ್ತು ವಿಧಾನದಲ್ಲಿ ಮತ್ತು ಅಂಥ ಸಮಯದೊಳಗೆ ಪ್ರತಿಯೊಬ್ಬ ನೋಂದಾಯಿತ ವ್ಯಕ್ತಿಯು ಅಧಿಪ್ರಮಾಣೀಕರಣಕ್ಕೆ ಒಳಗಾಗತಕ್ಕದ್ದು, ಅಥವಾ ಆಧಾರ್ ಸಂಖ್ಯೆಯನ್ನು ಹೊಂದಿರುವುದಕ್ಕೆ ಪುರಾವೆಯನ್ನು ಒದಗಿಸತಕ್ಕದ್ದು:

ಪರಂತು, ಆಧಾರ್ ಸಂಖ್ಯೆಯು ನೋಂದಾಯಿತ ವ್ಯಕ್ತಿಗೆ ನೀಡಲಾಗಿರದಿದ್ದಲ್ಲಿ, ಪರಿಷತ್ತಿನ ಶಿಫಾರಸುಗಳ ಮೇಲೆ, ಸರ್ಕಾರವು ನಿಯಮಿಸಬಹುದಾದ ಅಂಥ ವಿಧಾನದಲ್ಲಿ ಅಂಥ ವ್ಯಕ್ತಿಗೆ ಪರ್ಯಾಯವಾದ ಮತ್ತು ಕಾರ್ಯಸಾಧ್ಯವಿರುವ ರೀತಿಯ ಗುರುತನ್ನು ನೀಡತಕ್ಕದ್ದು:

ಮತ್ತು ಪರಂತು, ಅಧಿಪ್ರಮಾಣೀಕರಣಕ್ಕೆ ಒಳಗಾಗಲು ಅಥವಾ ಆಧಾರ್ ಸಂಖ್ಯೆಯನ್ನು ಹೊಂದಿರುವ ಪುರಾವೆಯನ್ನು ಒದಗಿಸಲು ಅಥವಾ ಪರ್ಯಾಯವಾದ ಮತ್ತು ಕಾರ್ಯಸಾಧ್ಯವಿರುವ ರೀತಿಯ ಗುರುತನ್ನು ಒದಗಿಸಲು ವಿಫಲನಾದಲ್ಲಿ, ಅಂಥ ವ್ಯಕ್ತಿಗೆ ಹಂಚಿಕೆಯಾದ ನೋಂದಣಿಯು ಅಸಿಂಧು ಎಂದು ಪರಿಭಾವಿಸತಕ್ಕದ್ದು ಮತ್ತು ಅಂಥ ವ್ಯಕ್ತಿಯು ನೋಂದಣಿಯನ್ನು ಹೊಂದಿಲ್ಲ ಎಂಬ ರೀತಿಯಲ್ಲಿ ಈ ಅಧಿನಿಯಮದ ಇತರ ಉಪಬಂಧಗಳು ಅನ್ವಯವಾಗತಕ್ಕದ್ದು.

(6ಬಿ) ಅಧಿಸೂಚನೆಯ ದಿನಾಂಕದಂದು ಮತ್ತು ದಿನಾಂಕದಿಂದ, ಪ್ರತಿಯೊಬ್ಬ ವ್ಯಕ್ತಿಯು, ನೋಂದಣಿಯ ನೀಡಿಕೆಗಾಗಿ ಅರ್ಹನಾಗಲು, ಪರಿಷತ್ತಿನ ಶಿಫಾರಸುಗಳ ಅನ್ವಯ, ಸರ್ಕಾರವು ಸದರಿ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದ ಅಂಥ ವಿಧಾನದಲ್ಲಿ ಅಧಿಪ್ರಮಾಣೀಕರಣಕ್ಕೆ ಒಳಗಾಗತಕ್ಕದ್ದು ಅಥವಾ ಆಧಾರ್ ಸಂಖ್ಯೆಯನ್ನು ಹೊಂದಿರುವ ಪುರಾವೆಯನ್ನು ಒದಗಿಸತಕ್ಕದ್ದು:

ಪರಂತು, ಆಧಾರ್ ಸಂಖ್ಯೆಯು ಒಬ್ಬ ವ್ಯಕ್ತಿಗೆ ನೀಡಲಾಗಿರದಿದ್ದಲ್ಲಿ, ಪರಿಷತ್ತಿನ ಶಿಫಾರಸುಗಳ ಅನ್ವಯ, ಸರ್ಕಾರವು ಸದರಿ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದ ಅಂಥ ವಿಧಾನದಲ್ಲಿ ಅಂಥ ವ್ಯಕ್ತಿಗೆ ಪರ್ಯಾಯವಾದ ಮತ್ತು ಕಾರ್ಯಸಾಧ್ಯವಿರುವ ರೀತಿಯ ಗುರುತನ್ನು ನೀಡತಕ್ಕದ್ದು.

(6ಸಿ) ಅಧಿಸೂಚನೆಯ ದಿನಾಂಕದಂದು ಮತ್ತು ದಿನಾಂಕದಿಂದ, ಒಬ್ಬ ವ್ಯಕ್ತಿಗತ ವ್ಯಕ್ತಿಯನ್ನು ಹೊರತು ಪಡಿಸಿ ಪ್ರತಿಯೊಬ್ಬ ವ್ಯಕ್ತಿಯು, ನೋಂದಣಿಯ ನೀಡಿಕೆಗಾಗಿ ಅರ್ಹನಾಗಲು, ಪರಿಷತ್ತಿನ ಶಿಫಾರಸುಗಳ ಅನ್ವಯ, ಸರ್ಕಾರವು ಸದರಿ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದ ಅಂಥ ವಿಧಾನದಲ್ಲಿ, ಕರ್ತಾ, ವ್ಯವಸ್ಥಾಪಕ ನಿರ್ದೇಶಕ, ಪೂರ್ಣಾವಧಿ ನಿರ್ದೇಶಕ, ಅಂಥ ಸಂಖ್ಯೆಯ ಪಾಲುದಾರರು, ಸಂಘದ ವ್ಯವಸ್ಥಾಪಕ ಸಮಿತಿಯ ಸದಸ್ಯರು, ಟ್ರಸ್ಟಿಗಳ ಮಂಡಳಿ, ಅಧಿಕೃತ ಪ್ರತಿನಿಧಿ, ಅಧಿಕೃತ ಸಹಿಗಾರ ಮತ್ತು ಅಂಥ ಇತರ ವರ್ಗದ ವ್ಯಕ್ತಿಗಳು, ಅಧಿಪ್ರಮಾಣೀಕರಣಕ್ಕೆ ಒಳಗಾಗತಕ್ಕದ್ದು ಅಥವಾ ಆಧಾರ್ ಸಂಖ್ಯೆಯನ್ನು ಹೊಂದಿರುವ ಪುರಾವೆಯನ್ನು ಒದಗಿಸತಕ್ಕದ್ದು:

ಪರಂತು, ಆಧಾರ್ ಸಂಖ್ಯೆಯು ಅಂಥ ವ್ಯಕ್ತಿ ಅಥವಾ ವ್ಯಕ್ತಿಗಳ ವರ್ಗಕ್ಕೆ ಹಂಚಿಕೆಯಾಗಿರದಿದ್ದಲ್ಲಿ, ಪರಿಷತ್ತಿನ ಶಿಫಾರಸುಗಳ ಅನ್ವಯ, ಸರ್ಕಾರವು ಸದರಿ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದ ಅಂಥ ವಿಧಾನದಲ್ಲಿ ಅಂಥ ವ್ಯಕ್ತಿ ಅಥವಾ ವ್ಯಕ್ತಿಗಳ ವರ್ಗಕ್ಕೆ ಪರ್ಯಾಯವಾದ ಮತ್ತು ಕಾರ್ಯಸಾಧ್ಯವಿರುವ ರೀತಿಯ ಗುರುತನ್ನು ನೀಡತಕ್ಕದ್ದು.

(6ಡಿ) ಉಪ ಪ್ರಕರಣ (6ಎ) ಅಥವಾ ಉಪ ಪ್ರಕರಣ (6ಬಿ) ಅಥವಾ ಉಪ ಪ್ರಕರಣ (6ಸಿ) ಗಳ ಉಪಬಂಧಗಳು, ಪರಿಷತ್ತಿನ ಶಿಫಾರಸ್ಸುಗಳ ಅನ್ವಯ, ಸರ್ಕಾರವು ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದ ಅಂಥ ವ್ಯಕ್ತಿ ಅಥವಾ ವ್ಯಕ್ತಿಗಳ ವರ್ಗ ಅಥವಾ ಯಾವುದೇ ರಾಜ್ಯ ಅಥವಾ ಕೇಂದ್ರಾಡಳಿತ ಪ್ರದೇಶ ಅಥವಾ ಅವುಗಳ ಭಾಗಕ್ಕೆ ಅನ್ವಯವಾಗತಕ್ಕದ್ದಲ್ಲ.

ವಿವರಣೆ.– ಈ ಪ್ರಕರಣದ ಉದ್ದೇಶಗಳಿಗಾಗಿ, **"ಆಧಾರ್ ಸಂಖ್ಯೆ"** ಪದಾವಳಿಯು ಆಧಾರ್ (ಹಣಕಾಸು ಮತ್ತು ಇತರ ಸಬ್ಸಿಡಿಗಳು, ಪ್ರಯೋಜನಗಳು ಮತ್ತು ಸೇವೆಗಳ ಉದ್ದೇಶಿತ ವಿತರಣೆ) ಅಧಿನಿಯಮ, 2016 (2016ರ ಕೇಂದ್ರ ಅಧಿನಿಯಮ 18)ರ ಪ್ರಕರಣ (2)ರ ಖಂಡ (ಎ)ಯಲ್ಲಿ ನೀಡಲಾಗಿರುವ ಅರ್ಥವನ್ನೇ ಹೊಂದಿರತಕ್ಕದ್ದು.".

6. ಹೊಸ ಪ್ರಕರಣ 31ಎ ಸೇರ್ಪಡೆ.– ಮೂಲ ಅಧಿನಿಯಮದ ಪ್ರಕರಣ 31ರ ತರುವಾಯ, ಈ ಮುಂದಿನ ಪ್ರಕರಣವನ್ನು ಸೇರಿಸತಕ್ಕದ್ದು, ಅಂದರೆ:–

"31ಎ. ಸ್ವೀಕರಿಸುವವನಿಗೆ ವಿದ್ಯುನ್ಮಾನ ಸಂದಾಯದ ಸೌಲಭ್ಯ.– ನೋಂದಾಯಿತ ವ್ಯಕ್ತಿಗಳ ಒಂದು ವರ್ಗವು, ಅವರಿಂದ ಮಾಡಲಾದ ಸರಕು ಅಥವಾ ಸೇವೆಗಳ ಅಥವಾ ಅವುಗಳೆರಡರ ಪೂರೈಕೆಗಳ ಸ್ವೀಕರಿಸುವವನಿಗೆ, ನಿಯಮಿಸಲಾದ ವಿದ್ಯುನ್ಮಾನ ಸಂದಾಯದ ವಿಧಾನಗಳನ್ನು ಒದಗಿಸತಕ್ಕದ್ದು ಮತ್ತು ಅಂಥ ಸ್ವೀಕರಿಸುವವನಿಗೆ ಅದರನುಸಾರವಾಗಿ ಸಂದಾಯ ಮಾಡುವ ಆಯ್ಕೆಯನ್ನು ನೀಡಲು, ಸರ್ಕಾರವು ಪರಿಷತ್ತಿನ ಶಿಫಾರಸುಗಳ ಅನ್ವಯ, ನಿಯಮಿಸಬಹುದಾದ ಅಂಥ ವಿಧಾನದಲ್ಲಿ ಮತ್ತು ಅಂಥ ಷರತ್ತುಗಳು ಮತ್ತು ನಿಬಂಧನೆಗಳಿಗೆ ಒಳಪಟ್ಟು ನಿಯಮಿಸಬಹುದು."

7. ಪ್ರಕರಣ 39ರ ತಿದ್ದುಪಡಿ.– ಮೂಲ ಅಧಿನಿಯಮದ ಪ್ರಕರಣ 39ರಲ್ಲಿ,–

(1) ಉಪ ಪ್ರಕರಣ (1) ಮತ್ತು ಉಪ ಪ್ರಕರಣ (2)ಗಳಿಗಾಗಿ, ಕೆಳಗಿನ ಉಪ ಪ್ರಕರಣಗಳನ್ನು ಪ್ರತಿಯೋಜಿಸತಕ್ಕದ್ದು, ಅಂದರೆ:–

"(1) ಒಬ್ಬ ಹೂಡುವಳಿ ಸೇವೆ ಹಂಚಿಕೆದಾರ ಅಥವಾ ಒಬ್ಬ ಅನಿವಾಸಿ ತೆರಿಗೆದಾಯಕ ವ್ಯಕ್ತಿ ಅಥವಾ ಪ್ರಕರಣ 10 ಅಥವಾ ಪ್ರಕರಣ 51 ಅಥವಾ ಪ್ರಕರಣ 52ರ ಉಪಬಂಧಗಳ ಅಡಿಯಲ್ಲಿ ತೆರಿಗೆ ಸಂದಾಯ ಮಾಡುವ ಒಬ್ಬ ವ್ಯಕ್ತಿಯನ್ನು ಹೊರತುಪಡಿಸಿ ಪ್ರತಿಯೊಬ್ಬ ನೋಂದಾಯಿತ ವ್ಯಕ್ತಿಯು, ಪ್ರತಿಯೊಂದು ಕ್ಯಾಲೆಂಡರ್ ತಿಂಗಳು ಅಥವಾ ಅದರ ಭಾಗಕ್ಕೆ, ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡರ ಒಳಮುಖ ಮತ್ತು ಹೊರಮುಖ ಪೂರೈಕೆಗಳು, ಉಪಯೋಗಿಸಿದ ಹೂಡುವಳಿ ತೆರಿಗೆ ಜಮೆ, ಸಂದಾಯ ಮಾಡಬೇಕಾದ ತೆರಿಗೆ, ಸಂದಾಯ ಮಾಡಿದ ತೆರಿಗೆ ಮತ್ತು ನಿಯಮಿಸಬಹುದಾದ ಅಂಥ ಇತರ ವಿವರಗಳ

ಒಂದು ರಿಟರ್ನ್ ಅನ್ನು, ನಿಯಮಿಸಬಹುದಾದ ಅಂಥ ನಮೂನೆ ಮತ್ತು ವಿಧಾನದಲ್ಲಿ, ಮತ್ತು ಅಂಥ ಸಮಯದೊಳಗಾಗಿ, ವಿದ್ಯುನ್ಮಾನ ರೀತಿಯಲ್ಲಿ, ಒದಗಿಸತಕ್ಕದ್ದು:

ಪರಂತು, ಸರ್ಕಾರವು ಪರಿಷತ್ತಿನ ಶಿಫಾರಸ್ಸುಗಳ ಅನ್ವಯ, ಅಂಥ ಷರತ್ತುಗಳು ಮತ್ತು ನಿಬಂಧನೆಗಳಿಗೆ ಒಳಪಟ್ಟು, ಪ್ರತಿ ತ್ರೈಮಾಸಿಕ ಅಥವಾ ಅದರ ಭಾಗಕ್ಕಾಗಿ ಒಂದು ರಿಟರ್ನ್ ಅನ್ನು, ಒದಗಿಸತಕ್ಕ ನೋಂದಾಯಿತ ವ್ಯಕ್ತಿಗಳ ನಿರ್ದಿಷ್ಟ ವರ್ಗವನ್ನು ಅಧಿಸೂಚಿಸಬಹುದು.

(2) ಪ್ರಕರಣ 10ರ ಉಪಬಂಧಗಳ ಅಡಿಯಲ್ಲಿ ತೆರಿಗೆ ಸಂದಾಯ ಮಾಡುವ ಒಬ್ಬ ವ್ಯಕ್ತಿಯು, ಪ್ರತಿಯೊಂದು ಹಣಕಾಸಿನ ವರ್ಷ ಅಥವಾ ಅದರ ಭಾಗಕ್ಕಾಗಿ, ರಾಜ್ಯದೊಳಗಿನ ವಹಿವಾಟು, ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡರ ಒಳಮುಖ ಪೂರೈಕೆಗಳು, ಸಂದಾಯ ಮಾಡಬೇಕಾದ ತೆರಿಗೆ, ಸಂದಾಯ ಮಾಡಿದ ತೆರಿಗೆ ಮತ್ತು ನಿಯಮಿಸಬಹುದಾದ ಅಂಥ ಇತರ ವಿವರಗಳ ಒಂದು ರಿಟರ್ನ್ ಅನ್ನು, ನಿಯಮಿಸಬಹುದಾದ ಅಂಥ ನಮೂನೆ ಮತ್ತು ವಿಧಾನದಲ್ಲಿ, ಮತ್ತು ಅಂಥ ಸಮಯದೊಳಗಾಗಿ, ವಿದ್ಯುನ್ಮಾನ ರೀತಿಯಲ್ಲಿ, ಒದಗಿಸತಕ್ಕದ್ದು.";

(2) ಉಪಪ್ರಕರಣ (7)ಕ್ಕೆ, ಕೆಳಗಿನ ಉಪಪ್ರಕರಣವನ್ನು ಪ್ರತಿಯೋಜಿಸತಕ್ಕದ್ದು, ಅಂದರೆ:–

"(7) ಉಪಪ್ರಕರಣ (1)ರ, ಪರಂತುಕದಲ್ಲಿ ಉಲ್ಲೇಖಿಸಿದ ವ್ಯಕ್ತಿಯನ್ನು ಹೊರತುಪಡಿಸಿದಂತೆ, ಅಥವಾ ಉಪ ಪ್ರಕರಣ (3) ಅಥವಾ ಉಪ ಪ್ರಕರಣ (5)ರ ಅಡಿಯಲ್ಲಿ ರಿಟರ್ನ್ ಅನ್ನು ಒದಗಿಸುವದು ಅಗತ್ಯವಿರುವ ಪ್ರತಿಯೊಬ್ಬ ನೋಂದಾಯಿತ ವ್ಯಕ್ತಿಯು, ಅವನು ಅಂಥ ರಿಟರ್ನ್ ಅನ್ನು ಸಲ್ಲಿಸುವದು ಅಗತ್ಯವಿರುವ ಕೊನೆಯ ದಿನಾಂಕವನ್ನು ಮೀರದಂತೆ, ಅಂಥ ರಿಟರ್ನ್‌ನ ಪ್ರಕಾರ ಬಾಕಿ ಇರುವ ತೆರಿಗೆಯನ್ನು ಸರ್ಕಾರಕ್ಕೆ ಸಂದಾಯ ಮಾಡತಕ್ಕದ್ದು:

ಪರಂತು, ಉಪ ಪ್ರಕರಣ (1)ರ ಪರಂತುಕದ ಅಡಿಯಲ್ಲಿ ರಿಟರ್ನ್ ಅನ್ನು ಒದಗಿಸುವುದು ಅಗತ್ಯವಿರುವ ಪ್ರತಿಯೊಬ್ಬ ನೋಂದಾಯಿತ ವ್ಯಕ್ತಿಯು, ಒಂದು ತಿಂಗಳಿನಲ್ಲಿ ಮಾಡಿದ ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡರ ಒಳಮುಖ ಮತ್ತು ಹೊರಮುಖ ಪೂರೈಕೆಗಳು, ಉಪಯೋಗಿಸಿದ ಹೂಡುವಳಿ ತೆರಿಗೆ ಜಮೆ, ಸಂದಾಯ ಮಾಡಬೇಕಾದ ತೆರಿಗೆ, ಸಂದಾಯ ಮಾಡಿದ ತೆರಿಗೆ ಮತ್ತು ನಿಯಮಿಸಬಹುದಾದ ಅಂಥ ಇತರ ವಿವರಗಳನ್ನು ಪರಿಗಣನೆಗೆ ತೆಗೆದುಕೊಂಡು, ನಿಯಮಿಸಬಹುದಾದ ಅಂಥ ನಮೂನೆ ಮತ್ತು ವಿಧಾನದಲ್ಲಿ, ಮತ್ತು ಅಂಥ ಸಮಯದೊಳಗಾಗಿ, ಬಾಕಿ ಇರುವ ತೆರಿಗೆಯನ್ನು ಸರ್ಕಾರಕ್ಕೆ ಸಂದಾಯ ಮಾಡತಕ್ಕದ್ದು:

ಮತ್ತು ಪರಂತು, ಉಪ ಪ್ರಕರಣ (2)ರ ಅಡಿಯಲ್ಲಿ ರಿಟರ್ನ್ ಅನ್ನು ಒದಗಿಸುವುದು ಅಗತ್ಯವಿರುವ ಪ್ರತಿಯೊಬ್ಬ ನೋಂದಾಯಿತ ವ್ಯಕ್ತಿಯು, ಪ್ರತಿ ತ್ರೈಮಾಸಿಕದಲ್ಲಿ ರಾಜ್ಯದೊಳಗಿನ ವಹಿವಾಟು, ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡರ ಒಳಮುಖ ಪೂರೈಕೆಗಳು, ಸಂದಾಯ ಮಾಡಬೇಕಾದ ತೆರಿಗೆ ಮತ್ತು ನಿಯಮಿಸಬಹುದಾದ ಅಂಥ ಇತರ ವಿವರಗಳನ್ನು ಪರಿಗಣನೆಗೆ ತೆಗೆದುಕೊಂಡು, ನಿಯಮಿಸಬಹುದಾದ ಅಂಥ ನಮೂನೆ ಮತ್ತು ವಿಧಾನದಲ್ಲಿ, ಮತ್ತು ಅಂಥ ಸಮಯದೊಳಗಾಗಿ, ಬಾಕಿ ಇರುವ ತೆರಿಗೆಯನ್ನು ಸರ್ಕಾರಕ್ಕೆ ಸಂದಾಯ ಮಾಡತಕ್ಕದ್ದು."

8. ಪ್ರಕರಣ 44ರ ತಿದ್ದುಪಡಿ.– ಮೂಲ ಅಧಿನಿಯಮದ ಪ್ರಕರಣ 44ರ, ಉಪ ಪ್ರಕರಣ (1) ರಲ್ಲಿ ಈ ಮುಂದಿನ ಪರಂತುಕಗಳನ್ನು ಸೇರಿಸತಕ್ಕದ್ದು, ಎಂದರೆ:–

"ಪರಂತು, ಪರಿಷತ್ತಿನ ಶಿಫಾರಸುಗಳ ಅನ್ವಯ, ಆಯುಕ್ತರು, ಲಿಖಿತವಾಗಿ ದಾಖಲಿಸಬೇಕಾದ ಕಾರಣಗಳಿಗಾಗಿ, ಅಧಿಸೂಚನೆಯ ಮೂಲಕ, ನಿರ್ದಿಷ್ಟ ಪಡಿಸಬಹುದಾದ ಅಂಥ ತೆರಿಗೆದಾಯಕ ವ್ಯಕ್ತಿಗಳ ವರ್ಗಕ್ಕೆ, ವಾರ್ಷಿಕ ರಿಟರ್ನ್ ಅನ್ನು ಒದಗಿಸುವ ಕಾಲಮಿತಿಯನ್ನು ವಿಸ್ತರಿಸಬಹುದು:

ಮತ್ತು ಪರಂತು, ಕೇಂದ್ರ ತೆರಿಗೆ ಆಯುಕ್ತರಿಂದ ಅಧಿಸೂಚಿಸಿದ ಕಾಲಮಿತಿಯ ಯಾವುದೇ ವಿಸ್ತರಣೆಯು, ಆಯುಕ್ತರಿಂದ ಅಧಿಸೂಚಿತಗೊಂಡಿದೆ ಎಂದು ಪರಿಭಾವಿಸತಕ್ಕದ್ದು."

9. ಪ್ರಕರಣ 49ರ ತಿದ್ದುಪಡಿ.– ಮೂಲ ಅಧಿನಿಯಮದ ಪ್ರಕರಣ 49ರಲ್ಲಿ, ಉಪ ಪ್ರಕರಣ (9)ರ ತರುವಾಯ ಈ ಮುಂದಿನ ಉಪ ಪ್ರಕರಣಗಳನ್ನು ಸೇರಿಸತಕ್ಕದ್ದು, ಅಂದರೆ:–

"(10) ಒಬ್ಬ ನೋಂದಾಯಿತ ವ್ಯಕ್ತಿಯು, ಸಾಮಾನ್ಯ ಪೋರ್ಟಲ್‌ನಲ್ಲಿ, ಈ ಅಧಿನಿಯಮದ ಅಡಿಯಲ್ಲಿನ ವಿದ್ಯುನ್ಮಾನ ನಗದು ಖಾತೆಯಲ್ಲಿ ಲಭ್ಯವಿರುವ ತೆರಿಗೆ, ಬಡ್ಡಿ, ದಂಡದ ಮೊತ್ತ, ಶುಲ್ಕ ಅಥವಾ ಇತರ ಯಾವುದೇ ಮೊತ್ತವನ್ನು ಏಕೀಕೃತ ತೆರಿಗೆ, ಕೇಂದ್ರ ತೆರಿಗೆ, ರಾಜ್ಯ ತೆರಿಗೆ, ಕೇಂದ್ರಾಡಳಿತ ಪ್ರದೇಶ ತೆರಿಗೆ ಅಥವಾ ಉಪಕರದ ವಿದ್ಯುನ್ಮಾನ ನಗದು ಖಾತೆಗೆ, ನಿಯಮಿಸಬಹುದಾದ ಅಂಥ ನಮೂನೆ ಮತ್ತು ವಿಧಾನದಲ್ಲಿ ಮತ್ತು ಅಂಥ ಷರತ್ತುಗಳು ಮತ್ತು ನಿಬಂಧನೆಗಳಿಗೆ ಒಳಪಟ್ಟು, ವರ್ಗಾಯಿಸಬಹುದು ಮತ್ತು

ಅಂಥ ವರ್ಗಾವಣೆಯನ್ನು ಈ ಅಧಿನಿಯಮದ ಅಡಿಯಲ್ಲಿಯ ವಿದ್ಯುನ್ಮಾನ ನಗದು ಖಾತೆಯಿಂದ ಮಾಡಿದ ಮರುಪಾವತಿ ಎಂದು ಪರಿಭಾವಿಸತಕ್ಕದ್ದು.

(11) ಈ ಅಧಿನಿಯಮದ ಅಡಿಯಲ್ಲಿಯ ವಿದ್ಯುನ್ಮಾನ ನಗದು ಖಾತೆಗೆ ಯಾವುದೇ ಮೊತ್ತವನ್ನು ವರ್ಗಾಯಿಸಲಾಗಿದ್ದಲ್ಲಿ, ಅದು ಉಪ ಪ್ರಕರಣ (1)ರಲ್ಲಿ ಉಪಬಂಧಿಸಿದಂತೆ ಸದರಿ ಖಾತೆಯಲ್ಲಿ ಠೇವಣಿ ಮಾಡಲಾಗಿದೆ ಎಂದು ಪರಿಭಾವಿಸತಕ್ಕದ್ದು."

10. ಪ್ರಕರಣ 50ರ ತಿದ್ದುಪಡಿ.– ಮೂಲ ಅಧಿನಿಯಮದ ಪ್ರಕರಣ 50ರ, ಉಪ ಪ್ರಕರಣ (1)ರಲ್ಲಿ, ಮುಂದಿನ ಪರಂತುಕವನ್ನು ಸೇರಿಸತಕ್ಕದ್ದು, ಅಂದರೆ:–

"ಪರಂತು, ಪ್ರಕರಣ 73 ಅಥವಾ ಪ್ರಕರಣ 74ರ ಅಡಿ ಯಾವುದೇ ನಡವಳಿಗಳು ಪ್ರಾರಂಭವಾದ ನಂತರ ಒಂದು ಅವಧಿಗೆ ಸಂಬಂಧಿಸಿದಂತೆ ಒದಗಿಸಲಾದ ಅಂಥ ರಿಟರ್ನ್ ಅನ್ನು ಹೊರತುಪಡಿಸಿ, ಸದರಿ ಅವಧಿಗಾಗಿ ಪ್ರಕರಣ 39ರ ಉಪಬಂಧಗಳಿಗೆ ಅನುಸಾರವಾಗಿರುವ ಗಡುವಿನ ದಿನದ ನಂತರ ಒದಗಿಸಿರುವ ರಿಟರ್ನ್‌ನಲ್ಲಿ ಘೋಷಿಸಿಕೊಂಡಿದ್ದಾಗ, ಸದರಿ ತೆರಿಗೆ ಅವಧಿಯಲ್ಲಿ ಮಾಡಿದ ಪೂರೈಕೆಗಳಿಗೆ ಸಂಬಂಧಿಸಿದಂತೆ ಸಂದಾಯ ಮಾಡಬೇಕಾದ ತೆರಿಗೆಯ ಮೇಲಿನ ಬಡ್ಡಿಯನ್ನು, ವಿದ್ಯುನ್ಮಾನ ನಗದು ಖಾತೆಗೆ ಖರ್ಚು ಹಾಕಿ ಸಂದಾಯ ಮಾಡಿದ ತೆರಿಗೆಯ ಆ ಭಾಗದ ಮೇಲೆ ವಿಧಿಸತಕ್ಕದ್ದು.".

11. ಪ್ರಕರಣ 52ರ ತಿದ್ದುಪಡಿ.– ಮೂಲ ಅಧಿನಿಯಮದ ಪ್ರಕರಣ 52ರಲ್ಲಿ,–

(1) ಉಪ ಪ್ರಕರಣ (4) ರಲ್ಲಿ, ಈ ಮುಂದಿನ ಪರಂತುಕಗಳನ್ನು ಸೇರಿಸತಕ್ಕದ್ದು, ಅಂದರೆ:–

"ಪರಂತು, ಆಯುಕ್ತರು, ಲಿಖಿತವಾಗಿ ದಾಖಲಿಸಬೇಕಾದ ಕಾರಣಗಳಿಗಾಗಿ, ಅಧಿಸೂಚನೆಯ ಮೂಲಕ, ನಿರ್ದಿಷ್ಟಪಡಿಸಬಹುದಾದ ಅಂಥ ತೆರಿಗೆದಾಯಕ ವ್ಯಕ್ತಿಗಳ ವರ್ಗಕ್ಕೆ, ವಿವರ ಪತ್ರವನ್ನು ಒದಗಿಸುವದರ ಕಾಲಮಿತಿಯನ್ನು ವಿಸ್ತರಿಸಬಹುದು:

ಮತ್ತು ಪರಂತು, ಕೇಂದ್ರ ತೆರಿಗೆ ಆಯುಕ್ತರಿಂದ ಅಧಿಸೂಚಿಸಿದ ಕಾಲಮಿತಿಯ ಯಾವುದೇ ವಿಸ್ತರಣೆಯು, ಆಯುಕ್ತರಿಂದ ಅಧಿಸೂಚಿತಗೊಂಡಿದೆ ಎಂದು ಪರಿಭಾವಿಸತಕ್ಕದ್ದು."

(2) ಉಪ ಪ್ರಕರಣ (5) ರಲ್ಲಿ, ಈ ಮುಂದಿನ ಪರಂತುಕಗಳನ್ನು ಸೇರಿಸತಕ್ಕದ್ದು, ಎಂದರೆ:–

"ಪರಂತು, ಪರಿಷತ್ತಿನ ಶಿಫಾರಸ್ಸುಗಳ ಮೇಲೆ, ಆಯುಕ್ತರು, ಲಿಖಿತವಾಗಿ ದಾಖಲಿಸಬೇಕಾದ ಕಾರಣಗಳಿಗಾಗಿ, ಅಧಿಸೂಚನೆಯ ಮೂಲಕ, ನಿರ್ದಿಷ್ಟ ಪಡಿಸಬಹುದಾದ ಅಂಥ ತೆರಿಗೆದಾಯಕ ವ್ಯಕ್ತಿಗಳ ವರ್ಗಕ್ಕೆ, ವಾರ್ಷಿಕ ವಿವರ ಪತ್ರವನ್ನು ಒದಗಿಸುವದರ ಕಾಲಮಿತಿಯನ್ನು ವಿಸ್ತರಿಸಬಹುದು:

ಮತ್ತು ಪರಂತು, ಕೇಂದ್ರ ತೆರಿಗೆ ಆಯುಕ್ತರಿಂದ ಅಧಿಸೂಚಿಸಿದ ಕಾಲಮಿತಿಯ ಯಾವುದೇ ವಿಸ್ತರಣೆಯು, ಆಯುಕ್ತರಿಂದ ಅಧಿಸೂಚಿತಗೊಂಡಿದೆ ಎಂದು ಪರಿಭಾವಿಸತಕ್ಕದ್ದು."

12. ಹೊಸ ಪ್ರಕರಣ 53ಎ ಸೇರ್ಪಡೆ.– ಮೂಲ ಅಧಿನಿಯಮದ ಪ್ರಕರಣ 53ರ ತರುವಾಯ, ಈ ಮುಂದಿನ ಪ್ರಕರಣವನ್ನು ಸೇರಿಸತಕ್ಕದ್ದು, ಎಂದರೆ:–

"53ಎ. ಕೆಲವು ಮೊತ್ತಗಳ ವರ್ಗಾವಣೆ.– ಈ ಅಧಿನಿಯಮದ ಅಡಿಯಲ್ಲಿನ ವಿದ್ಯುನ್ಮಾನ ನಗದು ಖಾತೆಯಿಂದ ಯಾವುದೇ ಮೊತ್ತವನ್ನು ಕೇಂದ್ರ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮದ ಅಡಿಯಲ್ಲಿನ ಅಥವಾ ಏಕೀಕೃತ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮದ ಅಡಿಯಲ್ಲಿನ ಅಥವಾ ಸರಕು ಮತ್ತು ಸೇವೆಗಳ ತೆರಿಗೆ (ರಾಜ್ಯಗಳಿಗೆ ನಷ್ಟಪರಿಹಾರ) ಅಧಿನಿಯಮದ ಅಡಿಯಲ್ಲಿನ ನಗದು ಖಾತೆಗೆ ವರ್ಗಾಯಿಸಲಾಗಿರುವಲ್ಲಿ, ಸರ್ಕಾರವು, ಕೇಂದ್ರ ತೆರಿಗೆ ಖಾತೆ ಅಥವಾ ಏಕೀಕೃತ ತೆರಿಗೆ ಖಾತೆ ಅಥವಾ ಉಪಕರ ಖಾತೆಗೆ, ಹಾಗೆ ವಿದ್ಯುನ್ಮಾನ ನಗದು ಖಾತೆಯಿಂದ ವರ್ಗಾಯಿಸಿದ ಮೊತ್ತಕ್ಕೆ ಸಮನಾದ ಮೊತ್ತವನ್ನು ನಿಯಮಿಸಬಹುದಾದ ಅಂಥ ವಿಧಾನದಲ್ಲಿ ಮತ್ತು ಅಂಥ ಸಮಯದ ಒಳಗಾಗಿ ವರ್ಗಾಯಿಸತಕ್ಕದ್ದು."

13. ಪ್ರಕರಣ 54ರ ತಿದ್ದುಪಡಿ.– ಮೂಲ ಅಧಿನಿಯಮದ ಪ್ರಕರಣ 54ರ, ಉಪ ಪ್ರಕರಣ (8)ರ ತರುವಾಯ ಈ ಮುಂದಿನ ಉಪ ಪ್ರಕರಣವನ್ನು ಸೇರಿಸತಕ್ಕದ್ದು, ಅಂದರೆ:–

"(8ಎ) ಕೇಂದ್ರ ಸರ್ಕಾರವು ರಾಜ್ಯ ತೆರಿಗೆಯ ಮರುಪಾವತಿಯನ್ನು ಬಟವಾಡೆ ಮಾಡಿದ್ದಲ್ಲಿ, ಸರ್ಕಾರವು ಹಾಗೆ ಮರುಪಾವತಿ ಮಾಡಿದ ಮೊತ್ತಕ್ಕೆ ಸಮನಾದ ಮೊತ್ತವನ್ನು ಕೇಂದ್ರ ಸರ್ಕಾರಕ್ಕೆ ವರ್ಗಾಯಿಸತಕ್ಕದ್ದು."

14. ಪ್ರಕರಣ 95ರ ತಿದ್ದುಪಡಿ.– ಮೂಲ ಅಧಿನಿಯಮದ ಪ್ರಕರಣ 95ರಲ್ಲಿ,–

(1) ಖಂಡ (ಎ)ಯಲ್ಲಿ,–

(ಎ) "ಅಪೀಲು ಪ್ರಾಧಿಕಾರದಿಂದ" ಎಂಬ ಪದಗಳಿಗೆ "ಅಪೀಲು ಪ್ರಾಧಿಕಾರ ಅಥವಾ ರಾಷ್ಟ್ರೀಯ ಅಪೀಲು ಪ್ರಾಧಿಕಾರದಿಂದ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(ಬಿ) "ಪ್ರಕರಣ 100ರ ಉಪ ಪ್ರಕರಣ (1)ರಲ್ಲಿ" ಎಂಬ ಪದ ಮತ್ತು ಸಂಖ್ಯೆಗಳ ತರುವಾಯ, "ಅಥವಾ ಪ್ರಕರಣ 101ಸಿ ಉಪಪ್ರಕರಣ (1)ರಲ್ಲಿ" ಎಂಬ ಪದಗಳು, ಸಂಖ್ಯೆಗಳು ಮತ್ತು ಅಕ್ಷರವನ್ನು ಸೇರಿಸತಕ್ಕದ್ದು;

(2) ಖಂಡ (ಇ)ಯ ತರುವಾಯ, ಈ ಮುಂದಿನ ಖಂಡವನ್ನು ಸೇರಿಸತಕ್ಕದ್ದು, ಅಂದರೆ:–

"(ಎಫ್) "ರಾಷ್ಟ್ರೀಯ ಅಪೀಲು ಪ್ರಾಧಿಕಾರ" ಎಂದರೆ, ಪೂರ್ವಭಾವಿ ನಿರ್ಣಯಕ್ಕಾಗಿ ಪ್ರಕರಣ 101ಎ ಯಲ್ಲಿ ಉಲ್ಲೇಖಿಸಿದ ರಾಷ್ಟ್ರೀಯ ಅಪೀಲು ಪ್ರಾಧಿಕಾರ.".

15. ಹೊಸ ಪ್ರಕರಣ 101ಎ, 101ಬಿ ಮತ್ತು 101ಸಿ ಗಳ ಸೇರ್ಪಡೆ.– ಮೂಲ ಅಧಿನಿಯಮದ ಪ್ರಕರಣ 101ರ ತರುವಾಯ, ಈ ಮುಂದಿನ ಪ್ರಕರಣಗಳನ್ನು ಸೇರಿಸತಕ್ಕದ್ದು, ಅಂದರೆ:–

"**101ಎ. ಪೂರ್ವಭಾವಿ ನಿರ್ಣಯಕ್ಕಾಗಿ ರಾಷ್ಟ್ರೀಯ ಅಪೀಲು ಪ್ರಾಧಿಕಾರದ ರಚನೆ.**– ಈ ಅಧ್ಯಾಯದ ಉಪಬಂಧಗಳಿಗೆ ಒಳಪಟ್ಟು, ಈ ಅಧಿನಿಯಮದ ಉದ್ದೇಶಗಳಿಗಾಗಿ, ಕೇಂದ್ರ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮದ ಪ್ರಕರಣ 101ಎ ಅಡಿಯಲ್ಲಿ ರಚಿಸಲಾದ ಪೂರ್ವಭಾವಿ ನಿರ್ಣಯಕ್ಕಾಗಿ ರಾಷ್ಟ್ರೀಯ ಅಪೀಲು ಪ್ರಾಧಿಕಾರವು ಈ ಅಧಿನಿಯಮದ ಅಡಿಯಲ್ಲಿ ಪೂರ್ವಭಾವಿ ನಿರ್ಣಯಕ್ಕಾಗಿ ರಾಷ್ಟ್ರೀಯ ಅಪೀಲು ಪ್ರಾಧಿಕಾರ ಎಂದು ಪರಿಭಾವಿಸತಕ್ಕದ್ದು.

101ಬಿ. ರಾಷ್ಟ್ರೀಯ ಅಪೀಲು ಪ್ರಾಧಿಕಾರಕ್ಕೆ ಅಪೀಲು.– (1) ಪ್ರಕರಣ 97ರ ಉಪ ಪ್ರಕರಣ (2)ರಲ್ಲಿ ಉಲೇಖಿಸಿರುವ ಪ್ರಶ್ನೆಗಳಿಗೆ ಸಂಬಂಧಿಸಿದಂತೆ, ಪ್ರಕರಣ 101ರ ಉಪ ಪ್ರಕರಣ (1) ಅಥವಾ ಉಪಪ್ರಕರಣ (3)ರ ಅಡಿಯಲ್ಲಿ ಎರಡು ಅಥವಾ ಹೆಚ್ಚಿನ ರಾಜ್ಯಗಳು, ಅಥವಾ ಕೇಂದ್ರಾಡಳಿತ ಪ್ರದೇಶಗಳು ಅಥವಾ ಅವುಗಳೆರಡರ ಅಪೀಲು ಪ್ರಾಧಿಕಾರಗಳು ಪರಸ್ಪರ ವಿರೋಧದ ಪೂರ್ವಭಾವಿ ನಿರ್ಣಯಗಳನ್ನು ಕೊಟ್ಟಿದ್ದಲ್ಲಿ, ಅಂಥ ಪೂರ್ವಭಾವಿ ನಿರ್ಣಯದಿಂದ ಬಾಧಿತನಾದ, ಆಯುಕ್ತರಿಂದ ಪ್ರಾಧಿಕೃತನಾದ ಯಾವುದೇ ಅಧಿಕಾರಿಯು ಅಥವಾ ಪ್ರಕರಣ 25ರಲ್ಲಿ ಉಲ್ಲೇಖಿಸಿರುವ ವಿಭಿನ್ನ ವ್ಯಕ್ತಿಯಾಗಿರುವ ಒಬ್ಬ ಅರ್ಜಿದಾರನು, ರಾಷ್ಟ್ರೀಯ ಅಪೀಲು ಪ್ರಾಧಿಕಾರಕ್ಕೆ ಅಪೀಲು ಸಲ್ಲಿಸಬಹುದು:

ಪರಂತು, ಆ ಅಧಿಕಾರಿಯು ಅಂಥ ಪೂರ್ವಭಾವಿ ನಿರ್ಣಯಗಳನ್ನು ನೀಡಲಾಗಿರುವ ರಾಜ್ಯಗಳಿಂದ ಇರತಕ್ಕದ್ದು.

(2) ಹಾಗೆ ಅದರ ವಿರುದ್ಧವಾಗಿ ಅಪೀಲು ಕೋರಿರುವ ನಿರ್ಣಯವನ್ನು, ಅರ್ಜಿದಾರರು, ಸಂಬಂಧಿತ ಅಧಿಕಾರಿಗಳು ಮತ್ತು ಕ್ಷೇತ್ರವ್ಯಾಪ್ತಿಯ ಅಧಿಕಾರಿಗಳಿಗೆ ತಿಳಿಯಪಡಿಸಿದ ದಿನಾಂಕದಿಂದ ಮೂವತ್ತು ದಿನಗಳ ಅವಧಿಯೊಳಗೆ ಈ ಪ್ರಕರಣದ ಅಡಿಯಲ್ಲಿನ ಪ್ರತಿಯೊಂದು ಅಪೀಲನ್ನು ಸಲ್ಲಿಸತಕ್ಕದ್ದು:

ಪರಂತು, ಹಾಗೆ ಅದರ ವಿರುದ್ಧವಾಗಿ ಅಪೀಲು ಕೋರಿರುವ ನಿರ್ಣಯವನ್ನು, ಆಯುಕ್ತರಿಂದ ಅಧಿಕೃತನಾದ ಯಾವುದೇ ಅಧಿಕಾರಿಯು ಸಂಬಂಧಿತ ಅಧಿಕಾರಿಗೆ ಅಥವಾ ಕ್ಷೇತ್ರವ್ಯಾಪ್ತಿಯ ಅಧಿಕಾರಿಗೆ ತಿಳಿಯಪಡಿಸಿದ ದಿನಾಂಕದಿಂದ ತೊಂಬತ್ತು ದಿನಗಳ ಅವಧಿಯೊಳಗೆ ಅಪೀಲನ್ನು ಸಲ್ಲಿಸಬಹುದು:

ಮತ್ತು ಪರಂತು, ರಾಷ್ಟ್ರೀಯ ಅಪೀಲು ಪ್ರಾಧಿಕಾರವು, ಅರ್ಜಿದಾರನು ಸದರಿ ಮೂವತ್ತು ದಿನಗಳ, ಅಥವಾ ಸಂದರ್ಭಾನುಸಾರವಾಗಿ ತೊಂಬತ್ತು ದಿನಗಳ ಅವಧಿಯ ಒಳಗಾಗಿ ಅಪೀಲನ್ನು ಸಲ್ಲಿಸಲು ಸಾಕಷ್ಟು ಕಾರಣದಿಂದ ಪ್ರತಿಬಂಧಿತನಾಗಿದ್ದ ಎಂಬುದನ್ನು ಅದು ಮನದಟ್ಟು ಮಾಡಿಕೊಂಡರೆ, ಮೂವತ್ತು ದಿನಗಳನ್ನು ಮೀರದ ಹೆಚ್ಚಿನ ಅವಧಿಯ ಒಳಗಾಗಿ ಅದನ್ನು ಸಲ್ಲಿಸಲು ಅವಕಾಶ ನೀಡಬಹುದು.

ವಿವರಣೆ.– ಸಂದೇಹಗಳ ನಿವಾರಣೆಗಾಗಿ, ಮೂವತ್ತು ದಿನಗಳ ಅಥವಾ ಸಂದರ್ಭಾನುಸಾರವಾಗಿ, ತೊಂಬತ್ತು ದಿನಗಳ ಅವಧಿಯನ್ನು, ಹಾಗೆ ಅದರ ವಿರುದ್ಧವಾಗಿ ಅಪೀಲು ಕೋರಿರುವ ಪರಸ್ಪರ ವಿರೋಧದ ಕೊನೆಯದಾದ ಪೂರ್ವಭಾವಿ ನಿರ್ಣಯದ ತಿಳಿಯಪಡಿಸುವಿಕೆಯ ದಿನಾಂಕದಿಂದ ಲೆಕ್ಕ ಹಾಕತಕ್ಕದ್ದು ಎಂದು ಸ್ಪಷ್ಟೀಕರಿಸಲಾಗಿದೆ.

(3) ಈ ಪ್ರಕರಣದ ಅಡಿಯಲ್ಲಿನ ಪ್ರತಿಯೊಂದು ಅಪೀಲು, ನಿಯಮಿಸಬಹುದಾದ, ಅಂಥ ನಮೂನೆಯಲ್ಲಿರತಕ್ಕದ್ದು, ಅಂಥ ಶುಲ್ಕದಿಂದ ಜೊತೆಗೂಡಿರತಕ್ಕದ್ದು ಮತ್ತು ಅಂಥ ವಿಧಾನದಲ್ಲಿ ಪರಿಶೀಲಿಸಿರತಕ್ಕದ್ದು.

101ಸಿ. ರಾಷ್ಟ್ರೀಯ ಅಪೀಲು ಪ್ರಾಧಿಕಾರದ ಆದೇಶ.– (1) ರಾಷ್ಟ್ರೀಯ ಅಪೀಲು ಪ್ರಾಧಿಕಾರವು, ಅರ್ಜಿದಾರನಿಗೆ, ಕೇಂದ್ರ ತೆರಿಗೆಯ ಆಯುಕ್ತರು, ಎಲ್ಲ ಪ್ರಧಾನ ಮುಖ್ಯ ಆಯುಕ್ತರುಗಳು, ಮುಖ್ಯ ಆಯುಕ್ತರುಗಳು ಮತ್ತು ಎಲ್ಲ ರಾಜ್ಯಗಳ ರಾಜ್ಯ ತೆರಿಗೆ ಮುಖ್ಯ ಆಯುಕ್ತರು ಮತ್ತು ಆಯುಕ್ತರು ಮತ್ತು ಎಲ್ಲ ಕೇಂದ್ರಾಡಳಿತ ಪ್ರದೇಶಗಳ ಕೇಂದ್ರಾಡಳಿತ ಪ್ರದೇಶ ತೆರಿಗೆ ಮುಖ್ಯ ಆಯುಕ್ತರು ಮತ್ತು ಆಯುಕ್ತರಿಂದ

ಅಧಿಕೃತನಾದ ಅಧಿಕಾರಿಗೆ, ಅಹವಾಲನ್ನು ಹೇಳಿಕೊಳ್ಳಲು ಅವಕಾಶವನ್ನು ನೀಡಿದ ತರುವಾಯ, ಅದರ ವಿರುದ್ಧವಾಗಿ ಅಪೀಲು ಮಾಡಿರುವ ನಿರ್ಣಯವನ್ನು ಅದು ಸೂಕ್ತ ಎಂದು ಭಾವಿಸಿದಂತೆ, ಖಾತ್ರಿಗೊಳಿಸಿ, ಅಥವಾ ಮಾರ್ಪಾಡು ಮಾಡಿ ಅಂಥ ಆದೇಶವನ್ನು ಹೊರಡಿಸಬಹುದು.

(2) ರಾಷ್ಟ್ರೀಯ ಅಪೀಲು ಪ್ರಾಧಿಕಾರದ ಸದಸ್ಯರು, ಯಾವುದೇ ಅಂಶದ ಮೇಲೆ ಭಿನ್ನಾಭಿಪ್ರಾಯವನ್ನು ಹೊಂದಿದ್ದಲ್ಲಿ, ಅದನ್ನು ಬಹುಮತದ ಅಭಿಪ್ರಾಯದ ಮೇರೆಗೆ ನಿರ್ಧರಿಸತಕ್ಕದ್ದು.

(3) ಪ್ರಕರಣ 101ಬಿ ಅಡಿಯಲ್ಲಿ ಅಪೀಲನ್ನು ಸಲ್ಲಿಸಲಾಗಿರುವ ದಿನಾಂಕದಿಂದ ಸಾಧ್ಯವಾದಷ್ಟು ಮಟ್ಟಿಗೆ ತೊಂಬತ್ತು ದಿನಗಳ ಅವಧಿಯೊಳಗಾಗಿ ಉಪ–ಪ್ರಕರಣ (1)ರಲ್ಲಿ ಉಲ್ಲೇಖಿಸಲಾಗಿರುವ ಆದೇಶವನ್ನು ಹೊರಡಿಸತಕ್ಕದ್ದು.

(4) ಸದಸ್ಯರಿಂದ ಯುಕ್ತವಾಗಿ ಸಹಿ ಮಾಡಿರುವ ಮತ್ತು ನಿಯಮಿಸಬಹುದಾದ ಅಂಥ ವಿಧಾನದಲ್ಲಿ ಪ್ರಮಾಣೀಕರಿಸಿರುವ, ರಾಷ್ಟ್ರೀಯ ಅಪೀಲು ಪ್ರಾಧಿಕಾರದಿಂದ ಉಚ್ಚರಿತ ಪೂರ್ವಭಾವಿ ನಿರ್ಣಯದ ಒಂದು ಪ್ರತಿಯನ್ನು ಅರ್ಜಿದಾರನಿಗೆ, ಆಯುಕ್ತರು, ಮಂಡಳಿ, ಎಲ್ಲ ರಾಜ್ಯಗಳ ರಾಜ್ಯ ತೆರಿಗೆಯ ಮುಖ್ಯ ಆಯುಕ್ತರು ಮತ್ತು ಆಯುಕ್ತರು ಮತ್ತು ಎಲ್ಲ ಕೇಂದ್ರಾಡಳಿತ ಪ್ರದೇಶಗಳ ಕೇಂದ್ರಾಡಳಿತ ಪ್ರದೇಶ ತೆರಿಗೆಯ ಮುಖ್ಯ ಆಯುಕ್ತರು ಮತ್ತು ಆಯುಕ್ತರಿಂದ ಅಧಿಕೃತನಾದ ಅಧಿಕಾರಿಗೆ ಮತ್ತು ಸಂದರ್ಭಾನುಸಾರ ಪ್ರಾಧಿಕಾರ ಅಥವಾ ಅಪೀಲು ಪ್ರಾಧಿಕಾರಕ್ಕೆ ಅಂಥ ಉಚ್ಚರಣೆಯ ತರುವಾಯ ಕಳುಹಿಸತಕ್ಕದ್ದು."

16. ಪ್ರಕರಣ 102ರ ತಿದ್ದುಪಡಿ.– ಮೂಲ ಅಧಿನಿಯಮದ ಪ್ರಕರಣ 102ರ ಆರಂಭದ ಭಾಗದಲ್ಲಿ,–

(1) "ಅಪೀಲು ಪ್ರಾಧಿಕಾರವು" ಎಂಬ ಪದಗಳಿಗೆ "ಅಪೀಲು ಪ್ರಾಧಿಕಾರ ಅಥವಾ ರಾಷ್ಟ್ರೀಯ ಅಪೀಲು ಪ್ರಾಧಿಕಾರವು" ಪದಗಳನ್ನು ಪ್ರತಿಯೋಜಿಸತಕ್ಕದ್ದು ಮತ್ತು "ಅಪೀಲು ಪ್ರಾಧಿಕಾರವಾಗಲಿ" ಪದಗಳ ತರುವಾಯ "ಅಥವಾ ರಾಷ್ಟ್ರೀಯ ಅಪೀಲು ಪ್ರಾಧಿಕಾರವಾಗಲಿ" ಪದಗಳನ್ನು ಸೇರಿಸತಕ್ಕದ್ದು;

(2) "ಪ್ರಕರಣ 98 ಅಥವಾ ಪ್ರಕರಣ 101ರ" ಎಂಬ ಪದಗಳು ಮತ್ತು ಸಂಖ್ಯೆಗಳಿಗೆ "ಅನುಕ್ರಮವಾಗಿ ಪ್ರಕರಣ 98 ಅಥವಾ ಪ್ರಕರಣ 101 ಅಥವಾ ಪ್ರಕರಣ 101ಸಿಯ" ಎಂಬ ಪದಗಳು ಮತ್ತು ಸಂಖ್ಯೆಗಳನ್ನು ಪ್ರತಿಯೋಜಿಸತಕ್ಕದ್ದು;

(3) "ಅಥವಾ ಅಪೀಲುದಾರನಾಗಲಿ" ಎಂಬ ಪದಗಳಿಗೆ "ಅಪೀಲುದಾರನಾಗಲಿ, ಪ್ರಾಧಿಕಾರವಾಗಲಿ ಅಥವಾ ಅಪೀಲು ಪ್ರಾಧಿಕಾರವಾಗಲಿ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

17. ಪ್ರಕರಣ 103ರ ತಿದ್ದುಪಡಿ.– ಮೂಲ ಅಧಿನಿಯಮದ ಪ್ರಕರಣ 103ರಲ್ಲಿ,–

(1) ಉಪ ಪ್ರಕರಣ (1)ರ ತರುವಾಯ ಈ ಮುಂದಿನ ಉಪ ಪ್ರಕರಣವನ್ನು ಸೇರಿಸತಕ್ಕದ್ದು, ಎಂದರೆ:–

"(1ಎ) ಈ ಅಧ್ಯಾಯದ ಅಡಿಯಲ್ಲಿ ರಾಷ್ಟ್ರೀಯ ಅಪೀಲು ಪ್ರಾಧಿಕಾರದಿಂದ ಉಚ್ಚರಿಸಿದ ಪೂರ್ವಭಾವಿ ನಿರ್ಣಯವು ಕೆಳಕಂಡವರುಗಳ ಮೇಲೆ ಬದ್ಧವಾಗಿರತಕ್ಕದ್ದು–

(ಎ) ಪ್ರಕರಣ 101ಬಿಯ ಉಪ–ಪ್ರಕರಣ (1)ರ ಅಡಿಯಲ್ಲಿ ನಿರ್ಣಯವನ್ನು ಕೋರಿರುವ ವಿಭಿನ್ನ ವ್ಯಕ್ತಿಗಳಿಗಿರುವ ಅರ್ಜಿದಾರರು ಮತು ಆದಾಯ ತೆರಿಗೆ ಅಧಿನಿಯಮ, 1961 (1961ರ ಕೇಂದ್ರ ಅಧಿನಿಯಮ 43)ರ ಅಡಿಯಲ್ಲಿ ನೀಡಲಾಗಿರುವ ಒಂದೇ ಶಾಶ್ವತ ಖಾತೆ ಸಂಖ್ಯೆಯನ್ನು (PAN) ಹೊಂದಿರುವ ಎಲ್ಲ ನೋಂದಾಯಿತ ವ್ಯಕ್ತಿಗಳು;

(ಬಿ) ಖಂಡ (ಎ)ಯಲ್ಲಿ ಉಲ್ಲೇಖಿಸಲಾದ ಅರ್ಜಿದಾರರಿಗೆ ಸಂಬಂಧಿಸಿರುವ, ಸಂಬಂಧಿತ ಅಧಿಕಾರಿಗಳು ಮತ್ತು ಕ್ಷೇತ್ರವ್ಯಾಪ್ತಿಯ ಅಧಿಕಾರಿಗಳು ಮತ್ತು ಆದಾಯ ತೆರಿಗೆ ಅಧಿನಿಯಮ, 1961 (1961ರ ಕೇಂದ್ರ ಅಧಿನಿಯಮ 43)ರ ಅಡಿಯಲ್ಲಿ ನೀಡಲಾಗಿರುವ ಒಂದೇ ಶಾಶ್ವತ ಖಾತೆ ಸಂಖ್ಯೆಯನ್ನು ಹೊಂದಿರುವ ಎಲ್ಲ ನೋಂದಾಯಿತ ವ್ಯಕ್ತಿಗಳು.".

(2) ಉಪ–ಪ್ರಕರಣ (2)ರಲ್ಲಿ, "ಉಪ–ಪ್ರಕರಣ (1)ರಲ್ಲಿ" ಎಂಬ ಪದಗಳು, ಆವರಣ ಚಿಹ್ನೆ ಮತ್ತು ಸಂಖ್ಯೆಗಳ ತರುವಾಯ, "ಉಪ–ಪ್ರಕರಣ (1) ಮತ್ತು ಉಪ–ಪ್ರಕರಣ (1ಎ)ಯಲ್ಲಿ" ಎಂಬ ಪದಗಳು, ಆವರಣ ಚಿಹ್ನೆ, ಸಂಖ್ಯೆ ಮತ್ತು ಅಕ್ಷರವನ್ನು ಪ್ರತಿಯೋಜಿಸತಕ್ಕದ್ದು.

18. ಪ್ರಕರಣ 104ರ ತಿದ್ದುಪಡಿ.– ಮೂಲ ಅಧಿನಿಯಮದ ಪ್ರಕರಣ 104ರ ಉಪ–ಪ್ರಕರಣ (1) ರಲ್ಲಿ,–

(1) "ಅಪೀಲು ಪ್ರಾಧಿಕಾರಕ್ಕೆ" ಎಂಬ ಪದಗಳಿಗೆ "ಅಪೀಲು ಪ್ರಾಧಿಕಾರ ಅಥವಾ ರಾಷ್ಟ್ರೀಯ ಅಪೀಲು ಪ್ರಾಧಿಕಾರಕ್ಕೆ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(2) "ಪ್ರಕರಣ 101ರ ಉಪಪ್ರಕರಣ (1)ರ ಅಡಿಯಲ್ಲಿ" ಎಂಬ ಪದಗಳು ಮತ್ತು ಸಂಖ್ಯೆಯ ತರುವಾಯ, "ಅಥವಾ ಪ್ರಕರಣ 101ಸಿ ಉಪಪ್ರಕರಣ (1)ರ ಅಡಿಯಲ್ಲಿ" ಎಂಬ ಪದಗಳು, ಸಂಖ್ಯೆ ಮತ್ತು ಅಕ್ಷರವನ್ನು ಸೇರಿಸತಕ್ಕದ್ದು.

19. ಪ್ರಕರಣ 105ರ ತಿದ್ದುಪಡಿ.– ಮೂಲ ಅಧಿನಿಯಮದ ಪ್ರಕರಣ 105ರಲ್ಲಿ,–

(1) ಶೀರ್ಷಿಕೆಗೆ, ಈ ಮುಂದಿನ ಶೀರ್ಷಿಕೆಯನ್ನು ಪ್ರತಿಯೋಜಿಸತಕ್ಕದ್ದು, ಅಂದರೆ:–

"ಪ್ರಾಧಿಕಾರ, ಅಪೀಲು ಪ್ರಾಧಿಕಾರ ಮತ್ತು ರಾಷ್ಟ್ರೀಯ ಅಪೀಲು ಪ್ರಾಧಿಕಾರದ ಅಧಿಕಾರಗಳು";

(2) ಉಪ–ಪ್ರಕರಣ (1)ರಲ್ಲಿ, "ಅಪೀಲು ಪ್ರಾಧಿಕಾರ" ಎಂಬ ಪದಗಳ ತರುವಾಯ, "ಅಥವಾ ರಾಷ್ಟ್ರೀಯ ಅಪೀಲು ಪ್ರಾಧಿಕಾರ" ಎಂಬ ಪದಗಳನ್ನು ಸೇರಿಸತಕ್ಕದ್ದು;

(3) ಉಪ–ಪ್ರಕರಣ (2)ರಲ್ಲಿ, "ಅಪೀಲು ಪ್ರಾಧಿಕಾರವನ್ನು," ಎಂಬ ಪದಗಳಿಗೆ "ಅಪೀಲು ಪ್ರಾಧಿಕಾರ ಅಥವಾ ರಾಷ್ಟ್ರೀಯ ಅಪೀಲು ಪ್ರಾಧಿಕಾರವನ್ನು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

20. ಪ್ರಕರಣ 106ರ ತಿದ್ದುಪಡಿ.– ಮೂಲ ಅಧಿನಿಯಮದ ಪ್ರಕರಣ 106ರಲ್ಲಿ,–

(1) ಶೀರ್ಷಿಕೆಗೆ, ಈ ಮುಂದಿನ ಶೀರ್ಷಿಕೆಯನ್ನು ಪ್ರತಿಯೋಜಿಸತಕ್ಕದ್ದು, ಅಂದರೆ:–

"ಪ್ರಾಧಿಕಾರ, ಅಪೀಲು ಪ್ರಾಧಿಕಾರ ಮತ್ತು ರಾಷ್ಟ್ರೀಯ ಅಪೀಲು ಪ್ರಾಧಿಕಾರದ ಕಾರ್ಯವಿಧಾನ";

(2) "ಅಪೀಲು ಪ್ರಾಧಿಕಾರವು" ಎಂಬ ಪದಗಳಿಗೆ, "ಅಪೀಲು ಪ್ರಾಧಿಕಾರ ಅಥವಾ ರಾಷ್ಟ್ರೀಯ ಅಪೀಲು ಪ್ರಾಧಿಕಾರವು" ಎಂಬ ಪದಗಳನ್ನು ಮತ್ತು "ಅಪೀಲು ಪ್ರಾಧಿಕಾರದ" ಎಂಬ ಪದಗಳಿಗೆ ಅಪೀಲು ಪ್ರಾಧಿಕಾರ ಅಥವಾ ರಾಷ್ಟ್ರೀಯ ಅಪೀಲು ಪ್ರಾಧಿಕಾರದ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು

21. ಪ್ರಕರಣ 171ರ ತಿದ್ದುಪಡಿ.– ಮೂಲ ಅಧಿನಿಯಮದ ಪ್ರಕರಣ 171ರ, ಉಪ–ಪ್ರಕರಣ (3)ರ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಅಂದರೆ:–

"(3ಎ) ಉಪ–ಪ್ರಕರಣ (2)ರಲ್ಲಿ ಉಲ್ಲೇಖಿತ ಪ್ರಾಧಿಕಾರವು ಸದರಿ ಉಪ–ಪ್ರಕರಣದ ಅಡಿಯಲ್ಲಿ ಅಗತ್ಯವಿರುವ ಪರಿಶೀಲನೆಯನ್ನು ಜರುಗಿಸಿದ ನಂತರ ಯಾವುದೇ ನೋಂದಾಯಿತ ವ್ಯಕ್ತಿಯು ಉಪ–ಪ್ರಕರಣ (1)ರ ಅಡಿಯಲ್ಲಿ ಲಾಭಬಡಕತನ ಮಾಡಿದ್ದಾನೆಂಬ ತೀರ್ಮಾನಕ್ಕೆ ಬಂದರೆ, ಅಂಥ ವ್ಯಕ್ತಿಯು ಆ ರೀತಿ ಲಾಭಬಡಕತನ ಮಾಡಿರುವ ಮೊತ್ತದ ಶೇಕಡ ಹತ್ತರಷ್ಟು ದಂಡವನ್ನು ಸಂದಾಯ ಮಾಡಲು ಬಾಧ್ಯನಾಗಿರತಕ್ಕದ್ದು:

ಪರಂತು, ಪ್ರಾಧಿಕಾರದಿಂದ ಆದೇಶ ಮಾಡುವ ದಿನಾಂಕದ ಮೂವತ್ತು ದಿನಗಳ ಒಳಗಾಗಿ ಲಾಭಬಡಕತನ ಮಾಡಿರುವ ಮೊತ್ತವನ್ನು ಠೇವಣಿ ಮಾಡಿದ್ದರೆ ಯಾವುದೇ ದಂಡವನ್ನು ವಿಧಿಸತಕ್ಕದ್ದಲ್ಲ.

ವಿವರಣೆ.– ಈ ಪ್ರಕರಣದ ಉದ್ದೇಶಗಳಿಗಾಗಿ, "ಲಾಭಬಡಕತನ ಮಾಡಿದ" ಪದಾವಳಿಗೆ ಸರಕು ಅಥವಾ ಸೇವೆಗಳು ಅಥವಾ ಅವೆರಡರ ಪೂರೈಕೆಗಳ ಮೇಲಿನ ತೆರಿಗೆ ದರದಲ್ಲಿನ ಇಳಿಕೆಯ ಪ್ರಯುಕ್ತ ಆದ ಅನುಕೂಲತೆಯನ್ನು ಅಥವಾ ಹೂಡುವಳಿ ತೆರಿಗೆ ಜಮೆಯ ಅನುಕೂಲತೆಯನ್ನು ಅದಕ್ಕೆ ತಕ್ಕಂತೆ ಸರಕು ಅಥವಾ ಸೇವೆಗಳು ಅಥವಾ ಅವೆರಡರ ಬೆಲೆಯಲ್ಲಿ ಇಳಿಕೆ ಮಾಡದೆ ಸ್ವೀಕರಿಸುವವನಿಗೆ ವರ್ಗಾಯಿಸದೆ ಇರುವ ಕಾರಣದಿಂದಾಗಿ ನಿರ್ಧರಿಸಿದ ಮೊತ್ತ ಎಂದು ಅರ್ಥೈಸತಕ್ಕದ್ದು.".

22. ಮೂಲ ಅಧಿನಿಯಮದ ಪ್ರಕರಣ 11ರ ಉಪಪ್ರಕರಣ (1)ರ ಅಡಿಯಲ್ಲಿ ಹೊರಡಿಸಿರುವ ಅಧಿಸೂಚನೆ (2/2017) ಸಂ. ಎಫ್‌ಡಿ 48 ಸಿಎಸ್‌ಎಲ್ 2017ನ್ನು ಪೂರ್ವಾನ್ವಯವಾಗುವಂತೆ ತಿದ್ದುಪಡಿ.– (1) ಪರಿಷತ್ತಿನ ಶಿಫಾರಸುಗಳ ಅನ್ವಯ, ಕರ್ನಾಟಕ ಸರ್ಕಾರವು ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ 2017ರ ಪ್ರಕರಣ 11ರ ಉಪ–ಪ್ರಕರಣ (1)ರ ಅಡಿಯಲ್ಲಿ ಹೊರಡಿಸಿರುವ ಕರ್ನಾಟಕ ಸರ್ಕಾರದ ಅಧಿಸೂಚನೆ (2/2017) ಸಂ. ಎಫ್‌ಡಿ 48 ಸಿಎಸ್‌ಎಲ್ 2017, ದಿನಾಂಕ 29ನೇ ಜೂನ್ 2017 ರಲ್ಲಿಯ ಅನುಸೂಚಿಯಲ್ಲಿ, ಕ್ರ. ಸಂ. 103 ಮತ್ತು ಅದಕ್ಕೆ ಸಂಬಂಧಿಸಿದ ನಮೂದಿನ ನಂತರ, ಕೆಳಗಿನ ಕ್ರ. ಸಂ. ಮತ್ತು ನಮೂದುಗಳನ್ನು ಸೇರಿಸತಕ್ಕದ್ದು ಮತ್ತು ಜುಲೈ 2017ರ 1ನೇ ದಿನದಂದ ಪೂರ್ವಾನ್ವಯವಾಗಿ ಜಾರಿಗೆ ಬರುವಂತೆ ಸೇರಿಸಲಾಗಿದೆ ಎಂದು ಪರಿಭಾವಿಸತಕ್ಕದ್ದು, ಅಂದರೆ:–

(1)	(2)	(3)
"103ಎ	26	ಯುರೇನಿಯಮ್ ಅದಿರು ಕಾನ್ಸಂಟ್ರೇಟ್"

(2) ಉಪ–ಪ್ರಕರಣ (1)ರ ಉದ್ದೇಶಗಳಿಗಾಗಿ, ಉಪಪ್ರಕರಣ (1)ರಲ್ಲಿ ಉಲ್ಲೇಖಿತ ಅಧಿಸೂಚನೆಯನ್ನು ಪೂರ್ವಾನ್ವಯವಾಗಿ ತಿದ್ದುಪಡಿ ಮಾಡಲು ಕರ್ನಾಟಕ ಸರ್ಕಾರಕ್ಕೆ ಅಧಿಕಾರವಿರತಕ್ಕದ್ದು ಮತ್ತು ಎಲ್ಲ ಭೌತಿಕ

ಸಮಯಗಳಲ್ಲಿಯೂ ಸದರಿ ಅಧಿಸೂಚನೆಯನ್ನು ಪ್ರಕರಣ 11ರ ಉಪ–ಪ್ರಕರಣ (1)ರ ಅಡಿಯಲ್ಲಿ ಪೂರ್ವಾನ್ವಯವಾಗಿ ತಿದ್ದುಪಡಿ ಮಾಡಲು ಕರ್ನಾಟಕ ಸರ್ಕಾರಕ್ಕೆ ಅಧಿಕಾರವಿತ್ತು ಎಂಬಂತೆ ಪರಿಭಾವಿಸತಕ್ಕದ್ದು.

(3) ಉಪಪ್ರಕರಣ (1)ರಲ್ಲಿ ಉಲ್ಲೇಖಿತ ಅಧಿಸೂಚನೆಯು ಎಲ್ಲ ಭೌತಿಕ ಸಮಯಗಳಲ್ಲಿಯೂ ಜಾರಿಯಲ್ಲಿ ಇದ್ದಿದ್ದರೆ ಹಾಗೆ ಸಂಗ್ರಹಿಸಲಾಗದಂತಹ ಆದರೆ ಸಂಗ್ರಹಿಸಲಾದ ಅಂಥ ಎಲ್ಲ ತೆರಿಗೆಯನ್ನು ಮರುಪಾವತಿ ಮಾಡತಕ್ಕದ್ದಲ್ಲ.

ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ಭಾರತದ ಸಂಸತ್ತು, ಹಣಕಾಸು (ಸಂಖ್ಯೆ 2) ಅಧಿನಿಯಮ, 2019ನ್ನು (2019ರ ಕೇಂದ್ರ ಅಧಿನಿಯಮ ಸಂಖ್ಯೆ 23) ಅಧಿನಿಯಮಿಸಿದ್ದು ಅದರಲ್ಲಿ ಕೇಂದ್ರ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017ಕ್ಕೆ ಕೆಲವು ತಿದ್ದುಪಡಿಯನ್ನು ಮಾಡಲಾಗಿತ್ತು. ಅದಕ್ಕನುಸಾರವಾಗಿ ಕರ್ನಾಟಕ ಸರಕುಗಳು ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017ಕ್ಕೆ ಅದೇ ತೆರನಾದ ತಿದ್ದುಪಡಿಯನ್ನು ಮಾಡಬೇಕಾಗಿದೆ.

ಆದ್ದರಿಂದ, ಈ ಮುಂದಿನವುಗಳಿಗಾಗಿ ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017ಕ್ಕೆ (2017ರ ಕರ್ನಾಟಕ ಅಧಿನಿಯಮ 27) ತಿದ್ದುಪಡಿ ಮಾಡುವುದು ಅವಶ್ಯವೆಂದು ಪರಿಗಣಿಸಲಾಗಿದೆ,–

(i) ರಾಷ್ಟ್ರೀಯ ಅಪೀಲು ಪ್ರಾಧಿಕಾರವನ್ನು ನ್ಯಾಯ ನಿರ್ಣಯ ಪ್ರಾಧಿಕಾರದ ಪರಿಭಾಷೆಯಿಂದ ಹೊರಗಿಡಲು **"ರಾಷ್ಟ್ರೀಯ ಅಪೀಲು ಪ್ರಾಧಿಕಾರ"** ಪದಗಳನ್ನು **"ನ್ಯಾಯನಿರ್ಣಯ ಪ್ರಾಧಿಕಾರ"** ದ ಪರಿಭಾಷೆಯಲ್ಲಿ ಸೇರಿಸಲು;

(ii) ಹಿಂದಿನ ಹಣಕಾಸು ವರ್ಷದಲ್ಲಿ ಐವತ್ತು ಲಕ್ಷ ರೂಪಾಯಿಗಳಷ್ಟು ವಾರ್ಷಿಕ ವಹಿವಾಟು ಹೊಂದಿರುವ (ಮೊದಲಿನ ರಾಜಿ ತೆರಿಗೆ ಪದ್ಧತಿಗೆ ಅರ್ಹರಲ್ಲದ) ಸೇವೆಗಳ ಪೂರೈಕೆದಾರನಿಗೆ ಅಥವಾ ಮಿಶ್ರ ಪೂರೈಕೆದಾರನಿಗೆ ಪರ್ಯಾಯ ರಾಜಿ ತೆರಿಗೆ ಪದ್ಧತಿಯನ್ನು ಒದಗಿಸಲು;

(iii) ಪ್ರತ್ಯೇಕವಾಗಿ ಸರಕುಗಳ ಪೂರೈಕೆಯಲ್ಲಿ ತೊಡಗಿರುವ ಪೂರೈಕೆದಾರನ ಪ್ರಕರಣದಲ್ಲಿ ವಿನಾಯಿತಿಯ ಮಿತಿಯನ್ನು ಇಪ್ಪತ್ತು ಲಕ್ಷ ರೂಪಾಯಿಗಳಿಂದ ನಲವತ್ತು ಲಕ್ಷ ರೂಪಾಯಿಗಳನ್ನು ಮೀರದ ಅಂಥ ಮೊತ್ತಕ್ಕಾಗಿ ಹೆಚ್ಚಿನ ಮಿತಿಯ ವಿನಾಯತಿಯನ್ನು ಒದಗಿಸಲು;

(iv) ಸದರಿ ಅಧಿನಿಯಮದ ಅಡಿಯಲ್ಲಿ ನೋಂದಣಿ ಪಡೆಯಲು ಇಚ್ಛಿಸಿರುವ ಅಥವಾ ತೆಗೆದುಕೊಂಡಿರುವ ವ್ಯಕ್ತಿಗಳು, ಪರಿಷತ್ತಿನ ಶಿಫಾರಸ್ಸುಗಳ ಅನ್ವಯ, ಸರ್ಕಾರವು ಅಧಿಸೂಚಿತಗೊಳಿಸಬಹುದಾದ ಅಂಥ ವಿಧಾನದಲ್ಲಿ, ಕಡ್ಡಾಯವಾಗಿ ಆಧಾರ್ ಸಲ್ಲಿಕೆಗೆ ಅಥವಾ ಧೃಢೀಕರಣಕ್ಕೆ ಒಳಗಾಗಲು;

(v) ಪೂರೈಕೆದಾರನು ಅವನ ಸ್ವೀಕೃತದಾತನಿಗೆ ವಿದ್ಯುನ್ಮಾನ ಸಂದಾಯದ ವಿಧಾನಗಳನ್ನು ಕಡ್ಡಾಯವಾಗಿ ಒದಗಿಸಲು;

(vi) ಪ್ರಸ್ತಾವಿತ ಹೊಸ ರಿಟರ್ನ್ ಪದ್ಧತಿಯ ಅಡಿಯಲ್ಲಿ ರಾಜಿ ವಿಧಿಸುವಿಕೆಯನ್ನು ಆಯ್ಕೆ ಮಾಡಿಕೊಳ್ಳುವ ತೆರಿಗೆದಾತನಿಗೆ ವಾರ್ಷಿಕ ರಿಟರ್ನ್‌ಗಳ ಸಲ್ಲಿಕೆ ಮತ್ತು ತ್ರೈಮಾಸಿಕ ತೆರಿಗೆ ಸಂದಾಯವನ್ನು ಒದಗಿಸಲು ಮತ್ತು ಕೆಲವು ಇತರ ವರ್ಗದ ತೆರಿಗೆದಾತರಿಗೆ ತ್ರೈಮಾಸಿಕ ಮತ್ತು ಮಾಸಿಕ ಸಂದಾಯಗಳ ಆಯ್ಕೆಯನ್ನು ಒದಗಿಸಲು;

(vii) ವಾರ್ಷಿಕ ರಿಟರ್ನ್ ಅನ್ನು ಮತ್ತು ಹೊಂದಾಣಿಕೆ ವಿವರ ಪತ್ರವನ್ನು ಒದಗಿಸುವುದರ ಕಾಲಮಿತಿಯನ್ನು ವಿಸ್ತರಿಸಲು ಆಯುಕ್ತರಿಗೆ ಅಧಿಕಾರ ನೀಡಲು;

(viii) ತೆರಿಗೆದಾತನಿಗೆ ವಿದ್ಯುನ್ಮಾನ ನಗದು ಖಾತೆಯಲ್ಲಿ ಒಂದು ಶೀರ್ಷಿಕೆಯಿಂದ ಇನ್ನೊಂದಕ್ಕೆ ವರ್ಗಾಯಿಸುವ ಸೌಲಭ್ಯವನ್ನು ಒದಗಿಸಲು;

(ix) ಅಧಿನಿಯಮದ ಪ್ರಕರಣ 73 ಅಥವಾ 74ರ ಅಡಿಯಲ್ಲಿ ಯಾವುದೇ ನಡವಳಿಗಳನ್ನು ಆರಂಭಿಸಿದ ನಂತರ ತೆರಿಗೆ ಸಂದಾಯ ಮಾಡಿದ ಪ್ರಕರಣಗಳನ್ನು ಹೊರತುಪಡಿಸಿದಂತೆ ಕೇವಲ ನಿವ್ವಳ ನಗದು ತೆರಿಗೆ ಬಾಧ್ಯತೆಯ ಮೇಲೆ ಬಡ್ಡಿ ವಿಧಿಸುವಿಕೆಗೆ ಉಪಬಂಧ ಕಲ್ಪಿಸಲು;

(x) ಮೂಲದಲ್ಲಿ ತೆರಿಗೆ ಸಂಗ್ರಹಿಸುವ ವ್ಯಕ್ತಿಯಿಂದ ಮಾಸಿಕ ಮತ್ತು ವಾರ್ಷಿಕ ವಿವರಪತ್ರವನ್ನು ಒದಗಿಸುವದರ ಕಾಲಮಿತಿಯನ್ನು ವಿಸ್ತರಿಸಲು ಆಯುಕ್ತರಿಗೆ ಅಧಿಕಾರ ನೀಡಲು;

(xi) 49ನೇ ಪ್ರಕರಣದ ಅಡಿಯಲ್ಲಿ ತೆರಿಗೆದಾತನಿಗೆ ನೀಡಲಾಗಿರುವ ಹೊಸ ಸೌಲಭ್ಯದ ಪರಿಣಾಮವಾಗಿ ವಿದ್ಯುನ್ಮಾನ ನಗದು ಖಾತೆಯಲ್ಲಿಯ ಮೊತ್ತವನ್ನು ಕೇಂದ್ರ ಮತ್ತು ರಾಜ್ಯಗಳ ನಡುವೆ ವರ್ಗಾವಣೆ ಮಾಡುವುದಕ್ಕೆ ಉಪಬಂಧ ಕಲ್ಪಿಸಲು;

(xii) ಕೇಂದ್ರ ಸರ್ಕಾರವು ರಾಜ್ಯ ತೆರಿಗೆಯ ಮರುಪಾವತಿಯನ್ನು ಬಟವಾಡೆ ಮಾಡಿದ್ದಲ್ಲಿ, ಆ ಮೊತ್ತಕ್ಕೆ ಸಮನಾದ ಮೊತ್ತವನ್ನು ಕೇಂದ್ರ ಸರ್ಕಾರಕ್ಕೆ ವರ್ಗಾಯಿಸಲು ಸರ್ಕಾರಕ್ಕೆ ಅಧಿಕಾರ ನೀಡಲು;

(xiii) **"**ಪೂರ್ವಭಾವಿ ನಿರ್ಣಯ**"**ದ ಪರಿಭಾಷೆಯಲ್ಲಿ **"**ಪೂರ್ವಭಾವಿ ನಿರ್ಣಯಕ್ಕಾಗಿ ರಾಷ್ಟ್ರೀಯ ಅಪೀಲು ಪ್ರಾಧಿಕಾರ**"** ವನ್ನು ಸೇರಿಸಲು ಅಲ್ಲದೆ **"**ರಾಷ್ಟ್ರೀಯ ಅಪೀಲು ಪ್ರಾಧಿಕಾರ**"** ವನ್ನು ಪರಿಭಾಷಿಸುವುದಕ್ಕೆ ಈ ಅಧಿನಿಯಮದ ಪ್ರಕರಣ 95 ರಲ್ಲಿ ಖಂಡ (ಎಫ್)ನ್ನು ಸೇರಿಸಲು;

(xiv) ಕೇಂದ್ರ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮದ ಅಡಿಯಲ್ಲಿ ಉಪಬಂಧಿಸಿದಂತೆ, ಪೂರ್ವಭಾವಿ ನಿರ್ಣಯಕ್ಕಾಗಿ ರಾಷ್ಟ್ರೀಯ ಅಪೀಲು ಪ್ರಾಧಿಕಾರವನ್ನು ರಚಿಸಲು ಮತ್ತು ರಾಷ್ಟ್ರೀಯ ಅಪೀಲು ಪ್ರಾಧಿಕಾರದ ಅಧ್ಯಕ್ಷ ಹಾಗೂ ಸದಸ್ಯರ ಅರ್ಹತೆ, ನೇಮಕ, ಅವಧಿ, ಸೇವೆಗಳ ಷರತ್ತುಗಳು ಹಾಗೂ ತೆಗೆದು ಹಾಕುವ ವಿಧಾನಗಳನ್ನು ಉಪಬಂಧಿಸಲು ಕೋರುತ್ತದೆ. ಪ್ರಸ್ತಾವಿತ ಹೊಸ ಪ್ರಕರಣ 101ಬಿ ಯು, ಎರಡು ಅಥವಾ ಹೆಚ್ಚಿನ ರಾಜ್ಯಗಳು ಅಥವಾ ಕೇಂದ್ರಾಡಳಿತ ಪ್ರದೇಶಗಳು ಅಥವಾ ಅವೆರಡರ ಅಪೀಲು ಪ್ರಾಧಿಕಾರಗಳು ಅಧಿನಿಯಮದ ಪ್ರಕರಣ 101ರ ಉಪ ಪ್ರಕರಣ (1) ಅಥವಾ ಉಪ ಪ್ರಕರಣ (3)ರ ಅಡಿಯಲ್ಲಿ ಒಂದೇ ಪ್ರಶ್ನೆಯ ಮೇಲೆ ಭಿನ್ನಾಭಿಪ್ರಾಯದ ಪೂರ್ವಭಾವಿ ನಿರ್ಣಯಗಳನ್ನು ಉಚ್ಚರಿಸಿದ್ದರ ವಿರುದ್ಧ ಅಪೀಲುಗಳನ್ನು ಸಲ್ಲಿಸಲು ಮತ್ತು ಅಪೀಲಿನ ಅಹವಾಲನ್ನು ಕೇಳಿಕೊಳ್ಳಲು ಅನುಸರಿಸಬೇಕಾದ ವಿಧಾನಗಳನ್ನು ಉಪಬಂಧಿಸಲು ಕೋರುತ್ತದೆ. ಪ್ರಸ್ತಾವಿತ ಹೊಸ ಪ್ರಕರಣ 101ಸಿ ಯು, ಅಪೀಲನ್ನು ಸಲ್ಲಿಸಿದ ತೊಂಬತ್ತು ದಿನಗಳ ಅವಧಿಯೊಳಗಾಗಿ ರಾಷ್ಟ್ರೀಯ ಅಪೀಲು ಪ್ರಾಧಿಕಾರವು ಆದೇಶವನ್ನು ನೀಡತಕ್ಕದ್ದು ಎಂದು ಉಪಬಂಧಿಸಲು ಕೋರುತ್ತದೆ. ಅಲ್ಲದೆ ಯಾವುದಾದರೂ ಅಂಶದ ಮೇಲೆ ಸದಸ್ಯರು ಭಿನ್ನಮತ ಹೊಂದಿದ್ದಲ್ಲಿ ಅದನ್ನು ಬಹುಮತದಿಂದ ನಿರ್ಣಯಿಸಲು ಉಪಬಂಧಿಸುತ್ತದೆ;

(xv) ರಾಷ್ಟ್ರೀಯ ಅಪೀಲು ಪ್ರಾಧಿಕಾರಕ್ಕೆ ತನ್ನ ಪೂರ್ವಭಾವಿ ನಿರ್ಣಯದ ತಪ್ಪನ್ನು ಸರಿಪಡಿಸುವುದಕ್ಕಾಗಿ ಅಧಿಕಾರ ನೀಡುವುದನ್ನು ಆ ಪ್ರಕರಣದ ಪರಿಧಿಯೊಳಗೆ ತರಲು;

(xvi) ರಾಷ್ಟ್ರೀಯ ಅಪೀಲು ಪ್ರಾಧಿಕಾರದಿಂದ ಉಚ್ಚರಿಸಿದ ಪೂರ್ವಭಾವಿ ನಿರ್ಣಯದ ಮೇಲೆ ವಿಭಿನ್ನ ವ್ಯಕ್ತಿಗಳಾಗಿರುವ ಅರ್ಜಿದಾರರು ಮತ್ತು ಒಂದೇ ಶಾಶ್ವತ ಖಾತೆ (PAN) ಸಂಖ್ಯೆಯನ್ನು ಹೊಂದಿರುವ ಎಲ್ಲ ನೋಂದಾಯಿತ ವ್ಯಕ್ತಿಗಳು ಮತ್ತು ಸಂಬಂಧಿತ ಅಧಿಕಾರಿಗಳು ಮತ್ತು ಸದರಿ ಅರ್ಜಿದಾರರ ಸಂದರ್ಭದಲ್ಲಿ ಕ್ಷೇತ್ರವ್ಯಾಪ್ತಿಯ ಅಧಿಕಾರಿಗಳು ಮತ್ತು ಒಂದೇ ಶಾಶ್ವತ ಖಾತೆ (PAN) ಸಂಖ್ಯೆಯನ್ನು ಹೊಂದಿರುವ ನೋಂದಾಯಿತ ವ್ಯಕ್ತಿಗಳು ಬದ್ಧರಾಗಿರತಕ್ಕದ್ದು ಎಂದು ಉಪಬಂಧ ಕಲ್ಪಿಸುವುದಕ್ಕಾಗಿ. ಅಲ್ಲದೆ ಆ ನಿರ್ಣಯವು ಕಾನೂನು ಅಥವಾ ವಾಸ್ತವಾಂಶಗಳಲ್ಲಿ ಬದಲಾವಣೆ ಆಗುವವರೆಗೂ ಸಹ ಬದ್ಧವಾಗಿರತಕ್ಕದ್ದು ಎಂಬುದನ್ನು ಉಪಬಂಧಿಸಲು;

(xvii) ರಾಷ್ಟ್ರೀಯ ಅಪೀಲು ಪ್ರಾಧಿಕಾರದಿಂದ ಉಚ್ಚರಿಸಿದ ಪೂರ್ವಭಾವಿ ನಿರ್ಣಯವನ್ನು ಮೋಸ ಅಥವಾ ಮುಖ್ಯ ಸಂಗತಿಗಳ ಬಚ್ಚಿಡುವಿಕೆ ಅಥವಾ ಸಂಗತಿಗಳನ್ನು ತಪ್ಪಾಗಿ ಹೇಳುವುದರಿಂದ ಪಡೆಯಲಾಗಿದ್ದರೆ ಅದು ಅನೂರ್ಜಿತವಾಗತಕ್ಕದ್ದು ಎಂದು ಉಪಬಂಧಿಸಲು;

(xviii) ರಾಷ್ಟ್ರೀಯ ಅಪೀಲು ಪ್ರಾಧಿಕಾರವು ಸಿವಿಲ್ ಪ್ರಕ್ರಿಯಾ ಸಂಹಿತೆ 1908ರ ಅಡಿಯಲ್ಲಿ ಒಂದು ಸಿವಿಲ್ ನ್ಯಾಯಾಲಯದ ಎಲ್ಲಾ ಅಧಿಕಾರಗಳನ್ನು ಹೊಂದಿರತಕ್ಕದ್ದು ಎಂದು ಉಪಬಂಧಿಸಲು;

(xix) ರಾಷ್ಟ್ರೀಯ ಅಪೀಲು ಪ್ರಾಧಿಕಾರವು ತನ್ನ ಸ್ವಂತ ಕಾರ್ಯವಿಧಾನವನ್ನು ವಿನಿಯಮಿಸಲು ಅಧಿಕಾರವನ್ನು ಹೊಂದಿರತಕ್ಕದ್ದು ಎಂದು ಉಪಬಂಧಿಸಲು;

(xx) ಪ್ರಾಧಿಕಾರವು ಲಾಭಬಡಕತನದ ಮೊತ್ತದ ಶೇಕಡ ಹತ್ತರಷ್ಟು ದಂಡವನ್ನು ವಿಧಿಸುವುದಕ್ಕೆ ಅಧಿಕಾರವನ್ನು ನೀಡಲು;

(xxi) ಜುಲೈ 1, 2017ರಿಂದ ನವೆಂಬರ್ 14, 2017ರ ವರೆಗೆ ರಾಜ್ಯ ತೆರಿಗೆಯಿಂದ "ಯುರೇನಿಯಮ್ ಅದಿರು ಕಾನ್ಸಂಟ್ರೇಟ್" ವಿಧಿಸುವಿಕೆಗೆ ಪೂರ್ವಾನ್ವಯವಾಗಿ ವಿನಾಯಿತಿ ನೀಡಲು.

ಆದ್ದರಿಂದ ಈ ವಿಧೇಯಕ.

ಆರ್ಥಿಕ ಜ್ಞಾಪನ ಪತ್ರ

ಪ್ರಸ್ತಾವಿತ ಶಾಸನಾತ್ಮಕ ಕ್ರಮವು ಯಾವುದೇ ಹೆಚ್ಚಿನ ವೆಚ್ಚವನ್ನು ಒಳಗೊಂಡಿರುವುದಿಲ್ಲ.

ಪ್ರತ್ಯಾಯೋಜಿತ ಶಾಸನ ರಚನಾಧಿಕಾರದ ಕುರಿತು ಜ್ಞಾಪನ ಪತ್ರ

ಖಂಡ 3:	ವಿಧೇಯಕದ 3ನೇ ಖಂಡದ ಮೂಲಕ ಸೇರಿಸಲು ಉದ್ದೇಶಿಸಲಾದ 10ನೇ ಪ್ರಕರಣದ (2ಎ) ಉಪಪ್ರಕರಣವು, ಸದರಿ ಉಪಪ್ರಕರಣದ ಅಡಿಯಲ್ಲಿ ರಾಜ್ಯದಲ್ಲಿಯ ವಹಿವಾಟಿನ ಶೇಕಡ ಮೂರರಷ್ಟನ್ನು ಮೀರದ ತೆರಿಗೆಯ ಮೊತ್ತವನ್ನು ಲೆಕ್ಕ ಹಾಕುವ ಉದ್ದೇಶಕ್ಕಾಗಿ ನಿಯಮಗಳ ಮೂಲಕ ನಿಯಮಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರ ನೀಡುತ್ತದೆ.
ಖಂಡ 5:	5ನೇ ಖಂಡದ ಮೂಲಕ ಸೇರಿಸಲು ಉದ್ದೇಶಿಸಲಾದ 25ನೇ ಪ್ರಕರಣದ (6ಎ) ಉಪಪ್ರಕರಣವು ನೋಂದಾಯಿತ ವ್ಯಕ್ತಿಯು ಅಧಿಪ್ರಮಾಣೀಕರಣಕ್ಕೆ ಒಳಗಾಗಲು ಅಥವಾ ಆಧಾರ್ ಸಂಖ್ಯೆಯನ್ನು ಹೊಂದಿರುವ ರುಜುವಾತನ್ನು ಸಲ್ಲಿಸಲು ನಮೂನೆ ಮತ್ತು ವಿಧಾನ ಹಾಗೂ ಸಮಯದ ಕುರಿತು ನಿಯಮಗಳ ಮೂಲಕ ನಿಯಮಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರ ನೀಡುತ್ತದೆ.

ಖಂಡ 6:	6ನೇ ಖಂಡದ ಮೂಲಕ ಸೇರಿಸಲು ಉದ್ದೇಶಿಸಲಾದ 31ಎ ಪ್ರಕರಣವು ಸರಕು ಅಥವಾ ಸೇವೆಗಳ ಅಥವಾ ಅವುಗಳೆರಡರ ಪೂರೈಕೆಗಳ ಸ್ವೀಕರಿಸುವವನಿಗೆ, ಪರಿಷತ್ತಿನ ಶಿಫಾರಸುಗಳ ಅನ್ವಯ, ಸಂದಾಯ ಮಾಡುವ ವಿಧಾನ ಮತ್ತು ಯಾವ ಷರತ್ತುಗಳು ಮತ್ತು ನಿಬಂಧನೆಗಳಿಗೆ ಒಳಪಟ್ಟು ಅಂಥ ಸಂದಾಯವನ್ನು ಮಾಡಬೇಕೆಂಬ ಕುರಿತು ನಿಯಮಗಳ ಮೂಲಕ ನಿಯಮಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರ ನೀಡುತ್ತದೆ.
ಖಂಡ 7:	ವಿಧೇಯಕದ ಖಂಡ 7 ರ ಮೂಲಕ ಪ್ರತಿಯೋಜಿಸಲು ಉದ್ದೇಶಿಸಲಾದ 39ನೇ ಪ್ರಕರಣದ (1)ನೇ ಉಪಪ್ರಕರಣವು ರಿಟರ್ನ್‌ನಲ್ಲಿ ಸಲ್ಲಿಸಬೇಕಾದ ವಿವರಗಳು, ನಮೂನೆ ಮತ್ತು ಯಾವ ಸಮಯದೊಳಗೆ ರಿಟರ್ನ್ ಅನ್ನು ಸಲ್ಲಿಸಬೇಕೆಂಬ ಕುರಿತು ನಿಯಮಗಳ ಮೂಲಕ ನಿಯಮಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರ ನೀಡುತ್ತದೆ.
ಖಂಡ 9:	ಖಂಡ 9ರ ಮೂಲಕ ಸೇರಿಸಲು ಉದ್ದೇಶಿಸಲಾದ 49ನೇ ಪ್ರಕರಣದ (10)ನೇ ಉಪಪ್ರಕರಣವು, ಒಬ್ಬ ನೋಂದಾಯಿತ ವ್ಯಕ್ತಿಯು, ಸಾಮಾನ್ಯ ಪೋರ್ಟಲ್‌ನಲ್ಲಿ, ಸದರಿ ಅಧಿನಿಯಮದ ಅಡಿಯಲ್ಲಿಯ ವಿದ್ಯುನ್ಮಾನ ನಗದು ಖಾತೆಯಲ್ಲಿ ಲಭ್ಯವಿರುವ ತೆರಿಗೆ, ಬಡ್ಡಿ, ದಂಡದ ಮೊತ್ತ ಅಥವಾ ಇತರ ಯಾವುದೇ ಮೊತ್ತವನ್ನು ಏಕೀಕೃತ ತೆರಿಗೆ, ಕೇಂದ್ರ ತೆರಿಗೆ, ರಾಜ್ಯ ತೆರಿಗೆ, ಕೇಂದ್ರಾಡಳಿತ ಪ್ರದೇಶ ತೆರಿಗೆ ಅಥವಾ ಉಪಕರದ ವಿದ್ಯುನ್ಮಾನ ನಗದು ಖಾತೆಗೆ, ವರ್ಗಾಯಿಸಲು ನಮೂನೆ, ವಿಧಾನ, ಷರತ್ತುಗಳು ಮತ್ತು ನಿಬಂಧನೆಗಳಿಗಾಗಿ ಉಪಬಂಧಿಸಲು ನಿಯಮಗಳನ್ನು ರೂಪಿಸಲು ಸರ್ಕಾರಕ್ಕೆ ಅಧಿಕಾರ ನೀಡಲು ಮತ್ತು ಅಂಥ ವರ್ಗಾವಣೆಯನ್ನು ಮರುಪಾವತಿ ಎಂದು ಪರಿಭಾವಿಸಲು ವಿಧಾನ, ಷರತ್ತುಗಳು ಮತ್ತು ನಿಬಂಧನೆಗಳ ಕುರಿತು ನಿಯಮಗಳ ಮೂಲಕ ನಿಯಮಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರ ನೀಡುತ್ತದೆ.
ಖಂಡ 12:	12ನೇ ಖಂಡದ ಮೂಲಕ ಸೇರಿಸಲು ಉದ್ದೇಶಿಸಲಾದ 53ಎ ಪ್ರಕರಣವು ಸರ್ಕಾರವು ವಿದ್ಯುನ್ಮಾನ ನಗದು ಖಾತೆಯಿಂದ ವರ್ಗಾಯಿಸಿದ ಮೊತ್ತಕ್ಕೆ ಸಮನಾದ ಮೊತ್ತವನ್ನು ಕೇಂದ್ರ ತೆರಿಗೆ ಅಥವಾ ಏಕೀಕೃತ ತೆರಿಗೆ ಅಥವಾ ಉಪಕರದ ವಿದ್ಯುನ್ಮಾನ ನಗದು ಖಾತೆಗೆ ವರ್ಗಾಯಿಸುವ ವಿಧಾನ ಹಾಗೂ ಸಮಯದ ಕುರಿತು ನಿಯಮಗಳ ಮೂಲಕ ನಿಯಮಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರ ನೀಡುತ್ತದೆ.

ಪ್ರಸ್ತಾವಿತ ಶಾಸನ ರಚನಾಧಿಕಾರದ ಪ್ರತ್ಯಾಯೋಜನೆಯು ವಾಡಿಕೆಯ ಸ್ವರೂಪದ್ದಾಗಿದೆ.

ಬಿ. ಎಸ್. ಯಡಿಯೂರಪ್ಪ
ಮುಖ್ಯಮಂತ್ರಿ

ಎಂ.ಕೆ. ವಿಶಾಲಾಕ್ಷಿ
ಕಾರ್ಯದರ್ಶಿ (ಪ್ರ)
ಕರ್ನಾಟಕ ವಿಧಾನ ಸಭೆ

ಅನುಬಂಧ

ಕರ್ನಾಟಕ ಸರಕು ಮತ್ತು ಸೇವಗಳ ತೆರಿಗೆ ಅಧಿನಿಯಮ, 2017ರ (2017ರ ಕರ್ನಾಟಕ ಅಧಿನಿಯಮ, 27) ಉದ್ಧೃತ ಭಾಗ

xx xx xx

2. ಪರಿಭಾಷೆಗಳು.– ಈ ಅಧಿನಿಯಮದಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,–

xx xx xx

(4) **"ನ್ಯಾಯನಿರ್ಣಯ ಪ್ರಾಧಿಕಾರ"** ಎಂದರೆ, ಈ ಅಧಿನಿಯಮದ ಅಡಿಯಲ್ಲಿ ಯಾವುದೇ ಆದೇಶ ಅಥವಾ ನಿರ್ಣಯವನ್ನು ಹೊರಡಿಸಲು ನೇಮಕವಾದ ಅಥವಾ ಪ್ರಾಧಿಕೃತವಾದ ಯಾವುದೇ ಪ್ರಾಧಿಕಾರ, ಆದರೆ ಈ ಪ್ರಾಧಿಕಾರವು ಆಯುಕ್ತರು, ಪುನರೀಕ್ಷಣಾ ಪ್ರಾಧಿಕಾರ, ಪೂರ್ವಭಾವಿ ನಿರ್ಣಯದ ಪ್ರಾಧಿಕಾರ, ಪೂರ್ವಭಾವಿ ನಿರ್ಣಯದ ಅಪೀಲು ಪ್ರಾಧಿಕಾರ, ಅಪೀಲು ಪ್ರಾಧಿಕಾರ, ಅಪೀಲು ನ್ಯಾಯಾಧಿಕರಣ ಮತ್ತು ಪ್ರಕರಣ 171ರ ಉಪ ಪ್ರಕರಣ (2) ರಲ್ಲಿ ಉಲ್ಲೇಖಿಸಲಾದ ಪ್ರಾಧಿಕಾರವನ್ನು ಒಳಗೊಳ್ಳುವುದಿಲ್ಲ;

xx xx xx

10. ರಾಜಿ ತೆರಿಗೆ ವಿಧಿಸುವಿಕೆ.– (1) ಈ ಅಧಿನಿಯಮದಲ್ಲಿ ಒಳಗೊಂಡಿರುವ ಯಾವುದಕ್ಕಾದರೂ ತದ್ವಿರುದ್ಧವಾದುದು ಏನೇ ಇದ್ದರೂ, ಆದರೆ ಪ್ರಕರಣ 9ರ ಉಪಪ್ರಕರಣ (3) ಮತ್ತು (4)ರ ಉಪಬಂಧಗಳಿಗೆ ಒಳಪಟ್ಟು,

ಹಿಂದಿನ ಹಣಕಾಸು ವರ್ಷದಲ್ಲಿ ಐವತ್ತು ಲಕ್ಷ ರೂಪಾಯಿಗಳನ್ನು ಮೀರಿರದ ಸಮಗ್ರ ವಹಿವಾಟು ಹೊಂದಿದ ಒಬ್ಬ ನೋಂದಾಯಿತ ವ್ಯಕ್ತಿಯು, ಪ್ರಕರಣ 9ರ ಉಪಪ್ರಕರಣ (1)ರ ಅಡಿಯಲ್ಲಿ ಸಂದಾಯ ಮಾಡಬೇಕಾದ ತೆರಿಗೆಯ ಬದಲು, ನಿಯಮಿಸಬಹುದಾದ ಅಂಥ ದರದಲ್ಲಿ ಲೆಕ್ಕಹಾಕಲಾದ ತೆರಿಗೆಯ ಮೊತ್ತ, ಆದರೆ,–

(ಎ) ತಯಾರಿಕನಿಗೆ ಸಂಬಂಧಿಸಿದಂತೆ ರಾಜ್ಯದಲ್ಲಿನ ವಹಿವಾಟಿನ ಶೇಕಡಾ ಒಂದರಷ್ಟನ್ನು;

(ಬಿ) ಅನುಸೂಚಿ ೪೪ರ ಕಂಡಿಕೆ 6ರ ಖಂಡ (ಬಿ)ದಲ್ಲಿ ಉಲ್ಲೇಖಿಸಿರುವ ಪೂರೈಕೆ ಮಾಡುವುದರಲ್ಲಿ ತೊಡಗಿರುವ ವ್ಯಕ್ತಿಗಳಿಗೆ ಸಂಬಂಧಿಸಿದಂತೆ ರಾಜ್ಯದಲ್ಲಿನ ವಹಿವಾಟಿನ ಶೇಕಡಾ ಎರಡುವರೆಯಷ್ಟನ್ನು; ಮತ್ತು

(ಸಿ) ಯಾವುದೇ ಇತರ ವ್ಯಕ್ತಿಗಳಿಗೆ ಸಂಬಂಧಿಸಿದಂತೆ ರಾಜ್ಯದಲ್ಲಿನ ವಹಿವಾಟಿನ ಶೇಕಡಾ ಅರ್ಧದಷ್ಟನ್ನು,

– ಮೀರದ ಒಂದು ಮೊತ್ತವನ್ನು, ನಿಯಮಿಸಬಹುದಾದ ಅಂಥ ಷರತ್ತುಗಳು ಮತ್ತು ನಿರ್ಬಂಧಗಳಿಗೆ ಒಳಪಟ್ಟು, ಸಂದಾಯ ಮಾಡಲು ಆಯ್ಕೆ ಮಾಡಿಕೊಳ್ಳಬಹುದು:

ಪರಂತು, ಸದರಿ ಮಿತಿಯನ್ನು, ಐವತ್ತು ಲಕ್ಷ ರೂಪಾಯಿಗಳಿಂದ ಒಂದು ಕೋಟಿ ಐವತ್ತು ಲಕ್ಷ ರೂಪಾಯಿಗಳನ್ನು ಮೀರದಂತೆ, ಪರಿಷತ್ತು ಶಿಫಾರಸ್ಸು ಮಾಡಬಹುದಾದ ಅಂಥ ಹೆಚ್ಚಿನ ಮೊತ್ತಕ್ಕೆ, ಸರ್ಕಾರವು ಅಧಿಸೂಚನೆಯ ಮೂಲಕ ಹೆಚ್ಚಳ ಮಾಡಬಹುದು.

ಮತ್ತು ಪರಂತು, ಖಂಡ (ಎ) ಅಥವಾ ಖಂಡ (ಬಿ) ಅಥವಾ ಖಂಡ (ಸಿ)ಯ ಅಡಿಯಲ್ಲಿ ತೆರಿಗೆಯನ್ನು ಸಂದಾಯ ಮಾಡಲು ಆಯ್ಕೆ ಮಾಡಿಕೊಳ್ಳುವ ವ್ಯಕ್ತಿಯು, ಹಿಂದಿನ ಹಣಕಾಸು ವರ್ಷದಲ್ಲಿ ರಾಜ್ಯದೊಳಗಿನ ವಹಿವಾಟಿನ ಶೇಕಡ ಹತ್ತು ಅಥವಾ ಐದು ಲಕ್ಷ ರೂಪಾಯಿಗಳು, ಇವುಗಳಲ್ಲಿ ಯಾವುದು ಹೆಚ್ಚೋ, ಅದನ್ನು ಮೀರದ ಮೌಲ್ಯದ ಸೇವೆಗಳನ್ನು (ಅನುಸೂಚಿ ೪೪ರ ಖಂಡಿಕೆ 6ರ ಖಂಡ (ಬಿ)ಯಲ್ಲಿ ಉಲ್ಲೇಖಿಸಿರುವವನ್ನು ಹೊರತುಪಡಿಸಿದಂತೆ) ಪೂರೈಕೆ ಮಾಡಬಹುದು

(2) ನೋಂದಾಯಿತ ವ್ಯಕ್ತಿಯು, ಉಪ–ಪ್ರಕರಣ (1)ರ ಅಡಿಯಲ್ಲಿ ಆಯ್ಕೆ ಮಾಡಿಕೊಳ್ಳಲು ಅರ್ಹನಾಗಿರಬೇಕಾದರೆ,–

(ಎ) ಉಪಪ್ರಕರಣ (1)ರಲ್ಲಿ ಉಪಬಂಧಿಸಿದುದನ್ನುಳಿದು, ಅವನು ಸೇವೆಗಳ ಪೂರೈಕೆಯಲ್ಲಿ ತೊಡಗಿರಬಾರದು

(ಬಿ) ಅವನು ಈ ಅಧಿನಿಯಮದ ಅಡಿಯಲ್ಲಿ ತೆರಿಗೆಯನ್ನು ವಿಧಿಸಲಾಗದಂಥ ಯಾವುದೇ ಸರಕುಗಳನ್ನು ಪೂರೈಕೆ ಮಾಡುವುದರಲ್ಲಿ ತೊಡಗಿರಬಾರದು;

(ಸಿ) ಅವನು ಸರಕುಗಳ ಯಾವುದೇ ಅಂತರ–ರಾಜ್ಯ ಹೊರಮುಖ ಪೂರೈಕೆ ಮಾಡುವುದರಲ್ಲಿ ತೊಡಗಿರಬಾರದು;

(ಡಿ) ಅವನು ಪ್ರಕರಣ 52ರ ಅಡಿಯಲ್ಲಿ ಮೂಲದಲ್ಲಿ ತೆರಿಗೆಯನ್ನು ಸಂಗ್ರಹಿಸುವುದು ಅಗತ್ಯವಿರುವಂಥ ಒಬ್ಬ ವಿದ್ಯುನ್ಮಾನ ವಾಣಿಜ್ಯದ ನಿರ್ವಾಹಕನ ಮೂಲಕ ಯಾವುದೇ ಸರಕುಗಳನ್ನು ಪೂರೈಕೆ ಮಾಡುವುದರಲ್ಲಿ ತೊಡಗಿರಬಾರದು; ಅಥವಾ

(ಇ) ಅವನು ಪರಿಷತ್ತಿನ ಶಿಫಾರಸ್ಸಿನ ಮೇಲೆ ಅಧಿಸೂಚಿಸಬಹುದಾದ ಸರಕುಗಳ ಉತ್ಪಾದಕನಾಗಿರಬಾರದು:

ಪರಂತು, ಒಂದಕ್ಕಿಂತ ಹೆಚ್ಚಿನ ನೋಂದಾಯಿತ ವ್ಯಕ್ತಿಗಳು (ಆದಾಯ ತೆರಿಗೆ ಅಧಿನಿಯಮ, 1961ರ (1961ರ ಕೇಂದ್ರ ಅಧಿನಿಯಮ 43) ಅಡಿಯಲ್ಲಿ ನೀಡಿದ) ಒಂದೇ ಶಾಶ್ವತ ಖಾತೆ ಸಂಖ್ಯೆಯನ್ನು ಹೊಂದಿದ್ದಲ್ಲಿ, ಅಂಥ ಎಲ್ಲಾ ನೋಂದಾಯಿತ ವ್ಯಕ್ತಿಗಳು ಉಪಪ್ರಕರಣ (1)ರ ಅಡಿಯಲ್ಲಿ ತೆರಿಗೆಯನ್ನು ಸಂದಾಯ ಮಾಡಲು ಆಯ್ಕೆ ಮಾಡಿಕೊಂಡ ಹೊರತು, ಆ ಉಪಪ್ರಕರಣದ ಅಡಿಯಲ್ಲಿನ ಯೋಜನೆಗೆ ಆ ನೋಂದಾಯಿತ ವ್ಯಕ್ತಿಯು ಅರ್ಹನಿರತಕ್ಕದ್ದಲ್ಲ.

(3) ಒಬ್ಬ ನೋಂದಾಯಿತ ವ್ಯಕ್ತಿಯಿಂದ ಉಪಪ್ರಕರಣ (1)ರ ಅಡಿಯಲ್ಲಿ ಮಾಡಿದ ಆಯ್ಕೆಯು, ಒಂದು ಹಣಕಾಸಿನ ವರ್ಷದ ಅವಧಿಯಲ್ಲಿ ಆತನ ಸಮಗ್ರ ವಹಿವಾಟು ಉಪಪ್ರಕರಣ (1)ರ ಅಡಿಯಲ್ಲಿ ನಿರ್ದಿಷ್ಟಪಡಿಸಿದ ಮಿತಿಯನ್ನು ಮೀರಿದ ದಿನದಿಂದ ಜಾರಿಗೆ ಬರುವಂತೆ ರದ್ದುಗೊಳ್ಳತಕ್ಕದ್ದು.

(4) ಉಪಪ್ರಕರಣ (1)ರ ಉಪಬಂಧಗಳು ಅನ್ವಯವಾಗುವ ತೆರಿಗೆದಾಯಕ ವ್ಯಕ್ತಿಯು, ಆತನಿಂದ ಮಾಡಲಾದ ಪೂರೈಕೆಗಳ ಮೇಲೆ ಅವುಗಳನ್ನು ಸ್ವೀಕರಿಸುವವನಿಂದ ಯಾವುದೇ ತೆರಿಗೆಯನ್ನು ಸಂಗ್ರಹಿಸತಕ್ಕದ್ದಲ್ಲ ಹಾಗೆಯೇ ಆತನು ಯಾವುದೇ ಹೂಡುವಳಿ ತೆರಿಗೆ ಜಮೆಗೆ ಹಕ್ಕುಳ್ಳವನಾಗಿರತಕ್ಕದ್ದಲ್ಲ.

(5) ಉಪಪ್ರಕರಣ (1)ರ ಅಡಿಯಲ್ಲಿ ತಾನು ಅರ್ಹನಲ್ಲದಿದ್ದರೂ ಸಹ ಒಬ್ಬ ತೆರಿಗೆದಾಯಕ ವ್ಯಕ್ತಿಯು ಅದರಡಿ ತೆರಿಗೆ ಸಂದಾಯ ಮಾಡಿದ್ದಾನೆ ಎಂದು ನಂಬಲು ಒಬ್ಬ ಯುಕ್ತ ಅಧಿಕಾರಿಗೆ ಕಾರಣಗಳಿದ್ದರೆ, ಈ ಅಧಿನಿಯಮದ ಯಾವುದೇ ಇತರ ಉಪಬಂಧಗಳ ಅಡಿಯಲ್ಲಿ ಆತನಿಂದ ಸಂದಾಯ ಮಾಡಬೇಕಾಗಬಹುದಾದ ಯಾವುದೇ ತೆರಿಗೆಯ ಜೊತೆಗೆ ದಂಡಕ್ಕೆ ಅಂತಹ ವ್ಯಕ್ತಿ ಬಾಧ್ಯನಿರತಕ್ಕದ್ದು ಮತ್ತು ತೆರಿಗೆ ಮತ್ತು ದಂಡದ ನಿರ್ಧರಣೆಗೆ ಪ್ರಕರಣ 73 ಅಥವಾ 74ರ ಉಪಬಂಧಗಳು, ಯಥೋಚಿತ ವ್ಯತ್ಯಾಸಗಳೊಂದಿಗೆ, ಅನ್ವಯವಾಗತಕ್ಕದ್ದು.

xx xx xx

22. ನೋಂದಣಿಗೆ ಬಾಧ್ಯರಾದ ವ್ಯಕ್ತಿಗಳು.– (1) ರಾಜ್ಯದಲ್ಲಿ ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡರ ತೆರಿಗೆದಾಯಕ ಪೂರೈಕೆ ಮಾಡುತ್ತಿರುವ ಪ್ರತಿಯೊಬ್ಬ ಪೂರೈಕೆದಾರನು, ಆತನ ಸಮಗ್ರ ವಹಿವಾಟು ಒಂದು ಹಣಕಾಸು ವರ್ಷದಲ್ಲಿ ಇಪ್ಪತ್ತು ಲಕ್ಷ ರೂಪಾಯಿಗಳನ್ನು ಮೀರಿದರೆ, ಈ ಅಧಿನಿಯಮದ ಅಡಿಯಲ್ಲಿ ನೋಂದಣಿಗೆ ಬಾಧ್ಯನಾಗತಕ್ಕದ್ದು:

ಪರಂತು, ಅಂಥ ವ್ಯಕ್ತಿಯು, ಯಾವುದೇ ವಿಶೇಷ ಪ್ರವರ್ಗದ ರಾಜ್ಯಗಳಲ್ಲಿ ಸರಕು ಅಥವಾ ಸೇವೆಗಳ ಅಥವಾ ಅವುಗಳೆರಡರ ತೆರಿಗೆದಾಯಕ ಪೂರೈಕೆ ಮಾಡಿದ್ದಲ್ಲಿ, ಆತನ ಸಮಗ್ರ ವಹಿವಾಟು ಒಂದು ಹಣಕಾಸು ವರ್ಷದಲ್ಲಿ ಹತ್ತು ಲಕ್ಷ ರೂಪಾಯಿಗಳನ್ನು ಮೀರಿದರೆ, ಆತನು ನೋಂದಣಿಗೆ ಬಾಧ್ಯನಾಗತಕ್ಕದ್ದು:

ಮತ್ತು ಪರಂತು, ಅಂಥ ವ್ಯಕ್ತಿಯು ವಿಶೇಷ ಪ್ರವರ್ಗದ ರಾಜ್ಯದಲ್ಲಿ ಸರಕು ಅಥವಾ ಸೇವೆಗಳ ಅಥವಾ ಅವುಗಳೆರಡರ ತೆರಿಗೆದಾಯಕ ಪೂರೈಕೆ ಮಾಡಿದಲ್ಲಿ, ಮೊದಲನೇ ಪರಂತುಕದಲ್ಲಿ ಉಲ್ಲೇಖಿಸಿದ ಸಮಗ್ರ ವಹಿವಾಟನ್ನು ಕೇಂದ್ರ ಸರ್ಕಾರವು ಹೆಚ್ಚಿಸಿದಾಗ ಆತನ ಸಮಗ್ರ ವಹಿವಾಟು ಒಂದು ಹಣಕಾಸು ವರ್ಷದಲ್ಲಿ ಅಂಥ ಹೆಚ್ಚಿಸಿದ ವಹಿವಾಟಿನ ಸಮಾನ ಮೊತ್ತವನ್ನು ಮೀರಿದರೆ, ಆತನು ನೋಂದಣಿಗೆ ಬಾಧ್ಯನಾಗತಕ್ಕದ್ದು.

xx xx xx

25. ನೋಂದಣಿಯ ಕಾರ್ಯವಿಧಾನ.– (1) xx xx xx

(6) ಪ್ರತಿಯೊಬ್ಬ ವ್ಯಕ್ತಿಯು ನೋಂದಣಿ ನೀಡಿಕೆಗೆ ಅರ್ಹನಾಗುವುದಕ್ಕಾಗಿ, ಆದಾಯ ತೆರಿಗೆ ಅಧಿನಿಯಮ, 1961ರ (1961ರ ಕೇಂದ್ರ ಅಧಿನಿಯಮ 43) ಅಡಿಯಲ್ಲಿ ನೀಡಿದ ಶಾಶ್ವತ ಖಾತೆ ಸಂಖ್ಯೆಯನ್ನು ಹೊಂದಿರತಕ್ಕದ್ದು:

ಪರಂತು, ಪ್ರಕರಣ 51ರ ಅಡಿಯಲ್ಲಿ ತೆರಿಗೆ ಮುರುಗಡೆ ಮಾಡುವುದು ಅಗತ್ಯವಿರುವ ಒಬ್ಬ ವ್ಯಕ್ತಿಯು, ನೋಂದಣಿ ನೀಡಿಕೆಗೆ ಅರ್ಹನಾಗುವುದಕ್ಕಾಗಿ, ಶಾಶ್ವತ ಖಾತೆ ಸಂಖ್ಯೆಯ ಬದಲಾಗಿ ಸದರಿ ಅಧಿನಿಯಮದ ಅಡಿಯಲ್ಲಿ ನೀಡಿದ ಒಂದು ತೆರಿಗೆ ಮುರುಗಡೆ ಮತ್ತು ಸಂಗ್ರಹಣೆ ಖಾತೆ ಸಂಖ್ಯೆಯನ್ನು ಹೊಂದಿರಬಹುದು.

xx xx xx

39. ರಿಟರ್ನ್ಗಳನ್ನು ಒದಗಿಸುವುದು.– (1) ಒಬ್ಬ ಹೂಡುವಳಿ ಸೇವೆ ಹಂಚಿಕೆದಾರ ಅಥವಾ ಒಬ್ಬ ಅನಿವಾಸಿ ತೆರಿಗೆದಾಯಕ ವ್ಯಕ್ತಿ ಅಥವಾ ಪ್ರಕರಣ 10 ಅಥವಾ ಪ್ರಕರಣ 51 ಅಥವಾ ಪ್ರಕರಣ 52ರ ಉಪಬಂಧಗಳ ಅಡಿಯಲ್ಲಿ ತೆರಿಗೆ ಸಂದಾಯ ಮಾಡುವ ಒಬ್ಬ ವ್ಯಕ್ತಿಯನ್ನು ಹೊರತುಪಡಿಸಿದಂತೆ, ಪ್ರತಿಯೊಬ್ಬ ನೋಂದಾಯಿತ ವ್ಯಕ್ತಿಯು, ಪ್ರತಿಯೊಂದು ಕ್ಯಾಲೆಂಡರ್ ತಿಂಗಳು ಅಥವಾ ಅದರ ಭಾಗಕ್ಕೆ, ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡರ ಒಳಮುಖ ಮತ್ತು ಹೊರಮುಖ ಪೂರೈಕೆಗಳು, ಉಪಯೋಗಿಸಿದ ಹೂಡುವಳಿ ತೆರಿಗೆ ಜಮೆ, ಸಂದಾಯ ಮಾಡಬೇಕಾದ ತೆರಿಗೆ, ಸಂದಾಯ ಮಾಡಿದ ತೆರಿಗೆ ಮತ್ತು ನಿಯಮಿಸಬಹುದಾದ ಅಂಥ ಇತರ ವಿವರಗಳ ಒಂದು ರಿಟರ್ನ್ ಅನ್ನು, **xxx** ನಿಯಮಿಸಬಹುದಾದ ಅಂಥ ನಮೂನೆ, ವಿಧಾನ ಮತ್ತು ಅಂಥ ಸಮಯದೊಳಗೆ ವಿದ್ಯುನ್ಮಾನ ರೀತಿಯಲ್ಲಿ, ಒದಗಿಸತಕ್ಕದ್ದು.

ಪರಂತು, ಸರ್ಕಾರವು ಪರಿಷತ್ತಿನ ಶಿಫಾರಸ್ಸುಗಳ ಮೇಲೆ, ಅದರಲ್ಲಿ ನಿರ್ದಿಷ್ಟಪಡಿಸಬಹುದಾದ ಅಂಥ ಷರತ್ತುಗಳು ಮತ್ತು ರಕ್ಷಣೋಪಾಯಗಳಿಗೆ ಒಳಪಟ್ಟು, ಪ್ರತಿಯೊಂದು ತ್ರೈಮಾಸಿಕ ಅಥವಾ ಅದರ ಭಾಗಕ್ಕೆ ರಿಟರ್ನ್ನನ್ನು ಒದಗಿಸಬೇಕಿರುವ ನೋಂದಾಯಿತ ವ್ಯಕ್ತಿಗಳ ಕೆಲವು ವರ್ಗಗಳನ್ನು ಅಧಿಸೂಚಿಸಬಹುದು.

(2) ಪ್ರಕರಣ 10ರ ಉಪಬಂಧಗಳ ಅಡಿಯಲ್ಲಿ ತೆರಿಗೆ ಸಂದಾಯ ಮಾಡುವ ಒಬ್ಬ ನೋಂದಾಯಿತ ವ್ಯಕ್ತಿಯು ಪ್ರತಿಯೊಂದು ತ್ರೈಮಾಸಿಕ ಅಥವಾ ಅದರ ಭಾಗಕ್ಕೆ, ರಾಜ್ಯದಲ್ಲಿನ ವಹಿವಾಟು, ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡರ ಒಳಮುಖ ಪೂರೈಕೆಗಳು, ಸಂದಾಯ ಮಾಡಬೇಕಾದ ತೆರಿಗೆ ಮತ್ತು ಸಂದಾಯ ಮಾಡಿದ ತೆರಿಗೆಯ ಒಂದು ರಿಟರ್ನ್ ಅನ್ನು ವಿದ್ಯುನ್ಮಾನ ರೀತಿಯಲ್ಲಿ, ನಿಯಮಿಸಬಹುದಾದ ಅಂಥ ನಮೂನೆ ಮತ್ತು ವಿಧಾನದಲ್ಲಿ, ಅಂಥ ತ್ರೈಮಾಸಿಕ ಕೊನೆಗೊಂಡ ನಂತರದ ಹದಿನೆಂಟು ದಿನಗಳ ಒಳಗಾಗಿ ಒದಗಿಸತಕ್ಕದ್ದು.

xx xx xx

(7) ಉಪಪ್ರಕರಣ (1) ಅಥವಾ ಉಪಪ್ರಕರಣ (2) ಅಥವಾ ಉಪಪ್ರಕರಣ (3) ಅಥವಾ ಉಪಪ್ರಕರಣ (5)ರ ಅಡಿಯಲ್ಲಿ ರಿಟರ್ನ್ ಅನ್ನು ಸಲ್ಲಿಸುವುದು ಅಗತ್ಯವಿರುವ ಪ್ರತಿಯೊಬ್ಬ ನೋಂದಾಯಿತ ವ್ಯಕ್ತಿಯು, ಅವನು ಅಂತಹ ರಿಟರ್ನ್ ಅನ್ನು ಸಲ್ಲಿಸುವುದು ಅಗತ್ಯವಿರುವ ಕೊನೆಯ ದಿನಾಂಕವನ್ನು ಮೀರದಂತೆ, ಅಂಥ ರಿಟರ್ನ್ನ ಪ್ರಕಾರ ಬಾಕಿಯಿರುವ ತೆರಿಗೆಯನ್ನು ಸರ್ಕಾರಕ್ಕೆ ಸಂದಾಯ ಮಾಡತಕ್ಕದ್ದು.

ಪರಂತು, ಸರ್ಕಾರವು ಪರಿಷತ್ತಿನ ಶಿಫಾರಸ್ಸುಗಳ ಮೇಲೆ, ನಿರ್ದಿಷ್ಟಪಡಿಸಬಹುದಾದ ಅಂಥ ಷರತ್ತುಗಳು ಮತ್ತು ರಕ್ಷಣೋಪಾಯಗಳಿಗೆ ಒಳಪಟ್ಟು, ಅಂಥ ರಿಟರ್ನ್ ಅನ್ನು ಸಲ್ಲಿಸುವುದು ಅಗತ್ಯವಿರುವ ಪ್ರತಿಯೊಬ್ಬ ನೋಂದಾಯಿತ ವ್ಯಕ್ತಿಯು, ಅವನು ಅಂತಹ ರಿಟರ್ನ್ ಅನ್ನು ಸಲ್ಲಿಸುವುದು ಅಗತ್ಯವಿರುವ ಕೊನೆಯ ದಿನಾಂಕದಂದು ಅಥವಾ ಅದಕ್ಕಿಂತ ಮೊದಲು, ಅಂಥ ರಿಟರ್ನ್ನ ಪ್ರಕಾರ ಬಾಕಿಯಿರುವ ತೆರಿಗೆ ಅಥವಾ ಅದರ ಭಾಗವನ್ನು ಸರ್ಕಾರಕ್ಕೆ ಸಂದಾಯ ಮಾಡತಕ್ಕ ನೋಂದಾಯಿತ ವ್ಯಕ್ತಿಗಳ ಕೆಲವು ವರ್ಗಗಳನ್ನು ಅಧಿಸೂಚಿಸಬಹುದು.

xx xx xx

44. ವಾರ್ಷಿಕ ರಿಟರ್ನ್.– (1) ಒಬ್ಬ ಹೂಡುವಳಿ ಸೇವೆ ಹಂಚಿಕೆದಾರ, ಪ್ರಕರಣ 51 ಅಥವಾ ಪ್ರಕರಣ 52ರ ಅಡಿಯಲ್ಲಿ ತೆರಿಗೆ ಸಂದಾಯ ಮಾಡುವ ಒಬ್ಬ ವ್ಯಕ್ತಿ, ಒಬ್ಬ ಸಾಂದರ್ಭಿಕ ತೆರಿಗೆದಾಯಕ ವ್ಯಕ್ತಿ ಮತ್ತು ಒಬ್ಬ ಅನಿವಾಸಿ ತೆರಿಗೆದಾಯಕ ವ್ಯಕ್ತಿಯನ್ನು ಹೊರತುಪಡಿಸಿದಂತೆ, ಪ್ರತಿಯೊಬ್ಬ ನೋಂದಾಯಿತ ವ್ಯಕ್ತಿಯು, ಪ್ರತಿಯೊಂದು ಹಣಕಾಸು ವರ್ಷಕ್ಕೂ ಒಂದು ವಾರ್ಷಿಕ ರಿಟರ್ನ್‌ನನ್ನು ಅಂಥ ಹಣಕಾಸು ವರ್ಷ ಕೊನೆಗೊಂಡ ತರುವಾಯದ ಡಿಸೆಂಬರ್ ತಿಂಗಳಿನ ಮೂವತ್ತೊಂದನೇ ದಿನದಂದು ಅಥವಾ ಅದಕ್ಕಿಂತ ಮೊದಲು ನಿಯಮಿಸಬಹುದಾದ ಅಂಥ ನಮೂನೆ ಮತ್ತು ವಿಧಾನದಲ್ಲಿ ವಿದ್ಯುನ್ಮಾನ ರೀತಿಯಲ್ಲಿ ಒದಗಿಸತಕ್ಕದ್ದು.

xx xx xx

49. ತೆರಿಗೆ, ಬಡ್ಡಿ, ದಂಡ ಮತ್ತು ಇತರ ಮೊತ್ತಗಳ ಸಂದಾಯ.– (1) xx xx xx

(9) ಈ ಅಧಿನಿಯಮದ ಅಡಿಯಲ್ಲಿ ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡರ ಮೇಲೆ ತೆರಿಗೆಯನ್ನು ಸಂದಾಯ ಮಾಡಿರುವ ಪ್ರತಿಯೊಬ್ಬ ತೆರಿಗೆದಾಯಕ ವ್ಯಕ್ತಿಯು, ವಿರುದ್ಧವಾಗಿರುವುದನ್ನು ಆತನು ರುಜುವಾತುಪಡಿಸಿದ ಹೊರತು, ಅಂಥ ತೆರಿಗೆಯ ಪೂರ್ಣ ಹೊರೆಯನ್ನು ಅಂಥ ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡರ ಸ್ವೀಕರಿಸುವವನಿಗೆ ವರ್ಗಾಯಿಸಿದ್ದಾನೆ ಎಂದು ಪರಿಭಾವಿಸತಕ್ಕದ್ದು.

ವಿವರಣೆ:– ಈ ಪ್ರಕರಣದ ಉದ್ದೇಶಗಳಿಗಾಗಿ,

(ಎ) ಪ್ರಾಧಿಕೃತ ಬ್ಯಾಂಕಿನಲ್ಲಿನ ಸರ್ಕಾರದ ಖಾತೆಗೆ ಜಮೆಯಾಗುವ ದಿನಾಂಕವನ್ನು, ವಿದ್ಯುನ್ಮಾನ ನಗದು ಖಾತೆಯಲ್ಲಿನ ಠೇವಣಿ ದಿನಾಂಕ ಎಂದು ಪರಿಭಾವಿಸತಕ್ಕದ್ದು.

(ಬಿ) ಪದಾವಳಿಯಾದ,–

(i) **"ತೆರಿಗೆ ಬಾಕಿಗಳು"** ಎಂದರೆ, ಈ ಅಧಿನಿಯಮದ ಅಡಿಯಲ್ಲಿ ಸಂದಾಯ ಮಾಡಬೇಕಾದ ತೆರಿಗೆಯಾಗಿರುತ್ತದೆ ಮತ್ತು ಇದು ಬಡ್ಡಿ, ಶುಲ್ಕ ಅಥವಾ ದಂಡವನ್ನು ಒಳಗೊಳ್ಳುವುದಿಲ್ಲ; ಮತ್ತು

(ii) **"ಇತರ ಬಾಕಿಗಳು"** ಎಂದರೆ, ಈ ಅಧಿನಿಯಮದ ಅಥವಾ ಅದರ ಅಡಿಯಲ್ಲಿ ಮಾಡಲಾದ ನಿಯಮಗಳ ಅಡಿಯಲ್ಲಿ ಸಂದಾಯ ಮಾಡಬೇಕಾದ ಬಡ್ಡಿ, ದಂಡ, ಶುಲ್ಕ ಅಥವಾ ಯಾವುದೇ ಇತರ ಮೊತ್ತವಾಗಿರುತ್ತದೆ.

xx xx xx

50. ತೆರಿಗೆಯ ವಿಳಂಬ ಸಂದಾಯದ ಮೇಲೆ ಬಡ್ಡಿ.– (1) ಈ ಅಧಿನಿಯಮದ ಉಪಬಂಧಗಳಿಗೆ ಅಥವಾ ಅದರ ಅಡಿಯಲ್ಲಿ ಮಾಡಲಾದ ನಿಯಮಗಳಿಗೆ ಅನುಸಾರವಾಗಿ ತೆರಿಗೆಯನ್ನು ಸಂದಾಯ ಮಾಡಲು ಬಾಧ್ಯನಾಗಿರುವ ಆದರೆ ತೆರಿಗೆಯನ್ನು ಅಥವಾ ಅದರ ಯಾವುದೇ ಭಾಗವನ್ನು ನಿಯಮಿಸಲಾದ ಅವಧಿಯೊಳಗೆ ಸರ್ಕಾರಕ್ಕೆ ಸಂದಾಯ ಮಾಡಲು ವಿಫಲನಾದ ಪ್ರತಿಯೊಬ್ಬ ವ್ಯಕ್ತಿಯು, ತೆರಿಗೆ ಅಥವಾ ಅದರ ಯಾವುದೇ ಭಾಗವು ಸಂದಾಯವಾಗದೆ ಉಳಿದ ಅವಧಿಗೆ, ಪರಿಷತ್ತಿನ ಶಿಫಾರಸ್ಸುಗಳ ಅನ್ವಯ ಸರ್ಕಾರದಿಂದ ಅಧಿಸೂಚಿಸಬಹುದಾದ, ಶೇಕಡಾ ಹದಿನೆಂಟರಷ್ಟನ್ನು ಮೀರದ, ಅಂಥ ದರದಲ್ಲಿ ಬಡ್ಡಿಯನ್ನು, ತಾನಾಗಿಯೇ, ಸಂದಾಯ ಮಾಡತಕ್ಕದ್ದು.

xx xx xx

52. ಮೂಲದಲ್ಲಿ ತೆರಿಗೆಯನ್ನು ಸಂಗ್ರಹಿಸುವುದು.– (1) xx xx xx

(4) ಉಪಪ್ರಕರಣ (1)ರಲ್ಲಿ ನಿರ್ದಿಷ್ಟಪಡಿಸಿದ ಮೊತ್ತವನ್ನು ಸಂಗ್ರಹಿಸುವ ಪ್ರತಿಯೊಬ್ಬ ನಿರ್ವಾಹಕನು, ಒಂದು ತಿಂಗಳಿನಲ್ಲಿ ತನ್ನ ಮೂಲಕ ವಾಪಸ್ಸು ಮಾಡಿದ ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡನ್ನು, ಮತ್ತು ಉಪಪ್ರಕರಣ (1)ರ ಅಡಿಯಲ್ಲಿ ಸಂಗ್ರಹಿಸಿದ ಮೊತ್ತವನ್ನು ಒಳಗೊಂಡಂತೆ, ತನ್ನ ಮೂಲಕ ಮಾಡಿದ ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡರ ಹೊರಮುಖ ಪೂರೈಕೆ ವಿವರಗಳನ್ನು ಒಳಗೊಂಡ ಒಂದು ವಿವರಪತ್ರವನ್ನು, ನಿಯಮಿಸಬಹುದಾದ ಅಂಥ ನಮೂನೆಯಲ್ಲಿ ಮತ್ತು ವಿಧಾನದಲ್ಲಿ, ವಿದ್ಯುನ್ಮಾನ ರೀತಿಯಲ್ಲಿ ಅಂಥ ತಿಂಗಳು ಮುಗಿದ ಹತ್ತು ದಿನಗಳ ಒಳಗಾಗಿ ಒದಗಿಸತಕ್ಕದ್ದು.

(5) ಉಪಪ್ರಕರಣ (1)ರಲ್ಲಿ ನಿರ್ದಿಷ್ಟಪಡಿಸಿದ ಮೊತ್ತವನ್ನು ಸಂಗ್ರಹಿಸುವ ಪ್ರತಿಯೊಬ್ಬ ನಿರ್ವಾಹಕನು, ಹಣಕಾಸು ವರ್ಷದ ಅವಧಿಯಲ್ಲಿ ತನ್ನ ಮೂಲಕ ವಾಪಸ್ಸು ಮಾಡಿದ ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡನ್ನು, ಮತ್ತು ಸದರಿ ಉಪಪ್ರಕರಣದ ಅಡಿಯಲ್ಲಿ ಸಂಗ್ರಹಿಸಿದ ಮೊತ್ತವನ್ನು ಒಳಗೊಂಡಂತೆ, ತನ್ನ ಮೂಲಕ ಮಾಡಿದ ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡರ ಹೊರಮುಖ ಪೂರೈಕೆ ವಿವರಗಳನ್ನು ಒಳಗೊಂಡ ಒಂದು ವಾರ್ಷಿಕ ವಿವರಪತ್ರವನ್ನು, ನಿಯಮಿಸಬಹುದಾದ ಅಂಥ ನಮೂನೆಯಲ್ಲಿ ಮತ್ತು ವಿಧಾನದಲ್ಲಿ, ಅಂಥ ಹಣಕಾಸು ವರ್ಷ ಕೊನೆಗೊಂಡ ತರುವಾಯದ ಡಿಸೆಂಬರ್‌ನ ಮೂವತ್ತೊಂದನೇ ದಿನಕ್ಕಿಂತ ಮುಂಚಿತವಾಗಿ ವಿದ್ಯುನ್ಮಾನರೀತಿಯಲ್ಲಿ ಒದಗಿಸತಕ್ಕದ್ದು.

xx xx xx

54. ತೆರಿಗೆಯ ಮರುಪಾವತಿ.- xx xx xx

(8) ಉಪಪ್ರಕರಣ (5)ರಲ್ಲಿ ಏನೇ ಒಳಗೊಂಡಿದ್ದರೂ, ಮರುಪಾವತಿ ಮಾಡಬಹುದಾದ ಮೊತ್ತವು ಈ ಕೆಳಗಿನವುಗಳಿಗೆ ಸಂಬಂಧಿಸಿದ್ದರೆ, ಅಂಥ ಮೊತ್ತವನ್ನು ನಿಧಿಗೆ ಜಮೆಗೊಳಿಸುವುದಕ್ಕೆ ಬದಲಾಗಿ, ಅರ್ಜಿದಾರನಿಗೆ ಸಂದಾಯ ಮಾಡತಕ್ಕದ್ದು,–

(ಎ) ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡರ ರಫ್ತುಗಳ ಮೇಲೆ ಸಂದಾಯ ಮಾಡಿದ ತೆರಿಗೆ ಅಥವಾ ಅಂಥ ರಫ್ತುಗಳನ್ನು ಮಾಡುವಲ್ಲಿ ಬಳಕೆಯಾದ ಹೂಡುವಳಿಗಳು ಹಾಗೂ ಹೂಡುವಳಿ ಸೇವೆಗಳ ಮೇಲಿನ ತೆರಿಗೆಯ ಮರುಪಾವತಿ;

(ಬಿ) ಉಪಪ್ರಕರಣ (3)ರ ಅಡಿಯಲ್ಲಿ ಬಳಕೆಯಾಗದ ಹೂಡುವಳಿ ತೆರಿಗೆ ಜಮೆಯ ಮರುಪಾವತಿ;

(ಸಿ) ಪೂರ್ಣವಾಗಿಯಾಗಲಿ ಅಥವಾ ಭಾಗಶಃವಾಗಿಯಾದರೂ ಒದಗಿಸದೇ ಇರುವಂತಹ ಮತ್ತು ಅದಕ್ಕಾಗಿ ಬೆಲೆಪಟ್ಟಿಯನ್ನು ನೀಡಿಲ್ಲದಿರುವ ಅಥವಾ ಮರುಪಾವತಿಯ ವೋಚರನ್ನು ನೀಡಲಾಗಿರುವ ಪೂರೈಕೆಯ ಮೇಲೆ ಸಂದಾಯ ಮಾಡಿದ ತೆರಿಗೆಯ ಮರುಪಾವತಿ;

(ಡಿ) ಪ್ರಕರಣ 77ರ ಅನುಸಾರವಾದ ತೆರಿಗೆಯ ಮರುಪಾವತಿ;

(ಇ) ಅಂಥ ತೆರಿಗೆ ಮತ್ತು ಬಡ್ಡಿಯ ಹೊರೆಯನ್ನು ಅವನು ಯಾವುದೇ ಇತರ ವ್ಯಕ್ತಿಗೆ ವರ್ಗಾಯಿಸಿರದಿದ್ದರೆ, ಅರ್ಜಿದಾರನಿಂದ ಸಂದಾಯ ಮಾಡಿದ ತೆರಿಗೆ ಮತ್ತು ಬಡ್ಡಿ, ಯಾವುದಾದರೂ ಇದ್ದರೆ, ಅಥವಾ ಇತರ ಯಾವುದೇ ಮೊತ್ತ; ಅಥವಾ

(ಎಫ್) ಪರಿಷತ್ತಿನ ಶಿಫಾರಸ್ಸುಗಳ ಅನ್ವಯ ಸರ್ಕಾರವು ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸಬಹುದಾದ ಅಂಥ ಯಾವುದೇ ಇತರ ಅರ್ಜಿದಾರರ ವರ್ಗದಿಂದ ಹೊತ್ತುಕೊಂಡ ತೆರಿಗೆ ಅಥವಾ ಬಡ್ಡಿ.

xx xx xx

95. ಪರಿಭಾಷೆಗಳು.– ಈ ಅಧ್ಯಾಯದಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,– (ಎ) **"ಪೂರ್ವಭಾವಿ ನಿರ್ಣಯ"** ಎಂದರೆ, ಒಬ್ಬ ಅರ್ಜಿದಾರನಿಂದ ಕೈಗೊಳ್ಳಲಾಗುತ್ತಿರುವ ಅಥವಾ ಕೈಗೊಳ್ಳಲು ಪ್ರಸ್ತಾಪಿಸಲಾಗಿರುವ ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡರ ಪೂರೈಕೆಗೆ ಸಂಬಂಧಿಸಿದಂತೆ, ಪ್ರಕರಣ 97ರ ಉಪಪ್ರಕರಣ (2) ಅಥವಾ ಪ್ರಕರಣ 100ರ ಉಪಪ್ರಕರಣ (1)ರಲ್ಲಿ ನಿರ್ದಿಷ್ಟಪಡಿಸಿರುವ ವಿಷಯಗಳ ಮೇಲೆ ಅಥವಾ ಪ್ರಶ್ನೆಗಳ ಮೇಲೆ, ಪ್ರಾಧಿಕಾರ ಅಥವಾ ಅಪೀಲು ಪ್ರಾಧಿಕಾರದಿಂದ ಅರ್ಜಿದಾರನಿಗೆ ಒದಗಿಸಿದ ಒಂದು ನಿರ್ಣಯ.

xx xx xx

(ಇ)**"ಪ್ರಾಧಿಕಾರ"** ಎಂದರೆ, ಪೂರ್ವಭಾವಿ ನಿರ್ಣಯಕ್ಕಾಗಿ, ಪ್ರಕರಣ 96ರ ಅಡಿಯಲ್ಲಿ, ರಚಿಸಿದ ಪ್ರಾಧಿಕಾರ.

xx xx xx

102. ಪೂರ್ವಭಾವಿ ನಿರ್ಣಯದ ಸರಿಪಡಿಸುವಿಕೆ.– ಪ್ರಾಧಿಕಾರ ಅಥವಾ ಅಪೀಲು ಪ್ರಾಧಿಕಾರವು, ಪ್ರಕರಣ 98 ಅಥವಾ ಪ್ರಕರಣ 101ರ ಅಡಿಯಲ್ಲಿ, ಅದರಿಂದ ಹೊರಡಿಸಿದ ಯಾವುದೇ ಆದೇಶವನ್ನು, ದಾಖಲೆಯಲ್ಲಿ ಮೇಲ್ನೋಟಕ್ಕೆ ಕಾಣುವ ಯಾವುದೇ ತಪ್ಪನ್ನು ಸರಿಪಡಿಸುವುದಕ್ಕಾಗಿ, ಅಂಥ ತಪ್ಪನ್ನು ಆದೇಶದ ದಿನಾಂಕದಿಂದ ಆರು ತಿಂಗಳ ಅವಧಿಯ ಒಳಗಾಗಿ, ಪ್ರಾಧಿಕಾರವಾಗಲಿ ಅಥವಾ ಅಪೀಲು ಪ್ರಾಧಿಕಾರವಾಗಲಿ ಸ್ವಯಂ ಗಮನಿಸಿದ್ದರೆ ಅಥವಾ ಸಂಬಂಧಿತ ಅಧಿಕಾರಿಯಾಗಲಿ, ಕ್ಷೇತ್ರವ್ಯಾಪ್ತಿಯ ಅಧಿಕಾರಿಯಾಗಲಿ ಅಥವಾ ಅರ್ಜಿದಾರನಾಗಲಿ ಅಥವಾ ಅಪೀಲುದಾರನಾಗಲಿ ಅದರ ಗಮನಕ್ಕೆ ತಂದಿದ್ದರೆ, ತಿದ್ದುಪಡಿ ಮಾಡಬಹುದು:

ಪರಂತು, ಅರ್ಜಿದಾರನಿಗೆ ಅಥವಾ ಅಪೀಲುದಾರನಿಗೆ ಅಹವಾಲನ್ನು ಹೇಳಿಕೊಳ್ಳಲು ಒಂದು ಅವಕಾಶವನ್ನು ನೀಡಿದ ಹೊರತಾಗಿ, ತೆರಿಗೆ ಬಾಧ್ಯತೆಯನ್ನು ಹೆಚ್ಚಿಸುವ ಅಥವಾ ಅಂಗೀಕರಿಸಬಹುದಾದ ಹೂಡುವಳಿ ತೆರಿಗೆ ಜಮೆಯ ಮೊತ್ತವನ್ನು ಕಡಿಮೆ ಮಾಡುವ ಪರಿಣಾಮವನ್ನು ಹೊಂದಿರುವ ಸರಿಪಡಿಸುವಿಕೆಯನ್ನು ಮಾಡತಕ್ಕದಲ್ಲ.

xx xx xx

103. ಪೂರ್ವಭಾವಿ ನಿರ್ಣಯದ ಅನ್ವಯಿಸುವಿಕೆ.– (1) ಈ ಅಧ್ಯಾಯದ ಅಡಿಯಲ್ಲಿನ ಪ್ರಾಧಿಕಾರ ಅಥವಾ ಅಪೀಲು ಪ್ರಾಧಿಕಾರದಿಂದ ಉಚ್ಚರಿಸಿದ ಪೂರ್ವಭಾವಿ ನಿರ್ಣಯವು ಕೆಳಕಂಡವರುಗಳ ಮೇಲೆ ಮಾತ್ರ ಬದ್ಧವಾಗಿರತಕ್ಕದ್ದು –

(ಎ) ಪ್ರಕರಣ 97ರ ಉಪಪ್ರಕರಣ (2)ರಲ್ಲಿ ಉಲ್ಲೇಖಿಸಲಾದ ಪೂರ್ವಭಾವಿ ನಿರ್ಣಯದ ಯಾವುದೇ ವಿಷಯಕ್ಕೆ ಸಂಬಂಧಿಸಿದಂತೆ ಅದನ್ನು ಕೋರಿರುವ ಅರ್ಜಿದಾರ;

(ಬಿ) ಅರ್ಜಿದಾರನಿಗೆ ಸಂಬಂಧಿಸಿರುವ, ಸಂಬಂಧಿತ ಅಧಿಕಾರಿ ಅಥವಾ ಕ್ಷೇತ್ರವ್ಯಾಪ್ತಿಯ ಅಧಿಕಾರಿ.

(2) ಮೂಲ ಪೂರ್ವಭಾವಿ ನಿರ್ಣಯವನ್ನು ಬೆಂಬಲಿಸುವ ಕಾನೂನು, ಸಂಗತಿಗಳು ಅಥವಾ ಸನ್ನಿವೇಶಗಳು ಬದಲಾವಣೆಯನ್ನು ಹೊಂದಿದ ಹೊರತು ಉಪಪ್ರಕರಣ (1)ರಲ್ಲಿ ಉಲ್ಲೇಖಿಸಲಾದ ಪೂರ್ವಭಾವಿ ನಿರ್ಣಯವು ಬದ್ಧವಾಗಿರತಕ್ಕದ್ದು

xx xx xx

104. ಕೆಲವು ಸಂದರ್ಭಗಳಲ್ಲಿ ಪೂರ್ವಭಾವಿ ನಿರ್ಣಯಗಳು ಅನೂರ್ಜಿತಗೊಳ್ಳುವಿಕೆ.– (1) ಪ್ರಾಧಿಕಾರ ಅಥವಾ ಅಪೀಲು ಪ್ರಾಧಿಕಾರಕ್ಕೆ, ಪ್ರಕರಣ 98ರ ಉಪಪ್ರಕರಣ (4)ರ ಅಡಿಯಲ್ಲಿ ಅಥವಾ ಪ್ರಕರಣ 101ರ ಉಪಪ್ರಕರಣ (1)ರ ಅಡಿಯಲ್ಲಿ ಅದರಿಂದ ಉಚ್ಚರಿಸಿದ ಯಾವುದೇ ಪೂರ್ವಭಾವಿ ನಿರ್ಣಯವನ್ನು, ಅರ್ಜಿದಾರ ಅಥವಾ ಅಪೀಲುದಾರನಿಂದ ಮೋಸ ಅಥವಾ ಮುಖ್ಯ ಸಂಗತಿಗಳ ಬಚ್ಚಿಡುವಿಕೆ ಅಥವಾ ಸಂಗತಿಗಳನ್ನು ತಪ್ಪಾಗಿ ಹೇಳುವುದರಿಂದ ಪಡೆಯಲಾಗಿದೆ ಎಂದು ಕಂಡಬಂದಲ್ಲಿ, ಅದು, ಆದೇಶದ ಮೂಲಕ, ಅಂಥ ನಿರ್ಣಯವನ್ನು ಆರಂಭದಿಂದಲೇ–ಶೂನ್ಯವಾದುದು ಎಂದು ಘೋಷಿಸಬಹುದು ಮತ್ತು ಅದಾದ ಕೂಡಲೇ, ಅರ್ಜಿದಾರನಿಗೆ ಅಥವಾ ಅಪೀಲುದಾರನಿಗೆ ಈ ಅಧಿನಿಯಮದ ಎಲ್ಲಾ ಉಪಬಂಧಗಳು ಹಾಗೂ ಇದರ ಅಡಿಯಲ್ಲಿ ಮಾಡಲಾದ ನಿಯಮಗಳು, ಅಂಥ ಪೂರ್ವಭಾವಿ ನಿರ್ಣಯವನ್ನು ಯಾವಾಗಲೂ ಮಾಡಿಯೇ ಇಲ್ಲ ಎನ್ನುವ ಹಾಗೆ ಅನ್ವಯವಾಗತಕ್ಕದ್ದು:

ಪರಂತು, ಅರ್ಜಿದಾರನಿಗೆ ಅಥವಾ ಅಪೀಲುದಾರನಿಗೆ ಒಂದು ಅಹವಾಲನ್ನು ಹೇಳಿಕೊಳ್ಳಲು ಒಂದು ಅವಕಾಶವನ್ನು ನೀಡಿದ ಹೊರತು ಈ ಪ್ರಕರಣದ ಅಡಿಯಲ್ಲಿ ಯಾವುದೇ ಆದೇಶವನ್ನು ಹೊರಡಿಸತಕ್ಕದ್ದಲ್ಲ.

ವಿವರಣೆ.– ಪ್ರಕರಣ 73ರ ಉಪಪ್ರಕರಣಗಳಾದ (2) ಮತ್ತು (10)ರಲ್ಲಿ ಅಥವಾ ಪ್ರಕರಣ 74ರ ಉಪಪ್ರಕರಣಗಳಾದ (2) ಮತ್ತು (10)ರಲ್ಲಿ ನಿರ್ದಿಷ್ಟಪಡಿಸಿದ ಅವಧಿಯನ್ನು ಲೆಕ್ಕಹಾಕುವಾಗ ಅಂಥ ಪೂರ್ವಭಾವಿ ನಿರ್ಣಯದ ದಿನಾಂಕದಿಂದ ಆರಂಭವಾಗುವ ಮತ್ತು ಈ ಉಪ ಪ್ರಕರಣದ ಅಡಿಯಲ್ಲಿನ ಆದೇಶದ ದಿನಾಂಕದೊಂದಿಗೆ ಅಂತ್ಯಗೊಳ್ಳುವ ಅವಧಿಯನ್ನು ಬಿಡತಕ್ಕದ್ದು.

(2) ಉಪಪ್ರಕರಣ (1)ರ ಅಡಿಯಲ್ಲಿ ಮಾಡಿದ ಆದೇಶದ ಒಂದು ಪ್ರತಿಯನ್ನು ಅರ್ಜಿದಾರನಿಗೆ, ಸಂಬಂಧಿತ ಅಧಿಕಾರಿಗೆ ಮತ್ತು ಕ್ಷೇತ್ರವ್ಯಾಪ್ತಿಯ ಅಧಿಕಾರಿಗೆ ಕಳುಹಿಸತಕ್ಕದ್ದು.

xx xx xx

105. ಪ್ರಾಧಿಕಾರ ಮತ್ತು ಅಪೀಲು ಪ್ರಾಧಿಕಾರದ ಅಧಿಕಾರಗಳು.– (1) ಪ್ರಾಧಿಕಾರವು ಅಥವಾ, ಅಪೀಲು ಪ್ರಾಧಿಕಾರವು,–

(ಎ) ಪತ್ತೆ ಮಾಡುವಿಕೆ ಮತ್ತು ತಪಾಸಣೆಗೆ;

(ಬಿ) ಯಾವುದೇ ವ್ಯಕ್ತಿಯ ಹಾಜರಾತಿಯ ಒತ್ತಾಯ ಪಡಿಸುವಿಕೆ ಮತ್ತು ಆತನನ್ನು ಪ್ರಮಾಣದ ಮೇಲೆ ಪರೀಕ್ಷಿಸುವಿಕೆಗೆ;

(ಸಿ) ಕಾರ್ಯಾಜ್ಞೆಗಳನ್ನು ಹೊರಡಿಸುವಿಕೆ ಮತ್ತು ಲೆಕ್ಕಪುಸ್ತಕಗಳು ಮತ್ತು ಇತರ ದಾಖಲೆಗಳನ್ನು ಹಾಜರುಪಡಿಸಲು ಅಗತ್ಯಪಡಿಸುವಿಕೆಗೆ,

–ಸಂಬಂಧಿಸಿದಂತೆ ತನ್ನ ಅಧಿಕಾರಗಳನ್ನು ಚಲಾಯಿಸುವ ಉದ್ದೇಶಕ್ಕಾಗಿ ಸಿವಿಲ್ ಪ್ರಕ್ರಿಯಾ ಸಂಹಿತೆ, 1908ರ (1908ರ ಕೇಂದ್ರ ಅಧಿನಿಯಮ 5) ಅಡಿಯಲ್ಲಿ ಒಂದು ಸಿವಿಲ್ ನ್ಯಾಯಾಲಯದ ಎಲ್ಲಾ ಅಧಿಕಾರಗಳನ್ನು ಹೊಂದಿರತಕ್ಕದ್ದು.

(2) ಪ್ರಾಧಿಕಾರ ಅಥವಾ ಅಪೀಲು ಪ್ರಾಧಿಕಾರವನ್ನು, ದಂಡ ಪ್ರಕ್ರಿಯಾ ಸಂಹಿತೆ, 1973 (1974ರ ಕೇಂದ್ರ ಅಧಿನಿಯಮ 2)ಯ ಅಧ್ಯಾಯ ಘಿಘಿಗಿಐ ರ ಉದ್ದೇಶಗಳಿಗಾಗಿ ಹೊರತುಪಡಿಸಿ, ಭಾರತೀಯ ದಂಡ ಸಂಹಿತೆ, 1860ರ (1860ರ ಕೇಂದ್ರ ಅಧಿನಿಯಮ 45) ಪ್ರಕರಣ 195ರ ಉದ್ದೇಶಗಳಿಗಾಗಿ, ಮತ್ತು ಪ್ರಾಧಿಕಾರ ಅಥವಾ ಅಪೀಲು ಪ್ರಾಧಿಕಾರದ ಮುಂದಿರುವ ಯಾವುದೇ ನಡಾವಳಿಗಳನ್ನು ಪ್ರಕರಣಗಳಾದ 193 ಮತ್ತು 228ರ ಅರ್ಥವ್ಯಾಪ್ತಿಯಲ್ಲಿನ ನ್ಯಾಯಿಕ ನಡಾವಳಿಗಳು ಎಂದು ಪರಿಭಾವಿಸತಕ್ಕದ್ದು, ಮತ್ತು ಪ್ರಕರಣ 196ರ ಉದ್ದೇಶಕ್ಕಾಗಿ, ಒಂದು ಸಿವಿಲ್ ನ್ಯಾಯಾಲಯ ಎಂದು ಪರಿಭಾವಿಸತಕ್ಕದ್ದು.

xx xx xx

106. ಪ್ರಾಧಿಕಾರ ಮತ್ತು ಅಪೀಲು ಪ್ರಾಧಿಕಾರದ ಕಾರ್ಯವಿಧಾನಗಳು. ಪ್ರಾಧಿಕಾರ ಅಥವಾ ಅಪೀಲು ಪ್ರಾಧಿಕಾರವು, ಈ ಅಧ್ಯಾಯದ ಉಪಬಂಧಗಳಿಗೆ ಒಳಪಟ್ಟು, ತನ್ನ ಸ್ವಂತ ಕಾರ್ಯವಿಧಾನವನ್ನು ವಿನಿಯಮಿಸುವ ಅಧಿಕಾರವನ್ನು ಹೊಂದಿರತಕ್ಕದು.

xx xx xx

171. ಲಾಭಬಡಕತನ ನಿರೋಧಕ ಕ್ರಮ.– xx xx xx

(3) ಉಪಪ್ರಕರಣ (2)ರಲ್ಲಿ ಉಲ್ಲೇಖಿಸಲಾದ ಪ್ರಾಧಿಕಾರವು ನಿಯಮಿಸಬಹುದಾದ ಅಂಥ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಅಂಥ ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದು.

xx xx xx

KARNATAKA LEGISLATIVE ASSEMBLY
FIFTEENTH LEGISLATIVE ASSEMBLY
FIFTH SESSION

THE KARNATAKA GOODS AND SERVICES TAX (AMENDMENT) BILL, 2019

(LA Bill No. 11 of 2019)

A Bill further to amend the Karnataka Goods and Services Tax Act, 2017 (Karnataka Act 27 of 2017).

Whereas it is expedient further to amend the Karnataka Goods and Services Tax Act, 2017 (Karnataka Act 27 of 2017) for the purposes hereinafter appearing;

Be it enacted by the Karnataka State Legislature in the Seventieth Year of the Republic of India, as follows:-

1. Short title and commencement.- (1) This Act may be called the Karnataka Goods and Services Tax (Amendment) Act, 2019.

28	ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ	ರಾಜಸ್ವ	263.00	16,762.00	17,025.00
		ಬಂಡವಾಳ	...	...	...
29	ಋಣ ಮೇಲುಸ್ತುವಾರಿ	ರಾಜಸ್ವ	19,41,031.00	...	19,41,031.00
		ಬಂಡವಾಳ	9,96,436.00	...	9,96,436.00
		ರಾಜಸ್ವ	**22,18,469.00**	**1,62,46,480.77**	**1,84,64,949.77**
	ಒಟ್ಟು ಜಮ್ಮಾ	**ಬಂಡವಾಳ**	**11,16,328.00**	**44,93,308.00**	**56,09,636.00**
		ಜಮ್ಮಾ	**33,34,797.00**	**2,07,39,788.77**	**2,40,74,585.77**

ಉದ್ದೇಶಗಳು ಮತ್ತು ಕಾರಣಗಳು ಹೇಳಿಕೆ

2019–20ನೇ ಹಣಕಾಸು ವರ್ಷದಲ್ಲಿ ಸಂದಾಯ ಮಾಡುವಾಗ ಒದಗಿಬರುವ ಹಲವಾರು ಖರ್ಚುಗಳನ್ನು ವಹಿಸುವುದಕ್ಕಾಗಿ ರಾಜ್ಯದ ಸಂಚಿತ ನಿಧಿಯೊಳಗಿನಿಂದ ವಿನಿಯೋಗಿಸಲು ಭಾರತ ಸಂವಿಧಾನದ 204ನೇ ಅನುಚ್ಛೇದದ ಉಪಬಂಧಗಳಿಗನುಸಾರವಾಗಿ ಈ ವಿಧೇಯಕವನ್ನು ಮಂಡಿಸಲಾಗಿದೆ.

ಬಿ.ಎಸ್.ಯಡಿಯೂರಪ್ಪ
ಮುಖ್ಯಮಂತ್ರಿಗಳು ಹಾಗೂ
ಹಣಕಾಸು ಸಚಿವರು

ಎಂ.ಕೆ. ವಿಶಾಲಾಕ್ಷಿ
ಕಾರ್ಯದರ್ಶಿ (ಪ್ರ)
ಕರ್ನಾಟಕ ವಿಧಾನ ಸಭೆ

KARNATAKA LEGISLATIVE ASSEMBLY
FIFTEENTH LEGISLATIVE ASSEMBLY
FIFTH SESSION
THE KARNATAKA APPROPRIATION (NO.3) BILL, 2019
(L.A. Bill No. 12 of 2019)

A Bill to authorize payment and appropriation of certain sums from and out of the Consolidated Fund of the State of Karnataka for the services of the Financial year **2019-20**.

Whereas it is expedient to authorize payment and appropriation of certain further sums from and out of the Consolidated Fund of the State for the services of the financial year **2019-20**.

Be it enacted by the Karnataka State Legislature in the Seventieth year of the Republic of India as follows:-

1. Short Title.- This Act may be called the Karnataka Appropriation (No.3) Act, 2019.

2. Issue of Rupees 24074585.77 Lakhs out of the Consolidated Fund of the State of Karnataka for the Financial year **2019-20:** From and out of the Consolidated Fund of the State of Karnataka, there may be paid and applied sums not exceeding those specified in column 5 of the Schedule amounting in the aggregate to the sum of Rupees Two Lakhs Forty thousand seven hundred and forty five crores eighty five lakhs and seventy seven thousand only (inclusive of the amount of Rupees 14291938.51 Lakhs authorized to be paid in Karnataka Act No. 8 and 18 of 2019) towards defraying the several charges which will come in the course of payment during the financial year 2019-20 in respect of the services specified in column 2 of the Schedule.

3. Appropriation.- The sums authorized to be paid and applied from and out of the Consolidated Fund of the State by this Act shall be appropriated for the services and purposes expressed in the Schedule in relation to the said year.

SCHEDULE

(See Sections 2 and 3)

(₹. in lakhs)

			Sums not exceeding		
Demand No.	**Service & Purpose**		**Charged on the consoli-dated Fund**	**voted by the Legislative Assembly**	**Total**
1	**2**		**3**	**4**	**5**
01	Agriculture and Horticulture	Revenue	...	6,54,405.59	6,54,405.59
		Capital	...	49,774.60	49,774.60
02	Animal Husbandry and Fisheries	Revenue	...	2,78,655.67	2,78,655.67
		Capital	...	12,245.00	12,245.00
03	Finance	Revenue	668.00	28,75,171.00	28,75,839.00
		Capital	...	12,246.00	12,246.00
04	Department of Personnel and	Revenue	16,230.00	1,02,255.00	1,18,485.00
	Administrative Reforms	Capital	...	612.00	612.00
05	Home and Transport	Revenue	8,140.00	7,18,032.70	7,26,172.70
		Capital	308.00	87,958.00	88,266.00
06	Infrastructure and Development	Revenue	...	2,229.00	2,229.00
		Capital	...	49,427.59	49,427.59
07	Rural Development and	Revenue	...	10,99,010.45	10,99,010.45
	Panchayath Raj	Capital	...	3,90,908.98	3,90,908.98
08	Forest, Ecology and Environment	Revenue	2,015.00	1,68,690.48	1,70,705.48
		Capital	...	11,696.00	11,696.00
09	Co-operation	Revenue	...	7,83,174.50	7,83,174.50
		Capital	...	10,698.00	10,698.00
10	Social Welfare	Revenue	...	8,45,451.44	8,45,451.44
		Capital	...	2,87,639.18	2,87,639.18
11	Women and Child Development	Revenue	...	5,17,458.76	5,17,458.76
		Capital	...	7,690.00	7,690.00
12	Information, Tourism and Youth	Revenue	...	48,499.21	48,499.21
	Services	Capital	...	45,750.33	45,750.33
13	Food and Civil Supplies	Revenue	...	3,99,965.01	3,99,965.01
		Capital	...	133.00	133.00
14	Revenue	Revenue	...	10,11,017.04	10,11,017.04
		Capital	500.00	17,784.00	18,284.00
15	Information Technology	Revenue	...	18,893.71	18,893.71
		Capital	...	160.00	160.00

SCHEDULE
(See Sections 2 and 3)

(₹. in lakhs)

			Sums not exceeding		
Demand No.	**Service & Purpose**		**Charged on the consoli-dated Fund**	**voted by the Legislative Assembly**	**Total**
1	**2**		**3**	**4**	**5**
16	Housing	Revenue	7,012.00	2,41,074.39	2,48,086.39
		Capital	15,907.00	...	15,907.00
17	Education	Revenue	...	26,93,279.83	26,93,279.83
		Capital	...	1,21,825.60	1,21,825.60
18	Commerce and Industries	Revenue	...	1,09,402.20	1,09,402.20
		Capital	...	1,08,800.00	1,08,800.00
19	Urban Development	Revenue	67,591.00	8,98,086.97	9,65,677.97
		Capital	...	8,77,157.17	8,77,157.17
20	Public Works	Revenue	3,981.00	3,21,882.00	3,25,863.00
		Capital	1,450.00	7,75,760.49	7,77,210.49
21	Water Resources	Revenue	1,49,819.00	1,07,707.18	2,57,526.18
		Capital	1,01,727.00	12,06,570.38	13,08,297.38
22	Health and Family Welfare	Revenue	...	8,28,457.65	8,28,457.65
		Capital	...	1,06,375.89	1,06,375.89
23	Labour & Skill Development	Revenue	...	1,19,425.46	1,19,425.46
		Capital	...	25,254.00	25,254.00
24	Energy	Revenue	471.00	12,29,026.67	12,29,497.67
		Capital	...	85,835.00	85,835.00
25	Kannada and Culture	Revenue	...	21,889.78	21,889.78
		Capital	...	12,970.00	12,970.00
26	Planning, Statistics, Science and	Revenue	...	39,346.15	39,346.15
	Technology	Capital	...	1,85,836.79	1,85,836.79
27	Law	Revenue	21,248.00	97,230.93	1,18,478.93
		Capital	...	2,200.00	2,200.00
28	Parliamentary Affairs and	Revenue	263.00	16,762.00	17,025.00
	Legislation	Capital	...	...	...
29	Debt Servicing	Revenue	19,41,031.00	...	19,41,031.00
		Capital	9,96,436.00	...	9,96,436.00
		Revenue	**22,18,469.00**	**1,62,46,480.77**	**1,84,64,949.77**
	Grand Total	**Capital**	**11,16,328.00**	**44,93,308.00**	**56,09,636.00**
		Total	**33,34,797.00**	**2,07,39,788.77**	**2,40,74,585.77**

STATEMENT OF OBJECTS AND REASONS

This Bill is introduced in pursuance of the provisions of Article 204 of the Constitution of India to provide for the appropriation out of the Consolidated Fund of the State towards defraying the several charges which will come in course of payment during the Financial Year 2019-20.

B.S. Yediyurappa
Chief Minister and
Minister for Finance

M.K.Vishalakshi
Secretary (I/c)
Karnataka Legislative Assembly

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ ಘಟಕ, ಬೆಂಗಳೂರು. (ಪಿ7) ಪ್ರತಿಗಳು: 150

RNI No. KARBIL/2001/47147

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

ಭಾಗ–IVA Part–IVA	ಬೆಂಗಳೂರು, ಶನಿವಾರ, ಅಕ್ಟೋಬರ್ ೧೨, ೨೦೧೯ (ಆಶ್ವಯುಜ ೨೦, ಶಕ ವರ್ಷ ೧೯೪೦) Bengaluru, Saturday, October 12, 2019 (Ashwayuja 20, Shaka Varsha 1940)	ನಂ. ೮೪೮ No. 848

KARNATAKA LEGISLATIVE ASSEMBLY SECRETARIAT

NOTIFICATION

No. KLA/LGA/Bill/13/2019, Bengaluru, Dated: 12.10.2019

The following Bill was introduced in Legislative Assembly on 12.10.2019.

ಕರ್ನಾಟಕ ವಿಧಾನಸಭೆ
ಹದಿನೈದನೇ ವಿಧಾನಸಭೆ
ಐದನೇ ಅಧಿವೇಶನ
ಕರ್ನಾಟಕ ಧನವಿನಿಯೋಗ (ಸಂಖ್ಯೆ.4) ವಿಧೇಯಕ, 2019
(2019ರ ವಿಧಾನ ಸಭೆಯ ವಿಧೇಯಕ ಸಂಖ್ಯೆ – 13)

2019–20ನೇ ಹಣಕಾಸು ವರ್ಷದ ಸೇವೆಗಳಿಗಾಗಿ ಕರ್ನಾಟಕ ರಾಜ್ಯದ ಸಂಚಿತ ನಿಧಿಯಿಂದ ಮತ್ತು ಅದರೊಳಗಿಂದ ಕೆಲವು ಅಧಿಕ ಮೊತ್ತಗಳ ಸಂದಾಯ ಮತ್ತು ವಿನಿಯೋಗಕ್ಕಾಗಿ ಅಧಿಕಾರ ನೀಡಲು ಒಂದು ವಿಧೇಯಕ.

2019–20ನೇ ಹಣಕಾಸು ವರ್ಷದ ಸೇವೆಗಳಿಗಾಗಿ ಕರ್ನಾಟಕ ರಾಜ್ಯದ ಸಂಚಿತ ನಿಧಿಯಿಂದ ಮತ್ತು ಆ ಪೈಕಿಯಿಂದ ಕೆಲವು ಅಧಿಕ ಮೊತ್ತಗಳ ಸಂದಾಯ ಮತ್ತು ವಿನಿಯೋಗಕ್ಕಾಗಿ ಅಧಿಕಾರ ನೀಡುವುದು ಯುಕ್ತವಾಗಿರುವುದರಿಂದ :

ಇದು ಭಾರತ ಗಣರಾಜ್ಯದ ಎಪ್ಪತ್ತನೇಯ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಕೆಳಕಂಡಂತೆ ಅಧಿನಿಯಮಿತವಾಗಲಿ.

1. ಸಂಕ್ಷಿಪ್ತ ಹೆಸರು: ಈ ಅಧಿನಿಯಮವನ್ನು ಕರ್ನಾಟಕ ಧನವಿನಿಯೋಗ (ಸಂಖ್ಯೆ.4) ಅಧಿನಿಯಮ, 2019 ಎಂದು ಕರೆಯತಕ್ಕದ್ದು.

2. ಕರ್ನಾಟಕ ರಾಜ್ಯ ಸಂಚಿತ ನಿಧಿಯಿಂದ 2019–20ನೇ ಹಣಕಾಸು ವರ್ಷಕ್ಕಾಗಿ **792723.07** ಲಕ್ಷ ರೂಪಾಯಿಗಳ ನೀಡಿಕೆ: ಅನುಸೂಚಿಯ 2ನೇ ಅಂಕಣದಲ್ಲಿ ನಿರ್ದಿಷ್ಟ ಪಡಿಸಲಾದ ಸೇವೆಗಳ ಸಂಬಂಧದಲ್ಲಿ **2019–20**ನೇ ಹಣಕಾಸು ವರ್ಷದಲ್ಲಿ ಸಂದಾಯ ಮಾಡುವಾಗ ಒದಗಿಬರುವ ಹಲವಾರು ಖರ್ಚುಗಳನ್ನು ವಹಿಸುವುದಕ್ಕಾಗಿ ಅನುಸೂಚಿಯ 5ನೇ ಅಂಕಣದಲ್ಲಿ ನಿರ್ದಿಷ್ಟಪಡಿಸಲಾಗಿರುವ **ಏಳುಸಾವಿರದ ಒಂಬೈನೂರ ಇಪ್ಪತ್ತೇಳು ಕೋಟಿ ಇಪ್ಪತ್ಮೂರು ಲಕ್ಷ ಏಳುಸಾವಿರ ರೂಪಾಯಿಗಳನ್ನು** ಮೀರದಷ್ಟು ಕರ್ನಾಟಕ ರಾಜ್ಯ ಸಂಚಿತ ನಿಧಿಯಿಂದ ಮತ್ತು ಅದರೊಳಗಿಂದ ಸಂದಾಯ ಮಾಡತಕ್ಕದ್ದು ಮತ್ತು ಉಪಯೋಗಿಸತಕ್ಕದ್ದು.

3. ಧನವಿನಿಯೋಗ.– ಈ ಅಧಿನಿಯಮದ ಮೂಲಕ, ಕರ್ನಾಟಕ ರಾಜ್ಯದ ಸಂಚಿತ ನಿಧಿಯಿಂದ ಮತ್ತು ಅದರೊಳಗಿಂದ ಸಂದಾಯ ಮಾಡಲು ಮತ್ತು ಉಪಯೋಗಿಸಲು ಅಧಿಕಾರ ನೀಡಲಾದ ಮೊತ್ತಗಳನ್ನು ಸದರಿ ವರ್ಷಕ್ಕೆ ಸಂಬಂಧಪಟ್ಟಂತೆ ಅನುಸೂಚಿಯಲ್ಲಿ ತಿಳಿಸಲಾದ ಸೇವೆಗಳು ಮತ್ತು ಉದ್ದೇಶಗಳಿಗಾಗಿ ವಿನಿಯೋಗಿಸತಕ್ಕದ್ದು.

ಅನುಸೂಚಿ
(2 ಮತ್ತು 3ನೇ ಪ್ರಕರಣಗಳನ್ನು ನೋಡಿ)

(ಲಕ್ಷ ₹ ಗಳಲ್ಲಿ)

		ಮೀರದ ಮೊಬಲಗು		
ಬೇಡಿಕೆ ಸಂಖ್ಯೆ	ಸೇವೆಗಳು ಮತ್ತು ಉದ್ದೇಶಗಳು	ವಿಧಾನಸಭೆಯಿಂದ ಪುರಸ್ಕೃತವಾದುದನ್ನು	ಸಂಚಿತ ನಿಧಿಯಿಂದ ಪ್ರಭೃತವಾದುದನ್ನು	ಒಟ್ಟು
1	2	3	4	5
01	ಕೃಷಿ ಮತ್ತು ತೋಟಗಾರಿಕೆ ರಾಜಸ್ವ	1,59,011.45	...	1,59,011.45
02	ಪಶುಸಂಗೋಪನೆ ಮತ್ತು ಮೀನುಗಾರಿಕೆ ರಾಜಸ್ವ	1,488.42	...	1,488.42
03	ಆರ್ಥಿಕ ರಾಜಸ್ವ	972.00	...	972.00
04	ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ರಾಜಸ್ವ	2,804.49	352.40	3,156.89
05	ಒಳಾಡಳಿತ ಮತ್ತು ಸಾರಿಗೆ ರಾಜಸ್ವ	8,273.00	...	8,273.00
07	ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತಿ ರಾಜ್ ರಾಜಸ್ವ	584.00	...	584.00
	ಬಂಡವಾಳ	1,50,000.00	...	1,50,000.00
08	ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ರಾಜಸ್ವ	14,194.58	...	14,194.58
09	ಸಹಕಾರ ಬಂಡವಾಳ	300.00	...	300.00
10	ಸಮಾಜ ಕಲ್ಯಾಣ ರಾಜಸ್ವ	2,326.00	...	2,326.00
11	ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ರಾಜಸ್ವ	2,148.36	...	2,148.36
12	ವಾರ್ತಾ, ಪ್ರವಾಸೋದ್ಯಮ ಮತ್ತು ಯುವಜನ ಸೇವೆಗಳು ರಾಜಸ್ವ	47.00	...	47.00
13	ಆಹಾರ ಮತ್ತು ನಾಗರೀಕ ಸರಬರಾಜು ರಾಜಸ್ವ	217.50	...	217.50
14	ಕಂದಾಯ ರಾಜಸ್ವ	2,16,187.00	...	2,16,187.00
15	ಮಾಹಿತಿ ತಂತ್ರಜ್ಞಾನ ರಾಜಸ್ವ	11.00	...	11.00

ಅನುಸೂಚಿ
(2 ಮತ್ತು 3ನೇ ಪ್ರಕರಣಗಳನ್ನು ನೋಡಿ)

(ಲಕ್ಷ ಗಳಲ್ಲಿ)

			ಮೀರದ ಮೊಬಲಗು		
ಬೇಡಿಕೆ ಸಂಖ್ಯೆ	ಸೇವೆಗಳು ಮತ್ತು ಉದ್ದೇಶಗಳು		ವಿಧಾನಸಭೆಯಿಂದ ಪುರಸ್ಕೃತವಾದುದನ್ನು	ಸಂಚಿತ ನಿಧಿಯಿಂದ ಪ್ರಭೃತವಾದುದನ್ನು	ಒಟ್ಟು
1	2		3	4	5
16	ವಸತಿ	ರಾಜಸ್ವ	1,00,000.00	...	1,00,000.00
17	ಶಿಕ್ಷಣ	ರಾಜಸ್ವ	13,420.61	...	13,420.61
18	ವಾಣಿಜ್ಯ ಮತ್ತು ಕೈಗಾರಿಕೆ	ರಾಜಸ್ವ	1,822.77	...	1,822.77
19	ನಗರಾಭಿವೃದ್ಧಿ	ರಾಜಸ್ವ	67,851.00	...	67,851.00
20	ಲೋಕೋಪಯೋಗಿ	ರಾಜಸ್ವ	1,696.00	...	1,696.00
21	ಜಲಸಂಪನ್ಮೂಲ	ರಾಜಸ್ವ	786.00	...	786.00
22	ಆರೋಗ್ಯ ಮತ್ತು ಕುಟುಂಬ ಕಲ್ಯಾಣ	ರಾಜಸ್ವ	9,771.19	...	9,771.19
		ಬಂಡವಾಳ	359.00	...	359.00
23	ಕಾರ್ಮಿಕ ಮತ್ತು ಕೌಶಲ್ಯ ಅಭಿವೃದ್ಧಿ	ರಾಜಸ್ವ	194.88	...	194.88
24	ಇಂಧನ	ರಾಜಸ್ವ	23.00	...	23.00
25	ಕನ್ನಡ ಮತ್ತು ಸಂಸ್ಕೃತಿ	ರಾಜಸ್ವ	1,116.40	...	1,116.40
26	ಯೋಜನೆ, ಸಾಂಖ್ಯಿಕ, ವಿಜ್ಞಾನ ಮತ್ತು ತಂತ್ರಜ್ಞಾನ	ರಾಜಸ್ವ	24.00	...	24.00
		ಬಂಡವಾಳ	1,500.00	...	1,500.00
27	ಕಾನೂನು	ರಾಜಸ್ವ	2,834.47	735.00	3,569.47
28	ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ	ರಾಜಸ್ವ	593.00	19.00	612.00
29	ಋಣ ಮೇಲುಸ್ತುವಾರಿ	ರಾಜಸ್ವ	...	10.55	10.55
		ಬಂಡವಾಳ	...	31,049.00	31,049.00
	ಮೊತ್ತ	ರಾಜಸ್ವ	**6,08,398.12**	**1,116.95**	**6,09,515.07**
		ಬಂಡವಾಳ	**1,52,159.00**	**31,049.00**	**1,83,208.00**
	ಒಟ್ಟು ಮೊತ್ತ		**7,60,557.12**	**32,165.95**	**7,92,723.07**

ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

2019–20ನೇ ಹಣಕಾಸು ವರ್ಷದಲ್ಲಿ ಸಂದಾಯ ಮಾಡುವಾಗ ಒದಗಿಬರುವ ಹಲವಾರು ಖರ್ಚುಗಳನ್ನು ವಹಿಸುವುದಕ್ಕಾಗಿ ರಾಜ್ಯದ ಸಂಚಿತ ನಿಧಿಯೊಳಗಿನಿಂದ ವಿನಿಯೋಗಿಸಲು ಭಾರತ ಸಂವಿಧಾನದ 205ನೇ (1)(ಎ) ಅನುಚ್ಛೇದದ ಉಪಬಂಧಗಳಿಗನುಸಾರವಾಗಿ ಈ ವಿಧೇಯಕವನ್ನು ಮಂಡಿಸಲಾಗಿದೆ.

ಬಿ.ಎಸ್.ಯಡಿಯೂರಪ್ಪ
ಮುಖ್ಯಮಂತ್ರಿಗಳು ಹಾಗೂ
ಹಣಕಾಸು ಸಚಿವರು

ಎಂ.ಕೆ.ವಿಶಾಲಾಕ್ಷಿ
ಕಾರ್ಯದರ್ಶಿ (ಪ್ರ)
ಕರ್ನಾಟಕ ವಿಧಾನಸಭೆ

KARNATAKA LEGISLATIVE ASSEMBLY
FIFTEENTH LEGISLATIVE ASSEMBLY
FIFTH SESSION

THE KARNATAKA APPROPRIATION (NO.4) BILL, 2019
(L.A. Bill No. 13 of 2019)

A Bill to authorize payment and appropriation of certain further sums from and out of the Consolidated Fund of the State of Karnataka for the Services of the Financial year **2019-20.**

Whereas it is expedient to authorize payment and appropriation of certain further sums from and out of the Consolidated fund of the State for the services of the Financial Year **2019-20.**

Be it enacted by the Karnataka State Legislature in the SEVENTIETH Year of the Republic of India as follows :-

1. Short Title.- This Act may be called the Karnataka Appropriation (No. 4) Act, **2019.**

2. Issue of Rupees 792723.07 Lakhs out of the Consolidated Fund of the State of Karnataka for the Financial year **2019-20**: From and out of the Consolidated Fund of the State of Karnataka, there may be paid and applied sums not exceeding those specified in column 5 of the Schedule amounting in the aggregate to the sum of **Seven thousand nine hundred and twenty seven crores twenty three lakhs seven thousand Rupees** towards defraying the several charges which will come in the course of payment during the Financial Year 2019-20 in respect of the services specified in column 2 of the Schedule.

3. Appropriation.- The sums authorized to be paid and applied from and out of the Consolidated Fund of the State by this Act shall be appropriated for the services and purposes expressed in the Schedule in relation to the said year.

SCHEDULE

(See Sections 2 and 3)

(₹ in lakhs)

			Sums not exceeding		
Demand No.	**Service & Purpose**		**voted by the Legislative Assembly**	**Charged on the consolidated Fund**	**Total**
1	**2**		**3**	**4**	**5**
01	Agriculture and Horticulture	Revenue	1,59,011.45	...	1,59,011.45
02	Animal Husbandry and Fisheries	Revenue	1,488.42	...	1,488.42
03	Finance	Revenue	972.00	...	972.00
04	Department of Personnel and Administrative Reforms	Revenue	2,804.49	352.40	3,156.89
05	Home and Transport	Revenue	8,273.00	...	8,273.00
07	Rural Development and	Revenue	584.00	...	584.00
	Panchayath Raj	Capital	1,50,000.00	...	1,50,000.00
08	Forest, Ecology and Environment	Revenue	14,194.58	...	14,194.58
09	Co-operation	Capital	300.00	...	300.00
10	Social Welfare	Revenue	2,326.00	...	2,326.00
11	Women and Child Development	Revenue	2,148.36	...	2,148.36
12	Information, Tourism & Youty Services	Revenue	47.00	...	47.00
13	Food and Civil Supplies	Revenue	217.50	...	217.50
14	Revenue	Revenue	2,16,187.00	...	2,16,187.00
15	Information Technology	Revenue	11.00	...	11.00

SCHEDULE
(See Sections 2 and 3)

(₹ in lakhs)

			Sums not exceeding		
Demand No.	**Service & Purpose**		**voted by the Legislative Assembly**	**Charged on the consoli-dated Fund**	**Total**
1	**2**		**3**	**4**	**5**
16	Housing	Revenue	1,00,000.00	...	1,00,000.00
17	Education	Revenue	13,420.61	...	13,420.61
18	Commerce and Industries	Revenue	1,822.77	...	1,822.77
19	Urban Development	Revenue	67,851.00	...	67,851.00
20	Public Works	Revenue	1,696.00	...	1,696.00
21	Water Resources	Revenue	786.00	...	786.00
22	Health and Family Welfare	Revenue	9,771.19	...	9,771.19
		Capital	359.00	...	359.00
23	Labour & Skill Development	Revenue	194.88	...	194.88
24	Energy	Revenue	23.00	...	23.00
25	Kannada and Culture	Revenue	1,116.40	...	1,116.40
26	Planning, Statistics, Science and	Revenue	24.00	...	24.00
	Technology	Capital	1,500.00	...	1,500.00
27	Law	Revenue	2,834.47	735.00	3,569.47
28	Parliamentary Affairs and Legislation	Revenue	593.00	19.00	612.00
29	Debt Servicing	Revenue	...	10.55	10.55
		Capital	...	31,049.00	31,049.00
	Total	**Revenue**	**6,08,398.12**	**1,116.95**	**6,09,515.07**
		Capital	**1,52,159.00**	**31,049.00**	**1,83,208.00**
	Grand Total		**7,60,557.12**	**32,165.95**	**7,92,723.07**

STATEMENT OF OBJECTS AND REASONS

This Bill is introduced in pursuance of the provisions of Article 205(1)(a) of the Constitution of India to provide for the appropriation out of the Consolidated Fund of the State towards defraying the several charges which will come in course of payment during the part of the Financial Year 2019-20.

B.S.Yediyurappa
Chief Minister and
Minister for Finance

M.K.Vishalakshi
Secretary (I/c)
Karnataka Legislative Assembly

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ ಘಟಕ, ಬೆಂಗಳೂರು. (ಪಿ7) ಪ್ರತಿಗಳು: 150

FRNI No. KARBIL/2001/47147

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

ಭಾಗ–IVA Part–IVA	ಬೆಂಗಳೂರು, ಶನಿವಾರ, ಅಕ್ಟೋಬರ್ ೧೨, ೨೦೧೯ (ಆಶ್ವಯುಜ ೨೦, ಶಕ ವರ್ಷ ೧೯೪೦) Bengaluru, Saturday, October 12, 2019 (Ashwayuja 20, Shaka Varsha 1940)	ನಂ. ೮೫೦ No. 850

ಕರ್ನಾಟಕ ವಿಧಾನ ಪರಿಷತ್ತು ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಕವಿಪ/ಶಾರಶಾ/70/139ನೇ.ಅ/2019, ಬೆಂಗಳೂರು, ದಿನಾಂಕ: 12–10–2019

10**ನೇ ಅಕ್ಟೋಬರ್, 2019**ರ ಗುರುವಾರದಂದು ಪ್ರಾರಂಭವಾದ ಕರ್ನಾಟಕ ವಿಧಾನ ಪರಿಷತ್ತಿನ ನೂರ ಮೂವತ್ತೊಂಭತ್ತನೆಯ ಅಧಿವೇಶನವನ್ನು **12ನೇ ಅಕ್ಟೋಬರ್, 2019ರ** ಶನಿವಾರದಂದು ಅನಿರ್ಧಿಷ್ಟ ಕಾಲದವರೆಗೆ ಮುಂದೂಡಲಾಯಿತು.

ಕೆ.ಆರ್. ಮಹಾಲಕ್ಷ್ಮಿ
ಕಾರ್ಯದರ್ಶಿ
ಕರ್ನಾಟಕ ವಿಧಾನ ಪರಿಷತ್ತು

KARNATAKA LEGISLATIVE COUNCIL SECRETARIAT
NOTIFICATION
No. KLC/LEC/70/139th.S/2019, Bengaluru, dated: 12.10.2019

The Hundred and Thirty Ninth Session of Karnataka Legislative Council which had commenced on Thursday, the 10th **October, 2019** stands adjourned sine-die on **Saturday, the 12th October, 2019.**

K.R.Mahalakshmi
Secretary
Karnataka Legislative Council

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ ಘಟಕ, ಬೆಂಗಳೂರು. (ಕಿ7) ಪ್ರತಿಗಳು: ೫೦

FRNI No. KARBIL/2001/47147

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

ಭಾಗ–IVA Part–IVA	ಬೆಂಗಳೂರು, ಶನಿವಾರ, ಅಕ್ಟೋಬರ್ ೧೨, ೨೦೧೯ (ಆಶ್ವಯುಜ ೨೦, ಶಕ ವರ್ಷ ೧೯೪೦) Bengaluru, Saturday, October 12, 2019 (Ashwayuja 20, Shaka Varsha 1940)	ನಂ. ೮೫೧ No. 851

ಕರ್ನಾಟಕ ವಿಧಾನ ಸಭೆ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಕವಿಸಸ/ಶಾರಶಾ/18/2019, ಬೆಂಗಳೂರು, ದಿನಾಂಕ: 12–10–2019

ಗುರುವಾರ, ದಿನಾಂಕ 10ನೇ ಅಕ್ಟೋಬರ್, 2019 ರಂದು ಪ್ರಾರಂಭವಾದ ಹದಿನೈದನೇ ವಿಧಾನಸಭೆಯ ಐದನೇ ಅಧಿವೇಶನವನ್ನು ಶನಿವಾರ, ದಿನಾಂಕ 12ನೇ ಅಕ್ಟೋಬರ್, 2019ರಂದು ಅನಿರ್ಧಿಷ್ಟ ಕಾಲದವರೆಗೆ ಮುಂದೂಡಲಾಗಿದೆ.

ಎಂ.ಕೆ. ವಿಶಾಲಾಕ್ಷಿ
ಕಾರ್ಯದರ್ಶಿ (ಪ್ರ)
ಕರ್ನಾಟಕ ವಿಧಾನ ಸಭೆ

KARNATAKA LEGISLATIVE ASSEMBLY SECRETARIAT
NOTIFICATION
No. KLAS/LGA/18/2019, Bengaluru, Dated: 12.10.2019

The Meeting of the Fifth Session of the Fifteenth Legislative Assembly, which commenced on Thursday, the 10th October, 2019 is adjourned sine-die on Saturday, the 12th October, 2019.

M.K. Vishalakshi
Secretary (I/c)
Karnataka Legislative Assembly

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ ಘಟಕ, ಬೆಂಗಳೂರು. (ಪಿ7) ಪ್ರತಿಗಳು: 50

FRNI No. KARBIL/2001/47147

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

ಭಾಗ–IVA Part–IVA	ಬೆಂಗಳೂರು,. ಸೋಮವಾರ, ಅಕ್ಟೋಬರ್ ೧೪, ೨೦೧೯ (ಆಶ್ವಯುಜ ೨೨, ಶಕ ವರ್ಷ ೧೯೪೦) Bengaluru, Monday, October 14, 2019 (Ashwayuja 22, Shaka Varsha 1940)	ಸಂ. ೮೫೨ No. 852

ನಗರಾಭಿವೃದ್ಧಿ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ನಅಇ 85 ಬೆಂರೂಪ್ರಾ 2019(ಇ–ಆಫೀಸ್), ಬೆಂಗಳೂರು, ದಿನಾಂಕ: 11.10.2019

ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಕಾಯ್ದೆ, 1987ರ ಕಲಂ: 3(3)(ಎ)(ಎಂ) ಹಾಗೂ (4) ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಈ ಕೆಳಕಂಡವರನ್ನು ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ಹಾವೇರಿ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರನ್ನಾಗಿ / ಸದಸ್ಯರನ್ನಾಗಿ ನೇಮಕ ಮಾಡಿ ಆದೇಶಿಸಲಾಗಿದೆ.

ಕ್ರಮ ಸಂಖ್ಯೆ	ಹೆಸರು ಮತ್ತು ವಿಳಾಸ	ಸ್ಥಾನ
01	ಶ್ರೀ ಶಿವಕುಮಾರ ಬಸವಣ್ಣೆಪ್ಪ ಸಂಗೂರು	ಅಧ್ಯಕ್ಷರು
02	ಶ್ರೀ ಚಂದ್ರಹಾಸ ಕ್ಯಾತಣ್ಣವರ	ಸದಸ್ಯರು (ಪರಿಶಿಷ್ಟ ಜಾತಿ)
03	ಶ್ರೀ ನಂಜುಂಡೇಶ್ವರ ಪ.ಕಳ್ಳೇರ	ಸದಸ್ಯರು
04	ಶ್ರೀಮತಿ ಲತಾ ನಾಗರಾಜ್ ಬಡ್ನೀಮಠ	ಸದಸ್ಯರು
05	ಶ್ರೀ ಡಾ॥ ಸಂಜಯ ಮಾಗಾವಿ	ಸದಸ್ಯರು

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ನಾಗರಾಜ
ಸರ್ಕಾರದ ಅಧೀನ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ.

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ ಘಟಕ, ಬೆಂಗಳೂರು. (ಪಿ7) ಪ್ರತಿಗಳು: 15

RNI No. KARBIL/2001/47147

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

ಭಾಗ–IVA	ಬೆಂಗಳೂರು,. ಸೋಮವಾರ, ಅಕ್ಟೋಬರ್ ೧೪, ೨೦೧೯ (ಆಶ್ವಯುಜ ೨೨, ಶಕ ವರ್ಷ ೧೯೪೦)	ನಂ. ೮೫೩
Part–IVA	Bengaluru, Monday, October 14, 2019 (Ashwayuja 22, Shaka Varsha 1940)	No. 853

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಅಧಿಸೂಚನೆ

ಸಂಖ್ಯೆ: ಸ.ಆ(ಜಾ)ಪಿ.ಆರ್/2232/16–17, ಬೆಂಗಳೂರು, ದಿನಾಂಕ: 06–09–2019

ಬೃಹತ್ ಬೆಂಗಳೂರು ಮಹಾ ನಗರ ಪಾಲಿಕೆಯ ಹೊರಾಂಗಣ ಜಾಹೀರಾತು ಫಲಕ ಮತ್ತು ಸಾರ್ವಜನಿಕ ಸಂದೇಶದ ಉಪವಿಧಿಗಳು, 2018ರ ಕರಡನ್ನು ಅಧಿಸೂಚನೆ ಸಂ.ಎಸಿ (ಜಾಹೀರಾತು)ಪಿಆರ್/2232/2016–17, ದಿನಾಂಕ:19.09.2018ರಲ್ಲಿ ಪ್ರಕಟಿಸಿ, ಸರ್ಕಾರಿ ರಾಜ್ಯಪತ್ರದಲ್ಲಿ ಅದರ ಪ್ರಕಟಣೆಯ ದಿನಾಂಕದಿಂದ ಮೂವತ್ತು ದಿನಗಳೊಳಗಾಗಿ ಇದರಿಂದ ಬಾಧಿತರಾಗುವ ಸಂಭವವಿರುವ ಎಲ್ಲ ವ್ಯಕ್ತಿಗಳಿಂದ ಆಕ್ಷೇಪಣೆಗಳು ಮತ್ತು ಸಲಹೆಗಳನ್ನು ಆಹ್ವಾನಿಸಿ, ದಿನಾಂಕ:25.09.2018ರ ಕರ್ನಾಟಕ ವಿಶೇಷ ರಾಜ್ಯಪತ್ರ ಸಂಖ್ಯೆ ಸಂ.1369, ಭಾಗ–IVಎ ರಲ್ಲಿ ಕರ್ನಾಟಕ ನಗರಪಾಲಿಕೆಗಳ ಅಧಿನಿಯಮ, 1976 (1977ರ ಕರ್ನಾಟಕ ಅಧಿನಿಯಮ, ಸಂಖ್ಯೆ 14)ರ 426ನೇ ಪ್ರಕರಣದ (ಎ) ಖಂಡದ ಮೂಲಕ ಅಗತ್ಯಪಡಿಸಲಾದಂತೆ ಪ್ರಕಟಿಸಿರುವುದರಿಂದ;

ಸದರಿ ರಾಜ್ಯಪತ್ರವನ್ನು 25.09.2018 ರಂದು ಸಾರ್ವಜನಿಕರಿಗೆ ಲಭ್ಯವಾಗುವಂತೆ ಮಾಡಿರುವುದರಿಂದ;

ಮತ್ತು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ಸದರಿ ಕರಡಿನ ಸಂಬಂಧದಲ್ಲಿ ಸ್ವೀಕರಿಸಿದ ಆಕ್ಷೇಪಣೆಗಳು ಮತ್ತು ಸಲಹೆಗಳನ್ನು ಪರಿಗಣಿಸಿರುವುದರಿಂದ;

ಈಗ, ಕರ್ನಾಟಕ ನಗರಪಾಲಿಕೆಗಳ ಅಧಿನಿಯಮ, 1976 (1977ರ ಕರ್ನಾಟಕ ಅಧಿನಿಯಮ ಸಂಖ್ಯೆ 14)ರ 425 ಹಾಗೂ 428ನೇ ಪ್ರಕರಣದೊಂದಿಗೆ ಓದಲಾದ ಪ್ರಕರಣ 423ರ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ ಮತ್ತು ರಾಜ್ಯ ಸರ್ಕಾರದ ಆದೇಶ ಸಂಖ್ಯೆ ಮೂಲಕ ಪೂರ್ವ ಮಂಜೂರಾತಿ ಪಡೆದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ಈ ಮೂಲಕ ಈ ಕೆಳಕಂಡ ಉಪವಿಧಿಗಳನ್ನು ರಚಿಸುತ್ತದೆ, ಎಂದರೆ:–

ಉಪ–ವಿಧಿಗಳು (ಬೈ–ಲಾಗಳು)

1. ಶೀರ್ಷಿಕೆ, ಪ್ರಾರಂಭ ಮತ್ತು ಅನ್ವಯ.– (1) ಈ ಉಪ–ವಿಧಿಗಳನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಹೊರಾಂಗಣ ಜಾಹೀರಾತು ಮತ್ತು ಸಾರ್ವಜನಿಕ ಸಂದೇಶದ ಉಪ–ವಿಧಿಗಳು, 2018 ಎಂದುಕರೆಯತಕ್ಕದ್ದು.

(2) ಈ ಉಪ–ವಿಧಿಗಳು ಸರ್ಕಾರದ ಮಂಜೂರಾತಿಯ ನಂತರ ಹಾಗೂ ಸರ್ಕಾರಿ ರಾಜ್ಯಪತ್ರದಲ್ಲಿ ಅವುಗಳ ಅಂತಿಮ ಪ್ರಕಟಣೆಯ ದಿನಾಂಕದಿಂದ ಮೂರು ತಿಂಗಳ ನಂತರ ಜಾರಿಗೆ ಬರತಕ್ಕದ್ದು.

(3) ಈ ಉಪ–ವಿಧಿಗಳು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರ ಕ್ಷೇತ್ರ ವ್ಯಾಪ್ತಿಯೊಳಗೆ ಅನ್ವಯವಾಗತಕ್ಕದ್ದು.

2.3 ಪರಿಭಾಷೆಗಳು.– ಈ ಉಪವಿಧಿಗಳಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,–

(1) **"ಜಾಹೀರಾತು"**ಎಂದರೆ, ಈ ಪರಿಭಾಷೆಗಳಲ್ಲಿ ಒಳಗೊಂಡ ಪ್ರವರ್ಗಗಳ ಅಡಿಯಲ್ಲಿ ವಾಣಿಜ್ಯ ದೃಷ್ಟಿಯಿಂದ ಯಾವುದೇ ಉತ್ಪನ್ನ ಅಥವಾ ಸೇವೆಯನ್ನುಉತ್ತೇಜಿಸಲುಯಾವುದೇ ಸಾರ್ವಜನಿಕ ಸ್ಥಳದಲ್ಲಿ ಅಥವಾ ಸಾರ್ವಜನಿಕರಿಗೆಕಾಣುವಂತಹ ಸ್ಥಳದಲ್ಲಿ ಪ್ರದರ್ಶಿಸಲಾಗುವ ಪೋಸ್ಟರುಗಳು, ಪ್ರಕಟಣಾ ಫಲಕಗಳು, ಜಾಹೀರಾತು ಫಲಕ, ಬ್ಯಾನರುಗಳು, ತಾತ್ಕಾಲಿಕ ಕಮಾನುಗಳು, ಎಲೆಕ್ಟ್ರಾನಿಕ್ ಡಿಸ್‌ಪ್ಲೇ, ನಾಮಫಲಕಗಳು, ನಿರ್ದೇಶನಾ ಫಲಕಗಳು, ಕರಪತ್ರಗಳು, ಬಾವುಟಗಳು, ಬಲೂನುಗಳು ಅಥವಾಇತರಯಾವುದೇದೃಶ್ಯಅಥವಾ ಶ್ರವ್ಯ ಮಾಧ್ಯಮದ ಮೂಲಕ ಪದ, ನಿರ್ದೇಶನ,

ಸಂಕ್ಷಿಪ್ತಾಕ್ಷರ, ಅಕ್ಷರ, ಲಾಂಛನ, ಸಂಕೇತ, ನಮೂನೆ, ಚಿತ್ರಅಥವಾಅದರ ಸಂಯೋಜನೆಯಿಂದ ಮಾಡುವಯಾವುದೇ ಪ್ರದರ್ಶನ, ಸಾಧನಅಥವಾ ನಿರೂಪಣೆ ಒಳಗೊಳ್ಳುತ್ತವೆ. ಇವುಗಳಲ್ಲಿ, ಸ್ಥಳಗಳು, ಕಟ್ಟಡಗಳು ಮತ್ತು ಬಾಡಿಗೆ ವಾಣಿಜ್ಯ ಸಂಸ್ಥೆಗಳನ್ನು ಗುರುತಿಸುವುದಕ್ಕಾಗಿ ಮತ್ತು ಹೆಸರಿಸುವುದಕ್ಕಾಗಿ ಅಳವಡಿಸಲಾದ ನಾಮಫಲಕಗಳು ಒಳಗೊಂಡಿರುವುದಿಲ್ಲ.

(2) **"ಏಜೆನ್ಸಿ"**ಎಂದರೆ, ಒಬ್ಬ ಅರ್ಜಿದಾರ, ಅವನು ಹೊರಾಂಗಣ ಜಾಹೀರಾತು ಏಜೆನ್ಸಿಯಾಗಿ ಬಿಬಿಎಂಪಿಯಲ್ಲಿ ನೋಂದಾಯಿತವಾದ ಒಬ್ಬ ವ್ಯಕ್ತಿ ಅಥವಾ ನೋಂದಾಯಿತದತ್ತಿ ಸಂಸ್ಥೆ, ಕಂಪನಿಗಳ ಅಧಿನಿಯಮ, 2013ರ ಅಡಿಯಲ್ಲಿ ನಿಗಮಿತವಾದ ಸಂಸ್ಥೆ, ಪಾಲುದಾರಿಕೆ ಸಂಸ್ಥೆ ಅಥವಾ ಕಂಪನಿ.

(3) **"ಪ್ರಾಧಿಕಾರ"** ಎಂದರೆ, ಬಿಬಿಎಂಪಿಯು ತನ್ನ ಅಧಿಕಾರ ಕ್ಷೇತ್ರ ವ್ಯಾಪ್ತಿಯೊಳಗೆ ಹೊರಾಂಗಣ ಜಾಹೀರಾತು (ಸಂಕೇತಗಳು) ಮತ್ತು ಸಾರ್ವಜನಿಕ ಸಂದೇಶಕ್ಕೆ ಸಂಬಂಧಿಸಿರುವ ಎಲ್ಲಾ ವಿಷಯಗಳನ್ನು ಅನುಮೋದಿಸಲು, ಜಾರಿಗೊಳಿಸಲು ಮತ್ತು ನಿರ್ವಹಿಸಲು ಅಧಿಕೃತಗೊಳಿಸಿದ ಒಂದು ಸಂಸ್ಥೆ;

(4) **"ಹಿಂದಿನಿಂದ ಬೆಳಕು ಹರಿಸಲಾಗುವ ಜಾಹೀರಾತು ಫಲಕ (ಬ್ಯಾಕ್–ಲಿಟ್ ಸೈನ್)"** ಎಂದರೆ, ವಿದ್ಯುತ್ ದೀಪಗಳ ಮುಂದೆ, ಜಾಹೀರಾತನ್ನು ಹಿಂದಿನಿಂದ ಪ್ರಕಾಶಮಾನವಾಗಿರುವ ರೀತಿಯಲ್ಲಿಜೋಡಿಸಲಾದ ಜಾಹೀರಾತು ವಿಷಯ;

(5) **"ಬಿಬಿಎಂಪಿ"** ಎಂದರೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ;

(6) **"ಆಯುಕ್ತರು"** ಎಂದರೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಆಯುಕ್ತರು;

(7) **"ನಿಯೋಜಿತ ಪ್ರಾಧಿಕಾರಿ"** ಎಂದರೆ, ಕೆಎಂಸಿ ಅಧಿನಿಯಮ, 1976ರ 66 ಮತ್ತು 67ನೇ ಪ್ರಕರಣದ ಅಡಿಯಲ್ಲಿ ವಿವರಿಸಲಾದಂತೆ ಆಯುಕ್ತರಿಗೆ ಅಧೀನರಾಗಿರುವ ಪಾಲಿಕೆಯ ಯಾರೇ ಅಧಿಕಾರಿ;

(8) **"ನಮೂನೆ"** ಎಂದರೆ, ಯಾವುದೇ ಜಾಹೀರಾತು ಫಲಕವನ್ನು ನಿಲ್ಲಿಸಲು ಹಾಗೂ ಪ್ರದರ್ಶಿಸಲು ಅನುಮತಿಗಾಗಿ ಅಥವಾ ಪ್ರಸ್ತುತವಿರುವ ಯಾವುದೇ ಜಾಹೀರಾತಿನ ಅನುಮತಿಯ ನವೀಕರಣಕ್ಕಾಗಿ ಬಿಬಿಎಂಪಿಗೆ ಅರ್ಜಿ ಸಲ್ಲಿಸುವುದಕ್ಕಾಗಿ ಆಯುಕ್ತರು ಗೊತ್ತುಪಡಿಸಬಹುದಾದ ನಮೂನೆ;

(9) **"ಪ್ರಕಾಶಮಾನವಾದ ಜಾಹೀರಾತು ಫಲಕ (ಇಲ್ಯುಮಿನೇಟೆಡ್ ಸೈನ್)"** ಎಂದರೆ, ವಿದ್ಯುತ್ ದೀಪಗಳನ್ನು ಹೊಂದಿದ್ದು, ರಾತ್ರಿಯ ಸಮಯದಲ್ಲಿ ದೀಪಗಳನ್ನು ಬೆಳಗಿಸುವ ಮೂಲಕ ಪ್ರಕಾಶಗೊಳ್ಳುವ, ಸೂರ್ಯಾಸ್ತದ ನಂತರವೇ ಗೋಚರಿಸುವ ಜಾಹೀರಾತು ಫಲಕ;

(10) **"ಸ್ಪಷ್ಟತೆ"** ಎಂದರೆ, ಒಬ್ಬಓದುಗನು, ಅದರಲ್ಲೂ ವಿಶೇಷವಾಗಿ ಒಂದು ನಿರ್ದಿಷ್ಟ ವೇಗದಲ್ಲಿ ಪ್ರಯಾಣಿಸುವ ವಾಹನ ಚಾಲಕನು ಪ್ರತಿಯೊಂದೂ ಪದಗಳನ್ನು ಗುರುತಿಸಲು ಮತ್ತುಒಂದುಅಕ್ಷರವನ್ನು ಇನ್ನೊಂದರಿಂದ ಪ್ರತ್ಯೇಕಿಸಲು ಸುಲಭವಾಗುವುದು;

(11) **"ಖಾಲಿ ಜಾಗ"** ಎಂದರೆ,ಜಾಹೀರಾತು ಫಲಕದಲ್ಲಿರುವ ಅಕ್ಷರಅಥವಾ ಚಿಹ್ನೆಯ ಸುತ್ತಲಿನ ಸ್ಥಳ. ಖಾಲಿ ಜಾಗ ಮತ್ತುಅಕ್ಷರದ ನಡುವಿನ ಅನುಪಾತವನ್ನು 40:60 ರ ಪ್ರಮಾಣದಲ್ಲಿ ನಿಗದಿಪಡಿಸಿರತಕ್ಕದ್ದು;

(12) **"ನಿಯಾನ್ ಜಾಹೀರಾತು ಫಲಕಗಳು"** ಎಂದರೆ, ರಾತ್ರಿಯ ಸಮಯದಲ್ಲಿ ಮಾತ್ರ ಚಾಲನೆಗೊಳ್ಳುವ ನಿಯಾನ್ ದೀಪಗಳು ಅಥವಾ ಬಲ್ಬ್‌ಗಳು ಅಥವಾ ಪ್ರಕಾಶ ಹೊಂದಿರುವ ಜಾಹೀರಾತು ಫಲಕಗಳು;

(13) **"ಪ್ರಕಾಶಮಾನವಾಗಿರದ ಜಾಹೀರಾತು ಫಲಕಗಳು"** ಎಂದರೆ, ಜಾಹೀರಾತು ಫಲಕವನ್ನು ಬೆಳಗಿಸಲು ಅದರ ಎದುರಿಗೆ ವಿದ್ಯುತ್ ದೀಪವಿಲ್ಲದ ಫಲಕ;

(14) **"ಸಾರ್ವಜನಿಕ ಉದ್ಯಾನವನ"** ಎಂದರೆ, ರಾಜ್ಯ ಸರ್ಕಾರಅಥವಾ ಬಿಬಿಎಂಪಿ ಅಥವಾ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಇತ್ಯಾದಿಗಳು ಸಾರ್ವಜನಿಕ ಮನರಂಜನೆಗಾಗಿ ಮತ್ತು ಬಳಕೆಗಾಗಿ ಅಧಿಸೂಚಿಸಿದ ಮತ್ತು ನಿರ್ವಹಿಸುವ ಉದ್ಯಾನವನಗಳು;

(15) **"ಸಾರ್ವಜನಿಕ ಹಾದಿ (ರೈಟ್ ಆಫ್ ವೇ)"**ಎಂದರೆ, ಪಾದಾಚಾರಿಗಳು ಹಾಗೂ ವಾಹನಗಳ ಸಂಚಾರಕ್ಕಾಗಿ ಬಳಸಲಾಗುವ ವಾಹನಗಳ ಸಂಚಾರ ಮಾರ್ಗ ಮತ್ತು ದಾರಿಯುದ್ದಕ್ಕೂ ನಿಯಂತ್ರಣ ರೇಖೆಗಳು ಅಥವಾ ದಾರಿಯ ಗಡಿಗಳ ನಡುವಿನ ಪಾದಚಾರಿ ಮಾರ್ಗಗಳು;

(16) **"ಪುನರ್ ಪರಿಶೀಲನಾ ಅರ್ಜಿ"** ಎಂದರೆ, ಯಾವುದೇ ಜಾಹೀರಾತಿನ ಫಲಕವನ್ನು ಪ್ರದರ್ಶಿಸುವುದಕ್ಕೆ ಮತ್ತು ಅಳವಡಿಸುವುದಕ್ಕೆ ಸಂಬಂಧಿಸಿದ ಯಾವುದೇ ಅರ್ಜಿಯ ಮೇಲೆ ಬಿಬಿಎಂಪಿಯ ನಿಯೋಜಿತ ಅಧಿಕಾರಿಯು ಹೊರಡಿಸಿದ ಆದೇಶದ ಪುನರ್‌ಪರಿಶೀಲನೆಯನ್ನು ಕೋರಿ ನಿಗದಿಪಡಿಸಿದ ನಮೂನೆಯಲ್ಲಿ ಆಯುಕ್ತರಿಗೆ ಸಲ್ಲಿಸುವ ಅರ್ಜಿ;

(17) **"ಪುನರ್‌ಪರಿಶೀಲನಾ ಸಮಿತಿ"** ಎಂದರೆ,ಭಿನ್ನಾಭಿಪ್ರಾಯಗಳು, ಅಪೀಲುಗಳು ಮತ್ತು ಯಾವುದೇ ಇತರ ವಿಶೇಷ ಪರ್ಯಾಲೋಚನೆಗಳನ್ನು ಮೌಲ್ಯಮಾಪನ ಮಾಡಲು, ಪರಿಶೀಲಿಸಲು ಮತ್ತು ಅನುಮೋದಿಸಲು ನೇಮಕಗೊಂಡ ಬಿಬಿಎಂಪಿ ಅಧಿಕಾರಿಗಳು, ತಜ್ಞರು ಮತ್ತು ಸ್ಥಳೀಯ ಸಮುದಾಯದ ಸದಸ್ಯರನ್ನು ಒಳಗೊಂಡ ಒಂದು ಸಮಿತಿ;

(18) **"ಅಂಗಡಿ ಮುಂಭಾಗದ ಜಾಹೀರಾತು (ಶಾಪ್ ಫ್ರಂಟ್ ಸೈನ್)"** ಎಂದರೆ, ಒಂದೇ ಆವರಣದೊಳಗೆ ನಡೆಸುತ್ತಿರುವ ಯಾವುದೇ ವಾಣಿಜ್ಯ ಅಥವಾ ವ್ಯಾಪಾರ ಚಟುವಟಿಕೆಗಳನ್ನು ಉಲ್ಲೇಖಿಸಿ ಯಾವುದೇ ಆವರಣದ ಮುಂದೆ ಪ್ರದರ್ಶಿಸಲಾದ ಪ್ರಕಾಶಮಾನವಾದ ಅಥವಾ ಪ್ರಕಾಶಮಾನವಾಗಿಲ್ಲದ ಜಾಹೀರಾತು;

(19) **''ಜಾಹೀರಾತುಗಳು ಅಥವಾ ಜಾಹೀರಾತು ಫಲಕ''** ಎಂದರೆ, ಸ್ಥಳಗಳು, ಕಟ್ಟಡಗಳು ಮತ್ತು ಬಾಡಿಗೆದಾರರ ವ್ಯವಹಾರ ಹೆಸರುಗಳನ್ನು ಗುರುತಿಸುವುದಕ್ಕೆ ಮತ್ತು ಹೆಸರಿಸುವುದಕ್ಕೆ ಸಂಬಂಧಿಸಿದ ಯಾವುದೇಒಂದು ಜಾಹೀರಾತು. ಗಾತ್ರ, ಎತ್ತರ ಮತ್ತು ನಮೂನೆಯ ನಿರ್ದಿಷ್ಟ ಅಗತ್ಯತೆಗಳ ಪಾಲನೆಗೆ ಒಳಪಟ್ಟು ಎಲ್ಲಾ ಕಟ್ಟಡಗಳ ಮೇಲೆ ಜಾಹೀರಾತು ಫಲಕಗಳ ಅಳವಡಿಕೆಯನ್ನು ಮುಂದುವರೆಸುವುದು;







(20) **"ಜಾಹೀರಾತಿನ ಸಾಮಗ್ರಿಗಳು"** ಎಂದರೆ, ಕರ್ನಾಟಕರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಜೈವಿಕ ವಿಘಟನೀಯ ವಸ್ತು ಎಂದು ಪ್ರಮಾಣೀಕರಿಸಿದ ಸಾಮಗ್ರಿಗಳು. ಇದು ಕರ್ನಾಟಕ ಸರ್ಕಾರವುಹೊರಡಿಸಿದ ಅಧಿಸೂಚನೆ ಸಂಖ್ಯೆ: ಎಫ್ಇಇ 17 ಇಪಿಸಿ 2012, ದಿನಾಂಕ: 11.03.2016 ಮತ್ತು/ ಅಥವಾ ಕಾಲಕಾಲಕ್ಕೆ ಮಾರ್ಪಡಿಸಿದಅಧಿಸೂಚನೆಗೆ ವ್ಯತಿರಿಕ್ತವಾಗಿರಬಾರದು;









(21) **"ಸಂಚಾರ ಸಂಕೇತಗಳ ಜಾಹೀರಾತು"** ಎಂದರೆ, ನಗರದಲ್ಲಿ ಉದ್ದಕ್ಕೂ ಸಂಚಾರ ಸಂಕೇತಗಳಲ್ಲಿ ಸಂಚಾರ ಸಂಕೇತಗಳ ಕೆಳಗೆ ಅಥವಾ ಹಿಂಬದಿಯಲ್ಲಿ ಎಂದರೆ ಅದೇ ಜಾಹೀರಾತು ಕಂಬದ ಮೇಲೆ ಪ್ರದರ್ಶಿಸುವ ಜಾಹೀರಾತು;







(22) **"ವ್ಯತ್ಯಾಸ''** ಎಂದರೆ,ಯೋಜನೆಯ ಮೇಲೆ ವಸ್ತುಶಃ ಪ್ರಭಾವ ಬೀರದಂತೆ ಮತ್ತು ಸಾರ್ವಜನಿಕರ ಅನಾನುಕೂಲತೆಗೆಕಾರಣವಾಗದಂತೆ ಉಪ–ವಿಧಿಗಳಲ್ಲಿ ಮಾಡುವ ಬದಲಾವಣೆ ಅಥವಾ ಸಡಿಲಿಕೆ; ಮತ್ತು


(23) **"ವಲಯ''** ಎಂದರೆ, ಪರಿಷ್ಕೃತ ಮಾಸ್ಟರ್ ಪ್ಲಾನ್ (ಆರ್ಎಂಪಿ), 2015 ರಲ್ಲಿ ಪರಿಭಾಷಿಸಲಾದಂತೆ ಕೇಂದ್ರಬಿಂದುವಿನಿಂದ ಸುತ್ತಳತೆವರೆಗೆ ಸ್ವತ್ತುಗಳನ್ನು ಗುರುತಿಸುವಒಂದು ಗಡಿ.

2.4. ಜಾಹೀರಾತುಗಳವಿಧಗಳು.–

2.4.1	**"ಆನಿಂಗ್ ಜಾಹೀರಾತು''** ಎಂದರೆ, ಶೇಡಿಂಗ್ ಸಾಧನವಾಗಿ ಬಳಸಿದ ಚೌಕಟ್ಟಿನ ಮೇಲೆ ವಿಸ್ತರಿಸಿದ ಜಾಹೀರಾತು ವಿಷಯಗಳು.	
2.4.2	**"ಬ್ಯಾನರ್ ಜಾಹೀರಾತು''** ಎಂದರೆ, ಸಾರ್ವಜನಿಕ ಸ್ಥಳದಲ್ಲಿ ಸಾರ್ವಜನಿಕರ ಗಮನವನ್ನು ಸೆಳೆಯುವುದಕ್ಕಾಗಿ ಯಾವುದೇ ತಾತ್ಕಾಲಿಕ ಸ್ವ–ಜಾಹೀರಾತುಅಥವಾ ಘೋಷಣೆ ಅಥವಾ ಲಿಖಿತ ವಿಷಯವನ್ನು ಒಳಗೊಂಡಿರುವ ಜಾಹೀರಾತು ವಿಷಯಗಳು;	
2.4.3	**"ಕಟ್ಟಡಮರೆಮಾಚಿರುವ ರಚನೆಯ ಮೇಲಿನ ಜಾಹೀರಾತು"**ಎಂದರೆ, ಈ ಉಪವಿಧಿಗಳ ಅಡಿಯಲ್ಲಿ ಪರಿಭಾಷಿಸಲಾದಂತೆ ಅನುಮತಿಸಲಾದ ಕಾಲಾವಧಿವರೆಗೆ ಕಟ್ಟಡದ ಮುಂಭಾಗದಾದ್ಯಂತ ಹಬ್ಬಿರುವಂತೆಯಾವುದೇಕಟ್ಟಡದ ಮುಂಭಾಗದಲ್ಲಿ ಅಥವಾ ನಿರ್ಮಾಣ ಅಥವಾ ದುರಸ್ತಿ ಹಂತದಲ್ಲಿರುವಕಟ್ಟಡದ ಮುಂದೆ ಕಟ್ಟಿರುವ ಸಾರುವೆಯ ಮೇಲೆ ಪ್ರದರ್ಶಿಸಿದ ಅಥವಾಗಾಜಿನ ಮುಂಭಾಗಅಥವಾಕಿಟಕಿಗೆಅಂಟಿಸುವಅಥವಾಜೋಡಿಸುವ ಮೂಲಕ ಪ್ರದರ್ಶಿಸಿದ ಜಾಹೀರಾತು.	
2.4.4	**"ಬಸ್ ತಂಗುದಾಣ ಜಾಹೀರಾತು"** ಎಂದರೆ, ಬಸ್ ತಂಗುದಾಣದಲ್ಲಿ, ಈ ಮೊದಲೇ ಪೂರ್ವ ವಿನ್ಯಾಸಿತ ಮತ್ತು ಪೂರ್ವ ಅನುಮೋದಿತ ಸ್ಥಳದಲ್ಲಿ ಪ್ರದರ್ಶಿತಗೊಂಡ ಜಾಹೀರಾತುಗಳು.	
2.4.5	**"ಕೆನೋಪಿ ಜಾಹೀರಾತುಗಳು"** ಎಂದರೆ, ಬಿಬಿಎಂಪಿಯು ಅನುಮತಿಸಲಾದಂತೆ ಕಟ್ಟಡದ ಪ್ರವೇಶದ್ವಾರದ ಮೇಲೆ ಆಧಾರ ಒದಗಿಸಿರುವ ನೆರಳು ಮುಂಚಾಚು ರಚನೆಯ (ಶೇಡೆಡ್ ಪ್ರೊಜೆಕ್ಷನ್) ಮೇಲಿನ ಜಾಹೀರಾತು ವಿಷಯಗಳು;	
2.4.6	**"ಮಾರ್ಗಸೂಚಿ ಫಲಕಗಳು"** ಎಂದರೆ, ಸಾರ್ವಜನಿಕರ ಉಪಯೋಗ, ಸೇವೆಗಳು ಅಥವಾ ಸರಕುಗಳಿಗಾಗಿ ಸರ್ಕಾರಿ ಅಥವಾ ಖಾಸಗಿ ಅಥವಾ ವಾಣಿಜ್ಯ ಸಂಸ್ಥೆಗಳು ತಮ್ಮ ಕಚೇರಿ ಅಥವಾ ವಾಣಿಜ್ಯ ಮಳಿಗೆ, ಮುಂತಾದವುಗಳಿಗೆ ಹೋಗಲು ಅಳವಡಿಸಿರುವ ಮಾರ್ಗಸೂಚಿ ಫಲಕಗಳು.	

2.4.7	**“ಗುಮ್ಮಟ ಮೇಲ್ಕಟ್ಟು ಜಾಹೀರಾತು”** ಎಂದರೆ, ಒಂದು ಆವರಣಕ್ಕೆ ಶೇಡೆಡ್ ಗುಮ್ಮಟ ಪ್ರವೇಶದ್ವಾರದ ಮೇಲೆ ಅನುಮತಿಸಲಾದ ಜಾಹೀರಾತುಗಳು.	
2.4.8	**“ವಿದ್ಯುನ್ಮಾನಿತಪ್ರದರ್ಶನ”**ಎಂದರೆ, ಒಂದು ಕಟ್ಟಡದ ಮೇಲೆ ಅಳವಡಿಸಲಾದ ವಿದ್ಯುನ್ಮಾನ ಸಹಾಯದಿಂದ ಪ್ರದರ್ಶಿತವಾಗುವ ಜಾಹೀರಾತು ಪ್ರದರ್ಶನ. ನಿಯಾನ್ ದೀಪಗಳು, ಎಲ್ಇಡಿ, ಎಲ್ಸಿಡಿ ಪ್ರದರ್ಶಕಗಳು ಮತ್ತು ಇಂತಹ ಇತರೆ ಪ್ರದರ್ಶಕಗಳಂತಹ ವಿದ್ಯುನ್ಮಾನ ಅಥವಾ ವಿದ್ಯುಚ್ಛಕ್ತಿ ಸಾಧನಗಳ ಚಾಲನೆಯ ಮೂಲಕ ಇದನ್ನು ಪ್ರದರ್ಶಿಸಲಾಗುತ್ತದೆ.	
2.4.9	**“ಫುಟ್ ಓವರ್ ಬ್ರಿಡ್ಜ್ ಜಾಹೀರಾತು” (ಪಾದಚಾರಿ ಮೇಲುಸೇತುವೆ ಮೇಲಿನ ಜಾಹೀರಾತು)** ಎಂದರೆ,ಪಾದಚಾರಿ ಮೇಲು ಸೇತುವೆ ಕಾಲುದಾರಿಗಳ ಮೇಲೆ ಹಾಗೂ ಇಕ್ಕೆಲಗಳಲ್ಲಿ ಪ್ರದರ್ಶಿಸುವ ಜಾಹೀರಾತು;	
2.4.10	**“ಗ್ಯಾಂಟ್ರಿ ಜಾಹೀರಾತು”** ಎಂದರೆ,ಲೋಹದಿಂದ ತಯಾರಿಸಿದ ಮತ್ತು ಮೇಲ್ಭಾಗವನ್ನು ತೊಲೆಯಿಂದ ಜೋಡಿಸಲ್ಪಟ್ಟ ರಸ್ತೆಯ ಎರಡೂ ಬದಿಗಳಲ್ಲಿರುವ ಕಂಬಗಳ ಮೇಲೆ ಅಳವಡಿಸಿರುವ ಗ್ಯಾಂಟ್ರಿಗಳ ಮೇಲೆ ಸಂಚಾರದ ವಿರುದ್ಧ ದಿಕ್ಕಿನಲ್ಲಿ ರಸ್ತೆಯ ಮೇಲೆ ಪ್ರದರ್ಶಿಸುವ ಜಾಹೀರಾತುಗಳು;	
2.4.11	**“ಮಾರ್ಕೀ ಜಾಹೀರಾತು”** ಎಂದರೆ, ಯಾವುದೇ ಕಂಬಗಳು ಅಥವಾ ಆಧಾರಗಳಿಲ್ಲದೆ ಕಟ್ಟಡದ ಪ್ರವೇಶದ್ವಾರದ ಮೇಲೆ ಚಾಚಿರುವ ಕೆನೊಪಿ ಮೇಲೆ ವಿಸ್ತರಿಸಿರುವ ಜಾಹೀರಾತುಗಳು;	
2.4.12	**“ಮೊಬೈಲ್ ಮತ್ತು ಪೋರ್ಟಬಲ್ ಜಾಹೀರಾತು ಪ್ರದರ್ಶನ”** ಎಂದರೆ, ಉತ್ಪನ್ನ ಅಥವಾ ಸೇವೆಯ ಜಾಹೀರಾತು ಮಾಡುವ ಅಥವಾ ಆವರಣದ ಒಳಗೆ ಅಥವಾ ಹೊರಗೆ ಇರುವ ವ್ಯಾಪಾರ ಅಥವಾ ಕಾರ್ಯಚಟುವಟಿಕೆಯ ಬಗ್ಗೆ ಸಾರ್ವಜನಿಕರಿಗೆ ತಿಳಿಸುವ ಉದ್ದೇಶದಿಂದ ಜಾಹೀರಾತಿನ ಉತ್ತಮ ಪ್ರದರ್ಶನಕ್ಕಾಗಿ ವಾಹನದ ಮೇಲೆ ಅಥವಾ ಅದರ ಹಿಂಬದಿಯಲ್ಲಿ ಒಂದು ನಿರ್ದಿಷ್ಟ ಸ್ಥಳದ ಸುತ್ತ ಚಲಾಯಿಸಬಹುದಾದ ಅಥವಾ ನಿಲ್ಲಿಸಬಹುದಾದ ರೀತಿಯಲ್ಲಿ ಹಾಕಲಾದ ಒಂದು ಅಥವಾ ಎರಡೂ ಕಡೆ ಪ್ರದರ್ಶಿತವಾಗುವ ಪ್ರದರ್ಶಕ;	
2.4.13	**“ಸ್ಮಾರಕ ಜಾಹೀರಾತು”** ಎಂದರೆ, ಒಂದು ಪ್ರವೇಶ ಚಿಹ್ನೆಯನ್ನು ತಿಳಿಸುವ ಅಥವಾ ಕೇಂದ್ರ ಬಿಂದುವನ್ನು ತಿಳಿಸುವ ಉದ್ದೇಶವನ್ನು ಹೊಂದಿರುವ, ಇಟ್ಟಿಗೆ, ಮರ, ಲೋಹ ಅಥವಾ ಇತರ ಸಾಮಗ್ರಿಗಳಿಂದ ಅಲಂಕೃತಗೊಳಿಸಿ, ಪ್ರದರ್ಶಿಸಿದ ಸ್ವತಂತ್ರ ಕಂಬದ ಜಾಹೀರಾತು.	
2.4.14	**“ಕಂಬ ಪ್ರದರ್ಶನ”** ಎಂದರೆ, ಒಂದು ನಿಗದಿತ ಸ್ಥಳದಲ್ಲಿ ಶಾಶ್ವತವಾಗಿ ನೆರವು ನೀಡಲಾದ ಜಾಹೀರಾತುಗಳಿಗೆಂದೇ ಇರುವ ಒಂದೇ ಕಂಬದ ಮೇಲೆ ಅಳವಡಿಸಿದ ಫಲಕಗಳ ಒಂದು ಅಥವಾ ಎರಡೂ ಬದಿಗಳಲ್ಲಿ ಪ್ರದರ್ಶಿಸುವ ಜಾಹೀರಾತುಗಳು;	

2.4.15	**“ಭಿತ್ತಿಪತ್ರ”**(ಪೋಸ್ಟರ್) ಎಂದರೆ, ಸಾರ್ವಜನಿಕ ಸ್ಥಳದಲ್ಲಿ ಯಾವುದೇ ವಿಷಯದ ಜಾಹೀರಾತು ಮಾಡಲು ಬಳಸಿದ ಮೇಲ್ಮೈ ಜಾಹೀರಾತು ಫಲಕ ಅಥವಾ ಕಾಗದ ಅಥವಾ ಯಾವುದೇ ಪರಿಸರ ಸ್ನೇಹಿ ವಸ್ತು ಅಥವಾ ಮುಂಭಾಗದ ಕಿಟಕಿ ಮೇಲಿನ ಪ್ರದರ್ಶನ. ಸಾಮಾನ್ಯವಾಗಿ ಅದನ್ನು ಗೋಡೆ, ಕಾಂಪೌಂಡ್, ಫಾರಾಫಿಟ್‌ದಂತಹ ಸಮತಟ್ಟಾದ ಮೇಲ್ಮೈ ಮೇಲೆ ಅಥವಾ ಯಾವುದೇ ಇತರ ಅಂಥ ಮೇಲ್ಮೈ ಮೇಲೆ ಅಂಟಿಸಲಾಗುತ್ತದೆ.	
2.4.16	**“ಪ್ರೊಜೆಕ್ಟಿಂಗ್ ಜಾಹೀರಾತುಗಳು” ಎಂದರೆ,** ಕಟ್ಟಡದ ಮುಖ್ಯ ಗೋಡೆಗೆ ಜೋಡಿಸಲಾದ ಯಾವುದೇ ರೀತಿಯ ಜಾಹೀರಾತು;	
2.4.17	**“ಬೀದಿ ಪೀಠೋಪಕರಣ ಪ್ರಾಯೋಜಕತ್ವ ಜಾಹೀರಾತು”** ಎಂದರೆ, ಆಯುಕ್ತರು ಗುರುತಿಸಿರುವಂತೆ ಬೆಂಚುಗಳು, ಕಸದ ತೊಟ್ಟಿಗಳು, ಹಳಿಗಳಂಥ ಸಾರ್ವಜನಿಕ ನಿರ್ಮಾಣಗಳ ಮೇಲೆ ಮತ್ತು ಇತರ ಅಂಥ ಸಾರ್ವಜನಿಕ ಸ್ವತ್ತುಗಳ ಮೇಲೆ ಪ್ರಾಯೋಜಕತ್ವ ಅಥವಾ ಸಂದೇಶವನ್ನು ಪ್ರದರ್ಶಿಸುವ ಜಾಹೀರಾತು;	
2.4.18	**“ತಾತ್ಕಾಲಿಕ ಕಮಾನು ಜಾಹೀರಾತು”** ಎಂದರೆ, ಕೆಲವು ವಿಶೇಷ ಸಂದರ್ಭಗಳಲ್ಲಿ ಅಂದರೆ ಗಣ್ಯ ವ್ಯಕ್ತಿಗಳು ಭೇಟಿ ನೀಡುವ ಸಮಯದಲ್ಲಿ ಅವರುಗಳಿಗೆ ಸ್ವಾಗತ ಕೋರಲು ಅಥವಾ ಅಂಗಡಿಗಳು ಮತ್ತು ಸಂಸ್ಥೆಗಳು ತಮ್ಮ ಮಾರಾಟವನ್ನು ಹೆಚ್ಚಿಸಲು ಅವುಗಳ ಆವರಣಗಳಲ್ಲಿ ಅಥವಾ ಹತ್ತಿರದಲ್ಲಿ ಜಾಹೀರಾತು ಪ್ರದರ್ಶನಕ್ಕಾಗಿ ಬಿ.ಬಿ.ಎಂ.ಪಿ ಯಿಂದ ಅನುಮೋದನೆ ಪಡೆದು ರಸ್ತೆಯ ಎರಡೂ ಬದಿಗಳಲ್ಲಿ ನಿಲ್ಲಿಸಿದ ತಾತ್ಕಾಲಿಕ ನಿರ್ಮಾಣದ ಮೇಲೆ ಪ್ರದರ್ಶಿಸಿದ ಜಾಹೀರಾತು: ಇದು ಮೂರು ದಿನಗಳಿಗೆ ಮೀರಿರತಕ್ಕದ್ದಲ್ಲ.	
2.4.19	**“ತಾತ್ಕಾಲಿಕ ಕಂಬದ ಮೇಲಿನ ಜಾಹೀರಾತು”** ಎಂದರೆ, ರಾಜಕೀಯ ಸಭೆ, ಉತ್ಸವಗಳು, ಶೈಕ್ಷಣಿಕ ಸಭೆಗಳು, ಕ್ರೀಡಾ ಕೂಟ ಅಥವಾ ಲಾಭದಾಯಕವಲ್ಲದ ಸಾರ್ವಜನಿಕ ಕಾರ್ಯಕ್ರಮಗಳಿಗಾಗಿ, ತಾತ್ಕಾಲಿಕ ನಿರ್ಮಾಣಗಳ ಮೇಲೆ ಪ್ರದರ್ಶಿಸುವ ಜಾಹೀರಾತುಗಳು. ಇಂತಹ ಜಾಹೀರಾತುಗಳಿಗಾಗಿ ರಸ್ತೆಗಳ ಮೇಲೆ ಅಥವಾ ಪಾದಾಚಾರಿ ರಸ್ತೆಯ ಮೇಲೆ ಯಾವುದೇ ರೀತಿಯ ಗುಂಡಿಗಳನ್ನು ತೋಡುವುದರ ಮೂಲಕ ಹಳ್ಳ ಅಥವಾ ಹಾನಿಯನ್ನುಂಟು ಮಾಡುವಂಥ ರೀತಿಯಲ್ಲಿ ಇವುಗಳನ್ನು ಅಳವಡಿಸಲು ಅನುಮತಿಸತಕ್ಕದ್ದಲ್ಲ.	
2.4.20	**“ವಾಹನ ಜಾಹೀರಾತು”** ಎಂದರೆ, ಸಾರ್ವಜನಿಕ ಬಸ್ಸು, ಆಟೋ ರಿಕ್ಷಾ ಅಥವಾ ಟ್ಯಾಕ್ಸಿಗಳ ಮೇಲೆ ಅಂಟಿಸಲಾದ ಯಾವುದೇ ವಾಣಿಜ್ಯ ಜಾಹೀರಾತು. ಇದು ಸ್ವ-ಪ್ರಚಾರವನ್ನು ಒಳಗೊಂಡಿರುವುದಿಲ್ಲ.	
2.4.21	**“ಗೋಡೆಯ ಮೇಲೆ ಪೇಂಟು/ಬಣ್ಣ ಮಾಡಿದ ಜಾಹೀರಾತು”** ಎಂದರೆ, ಗೋಡೆಯ ಮೇಲೆ ಅಥವಾ ಕಟ್ಟಡದ ವಿನ್ಯಾಸದ ಮೇಲೆ ಅಥವಾ ಯಾವುದೇ ಸಾರ್ವಜನಿಕ ವಿನ್ಯಾಸದ ಮೇಲೆ ನೇರವಾಗಿ ಬಣ್ಣ ಬಳಿಯುವ ಮೂಲಕ ಪ್ರದರ್ಶಿಸಲಾದ ಜಾಹೀರಾತು. ಇದು ಬಿಬಿಎಂಪಿ ಅನುಮೋದಿತ ಕರಕುಶಲತೆಯನ್ನು ಅಥವಾ ಗೋಡೆಗಳ ಮೇಲೆ ಮಾಡಿದ ಅಲಂಕರಣವನ್ನು ಒಳಗೊಳ್ಳತಕ್ಕದ್ದಲ್ಲ;	

2.4.22	**"ಕಿಟಕಿ ಜಾಹೀರಾತು"** ಎಂದರೆ, ಹೊರಗಿನಿಂದ ಕಾಣುವ ರೀತಿಯಲ್ಲಿ ಪ್ರದರ್ಶಿಸಲು ಅನುಮತಿಸಲಾದ ಪ್ರದೇಶ. ವಾಣಿಜ್ಯ ಸಂಸ್ಥೆಗಳು ತಮ್ಮ ಉತ್ಪನ್ನ ಅಥವಾ ತಾವು ನೀಡುವ ಸೇವೆಯ ಕುರಿತು ಅವರದೇ ಕಟ್ಟಡಗಳ ಕಿಟಕಿಗಳಲ್ಲಿ ಹೊರಗಿನಿಂದ ಗೋಚರವಾಗುವಂತೆ ಪ್ರದರ್ಶಿಸುವ ಜಾಹೀರಾತು. ಇವುಗಳು ಪ್ರಕಾಶಿತವಿರಬಹುದು, ಸ್ಥಿರವಾಗಿರಬಹುದು ಅಥವಾ ಯಾಂತ್ರಿಕವಾಗಿ ಚಲಿಸುತ್ತಿರಬಹುದಾಗಿದೆ.	

2.5. ವಿಷಯ ಪ್ರದರ್ಶನ.–

2.5.1. ಜಾಹೀರಾತು ಫಲಕವು ಹೆಸರು, ವ್ಯಾಪಾರ ಚಿಹ್ನೆ ಯಾವುದಾದರೂ ಇದ್ದರೆ, ಕಟ್ಟಡದ ಸಂಖ್ಯೆ, ಕಟ್ಟಡದ ಹೆಸರು, ವಿಳಾಸ ಪ್ರದರ್ಶಿಸತಕ್ಕದ್ದು ಮತ್ತು ಆವರಣದೊಳಗಿನ ಬಳಕೆ ಅಥವಾ ಕಾರ್ಯಚಟುವಟಿಕೆಯನ್ನು ತಿಳಿಸಲು ಮಾತ್ರ ಇದನ್ನು ಬಳಸತಕ್ಕದ್ದು.

2.5.2. ಕಟ್ಟಡದ ಸಂಖ್ಯೆ, ಕಟ್ಟಡದ ಹೆಸರು, ವಿಳಾಸವನ್ನು ಮುಖ್ಯ ಸಾರ್ವಜನಿಕ ಹಾದಿಗೆ ಸಮಾನಾಂತರವಾಗಿಯಾಗಲೀ ಅಥವಾ ಲಂಬಾಂತರವಾಗಿಯಾಗಲೀ ಮುಂಭಾಗದಲ್ಲಿ ಪ್ರದರ್ಶಿಸತಕ್ಕದು. ಒಂದು ವೇಳೆ ಕಟ್ಟಡದ ಮುಂಭಾಗದಲ್ಲಿ ಹೆಚ್ಚುವರಿ ಸಾರ್ವಜನಿಕ ಹಾದಿಗೆ ಮುಖಮಾಡಿದ್ದಲ್ಲಿ, ಇದೇ ವಿಧಾನವನ್ನು ಪುನರಾವರ್ತಿಸಬಹುದು;

2.5.3 ಒಂದೇ ಆವರಣದಲ್ಲಿ ಅನೇಕ ಉದ್ಯಮಗಳು ಸ್ಥಾಪಿತವಾಗಿದ್ದರೆ, ಒಂದೇ ಸಂಯೋಜಿತ ಜಾಹೀರಾತು ಫಲಕದಲ್ಲಿ ಜಾಹೀರಾತನ್ನು ಪ್ರದರ್ಶಿಸತಕ್ಕದ್ದು; ಮತ್ತು

2.5.4 ಬಿಬಿಎಂಪಿಯ ಜಾಹೀರಾತು ಪರವಾನಗಿ "ಅನುಮೋದನೆ ಬಾರ್‌ಕೋಡ್", ಪ್ರತಿಯೊಂದು ಅಥವಾ ಸಂಯೋಜಿತ ಜಾಹೀರಾತು ಫಲಕದ ಕೆಳಭಾಗದ ಬಲಮೂಲೆಯಲ್ಲಿ ಎದ್ದುಕಾಣುವಂತೆ ಪ್ರದರ್ಶಿಸತಕ್ಕದ್ದು.

2.5. ವಿಷಯ ಪ್ರದರ್ಶನ.–


2.5.1. ಜಾಹೀರಾತು ಫಲಕವು ಹೆಸರು, ವ್ಯಾಪಾರ ಚಿಹ್ನೆ ಯಾವುದಾದರೂ ಇದ್ದರೆ, ಕಟ್ಟಡದ ಸಂಖ್ಯೆ, ಕಟ್ಟಡದ ಹೆಸರು, ವಿಳಾಸ ಪ್ರದರ್ಶಿಸತಕ್ಕದ್ದು ಮತ್ತು ಆವರಣದೊಳಗಿನ ಬಳಕೆ ಅಥವಾ ಕಾರ್ಯಚಟುವಟಿಕೆಯನ್ನು ತಿಳಿಸಲು ಮಾತ್ರ ಇದನ್ನು ಬಳಸತಕ್ಕದ್ದು.

2.5.2. ಕಟ್ಟಡದ ಸಂಖ್ಯೆ, ಕಟ್ಟಡದ ಹೆಸರು, ವಿಳಾಸವನ್ನು ಮುಖ್ಯ ಸಾರ್ವಜನಿಕ ಹಾದಿಗೆ ಸಮಾನಾಂತರವಾಗಿಯಾಗಲೀ ಅಥವಾ ಲಂಬಾಂತರವಾಗಿಯಾಗಲೀ ಮುಂಭಾಗದಲ್ಲಿ ಪ್ರದರ್ಶಿಸತಕ್ಕದು. ಒಂದು ವೇಳೆ ಕಟ್ಟಡದ ಮುಂಭಾಗದಲ್ಲಿ ಹೆಚ್ಚುವರಿ ಸಾರ್ವಜನಿಕ ಹಾದಿಗೆ ಮುಖಮಾಡಿದ್ದಲ್ಲಿ, ಇದೇ ವಿಧಾನವನ್ನು ಪುನರಾವರ್ತಿಸಬಹುದು;

2.5.3 ಒಂದೇ ಆವರಣದಲ್ಲಿ ಅನೇಕ ಉದ್ಯಮಗಳು ಸ್ಥಾಪಿತವಾಗಿದ್ದರೆ, ಒಂದೇ ಸಂಯೋಜಿತ ಜಾಹೀರಾತು ಫಲಕದಲ್ಲಿ ಜಾಹೀರಾತನ್ನು ಪ್ರದರ್ಶಿಸತಕ್ಕದ್ದು; ಮತ್ತು

2.5.4 ಬಿಬಿಎಂಪಿಯ ಜಾಹೀರಾತು ಪರವಾನಗಿ "ಅನುಮೋದನೆ ಬಾರ್‌ಕೋಡ್", ಪ್ರತಿಯೊಂದು ಅಥವಾ ಸಂಯೋಜಿತ ಜಾಹೀರಾತು ಫಲಕದ ಕೆಳಭಾಗದ ಬಲಮೂಲೆಯಲ್ಲಿ ಎದ್ದುಕಾಣುವಂತೆ ಪ್ರದರ್ಶಿಸತಕ್ಕದ್ದು.

	Name Address Approved Bar Code



3. ಜಾಹೀರಾತು ಪರವಾನಗಿಗಳು

3.1. ಜಾಹೀರಾತಿನ ಅಳತೆಗಳು.–

3.1.1. ಪರಿಷ್ಕೃತ ಮಾಸ್ಟರ್ ಪ್ಲ್ಯಾನ್, 2015ರಲ್ಲಿ ಪರಿಭಾಷಿಸಲಾಗಿರುವಂತೆ, ಪಾದಚಾರಿಗಳು ಮತ್ತು ಮೋಟಾರು ವಾಹನದಾರರ ಸಂಚಾರ, ಸಾರ್ವಜನಿಕ ದಾರಿಯ ಹಕ್ಕುಗಳಿಗೆ ಅಡಚಣೆರಹಿತತೆ, ಜಾಹೀರಾತುಗಳ ಗೋಚರತೆ ಮತ್ತು ಸ್ಪಷ್ಟತೆ, ಬೀದಿಗೆ ಅಭಿಮುಖವಾಗಿ ಕಟ್ಟಡ ವಿನ್ಯಾಸದ ಉದ್ದ, ರಸ್ತೆಯ ಸಂಪರ್ಕ ಜಾಲ ಮತ್ತು ಎ–ವಲಯದಲ್ಲಿನ ಪ್ರದೇಶಗಳ ದಟ್ಟಣೆಯ ಸ್ವರೂಪದ ಅಂಶಗಳನ್ನು ಗಮನದಲ್ಲಿರಿಸಿಕೊಂಡು ಎಲ್ಲಾ ಜಾಹೀರಾತಿನಅಳತೆಗಳು, ಎತ್ತರಗಳು ಮತ್ತು ವಿಸ್ತೀರ್ಣಗಳನ್ನು ನಿಗದಿಪಡಿಸತಕ್ಕದ್ದು.

3.1.2. ಜಾಹೀರಾತಿನವಿಸ್ತೀರ್ಣವನ್ನು ಈ ಕೆಳಗಿನಂತೆ ಲೆಕ್ಕ ಹಾಕಲಾಗುತ್ತದೆ,–


3.1.2.1. ಹಿನ್ನೆಲೆ ಅಥವಾ ಚೌಕಟ್ಟುಭಾಗದ ಮೇಲಿನಜಾಹೀರಾತುಗಳಿಗಾಗಿ, ಹಿನ್ನೆಲೆಯ ಅಥವಾ ಚೌಕಟ್ಟಿನ ಸಂಪೂರ್ಣ ಜಾಗವನ್ನು, ಹಾಗೆಯೇ, ಜಾಹೀರಾತನ್ನು ನಿಲ್ಲಿಸಿರುವಂತಹ ನಿರ್ಮಿತಿಯಿಂದ ಆ ಜಾಹೀರಾತನ್ನು ಪ್ರತ್ಯೇಕಗೊಳಿಸುವುದಕ್ಕಾಗಿ ಜಾಹೀರಾತಿನ ಎದುರು ಮತ್ತು ಹಿನ್ನೆಲೆಗೆ ಬಳಸಲಾಗಿರುವ ಯಾವುದೇ ಸಾಮಗ್ರಿ ಅಥವಾ ಬಣ್ಣವನ್ನು ಆಜಾಹೀರಾತಿನ ವಿಸ್ತೀರ್ಣವೆಂಬುದಾಗಿ ಲೆಕ್ಕಹಾಕಲಾಗುತ್ತದೆ. ಜಾಹೀರಾತಿನವಿಸ್ತೀರ್ಣವು ಯಾವುದೇ ಆನಿಕೆಗಳು ಅಥವಾ ಹಿಡಿಕೆಗಳನ್ನು ಒಳಗೊಳ್ಳತಕ್ಕದ್ದಲ್ಲ.

3.1.2.2. ಸ್ವತಂತ್ರವಾಗಿ ನಿಲ್ಲಿಸುವ (ಫ್ರೀ ಸ್ಟ್ಯಾಂಡಿಂಗ್) ಜಾಹೀರಾತಿನ ಗಾತ್ರವು, ಪ್ರದರ್ಶನ ಮುಖಭಾಗದ ಒಟ್ಟು ವಿಸ್ತೀರ್ಣವಾಗಿರುತ್ತದೆ. ಸ್ವತಂತ್ರವಾಗಿ ನಿಲ್ಲಿಸುವ ಕಂಬಗಳ ಮೇಲಿನ (ಫ್ರೀ ಸ್ಟ್ಯಾಂಡಿಂಗ್) ಅಕ್ಷರಗಳು ಅಥವಾ ಲೋಗೋಗಳನ್ನುಳ್ಳಜಾಹೀರಾತುಗಳಿಗೆ ಸಂಬಂಧಿಸಿದಂತೆ ಜಾಹೀರಾತಿನ ವಿಸ್ತೀರ್ಣವನ್ನು, ಪ್ರತಿಯೊಂದು ಅಕ್ಷರ ಅಥವಾ ಲೋಗೋವನ್ನು ಹೊಂದಿರುವ ಪ್ರತಿಯೊಂದು ಚೌಕ, ವೃತ್ತ, ಆಯತಾಕಾರ, ತ್ರಿಕೋನ ಅಥವಾ ಅದರ ಸಂಯೋಜನೆಯ ಒಟ್ಟು ವಿಸ್ತೀರ್ಣವೆಂದು ಲೆಕ್ಕಹಾಕಲಾಗುತ್ತದೆ; ಮತ್ತು

3.1.2.3. ಒಂದು ಪಾರದರ್ಶಕ ಫಿಲ್ಮ್‌ನ ಮೇಲೆ ಮುದ್ರಿತವಾದ ಮತ್ತು ಕಿಟಕಿಯ ಗಾಜುಗಳ ಒಳಭಾಗ ಅಥವಾ ಹೊರಭಾಗಗಳಲ್ಲಿ ಅಂಟಿಸಲಾದ ಕಿಟಕಿ (ವಿಂಡೋ) ಜಾಹೀರಾತುಗಳಿಗೆ ಸಂಬಂಧಿಸಿದಂತೆ, ಗಾತ್ರವನ್ನು ಪ್ರತ್ಯೇಕ ಅಕ್ಷರಗಳು ಅಥವಾ ಲೋಗೋಗಳ ಆಧಾರದಲ್ಲಿ ಲೆಕ್ಕಹಾಕಲಾಗುತ್ತದೆ. ಆದರೆ, ಪ್ರತ್ಯೇಕ ಅಕ್ಷರಗಳು ಅಥವಾ ಲೋಗೋಗಳ ಪರಿಧಿಯ ಸುತ್ತಲಿನ ಪಾರದರ್ಶಕ ಫಿಲ್ಮಿನ ಭಾಗವು ಕಿಟಕಿಯ ಶೇಕಡ 100ರಷ್ಟು ಪಾರದರ್ಶಕತೆಯನ್ನು ಕಾಯ್ದುಕೊಳ್ಳಬೇಕಿರುತ್ತದೆ.

3.1.3. ಜಾಹೀರಾತಿನ ಎತ್ತರವನ್ನು ಈ ಕೆಳಗಿನಂತೆ ಲೆಕ್ಕಾಚಾರ ಹಾಕಲಾಗುತ್ತದೆ.–

3.1.3.1. ಸ್ವತಂತ್ರವಾಗಿ ನಿಲ್ಲಿಸುವ ಕಂಬ (ಫ್ರೀ ಸ್ಟ್ಯಾಂಡಿಂಗ್) ಜಾಹೀರಾತುಗಳಿಗಾಗಿ ಎತ್ತರವನ್ನು, ಜಾಹೀರಾತನ್ನು ಅಳವಡಿಸಬೇಕಿರುವಂತಹ ಸ್ಥಳಕ್ಕೆ ಹೊಂದಿಕೊಂಡಿರುವ ಭಾಗದಿಂದ ಜಾಹೀರಾತಿನ ಅತ್ಯುನ್ನತ ಬಿಂದುವಿನವರೆಗಿನ ಲಂಬ ಅಂತರವನ್ನು ಮಾಪನ ಮಾಡಿ ಲೆಕ್ಕಹಾಕಲಾಗುತ್ತದೆ.



3.2. ಸ್ವತಂತ್ರವಾಗಿ ನಿಲ್ಲಿಸುವ (ಫ್ರೀ ಸ್ಟ್ಯಾಂಡಿಂಗ್)ಜಾಹೀರಾತುಗಳು.–

ವಿವರಣೆ: ಸ್ವತಂತ್ರವಾಗಿ ನಿಲ್ಲಿಸುವ (ಫ್ರೀ ಸ್ಟ್ಯಾಂಡಿಂಗ್) ಜಾಹೀರಾತುಗಳು ಎರಡು ವಿಧಗಳಲ್ಲಿರುತ್ತವೆ. ಸ್ವತಂತ್ರವಾಗಿ ನಿಲ್ಲಿಸಿರುವ ಕಂಬದ ಜಾಹೀರಾತುಗಳು ಮತ್ತು ಸ್ಮಾರಕ ಜಾಹೀರಾತುಗಳು.

3.2.1. ಅರ್ಹ ಆವರಣಗಳ ಸ್ಥಳ ಬಳಕೆಯು ವಾಣಿಜ್ಯಕ, ಕೈಗಾರಿಕಾ, ಮಿಶ್ರ ಬಳಕೆ, ಸಾರ್ವಜನಿಕ ಮತ್ತು ಅರೆ–ಸಾರ್ವಜನಿಕದಂತಹ ವಸತಿರಹಿತ ಬಳಕೆಗಳನ್ನು ಒಳಗೊಳ್ಳುತ್ತದೆ. ಆಸ್ತಿಯ ಮಾಲೀಕರು ಜಾಹೀರಾತುಗಳನ್ನು ಪ್ರದರ್ಶಿಸುವ ಅರ್ಹತೆ ಪಡೆಯಲು ಅಗತ್ಯವಾದ ಅಂಗೀಕಾರಾರ್ಹವಾದ ದಸ್ತಾವೇಜನ್ನು ಒದಗಿಸತಕ್ಕದ್ದು.

3.2.2. ರಸ್ತೆಯಲ್ಲಿನಸ್ವತಂತ್ರವಾಗಿ ನಿಲ್ಲಿಸುವ (ಫ್ರೀ ಸ್ಟ್ಯಾಂಡಿಂಗ್) ಜಾಹೀರಾತುಗಳು ಸುತ್ತಮುತ್ತಲಿನ ಸನ್ನಿವೇಶಗಳಿಗೆ ಅಥವಾ ರಸ್ತೆಯ ಸುರಕ್ಷತೆಗೆ ಹಾನಿಕಾರಕವೆಂಬುದಾಗಿಕಂಡುಬಂದರೆ ಅವುಗಳನ್ನು ಆಯುಕ್ತರ ಅಥವಾ ಅವರ ನಿಯೋಜಿತ ಪ್ರಾಧಿಕಾರಿಯ ಆದೇಶದ ಅನುಸಾರವಾಗಿ ನಿಷೇಧಿಸಬಹುದು.

3.2.3. ಪ್ರತೀ **"ರಸ್ತೆಗೆ ಅಭಿಮುಖವಾದ"** ಆಸ್ತಿಗೆ ಸ್ವತಂತ್ರವಾಗಿ ನಿಲ್ಲಿಸುವ (ಫ್ರೀ ಸ್ಟ್ಯಾಂಡಿಂಗ್) ಒಂದು ಜಾಹೀರಾತಿಗೆ ಮಾತ್ರ ಅನುಮತಿ ಇರುತ್ತದೆ. ಅಂಥ ಜಾಹೀರಾತನ್ನು ಸಾರ್ವಜನಿಕ ಹಕ್ಕಿನ ಹಾದಿಗೆ ಸಮಾನಾಂತರವಾಗಿ ಅಥವಾ ಲಂಬವಾಗಿ ಇರಿಸಿರಬಹುದು.

3.2.4. ಯೋಜನಾ ಪ್ರಾಧಿಕಾರವು ಸಮುಚಿತವಾಗಿ ಪ್ರಕಟಿಸಿರುವ ಪ್ರಸ್ತುತ ಪರಿಷ್ಕೃತ ಮಾಸ್ಟರ್ ಪ್ಲ್ಯಾನ್‌ನಲ್ಲಿಪರಿಭಾಷಿಸಲಾಗಿರುವಂತೆ, ಎ–ವಲಯದಲ್ಲಿನ ವಾಣಿಜ್ಯಕ ಮತ್ತು ಮಿಶ್ರ ಬಳಕೆಯ ಪ್ರದೇಶಗಳು, ಸಂಸ್ಥೆಗಳು, ಕೈಗಾರಿಕೆಗಳು ಮತ್ತು ಸಾರ್ವಜನಿಕ ಬಳಕೆಯ ಸ್ಥಳಗಳಲ್ಲಿ, ಗರಿಷ್ಠ ಆರು ಮೀಟರುಗಳ ಎತ್ತರದಲ್ಲಿ ಇಪ್ಪತ್ತು ಚದರ ಮೀಟರುಗಳ ವಿಸ್ತೀರ್ಣದಷ್ಟು ಜಾಹೀರಾತು ಪ್ರದೇಶಕ್ಕೆ ಅನುಮತಿ ನೀಡತಕ್ಕದ್ದು.

3.2.5. ಯೋಜನಾ ಪ್ರಾಧಿಕಾರವು ಸಮುಚಿತವಾಗಿ ಪ್ರಕಟಿಸಿರುವ ಪ್ರಸ್ತುತ ಪರಿಷ್ಕೃತ ಮಾಸ್ಟರ್ ಪ್ಲ್ಯಾನ್‌ನಲ್ಲಿಪರಿಭಾಷಿಸಲಾಗಿರುವಂತೆ, ಬಿ–ವಲಯ ಮತ್ತು ಸಿ–ವಲಯದಲ್ಲಿನ ವಾಣಿಜ್ಯ ಪ್ರದೇಶಗಳು, ಸಂಸ್ಥೆಗಳು, ಕೈಗಾರಿಕೆಗಳು ಮತ್ತು ಸಾರ್ವಜನಿಕ ಬಳಕೆಯ ಸ್ಥಳಗಳಲ್ಲಿ ಗರಿಷ್ಠ ಐದು ಮೀಟರುಗಳ ಎತ್ತರದಲ್ಲಿ ಗರಿಷ್ಠ ಆರುಚದರ ಮೀಟರುಗಳ ವಿಸ್ತೀರ್ಣದಷ್ಟು ಜಾಹೀರಾತು ಪ್ರದೇಶಕ್ಕೆ ಅನುಮತಿ ನೀಡತಕ್ಕದ್ದು.

3.2.6. ಶಾಪಿಂಗ್ ತಾಣ, ಮಾಲ್, ಬಹು–ಉಪಯೋಗಿ ಕಟ್ಟಡಗಳು ಸ್ವತಂತ್ರವಾಗಿ ನಿಲ್ಲಿಸುವ (ಫ್ರೀ ಸ್ಟ್ಯಾಂಡಿಂಗ್) ಜಾಹೀರಾತುಗಳ ವಿಸ್ತೀರ್ಣದ ಮಿತಿಯನ್ನು 1.5 ಪಟ್ಟು ಹೆಚ್ಚಿಸಿಕೊಳ್ಳಬಹುದು. ಎತ್ತರವು ಐದು ಮೀಟರ್ ಇರತಕ್ಕದ್ದು. ಆದಾಗ್ಯೂ, ಅಂಥ ಕಟ್ಟಡಗಳಲ್ಲಿನ ಅಧಿಭೋಗದಾರರಿಗೆ ಈ ಸ್ವತಂತ್ರವಾಗಿ ನಿಲ್ಲಿಸುವ (ಫ್ರೀ ಸ್ಟ್ಯಾಂಡಿಂಗ್) ಜಾಹೀರಾತುಗಳನ್ನು ಬಳಸಿಸಿಕೊಳ್ಳಲು ಅನುಮತಿ ನೀಡತಕ್ಕದ್ದಲ್ಲ.ಶಾಪಿಂಗ್ ತಾಣಗಳ, ಮಾಲ್ ಮತ್ತು ಬಹು ಉಪಯೋಗಿ ಕಟ್ಟಡಗಳಲ್ಲಿನ ಅಧಿಭೋಗದಾರರು ಗೋಡೆ ಪ್ರದರ್ಶಕಗಳು ಮತ್ತು ಪ್ರೊಜೆಕ್ಟಿಂಗ್ ಪ್ರದರ್ಶಕಗಳನ್ನು ರಸ್ತೆಗೆ ಕಾಣುವಂತೆ ಪ್ರದರ್ಶಿಸಲು ಅನುಮತಿ ಹೊಂದಿರತಕ್ಕದ್ದು. ಆದರೆ ಸಾರ್ವಜನಿಕ ಹಕ್ಕಿನ ಹಾದಿಗೆ ಎದುರು ಹಾಕಲು ಅನುಮತಿ ನೀಡತಕ್ಕದ್ದಲ್ಲ. ಸಾರ್ವಜನಿಕ ಹಕ್ಕಿನ ಹಾದಿಗೆ ಎದುರಾಗಿ ಕಿಟಕಿಗಳ ಒಳಗಿನಿಂದ ನಿಲ್ಲಿಸುವ ಜಾಹೀರಾತುಗಳಿಗೆ ಅನುಮತಿ ಇರುತ್ತದೆ.

3.2.7. ಜಿಲ್ಲಾಧಿಕಾರಿ ಅಥವಾ ಅವರು ನಿಯೋಜಿಸಿದ ಅಧಿಕಾರಿಗಳ ಆದೇಶದ ಅನುಸಾರವಾಗಿ ಉದ್ಯಾನವನಗಳು, ತೆರೆದ ಸ್ಥಳಗಳು, ಆಟದ ಮೈದಾನಗಳು, ಸ್ಮಶಾನಗಳು, ಮಳೆ ನೀರಿನ ಚರಂಡಿಗಳು ಮತ್ತು ಕೆರೆಬದುಗಳ ಮೇಲೆ ಪ್ರತಿ ಜಾಹೀರಾತಿಗೆ ಗರಿಷ್ಠ ಐದು ಚದರ ಮೀಟರ್‌ನಷ್ಟು ಜಾಹೀರಾತು ವಿಸ್ತೀರ್ಣದೊಂದಿಗೆ ಮತ್ತು ಗರಿಷ್ಠ ಎರಡು ಮೀಟರ್ ಎತ್ತರದೊಂದಿಗೆ, ಸ್ವತಂತ್ರವಾಗಿ ನಿಲ್ಲಿಸುವ (ಫ್ರೀ ಸ್ಟ್ಯಾಂಡಿಂಗ್)ಜಾಹೀರಾತುಗಳನ್ನು ಸ್ಥಾಪಿಸಬಹುದು.

3.2.8. ಸ್ವತಂತ್ರವಾಗಿ ನಿಲ್ಲಿಸುವ (ಫ್ರೀ ಸ್ಟ್ಯಾಂಡಿಂಗ್) ಜಾಹೀರಾತನ್ನು ಯಾವುದೇ ಒಂದು ನಿರ್ದಿಷ್ಟ ಜಾಗದಲ್ಲಿ ಸ್ಥಾಪಿಸಬೇಕಾದರೆ, ಆ ಜಾಗದಮುಂಭಾಗದಲ್ಲಿ ಕನಿಷ್ಠ ಹದಿನೈದು ಮೀಟರುಗಳಷ್ಟು ಉದ್ದದ ಜಾಗ ಇರಬೇಕಾಗುತ್ತದೆ. ಹದಿನೈದು ಮೀಟರಿಗಿಂತ ಕಡಿಮೆ ಉದ್ದದ ಜಾಗಗಳಲ್ಲಿ ಈ ಉಪ–ವಿಧಿಗಳ ಅನುಸಾರವಾಗಿ ಜಾಹೀರಾತು ಪ್ರದರ್ಶಕಗಳಿಗೆ ಅನುಮತಿ ನೀಡತಕ್ಕದ್ದು/ದ್ದಲ್ಲ?

3.2.9. ಸ್ವತಂತ್ರವಾಗಿ ನಿಲ್ಲಿಸುವ (ಫ್ರೀ ಸ್ಟ್ಯಾಂಡಿಂಗ್) ಜಾಹೀರಾತಿನ ಯಾವುದೇ ಭಾಗವು ಸಾರ್ವಜನಿಕ ಹಕ್ಕಿನ ಹಾದಿಯಲ್ಲಿ ಅಥವಾ ಮೇಲೆ ಬಾಗಬಾರದು ಅಥವಾ ಅಕ್ಕಪಕ್ಕದ ಜಾಗಗಳನ್ನು ಅತಿಕ್ರಮಿಸಬಾರದು.

3.2.10. ಸ್ವತಂತ್ರವಾಗಿ ನಿಲ್ಲಿಸುವ (ಫ್ರೀ ಸ್ಟ್ಯಾಂಡಿಂಗ್) ಜಾಹೀರಾತಿನ ಕಂಬಕ್ಕೆ ಅಥವಾ ತಳಭಾಗಕ್ಕೆ ಯಾವುದೇ ತಾತ್ಕಾಲಿಕ ಜಾಹೀರಾತುಗಳನ್ನು ಅಂಟಿಸಬಾರದು. ತಳಭಾಗ ಅಥವಾ ಕಂಬಕ್ಕೆ ಅದರ ರಚನೆಯ ಭಾಗವಾಗಿಲ್ಲದ ಯಾವುದೇ ಅಲಂಕಾರಿಕ ವಸ್ತುವನ್ನು ಸುತ್ತಬಾರದು.

3.2.11. ಸ್ವತಂತ್ರವಾಗಿ ನಿಲ್ಲಿಸುವ (ಫ್ರೀ ಸ್ಟ್ಯಾಂಡಿಂಗ್) ಜಾಹೀರಾತುಗಳು ಒಳಗಿನಿಂದ ಅಥವಾ ಹೊರಗಿನಿಂದ ಪ್ರಜ್ವಲಿಸಬಹುದು. ಹೊರಗಡೆಯಿಂದ ಬೆಳಗಿಸಲ್ಪಟ್ಟಿದ್ದರೆ, ಎಲ್ಲಾ ದೀಪಗಳುಜಾಹೀರಾತಿಗೆ ಅಭಿಮುಖವಾಗಿರಬೇಕು.

3.2.12. ಎರಡು ಚದರ ಮೀಟರ್ ಅಥವಾ ಅದಕ್ಕಿಂತ ಹೆಚ್ಚಿನ ವಿಸ್ತೀರ್ಣ ಹೊಂದಿರುವ ಯಾವುದೇ ಸ್ವತಂತ್ರವಾಗಿ ನಿಲ್ಲಿಸುವ (ಫ್ರೀ ಸ್ಟ್ಯಾಂಡಿಂಗ್)ಜಾಹೀರಾತು, ಎರಡು ಚದರ ಮೀಟರ್ ಅಥವಾ ಅದಕ್ಕಿಂತ ಹೆಚ್ಚಿನ ವಿಸ್ತೀರ್ಣ ಹೊಂದಿರುವ ಯಾವುದೇ ಮತ್ತೊಂದು ಸ್ವತಂತ್ರವಾಗಿ ನಿಲ್ಲಿಸುವ (ಫ್ರೀ ಸ್ಟ್ಯಾಂಡಿಂಗ್) ಜಾಹೀರಾತಿಗೆ ಮೂವತ್ತು ಮೀಟರುಗಳಿಗಿಂತ ಹತ್ತಿರದಲ್ಲಿ ಇರತಕ್ಕದ್ದಲ್ಲ.

3.2.13. ಸ್ಪಷ್ಟತೆಯ ಉದ್ದೇಶಗಳಿಗೆ ಸಂಬಂಧಿಸಿದಂತೆಪಠ್ಯವುಳ್ಳ ಸ್ವತಂತ್ರವಾಗಿ ನಿಲ್ಲಿಸುವ (ಫ್ರೀ ಸ್ಟ್ಯಾಂಡಿಂಗ್) ಜಾಹೀರಾತು ಪಠ್ಯ ಮತ್ತು ಖಾಲಿ ಜಾಗದ ನಡುವಿನ ಅಂತರವು ಕನಿಷ್ಠ 40:60 ಅನುಪಾತ ಇರತಕ್ಕದ್ದು.

3.2.14. ಯಾವುದೇ ಶಾಪಿಂಗ್ ತಾಣ, ಮಾಲ್ ಅಥವಾ ಬಹು–ಉಪಯೋಗಿ ಕಟ್ಟಡವು ಅದರ ಸ್ವತ್ತಿನ ಪ್ರತಿಯೊಂದು ಪ್ರವೇಶ ಹಾಗೂ ನಿರ್ಗಮನ ದ್ವಾರದಲ್ಲೂ ಸ್ವತಂತ್ರವಾಗಿ ನಿಲ್ಲಿಸುವ (ಫ್ರೀ ಸ್ಟ್ಯಾಂಡಿಂಗ್)ಜಾಹೀರಾತುಗಳನ್ನು ಹೊಂದಿರಬಹುದು.

3.2.15. ಸ್ಮಾರಕ ಗ್ರಾಫಿಕ್ ಅನ್ನು ಏಕೈಕ ಗ್ರೌಂಡ್ ಗ್ರಾಫಿಕ್ ಮಾತ್ರವಾಗಿ ಪ್ರದರ್ಶಿಸುವಂತಹಯಾವುದೇ ಒಂದು ಸ್ಥಳವು, ಅದರ ಗಾತ್ರವನ್ನು ಇಪ್ಪತ್ತು ಪ್ರತಿಶತದವರೆಗೆ ಹೆಚ್ಚಿಸಿಕೊಳ್ಳಬಹುದು.

3.2.16. ಸ್ವತಂತ್ರವಾಗಿ ನಿಲ್ಲಿಸುವ (ಫ್ರೀ ಸ್ಟ್ಯಾಂಡಿಂಗ್) ಜಾಹೀರಾತುಗಳು ಅವುಗಳ ನೆಲ ವಿಸ್ತೀರ್ಣಕ್ಕಿಂತ 2.5 ಪಟ್ಟು ಹೆಚ್ಚುಅಗಲದ ಲ್ಯಾಂಡ್‌ಸ್ಕೇಸಿಂಗ್ ಹೊಂದಿರಬೇಕು, ನಿಲ್ಲಿಸಿದ್ದು ದೀರ್ಘಕಾಲಿಕವಾಗಿರಬೇಕು, ನಿರ್ವಹಿಸಲ್ಪಡುತ್ತಿರಬೇಕು ಮತ್ತು ನಿಂತಿರುವ ಜಾಹೀರಾತನ್ನು ಅದರ ಮುಂಭಾಗದೊಂದಿಗೆ ಕಲಾತ್ಮಕವಾಗಿ ಫ್ರೇಮ್ ಮಾಡಿರಬೇಕು ಅಥವಾ ಅದನ್ನು ಎದ್ದು ಕಾಣುವಂತೆ ಮಾಡಬೇಕು.

3.3. ಆನಿಂಗ್‌ಗಳು, ಕೆನೊಪಿಗಳು ಮತ್ತು ಮಾರ್ಕ್ಯೀಗಳು:–

3.3.1. ಆನಿಂಗ್‌ಜಾಹೀರಾತುಗಳು ಕನಿಷ್ಠ 2.2 ಮೀಟರಿನ ಲಂಬ ತೆರವನ್ನು ಕಾಯ್ದುಕೊಳ್ಳತಕ್ಕದ್ದು.

3.3.2. ವಸತಿ ರಹಿತ ಬಳಕೆಗಳಿಗೆ ಆನಿಂಗ್‌ಗಳು, ಕೆನೊಪಿಗಳು ಮತ್ತು ಮಾರ್ಕ್ಯೀ ಜಾಹೀರಾತುಗಳನ್ನು ಹಾಕಿಕೊಳ್ಳಲು ಅನುಮತಿ ನೀಡಲಾಗಿದೆ. ಪ್ರಸ್ತುತ ಜಾರಿಯಲ್ಲಿರುವ ಪರಿಷ್ಕೃತ ಮಾಸ್ಟರ್ ಪ್ಲ್ಯಾನ್‌ನಲ್ಲಿ ಪರಿಭಾಷಿಸಲಾಗಿರುವಂತೆ ಎ–ವಲಯದಲ್ಲಿ ಆನಿಂಗ್‌ಗಳು, ಕೆನೊಪಿಗಳು ಮತ್ತು ಮಾರ್ಕ್ಯೀಗಳನ್ನು ರೇಖೀಯ ಕಟ್ಟಡದ ಮುಂಭಾಗದ ಪ್ರತಿ ಒಂದು ಮೀಟರಿಗೆ ಎರಡು ಚದರ ಮೀಟರಿನ ಗರಿಷ್ಠ ಜಾಹೀರಾತುವಿಸ್ತೀರ್ಣಕ್ಕೆ ಸೀಮಿತಗೊಳಿಸತಕ್ಕದ್ದು.

3.3.3. ಆನಿಂಗ್, ಕೆನೊಪಿ ಮತ್ತು ಮಾರ್ಕ್ಯೀ ಜಾಹೀರಾತು ಫಲಕಗಳು ಪ್ರಸ್ತುತ ಇರುವ ಉಪ–ವಿಧಿಗಳು ಮತ್ತು ಅಗ್ನಿ ಸುರಕ್ಷತಾ ನಿಯಮಾವಳಿಗಳಲ್ಲಿ ಅನುಮತಿಸಲ್ಪಟ್ಟ, ಬಾಳಿಕೆ ಬರುವ ಹಾಗೂ ಹವಾಮಾನ ವೈಪರೀತ್ಯ ತಡೆಯುವ ಸಾಮರ್ಥ್ಯವುಳ್ಳ ಸಾಮಗ್ರಿಗಳಿಂದ ತಯಾರಿಸಲ್ಪಟ್ಟಿರಬೇಕು.

3.3.4. ಆನಿಂಗ್‌ಗಳು, ಕೆನೊಪಿಗಳು ಮತ್ತು ಮಾರ್ಕ್ಯೀಗಳನ್ನು ಸಾರ್ವಜನಿಕ ಹಕ್ಕಿನ ಹಾದಿಯಲ್ಲಿ ವಿಸ್ತರಿಸಬಹುದು ಆದರೆ ಪಾದಚಾರಿ ಮಾರ್ಗದಿಂದ ಕನಿಷ್ಠ ಒಂದು ಮೀಟರ್ ದೂರದಲ್ಲಿರತಕ್ಕದ್ದು. ಎ–ವಲಯದಲ್ಲಿ, ಪ್ರಸ್ತುತ ಇರುವ ಪರಿಷ್ಕೃತ ಮಾಸ್ಟರ್ ಪ್ಲ್ಯಾನ್‌ನಲ್ಲಿ ಪರಿಭಾಷಿಸಲಾದಂತೆ, ಅವುಗಳನ್ನು ಪಾದಚಾರಿ ಮಾರ್ಗದಿಂದ 0.5 ಮೀಟರ್ ದೂರದಲ್ಲಿರಿಸಲು ಅನುಮತಿಸಬಹುದು.


3.3.5. ಕಟ್ಟಡದ ಪ್ರವೇಶ ದ್ವಾರದ ಮೇಲೆ ಮಾರ್ಕ್ಯೀಗಳನ್ನು ನಿಲ್ಲಿಸತಕ್ಕದ್ದು ಮತ್ತು ಇದು ಕಟ್ಟಡದ ಪ್ರವೇಶದ್ವಾರದ ಅಗಲಕ್ಕೆ ಸಮವಾಗಿ ಸೀಮಿತಗೊಳಿಸಿರತಕ್ಕದ್ದು. ಮಾರ್ಕ್ಯೀಯಿಂದ ಆವೃತವಾದ ಪ್ರವೇಶ ದ್ವಾರದ ಎರಡೂ ಬದಿಗಳಲ್ಲಿ ಹೆಚ್ಚುವರಿಯಾಗಿ 1.5 ಮೀಟರಿನ ಜಾಗವನ್ನು ಅನುಮತಿಸಬಹುದು.

3.3.6. ಮಾರ್ಕೀಗಳನ್ನು ಜೋಡಿಸಲಾದ ಕಟ್ಟಡದಿಂದ ಮಾತ್ರ ಅವುಗಳಿಗೆ ಆಸರೆ ಇರತಕ್ಕದ್ದು. ಆಸರೆಯಾಗಿ ಯಾವುದೇ ಹೊರಗಿನ ಕಂಬಗಳು ಅಥವಾ ಊರುಗಂಬಗಳನ್ನು ಅನುಮತಿಸತಕ್ಕದ್ದಲ್ಲ.

3.3.7. ಆನಿಂಗ್ ಮತ್ತು ಕೆನೋಪಿ ಜಾಹೀರಾತುಗಳು ಹೊರಗಿನಿಂದ ಪ್ರಜ್ವಲಿಸಬಹುದು ಮತ್ತು ಮುದ್ರಿತ ಪ್ರದೇಶದ ಮೇಲೆ ಬೆಳಕು ಕೇಂದ್ರೀಕರಿಸಲ್ಪಟ್ಟಿರತಕ್ಕದ್ದು. ಮಾರ್ಕೀಗಳನ್ನು ಒಳಗಿನಿಂದ ಬೆಳಗಿಸಬಹುದು.

3.3.8. ಹಿನ್ನೆಲೆ ಬೆಳಕುಳ್ಳ ಮತ್ತು ಜಲಪಾತೀಯಆನಿಂಗ್‌ಗಳನ್ನು ನಿಷೇಧಿಸತಕ್ಕದ್ದು. ಗುಮ್ಮಟ ಆನಿಂಗ್‌ಗಳನ್ನು ಕಟ್ಟಡದ ಪ್ರವೇಶ ದ್ವಾರಗಳಲ್ಲಿ ಮಾತ್ರ ಅನುಮತಿಸತಕ್ಕದ್ದು.

3.3.9. ಈ ಎಲ್ಲಾ ಮೂರು ಜಾಹೀರಾತು ಪ್ರಕಾರಗಳ ಮೇಲಿನ ಮುದ್ರಣವು ಅವುಗಳ ಮೇಲ್ಮೈ ವಿಸ್ತೀರ್ಣದ ಶೇಕಡ 25ಕ್ಕೆ ಸೀಮಿತವಾಗಿರತಕ್ಕದ್ದು.



3.3.10. ಸದೃಢ ಆನಿಂಗ್ ಮೇಲ್ಭಾಗದಲ್ಲಿ, ಗರಿಷ್ಠ 0.6 ಮೀಟರುಗಳ ಎತ್ತರದಲ್ಲಿ ಆನಿಂಗ್‌ಜಾಹೀರಾತುಗಳಿಗೆ ಅಕ್ಷರಗಳನ್ನು ಜೋಡಿಸಲು ಅನುಮತಿ ನೀಡತಕ್ಕದ್ದು. ಮಾರ್ಕೀ ಚಾವಣಿಯ ಮೇಲೆ ಒಂದು ಮೀಟರಿನ ಗರಿಷ್ಠ ಎತ್ತರದಲ್ಲಿ ಮಾರ್ಕೀಗಳ ಮೇಲೂ ಅಕ್ಷರಗಳ ಜೋಡಣೆಗೆ ಅನುಮತಿ ನೀಡತಕ್ಕದ್ದು.

3.3.11. ಕೆನೋಪಿಯ ಆಸರೆ ಕಂಬಗಳ ನಡುವೆ ಮತ್ತು ಯಾವುದೇ ಕಟ್ಟಡದ ಗೋಡೆಯ ಮಧ್ಯೆ ಕನಿಷ್ಠ 1.5 ಮೀಟರ್‌ಗಳ ಅಂತರವನ್ನು ಕಾಯ್ದುಕೊಳ್ಳತಕ್ಕದ್ದು.

3.3.12. ಕೆಳಗಿನ ಷರತ್ತುಗಳಿಗೆ ಒಳಪಟ್ಟು ಆನಿಂಗ್ ತಳದ ಜಾಹೀರಾತುಗಳನ್ನು ಅನುಮತಿಸಲಾಗುತ್ತದೆ.–

(ಎ) ಆನಿಂಗ್‌ನ ಒಳಭಾಗದಲ್ಲಿ ಆನಿಂಗ್–ತಳದ ಜಾಹೀರಾತುಗಳನ್ನು ಅಂಟಿಸಲಾಗುತ್ತದೆ. ಆನಿಂಗ್–ತಳಭಾಗದ ಜಾಹೀರಾತುಗಳು ಆನಿಂಗ್‌ನ ಹೊರಗೆ ಚಾಚತಕ್ಕದ್ದಲ್ಲ. ಗ್ಯಾಲರಿಗಳು ಅಥವಾ ಆರ್ಕೇಡುಗಳ ಅಡಿಯಲ್ಲಿ ಸಹ ಈ ಆನಿಂಗ್–ತಳದ ಜಾಹೀರಾತುಗಳನ್ನು ನಿಲ್ಲಿಸಬಹುದು;

(ಬಿ) ಆನಿಂಗ್–ತಳದ ಜಾಹೀರಾತುಗಳು 2.2 ಮೀಟರಿನ ಒಂದು ಕನಿಷ್ಠ ಲಂಬ ದೂರವನ್ನು ಇರಿಸತಕ್ಕದ್ದು;

(ಸಿ) ಆನಿಂಗ್ ನಿಲ್ಲಿಸಲಾದ ಮುಂಭಾಗ ರಸ್ತೆಗೆ ಅಭಿಮುಖವಾಗಿರುವ ಪ್ರತೀ ವ್ಯಾಪಾರೀ ಮಳಿಗೆಗೆ ಗರಿಷ್ಠ ಒಂದು ಆನಿಂಗ್ ತಳದ ಜಾಹೀರಾತನ್ನು ಅನುಮತಿಸಲಾಗಿದೆ;

(ಡಿ) ಆನಿಂಗ್ ತಳದ ಜಾಹೀರಾತನ್ನು ಗರಿಷ್ಠ ಎರಡು ಚದರ ಮೀಟರುಗಳಿಗೆ ಸೀಮಿತಗೊಳಿಸತಕ್ಕದ್ದು;


(ಇ) ಆನಿಂಗ್ ತಳದ ಜಾಹೀರಾತನ್ನು ಮೇಲ್ಕಟ್ಟಿಗೆ ಭದ್ರವಾಗಿ ಲೋಹದ ಆಸರೆಗಳ ಮೂಲಕ ಜೋಡಿಸಿರತಕ್ಕದ್ದು; ಮತ್ತು

(ಎಫ್) ಆನಿಂಗ್ ತಳದ ಜಾಹೀರಾತನ್ನು ಪ್ರಸ್ತುತ ಇರುವ ಉಪ–ವಿಧಿಗಳು ಮತ್ತು ಅಗ್ನಿ ಸುರಕ್ಷತಾ ನಿಯಮಗಳ ಅನುಸಾರ ಅನುಮತಿಸಲ್ಪಟ್ಟ ಸಾಮಗ್ರಿಗಳಿಂದ ತಯಾರಿಸಿರತಕ್ಕದ್ದು;

3.3.13. ಎಲ್ಲಾ ಆನಿಂಗ್‌ಗಳಿಗೆ 2.5 ಮೀಟರುಗಳ ಕನಿಷ್ಠ ಲಂಬ ದೂರವನ್ನು ಇರಿಸಿರತಕ್ಕದ್ದು ಮತ್ತು ಆನಿಂಗ್ ರಚನೆಗಳ ಛಾವಣಿಯು ಎರಡನೆಯ ಮಹಡಿಯ ಕಿಟಕಿಯ ದ್ವಾರಕ್ಕಿಂತ ಕೆಳಗೆ ನಿಲ್ಲಿಸಿರತಕ್ಕದ್ದು.

3.3.14. ಮಾರ್ಕೀ ಛಾವಣಿಯನ್ನು ಛಾವಣಿ ರೂಪಿಸಲು ಹಾಗೂ ರಚಿಸಲು ಹೊರತು ಬೇರೆ ಯಾವ ಉದ್ದೇಶಕ್ಕಾಗಿಯೂ ಬಳಸತಕ್ಕದ್ದಲ್ಲ ಮತ್ತು ಇವುಗಳನ್ನು ಸುಟ್ಟು ಹೋಗದಂತಹ ಸಾಮಗ್ರಿಗಳಿಂದ ನಿರ್ಮಿಸತಕ್ಕದ್ದು.

3.3.15. ಮಾರ್ಕೀ ಛಾವಣಿಗಳಿಂದ ಬೀಳುವ ನೀರು ಸಾರ್ಜನಿಕ ಹಕ್ಕಿನ ಹಾದಿಯ ಮೇಲೆ ಸುರಿಯುವುದು, ಹನಿಯುವುದು ಅಥವಾ ಹರಿಯುವಂತಿರತಕ್ಕದ್ದಲ್ಲ. ಮಾರ್ಕೀ ಛಾವಣಿಯ ಮೇಲಿನಿಂದ ನೀರು ಸಾರ್ವಜನಿಕ ಹಕ್ಕಿನ ಹಾದಿಯ ಮೇಲ್ಮೈಗೆ ಹರಿಯದಂತೆ ತಡೆಯಲು ಪ್ರತಿಯೊಂದು ಮಾರ್ಕೀ ಭಾಗವಾಗಿ ಸಾಕಷ್ಟು ಇಳಿಜಾರುಗಳು, ಚರಂಡಿಗಳು ಮತ್ತು ಗಟಾರಗಳನ್ನು ನಿರ್ಮಿಸತಕ್ಕದ್ದು.



3.4. ಮುಂಚಾಚುವ (ಪ್ರೊಜೆಕ್ಟಿಂಗ್) ಜಾಹೀರಾತುಗಳು.–

3.4.1. ಕಟ್ಟಡದ ಪ್ರತೀ ಮುಂಭಾಗಕ್ಕೆ ಒಂದು ಪ್ರೊಜೆಕ್ಟಿಂಗ್‌ಜಾಹೀರಾತಿಗೆ ಅನುಮತಿ ನೀಡತಕ್ಕದ್ದು. ಪ್ರೊಜೆಕ್ಟಿಂಗ್‌ಜಾಹೀರಾತುಗಳು ಕಟ್ಟಡದ ಪ್ರವೇಶದ್ವಾರಕ್ಕೆ ಸಮಾನಾಂತರವಾಗಿ ಅಥವಾ ಲಂಬವಾಗಿಯೂ ಇರಬಹುದು.

3.4.2. ಗೋಡೆಯಿಂದ 30 ಸೆ.ಮೀ ಗಿಂತ ಅಧಿಕ ಮುಂದೆ ಚಾಚಿಕೊಂಡಿರುವ ಜಾಹೀರಾತನ್ನು ಮುಂಚಾಚುವ(ಪ್ರೊಜೆಕ್ಟಿಂಗ್)ಜಾಹೀರಾತಾಗಿ ವಿನಿಯಮಿಸಬೇಕಾಗುತ್ತದೆ.

3.4.3. ಪ್ರೊಜೆಕ್ಟಿಂಗ್‌ಜಾಹೀರಾತುಗಳು ಪಾದಚಾರಿ ಮಾರ್ಗದಿಂದ ಕನಿಷ್ಠ ಪಕ್ಷ 2.5 ಮೀಟರುಗಳ ಎತ್ತರದಲ್ಲಿರತಕ್ಕದ್ದು. ಕಟ್ಟಡಕ್ಕೆ ನಿಲ್ಲಿಸಿರುವ ಯಾವುದೇ ಪ್ರೊಜೆಕ್ಟಿಂಗ್‌ಜಾಹೀರಾತುಗಳೂ ಜಾಹೀರಾತುಗಳಿಗೆ ಆಸರೆಯಾಗಿರುವ ರಚನೆಯ ಸಹಿತವಾಗಿ, ಕಟ್ಟಡದ ಎತ್ತರಕ್ಕಿಂತ ಎತ್ತರಕ್ಕೆ ಚಾಚತಕ್ಕದ್ದಲ್ಲ.

3.4.4. ಜಾಹೀರಾತುಗಳು ಕಟ್ಟಡದ ಮುಂಭಾಗದಿಂದ ಪಾದಚಾರಿ ಮಾರ್ಗದವರೆಗೆ ಗರಿಷ್ಠ 1.2 ಮೀಟರುಗಳವರೆಗೆ ಮಾತ್ರ ಪಾದಚಾರಿ ಮಾರ್ಗದಿಂದ ಕನಿಷ್ಠ 60ಸೆಂ.ಮೀ ಒಳಗೆ ಹೊರಚಾಚಿರಬಹುದು.

3.4.5. ಜಾಹೀರಾತಿನ ಹೊರಚಾಚಿದ ಭಾಗವು ಮುಂಭಾಗಕ್ಕೆ 90 ಡಿಗ್ರಿ ಕೋನದಲ್ಲಿರಬೇಕು.

3.4.6. ಪ್ರೊಜೆಕ್ಟಿಂಗ್‌ಜಾಹೀರಾತುಗಳು ಅಕ್ಕಪಕ್ಕದ ಆಸ್ತಿಯ ಜಾಹೀರಾತು ಫಲಕಗಳನ್ನುಕಾಣದಂತೆ ಮರೆಮಾಚಬಾರದು. ಅವನ್ನು ಕಟ್ಟಡದ ಸಮತಲ ಕೇಂದ್ರದಲ್ಲಿ ನಿಲ್ಲಿಸತಕ್ಕದ್ದು.

3.4.7. ಕಟ್ಟಡದ ಮೂಲೆಯಲ್ಲಿನ ಯಾವುದೇ ಕೋನಗಳನ್ನು ಪ್ರೊಜೆಕ್ಟಿಂಗ್‌ಜಾಹೀರಾತುಗಳಿಗಾಗಿ ಅನುಮತಿಸತಕ್ಕದ್ದಲ್ಲ.

3.4.8. ಪ್ರೊಜೆಕ್ಟಿಂಗ್ ಜಾಹೀರಾತುಗಳನ್ನು ಇತರ ಯಾವುದೇ ಜಾಹೀರಾತಿಗೆ ಸಿಕ್ಕಿಸುವುದು ಅಥವಾ ನೇತು ಹಾಕುವುದನ್ನು ಮಾಡತಕ್ಕದ್ದಲ್ಲ.

3.4.9. ಕಟ್ಟಡದ ರಚನೆಯಿಂದ 15 ಸೆಂ.ಮೀ ದೂರದಲ್ಲಿ ಪ್ರೊಜೆಕ್ಟಿಂಗ್‌ಜಾಹೀರಾತುಗಳನ್ನು ಜೋಡಿಸತಕ್ಕದ್ದು.

3.4.10. ಪ್ರಸ್ತುತ ಜಾರಿಯಲ್ಲಿರುವ ಉಪ–ವಿಧಿಗಳು ಮತ್ತು ಅಗ್ನಿ ಸುರಕ್ಷತಾ ನಿಯಮಗಳು ಅನುಮತಿಸುವಂತಹ ಸಾಮಗ್ರಿಗಳನ್ನು ಬಳಸಿ ಪ್ರೊಜೆಕ್ಟಿಂಗ್‌ಜಾಹೀರಾತುಗಳನ್ನು ನಿರ್ಮಿಸತಕ್ಕದ್ದು. ಪ್ರೊಜೆಕ್ಟಿಂಗ್‌ಜಾಹೀರಾತುಗಳನ್ನು ಆಧಾರ ಕಂಬಗಳ ನಡುವೆ ನಿಲ್ಲಿಸಿರತಕ್ಕದ್ದು.

3.4.11. ಪ್ರೊಜೆಕ್ಟಿಂಗ್‌ಜಾಹೀರಾತುಗಳುಎರಡನೆ ಮಹಡಿಯ ಕಿಟಕಿಯ ಕೆಳ ಹಂತದ ಮುಂದೆ ಕೊನೆಯಾಗಿರತಕ್ಕದ್ದು.


3.4.12. ಪ್ರೊಜೆಕ್ಟಿಂಗ್‌ಜಾಹೀರಾತುಗಳು ಒಳಗಿನಿಂದ ಅಥವಾ ಹೊರಗಿನಿಂದ ಪ್ರಜ್ವಲಿಸಬಹುದು. ಹೊರಗಡೆಯಿಂದ ಬೆಳಗಿಸಲ್ಪಟ್ಟಿದ್ದರೆ, ಎಲ್ಲಾ ದೀಪಗಳುಜಾಹೀರಾತಿಗೆ ಅಭಿಮುಖವಾಗಿರಬೇಕು.

3.5. ಕಿಟಕಿ ಜಾಹೀರಾತುಗಳು.–

3.5.1. ಎಲ್ಲಾ ವಸತಿ ರಹಿತ ಬಳಕೆಗಳಿಗಾಗಿ ಕಿಟಕಿ ಜಾಹೀರಾತುಗಳಿಗೆ ಅನುಮತಿ ನೀಡತಕ್ಕದ್ದು.

3.5.2. ಎಲ್ಲಾ ಕಿಟಕಿ ಜಾಹೀರಾತುಗಳಿಗೆ, ಅವುಗಳು ತಾತ್ಕಾಲಿಕ ಅಥವಾ ಶಾಶ್ವತವಾಗಿದ್ದರೂ ಕೂಡಾ, ಪ್ರತೀ ಕಿಟಕಿ ವಿಸ್ತೀರ್ಣದ ಶೇಕಡ 25ಕ್ಕಿಂತ ಹೆಚ್ಚಿನ ಮೇಲ್ಭಾಗದ ಜಾಗಕ್ಕೆ ಅನುಮತಿ ನೀಡತಕ್ಕದ್ದಲ್ಲ. ಕಿಟಕಿ ವಿಸ್ತೀರ್ಣವನ್ನು ವಾಸ್ತುಶಿಲ್ಪ ಅಥವಾ ರಚನಾತ್ಮಕ ಅಂಶದಿಂದ ಬೇರ್ಪಡುವವರೆಗೆ ಮುಂದುವರಿಯುವ ಜಾಗ ಎಂದು ಪರಿಗಣಿಸಲಾಗುತ್ತದೆ.

3.5.3. ಒಳಗಿನಿಂದ ಅಥವಾ ಹೊರಗಿನಿಂದ ಪ್ರಜ್ವಲಿಸುವ ಕಿಟಕಿ ಜಾಹೀರಾತುಗಳಿಗೆ ಬಿಬಿಎಂಪಿಯಿಂದ ಅನುಮತಿ ಪಡೆಯುವುದು ಅಗತ್ಯವಾಗಿರುತ್ತದೆ. ಜಾರಿಯಲ್ಲಿರುವ ಪರಿಷ್ಕೃತ ಮಾಸ್ಟರ್ ಪ್ಲ್ಯಾನ್‌ನಲ್ಲಿ ಪರಿಭಾಷಿಸಲಾಗಿರುವಂತೆ ವಾಣಿಜ್ಯ ಬಳಕೆಗಾಗಿರುವ ಸ್ಥಳಗಳಲ್ಲಿ, ಎ,ಬಿ,ಸಿ ವಲಯಗಳಲ್ಲಿ ಮಾತ್ರ ನಿಯಾನ್ ಮತ್ತು ಎಲ್‌ಇಡಿ ಕಿಟಕಿ ಜಾಹೀರಾತುಗಳಿಗೆ ಅನುಮತಿ ನೀಡಲಾಗುತ್ತದೆ.



3.6. ತಾತ್ಕಾಲಿಕ ಕಂಬ ಜಾಹೀರಾತುಗಳು.–

3.6.1. ತಾತ್ಕಾಲಿಕ ಕಂಬ ಜಾಹೀರಾತುಗಳನ್ನು ಕ್ರೀಡಾಂಗಣಗಳು, ಆಟದ ಮೈದಾನಗಳು, ಪ್ರದರ್ಶನ ಕೇಂದ್ರಗಳು, ಪ್ರದರ್ಶನ ಸ್ಥಳಗಳು ಸೇರಿದಂತೆ ವಸತಿ–ರಹಿತ ಬಳಕೆಗಳಿಗೆ ಅನುಮತಿಸತಕ್ಕದ್ದು.

3.6.2. ಎಲ್ಲಾ ತಾತ್ಕಾಲಿಕ ಕಂಬ ಜಾಹೀರಾತುಗಳನ್ನು ಸಾರ್ವಜನಿಕ ಹಕ್ಕಿನ ಹಾದಿಯಿಂದ ಕನಿಷ್ಠ ಮೂರು ಮೀಟರುಗಳಷ್ಟು ಹಿಂದಕ್ಕೆ ಇರಿಸತಕ್ಕದ್ದು.

3.6.3. ಒಂದು ಜಾಗದಲ್ಲಿ ಯಾವುದೇ ಒಂದು ಸಮಯದಲ್ಲಿ ಒಂದು ತಾತ್ಕಾಲಿಕ ಕಂಬ ಜಾಹೀರಾತುಗಳನ್ನು ಮಾತ್ರ ಪ್ರದರ್ಶಿಸತಕ್ಕದ್ದು. ಇದನ್ನು ಸಾರ್ವಜನಿಕ ಹಕ್ಕಿನ ಹಾದಿಗೆ ಸಮಾನಾಂತರವಾಗಿ ಅಥವಾ ಲಂಬವಾಗಿ ನಿಲ್ಲಿಸಿರಬಹುದು.

3.6.4. ತಾತ್ಕಾಲಿಕ ಕಂಬ ಜಾಹೀರಾತುಗಳನ್ನು ಪ್ರದರ್ಶನ ಅಥವಾ ಸಮಾರಂಭ ಅಥವಾ ಉದ್ಘಾಟನೆಯ ಮೊದಲಿನ, ಪ್ರದರ್ಶನ ಅಥವಾ ಸಮಾರಂಭ ಅಥವಾ ಉದ್ಘಾಟನೆಯ ಸಮಯದಲ್ಲಿನ ಒಂದು ವಾರದ ಪ್ರದರ್ಶನಾ ಅವಧಿಗೆ ಮಾತ್ರ ಸೀಮಿತಗೊಳಿಸಿರತಕ್ಕದ್ದು. ಅವನ್ನು ಪ್ರದರ್ಶನ ಅಥವಾ ಒಂದು ಸಮಾರಂಭ ಅಥವಾ ಉದ್ಘಾಟನೆ ಮುಗಿದ ಎರಡು ದಿನಗಳ ಒಳಗೆ ತೆಗೆದುಹಾಕತಕ್ಕದ್ದು. ಯಾವುದೇ ಜಾಗದಲ್ಲಿ ತಾತ್ಕಾಲಿಕ ಕಂಬ ಜಾಹೀರಾತುಗಳನ್ನು, ಸಮಾರಂಭಗಳ ನಡುವೆ ಕನಿಷ್ಠ ಮೂವತ್ತು ದಿನಗಳ ಅಂತರದಲ್ಲಿ ವರ್ಷಕ್ಕೆ ಮೂರು ಬಾರಿ ಮೀರದಂತೆ ಇರಿಸಬಹುದು. ಆದಾಗ್ಯೂ, ಒಂದು ಸಮಾರಂಭ ನಡೆಯುವ ಮೊದಲ ಹದಿನೈದು ದಿನಗಳಿಗೆ ಮುಂಚಿತವಾಗಿ ಅರ್ಜಿ ಹಾಕುವುದಕ್ಕೆ ಒಳಪಟ್ಟು ತಾತ್ಕಾಲಿಕ ಕಂಬ ಜಾಹೀರಾತುಗಳನ್ನು ವರ್ಷಕ್ಕೆ ಮೂರು ಬಾರಿಗಿಂತ ಜಾಸ್ತಿ ಇರಿಸಲು ಜಿಲ್ಲಾಧಿಕಾರಿ ಅಥವಾ ಅವರ ನಿಯೋಜಿತ ಅಧಿಕಾರಿಗಳಿಗೆ ವಿವೇಚನಾಧಿಕಾರವಿರತಕ್ಕದ್ದು.

3.6.5. ತಾತ್ಕಾಲಿಕ ಕಂಬ ಜಾಹೀರಾತುಗಳನ್ನು 2.5 ಚದರ ಮೀಟರ್ ವಿಸ್ತೀರ್ಣ ಹಾಗೂ 2 ಮೀಟರ್ ಎತ್ತರಕ್ಕೆ ಸೀಮಿತಗೊಳಿಸಲಾಗುತ್ತದೆ.

3.7. ವಿದ್ಯುನ್ಮಾನ ಸಂದೇಶ ಜಾಹೀರಾತುಗಳು.–


3.7.1. ವಿದ್ಯುನ್ಮಾನಸಂದೇಶ ಜಾಹೀರಾತುಗಳು ಯಾವುದೇ ಆಫ್–ಪ್ರಿಮೈಸಿಸ್ ವಾಣಿಜ್ಯಕ ಜಾಹೀರಾತನ್ನು ಪ್ರದರ್ಶಿಸತಕ್ಕದ್ದಲ್ಲ. ವಿದ್ಯುನ್ಮಾನಪ್ರದರ್ಶಕ ಪರದೆಗಳನ್ನು ನಿಷೇಧಿಸತಕ್ಕದ್ದು.

3.7.2. ವಿದ್ಯುನ್ಮಾನಸಂದೇಶ ಜಾಹೀರಾತುಗಳನ್ನು ಸಾರ್ವಜನಿಕ ಸುರಕ್ಷತಾ ಸೌಲಭ್ಯಗಳು, ಲೋಕೋಪಯೋಗಿ ಸೌಲಭ್ಯಗಳು, ಉದ್ಯಾನವನಗಳು ಅಥವಾ ಆಟದ ಮೈದಾನಗಳು ಸೇರಿದಂತೆ ಶೈಕ್ಷಣಿಕ ಸಂಸ್ಥೆ, ಆರಾಧನಾ ಮಂದಿರಗಳು ಮತ್ತು ಯಾವುದೇ ಸರಕಾರಿ ಸೌಲಭ್ಯ ಸ್ಥಳಗಳಿಗೆ ಅನುಮತಿಸತಕ್ಕದ್ದು. ವಿದ್ಯುನ್ಮಾನಸಂದೇಶ ಜಾಹೀರಾತುಗಳನ್ನು ಕೇಂದ್ರೀಯ ವಾಣಿಜ್ಯ ಜಿಲ್ಲಾ ವಾಣಿಜ್ಯಕ ಉದ್ದಿಮೆಗಳಲ್ಲಿ ಸಹ ಅನುಮತಿಸತಕ್ಕದ್ದು.

3.7.3. ವಿದ್ಯುನ್ಮಾನಸಂದೇಶ ಜಾಹೀರಾತುಗಳನ್ನು ಸ್ವತಂತ್ರವಾಗಿ ನಿಲ್ಲಿಸುವ (ಫ್ರೀ ಸ್ಟ್ಯಾಂಡಿಂಗ್) ಜಾಹೀರಾತು, ಗೋಡೆ ಜಾಹೀರಾತು ಅಥವಾ ಮಾರ್ಕೀ ಜಾಹೀರಾತಿನ ಭಾಗವಾಗಿ ಅನುಮತಿಸತಕ್ಕದ್ದು ಹಾಗೂ ಆ ಜಾಹೀರಾತು ಪ್ರಕಾರಗಳ ಅವಶ್ಯಕತೆಗಳಿಗೆ ಒಳಪಡತಕ್ಕದ್ದು. ವಿದ್ಯುನ್ಮಾನಸಂದೇಶ ಜಾಹೀರಾತುಗಳನ್ನು ದೊಡ್ಡ ಜಾಹೀರಾತು ರಚನೆಯಲ್ಲಿ ಸಂಯೋಜಿಸಬಹುದು. ವಿದ್ಯುನ್ಮಾನ ಸಂದೇಶ ಜಾಹೀರಾತುಗಳನ್ನು ಸ್ವತಂತ್ರವಾಗಿ ನಿಲ್ಲಿಸಬಹುದಾದ ಅಥವಾ ಗೋಡೆ ಜಾಹೀರಾತಿನ ಜಾಹೀರಾತು ವಿಸ್ತೀರ್ಣದ ಗರಿಷ್ಠ ಶೇಕಡ 70ಕ್ಕೆ ಸೀಮಿತಗೊಳಿಸತಕ್ಕದ್ದು.

3.7.4. ಒಂದು ಗುಂಪಿನಲ್ಲಿ ಒಂದು ವಿದ್ಯುನ್ಮಾನಸಂದೇಶ ಜಾಹೀರಾತಿಗೆ ಮಾತ್ರ ಅನುಮತಿಸತಕ್ಕದ್ದು.

3.7.5. ವಿದ್ಯುನ್ಮಾನ ಸಂದೇಶ ಜಾಹೀರಾತಿನಲ್ಲಿ ಪ್ರದರ್ಶಿಸಿದ ಪ್ರತಿಯೊಂದು ಸಂದೇಶ ಅಥವಾ ಚಿತ್ರವು ಕನಿಷ್ಠ ಎಂಟು ಸೆಕೆಂಡಿನವರೆಗೆ ಸ್ಥಿರವಾಗಿ ಕಾಣಿಸತಕ್ಕದ್ದು. ಅದನ್ನು ಸ್ಕ್ರಾಲ್ ಮಾಡುವುದು, ಮಿನುಗಿಸುವುದು, ಅನಿಮೇಷನ್, ಅಥವಾ ಚಲಿಸುವುದನ್ನು ನಿಷೇಧಿಸತಕ್ಕದ್ದು.



3.8. ಗೋಡೆ ಮೇಲಿನ ಜಾಹೀರಾತುಗಳು.–

3.8.1. ಗೋಡೆ ಮೇಲಿನ ಜಾಹೀರಾತುಗಳನ್ನು ಚಾಲ್ತಿಯಲ್ಲಿರುವ ಪರಿಷ್ಕೃತ ಮಾಸ್ಟರ್ ಪ್ಲಾನ್‌ನಲ್ಲಿ ಪರಿಭಾಷಿಸಿರುವಂತೆ ಎ, ಬಿ ಮತ್ತು ಸಿ ವಲಯಗಳಲ್ಲಿನ ವಸತಿಯೇತರ ಕಟ್ಟಡಗಳಿಗೆ ಮಾತ್ರ ಅನುಮತಿಸತಕ್ಕದ್ದು.

3.8.2. ಒಂದು ಕಟ್ಟಡದ ಗೋಡೆಗೆ ಸಂಬಂಧಿಸಿದ ಎಲ್ಲಾ ಗೋಡೆ ಮೇಲಿನ ಜಾಹೀರಾತು ಫಲಕಗಳ ಗರಿಷ್ಠ ಗಾತ್ರವು, ಗೋಡೆ ಮೇಲಿನ ಜಾಹೀರಾತುಗಳನ್ನು ತೆಗೆದು ಹಾಕಲಾಗುವ ಕಟ್ಟಡದ ಗೋಡೆಯ ಪ್ರತಿರೇಖಾತ್ಮಕ (ಲೈನಿಯರ್) ಮೀಟರ್‌ನ 0.5 ಚದರ ಮೀಟರ್‌ನಲ್ಲಿ ಇರತಕ್ಕದ್ದು.

3.8.3. ಕಟ್ಟಡವನ್ನು ಗುರುತಿಸಲು ಒಂದು ಹೆಚ್ಚುವರಿ ಗೋಡೆ ಮೇಲಿನ ಜಾಹೀರಾತನ್ನು ಹದಿನೆಂಟು ಮೀಟರ್ ಅಥವಾ ಅದಕ್ಕೂ ಹೆಚ್ಚಿನ ಎತ್ತರವಿರುವ ಕಟ್ಟಡದ ಮೇಲಿನ ಏಳು ಮೀಟರ್ ಅಂತರದೊಳಗೆ ಇಡಬಹುದು. ಫಲಕವು ಯಾವುದೇ ವಾಸ್ತುಶಿಲ್ಪ ವಿನ್ಯಾಸವನ್ನು ಮರೆಮಾಡುವಂತೆ ಇರತಕ್ಕದ್ದಲ್ಲ. ಗರಿಷ್ಠ ಗಾತ್ರವು, ಗೋಡೆ ಮೇಲಿನ ಜಾಹೀರಾತನ್ನು ಇರಿಸಲಾಗುವ ಛಾವಣಿಯ ಹೊರ ಅಂಚಿನಿಂದ ಕಟ್ಟಡದ ಮುಂಭಾಗದ ಪ್ರತಿರೇಖಾತ್ಮಕ (ಲೈನಿಯರ್) ಮೀಟರ್‌ನ 0.5 ಚದರ ಮೀಟರಿನಷ್ಟು ಇರತಕ್ಕದ್ದು.

3.8.4. ಕಟ್ಟಡಗಳ ಮೇಲಿರುವ ಹಳೆಯ ಬಣ್ಣದ ಫಲಕಗಳನ್ನು ಗೋಡೆ ಮೇಲಿನ ಜಾಹೀರಾತುಗಳೆಂದು ಪರಿಗಣಿಸತಕ್ಕದ್ದು ಮತ್ತು ಇವುಗಳನ್ನು ಈಗಿನ ಅಗತ್ಯತೆಗಳಿಂದ ಹೊರತುಪಡಿಸತಕ್ಕದ್ದು ಮತ್ತು ಕಟ್ಟಡದೊಳಗೆ ಅವುಗಳ ಬಳಕೆ ಮತ್ತು ಕಾರ್ಯಚಟುವಟಿಕೆಗಳನ್ನು ಸೂಚಿಸುವವರೆಗೂ ಅಥವಾ ಸಕ್ಷಮ ಪ್ರಾಧಿಕಾರವು ಗ್ರಾಫಿಕ್ ಚಿತ್ರ (ವರ್ಣಚಿತ್ರ) ಕಲೆ ಎಂದು ಪರಿಗಣಿಸುವವರೆಗೂ ಅವನ್ನು ಪಾಲಿಸುವುದೆಂದು ಭಾವಿಸತಕ್ಕದ್ದು ಮತ್ತು ಅದನ್ನು ಹಾಗೆ ನಿರ್ವಹಿಸಬೇಕು ಮತ್ತು ಅವುಗಳಿಗೆ ಪುನಃ ಬಣ್ಣ ಬಳಿದು ಇರಿಸಿಕೊಂಡಿರಬೇಕು. ಆದರೆ ಯಾವುದೇ ಹೊಸ ಮಾಹಿತಿಯನ್ನು ಅಥವಾ ಚಿತ್ರಗಳನ್ನು ಈಗಿರುವ ಫಲಕಕ್ಕೆ ಸೇರಿಸತಕ್ಕದ್ದಲ್ಲ.

3.8.5. ಒಂದು ವೇಳೆ ಗೋಡೆಯ ಗ್ರಾಫಿಕ್ ಚಿತ್ರಕಲೆಯು ಬಾಕ್ಸ್ ಒಳಗಿನ ಪ್ರದರ್ಶಕವನ್ನು ಒಳಗೊಂಡಿದ್ದರೆ, ಆ ಪ್ರದರ್ಶನದ ವಸ್ತು ಮತ್ತು ಅದರ ಹಿನ್ನೆಲೆ ಎರಡೂಸೇರಿದಂತೆ ಪ್ರದರ್ಶಕದ ಒಟ್ಟು ವಿಸ್ತೀರ್ಣವು, ಅನುಮತಿ ನೀಡಿದ ಫಲಕದ ವಿಸ್ತೀರ್ಣದ ಗರಿಷ್ಠ ಶೇಕಡಾವಾರು ಪ್ರಮಾಣಕ್ಕಿಂತ ಹೆಚ್ಚಿಗೆ ಇರತಕ್ಕದ್ದಲ್ಲ.

3.8.6. ರಸ್ತೆಗೆ ಅಭಿಮುಖವಾಗಿರುವ ಗೋಡೆ ಗ್ರಾಫಿಕ್ ಚಿತ್ರಕಲೆಯ ತಳ ಭಾಗದ ಎತ್ತರವು, ವಾಹನ ಚಾಲಕರಿಗೆ ಸುಲಭವಾಗಿ ಕಾಣಿಸುವಂತೆ ನೆಲದಿಂದ ಕನಿಷ್ಠ 2.2 ಮೀಟರ್ ಎತ್ತರದಲ್ಲಿರತಕ್ಕದ್ದು.


3.8.7. ಗೋಡೆ ಮೇಲಿನ ಜಾಹೀರಾತು ಫಲಕಗಳನ್ನು ಕಟ್ಟಡದ ಗೋಡೆಗೆ ಸುರಕ್ಷಿತವಾಗಿ ಮತ್ತು ಭದ್ರವಾಗಿ ಜೋಡಣೆ ಮಾಡಿರತಕ್ಕದ್ದು. ಗೋಡೆ ಮೇಲಿನ ಜಾಹೀರಾತು ಫಲಕಗಳನ್ನು ಗೋಡೆಯ ವಿರುದ್ಧ ದಿಕ್ಕಿನಲ್ಲಿ ಸಮತಟ್ಟಾಗಿ ಇರುವಂತೆ ಹಾಕತಕ್ಕದ್ದು ಹಾಗೂ ಅದು ಕಟ್ಟಡದ ಗೋಡೆಯಿಂದ 40 ಸೆಂ.ಮೀ.ಗಿಂತ ಹೆಚ್ಚು ಹೊರಗೆ ಬಂದಿರತಕ್ಕದ್ದಲ್ಲ. ಗೋಡೆ ಮೇಲಿನ ಜಾಹೀರಾತು ಫಲಕಗಳು 40ಸೆಂ.ಮೀ ಗಿಂತ ಹೆಚ್ಚು ಉದ್ದಕ್ಕೆ ಚಾಚಿ ಪಾದಚಾರಿ ಮಾರ್ಗವನ್ನು ಅತಿಕ್ರಮಿಸತಕ್ಕದ್ದಲ್ಲ.

3.8.8. ಗೋಡೆ ಮೇಲಿನ ಜಾಹೀರಾತು ಫಲಕಗಳನ್ನು ಆಂತರಿಕವಾಗಿ ಅಥವಾ ಬಾಹ್ಯವಾಗಿ ಪ್ರಕಾಶಮಾನವಾಗಿ ಬೆಳಗುವಂತೆ ಮಾಡಬಹುದು. ಅವುಗಳನ್ನು ಬಾಹ್ಯವಾಗಿ ಪ್ರಕಾಶಮಾನವಾಗಿ ಬೆಳಗಿಸುವಂತಿದ್ದರೆ, ಎಲ್ಲಾ ಬೆಳಕನ್ನು ಫಲಕದಜಾಹೀರಾತಿನ ಕಡೆಗೆ ಕೇಂದ್ರೀಕರಿಸಿರುವಂತೆ ಮಾಡತಕ್ಕದ್ದು.

3.8.9. ಗೋಡೆ ಮೇಲಿನ ಜಾಹೀರಾತು ಫಲಕಗಳನ್ನು ಚಾಲ್ತಿಯಲ್ಲಿರುವ ಉಪವಿಧಿಗಳು ಮತ್ತು ಅಗ್ನಿಶಾಮಕ ಸುರಕ್ಷತಾ ಮಾನದಂಡಗಳ ಪ್ರಕಾರ ಅನುಮತಿಸಲ್ಪಟ್ಟ ಸಾಮಗ್ರಿಗಳಿಂದ ನಿರ್ಮಿಸತಕ್ಕದ್ದು.

3.8.10. ಒಂದು ಕಟ್ಟಡಕ್ಕೆ ಜೋಡಣೆಯಾಗಿರುವ ಯಾವುದೇ ಗೋಡೆ ಮೇಲಿನ ಜಾಹೀರಾತು ಫಲಕಗಳು,ಫಲಕ ನಿಲ್ಲಿಸುವ ಆಸರೆಯ ರಚನೆಯೂ ಸೇರಿದಂತೆ, ಅದನ್ನು ಜೋಡಿಸಲಾದ ಕಟ್ಟಡದ ಮುಂಭಾಗದ ಗೋಡೆ ರಚನೆಯ ತುದಿಗಳ ಅಥವಾ ಮೇಲಿನ ಭಾಗದ ಆಚೆಗೂ ಅಥವಾ ಕಟ್ಟಡದ ಛಾವಣಿ ಅಂಚಿನ ರಚನೆಗಿಂತ ಎತ್ತರಕ್ಕೆ ಹೊರಚಾಚಿಕೊಂಡಿರುವಂತಿಲ್ಲ.

3.8.11. ಕಟ್ಟಡ ರಚನೆಯ ಭಾಗವಾಗಿರುವ ಚಿಮಣಿಗಳಂತಹ ವಾಸ್ತು ವಿನ್ಯಾಸದ ಉಪಸಲಕರಣೆಗಳ ಮೇಲೆ ಗೋಡೆ ಮೇಲಿನ ಜಾಹೀರಾತು ಫಲಕಗಳನ್ನು ಹಾಕಲು ಅನುಮತಿಸಬಹುದು.



3.9. ಮೇಲ್ಛಾವಣಿ ಜಾಹೀರಾತು ಫಲಕಗಳು.–

3.9.1. ಮೇಲ್ಛಾವಣಿಯ ಜಾಹೀರಾತು ಫಲಕಗಳನ್ನು, ಚಾಲ್ತಿಯಲ್ಲಿರುವ ಪರಿಷ್ಕೃತ ಮಾಸ್ಟರ್ ಪ್ಲಾ ನ್‌ನಲ್ಲಿ ಪರಿಭಾಷಿಸಿರುವಂತೆ ಎ, ಬಿ ಮತ್ತು ಸಿ ವಲಯಗಳಲ್ಲಿರುವ ವಸತಿ–ರಹಿತ ಭೂ ಬಳಕೆಯಲ್ಲಿನ ಹದಿನೆಂಟು ಮೀಟರ್ ಅಥವಾ ಅದಕ್ಕೂ ಹೆಚ್ಚಿನ ಎತ್ತರವಿರುವ ಕಟ್ಟಡಗಳಿಗೆ ಮಾತ್ರ ಅನುಮತಿಸತಕ್ಕದ್ದು.

3.9.2. ಪ್ರತಿ ಕಟ್ಟಡಕ್ಕೆ ಗರಿಷ್ಠ ಒಂದು ಮೇಲ್ಛಾವಣಿ ಜಾಹೀರಾತು ಫಲಕವನ್ನು ಮಾತ್ರ ಅನುಮತಿಸತಕ್ಕದ್ದು. ಸಮತಟ್ಟಾದ ಮೇಲ್ಛಾವಣಿಗಳನ್ನು ಹೊಂದಿರುವ ಕಟ್ಟಡಗಳಿಗೆ ಮಾತ್ರ ಒಂದು ಮೇಲ್ಛಾವಣಿಯ ಜಾಹೀರಾತು ಫಲಕವನ್ನು ಅನುಮತಿಸತಕ್ಕದ್ದು.

3.9.3. ಮೇಲ್ಛಾವಣಿಯಫಲಕಗಳು ಗರಿಷ್ಠ ಹನ್ನೆರಡು ಚದರ ಮೀಟರ್ ಅಳತೆಯ ಫಲಕಕ್ಕೆ ಸೀಮಿತವಾಗಿರಬೇಕು.

3.9.4. ಮೇಲ್ಛಾವಣಿಯಜಾಹೀರಾತು ಫಲಕಗಳನ್ನು, ಕಟ್ಟಡದ ಮೇಲ್ಛಾವಣಿಯಿಂದ ಹಿಡಿದು ಫಲಕದ ರಚನೆಯೂ ಸೇರಿದಂತೆ,ಫಲಕದ ಎತ್ತರದ ತುದಿಯವರೆಗೆ ಅಳತೆ ಮಾಡಬಹುದಾದಂತೆಗರಿಷ್ಠ ನಾಲ್ಕು ಮೀಟರ್ ಎತ್ತರಕ್ಕೆ ಸೀಮಿತಗೊಳಿಸತಕ್ಕದ್ದು.

3.9.5. ಮೇಲ್ಛಾವಣಿಯಜಾಹೀರಾತು ಫಲಕವನ್ನು ಮೇಲ್ಛಾವಣಿಯ ಅತ್ಯಂತ ಹೊರಭಾಗದ ಗೋಡೆಗಳಿಂದ ಕೊನೆಪಕ್ಷ ಒಂದು ಮೀಟರ್ ದೂರದಲ್ಲಿ ನಿಲ್ಲಿಸತಕ್ಕದ್ದು.

3.9.6. ಮೇಲ್ಛಾವಣಿಯ ಜಾಹೀರಾತು ಫಲಕಗಳನ್ನು , ಮೇಲ್ಛಾವಣಿಯ ಯಾವುದೇ ಪ್ರವೇಶ ಸ್ಥಾನಗಳಿಗೆ ಅಡ್ಡಿಯಾಗದಂತೆ ಸುರಕ್ಷಿತವಾಗಿ ಹಾಗೂ ಭದ್ರವಾಗಿ ಮೇಲ್ಛಾವಣಿಯ ರಚನೆಗೆ ಜೋಡಿಸಿರತಕ್ಕದ್ದು.


3.9.7. ಮೇಲ್ಛಾವಣಿಯ ಜಾಹೀರಾತು ಫಲಕವು ಕೊನೆಪಕ್ಷ ಸಾರ್ವಜನಿಕ ದಾರಿಯ ಪಕ್ಕದಲ್ಲಿ ಸಮಾನಾಂತರದಲ್ಲಿರತಕ್ಕದ್ದು. ಒಂದು ವೇಳೆ ಕಟ್ಟಡವು ಪಕ್ಕದ ಕಟ್ಟಡಗಳಿಗೆ ಹೊಂದಿಕೊಂಡಿದ್ದಲ್ಲಿ,ಮೇಲ್ಛಾವಣಿಯಫಲಕದ ಸ್ಥಾನವು, ಸಾರ್ವಜನಿಕ ದಾರಿಗೆ ಸಮಾನಾಂತರದಲ್ಲಿ ಹೊಂದಿಕೊಂಡಪಕ್ಕದ ಕಟ್ಟಡದ ಕೇಂದ್ರದಿಂದ ಕೇಂದ್ರಕ್ಕೆ ಕನಿಷ್ಠ ಮೂವತ್ತೈದು ಮೀಟರ್ ದೂರದಲ್ಲಿ ಇರತಕ್ಕದ್ದು.

3.9.8. ಮೇಲ್ಛಾವಣಿಯ ಜಾಹೀರಾತು ಫಲಕಗಳನ್ನು ನಿಯಾನ್ ಅಥವಾ ಎಲ್‌ಇಡಿ ದೀಪಗಳೂ ಸೇರಿದಂತೆ ಆಂತರಿಕವಾಗಿ ಅಥವಾ ಬಾಹ್ಯವಾಗಿ ಪ್ರಕಾಶಮಾನವಾಗಿ ಬೆಳಗಿಸಬಹುದು.

3.10. ವಾಹನ ಜಾಹೀರಾತು ಫಲಕಗಳು.–

3.10.1. ವಾಹನ ಜಾಹೀರಾತು ಫಲಕಗಳಿಗೆ ವಾಹನದ ನೋಂದಾಯಿತ ಮಾಲೀಕರು ಹೊಣೆಗಾರರಾಗತಕ್ಕದ್ದು. ಯಾವುದೇ ಉತ್ಪನ್ನದ ಅಥವಾ ಸೇವೆಗಳ ಕುರಿತಾದ ಜಾಹೀರಾತು ನೀಡುವ ಉದ್ದೇಶದಿಂದ ಅಥವಾ ಕಟ್ಟಡದಲ್ಲಿ ಅಥವಾ ಅದರ ಹೊರಗೆ ಇರುವ ಒಂದು ವ್ಯವಹಾರವನ್ನು ಅಥವಾ ಅದರ ಚಟುವಟಿಕೆಗೆ ಸಾರ್ವಜನಿಕರಿಗೆತಿಳಿಸುವ ಉದ್ದೇಶದಿಂದ ನಿಲುಗಡೆಯಾದ ವಾಹನದಲ್ಲಿ ಇರಿಸಲ್ಪಟ್ಟ ಅಥವಾ ಚಿತ್ರಿಸಿದ ಫಲಕಗಳನ್ನು ನಿಷೇಧಿಸತಕ್ಕದ್ದು. ವಾಹನಗಳ, ಟ್ರಕ್‌ಗಳ ಅಥವಾ

ಬಸ್ಸುಗಳ ಮೇಲೆ ಬಣ್ಣದ ಫಲಕಗಳನ್ನು ಹಾಕಲು ಅನುಮತಿಸತಕ್ಕದ್ದು. ಆದರೆ, ಅಂಥ ವಾಹನಗಳ ಪ್ರಾಥಮಿಕ ಉದ್ದೇಶವು, ಅವುಗಳ ಬಳಕೆಗೆ ಸಂಬಂಧಿಸಿದ ಪ್ರದೇಶದಲ್ಲಿ ನಿಲ್ಲಿಸುವುದು ಅಥವಾ ಒಟ್ಟಾಗಿ ನಿಂತಿರುವುದು ಆಗಿದ್ದು, ಅಂಥ ಎಲ್ಲಾ ವಾಹನಗಳು ಕಾರ್ಯನಿರ್ವಹಣಾ ಸ್ಥಿತಿಯಲ್ಲಿ ಇರತಕ್ಕದ್ದಾಗಿದ್ದು, ಅವುಗಳ ಮೇಲೆ ಫಲಕಗಳನ್ನು ಪ್ರದರ್ಶಿಸುವಂತಿಲ್ಲ.



3.11. ಪ್ರಾಯೋಜಿತ ಜಾಹೀರಾತುಗಳು.–

ವಿವರಣೆ: ನಿರ್ದಿಷ್ಟ ಸಾರ್ವಜನಿಕ ಮೂಲಸೌಕರ್ಯವನ್ನು ಒದಗಿಸುವುದಕ್ಕಾಗಿ, ಖಾಸಗಿ ವ್ಯವಹಾರಸ್ಥರು, ಮಾನವತಾವಾದಿಗಳು ಅಥವಾ ವ್ಯಕ್ತಿಗಳು ಆರ್ಥಿಕ ಸಹಾಯ ಒದಗಿಸಬಹುದು. ಪ್ರಾಯೋಜಿಸುವ ಖಾಸಗಿ ವ್ಯಕ್ತಿಗಳು ಅಥವಾ ಸಂಸ್ಥೆಗಳಿಗೆ ಹೆಸರು, ದಿನಾಂಕ ಮತ್ತು ಸಾರ್ವಜನಿಕ ಸಂದೇಶ ಹೊತ್ತ ಒಂದು ಸ್ಮಾರಕ ಫಲಕವನ್ನು ಪ್ರದರ್ಶಿಸಲು ಅನುಮತಿಸತಕ್ಕದ್ದು. ಪ್ರಾಯೋಜಕತ್ವವು ನಿರ್ದಿಷ್ಟ ಮೂಲಸೌಕರ್ಯಕ್ಕಾಗಿ ಪ್ರಾಯೋಜಿತಗೊಂಡ ಜಾಹೀರಾತು ಹಕ್ಕುಗಳಿಗೆ ಪ್ರತಿಯಾಗಿರತಕ್ಕದ್ದು. ಮೂಲಸೌಕರ್ಯಗಳ ಈ ಕೆಳಕಂಡ ಪಟ್ಟಿಯನ್ನು ಪ್ರಾಯೋಜಿತ ಜಾಹೀರಾತುಗಳಿಗಾಗಿ ಅನುಮತಿಸತಕ್ಕದ್ದು, ಅವುಗಳೆಂದರೆ:–

3.11.1. ಬಸ್ ತಂಗುದಾಣ.–

3.11.1.1. ಬಸ್ ತಂಗುದಾಣಗಳಿಗೆ, ವಾಣಿಜ್ಯ ಫಲಕದ ಪ್ರಾಯೋಜಕತ್ವಕ್ಕೆ ಅನುಮತಿಸತಕ್ಕದ್ದು. ಇದು, ಸಾರ್ವಜನಿಕ ಹಾದಿಯ ಅದೇ ಬದಿಯಲ್ಲಿ 300 ಮೀಟರುಗಳ ಒಂದು ಬಸ್ ತಂಗುದಾಣಕ್ಕಿಂತ ಹೆಚ್ಚಿಲ್ಲದಂತೆ ಇರತಕ್ಕದ್ದು. ಮೂಲಸೌಕರ್ಯದ ವೆಚ್ಚದ ಆಧಾರದ ಮೇಲೆ, ಅನುಮತಿ ನೀಡಿಕೆಯ ಮಾನ್ಯತೆಯನ್ನು ಪ್ರಾಧಿಕಾರವು ಲೆಕ್ಕಹಾಕತಕ್ಕದ್ದು;

3.11.1.2. ಜಾಹೀರಾತು ಫಲಕವು ನೆಲದಿಂದ 2.5 ಮೀಟರುಗಳಿಗಿಂತ ಹೆಚ್ಚಿನ ಎತ್ತರದಲ್ಲಿರತಕ್ಕದ್ದಲ್ಲ;

3.11.1.3. ಜಾಹೀರಾತು ಫಲಕವು, ಬಸ್ ನಿಲ್ದಾಣದ ಛಾವಣಿಯ ಹೊರಗೆ ವಿಸ್ತರಿಸಿಕೊಂಡು ಇರತಕ್ಕದ್ದಲ್ಲ; ಮತ್ತು

3.11.1.4. ಫಲಕದ ಒಟ್ಟು ಮೇಲ್ಮೈ ವ್ಯಾಪ್ತಿಯು, ತಂಗುದಾಣದ ಒಳ ಲಂಬ ಮೇಲ್ಮೈನ ಶೇಕಡಾ ಎಪ್ಪತ್ತರಷ್ಟಕ್ಕಿಂತ ಹೆಚ್ಚಿಗೆ ಇರತಕ್ಕದ್ದಲ್ಲ.

3.11.2. ಪಾದಚಾರಿ ಸೇತುವೆಗಳು ಮತ್ತು ಅಂಡರ್‌ಪಾಸ್‌ಗಳು.– ಜಾಹೀರಾತು ಹಕ್ಕುಗಳಿಗಾಗಿನಪ್ರಸ್ತುತ ಒಪ್ಪಂದಗಳು ಬಿಬಿಎಂಪಿಯು ನಿಗದಿಪಡಿಸಿದ ಅವಧಿಗೆ ಮಾನ್ಯವಾಗಿರತಕ್ಕದ್ದು. ಆದಾಗ್ಯೂ,ಪಾದಚಾರಿ ಸೇತುವೆಗಳ ಮೇಲಿನ ಮತ್ತು ಅಂಡರ್‌ಪಾಸ್‌ಗಳಲ್ಲಿನ ಭವಿಷ್ಯದ ಎಲ್ಲಾ ಪ್ರಾಯೋಜಿತ ಜಾಹೀರಾತನ್ನು ಈ ಕೆಳಕಂಡಂತೆ ಅನುಮತಿಸತಕ್ಕದ್ದು, –

3.11.2.1. ಸೇತುವೆ ಅಥವಾ ಅಂಡರ್‌ಪಾಸ್ ಬಳಸುವ ಪಾದಚಾರಿಗಳಿಗೆ ಕಾಣುವಷ್ಟಕ್ಕೆ ಸೀಮಿತವಾಗಿರುವಂತೆ ಜಾಹೀರಾತುಗಳನ್ನು ಒಳಭಾಗದಲ್ಲಿ ಹಾಕತಕ್ಕದ್ದು. ಆದರೆ, ಅವುಗಳು ಸಾರ್ವಜನಿಕ ಹಾದಿಯಲ್ಲಿ ಸಂಚರಿಸುವವರು ಕೂಡಾ ಅದನ್ನು ನೋಡಬೇಕೆಂಬ ಉದ್ದೇಶ ಹೊಂದಿರುವಂತಿಲ್ಲ ಅಥವಾ ಅವುಗಳನ್ನು ವೀಕ್ಷಿಸುವಂತಿರಬಾರದು;

3.11.2.2. ಜಾಹೀರಾತಿನ ಗರಿಷ್ಠ ಮೇಲ್ಮೈ ವಿಸ್ತೀರ್ಣವು, ಒಟ್ಟು ಗೋಡೆಯ ಅಥವಾ ಕಟ್ಟಡದ ಲಂಬ ವಿಸ್ತೀರ್ಣದ ಶೇ 50ರಷ್ಟು ಇರತಕ್ಕದ್ದು;

3.11.2.3. ಜಾಹೀರಾತುಗಳ ನಡುವಿನ ಅಂತರವು,ಜಾಹೀರಾತು ಫಲಕದ ಕನಿಷ್ಠ ಅಗಲದಷ್ಟಿರತಕ್ಕದ್ದು;

3.11.2.4. ಜಾಹೀರಾತು ಫಲಕವು ನೆಲಮಟ್ಟಕ್ಕಿಂತ ಕನಿಷ್ಠ 30 ಸೆಂ.ಮೀ ಮತ್ತು ಸೀಲಿಂಗ್‌ನ ಎತ್ತರದಿಂದ 30 ಸೆಂ.ಮೀ. ಮೇಲೆ ಇರತಕ್ಕದ್ದು ಮತ್ತು


3.11.2.5. ಜಾಹೀರಾತು ಫಲಕವನ್ನು, ಹಿಂದಿನ ಭಾಗದಿಂದ ಎಲ್‌ಇಡಿ ಮೂಲಕ ಪ್ರಕಾಶಿಸಬಹುದು.

3.11.3. ಇ–ಶೌಚಾಲಯಗಳು.–

3.11.3.1. ಪ್ರಾಯೋಜಿತ ಜಾಹೀರಾತನ್ನು ಇ–ಶೌಚಾಲಯದ ಮೇಲ್ಮೈಯ ಗರಿಷ್ಠ ಶೇಕಡಾ 25 ರಷ್ಟು ವ್ಯಾಪ್ತಿಯನ್ನು ಮೀರದಂತೆ, ಇ–ಶೌಚಾಲಯಗಳಲ್ಲಿ ಹಾಕಲು ಅನುಮತಿಸತಕ್ಕದ್ದು.

3.11.4. ಸಾರ್ವಜನಿಕ ಉದ್ಯಾನವನಗಳು, ಮನರಂಜನಾ ಮೈದಾನದ ಜಾಹೀರಾತು ಫಲಕ, ಬೀದಿ ಬದಿಯ ಪೀಠೋಪಕರಣಗಳು, ಸಾರ್ವಜನಿಕ ಕಲೆ, ಕ್ರೀಡಾಂಗಣಗಳು ಮತ್ತು ಕ್ರೀಡಾ ರಂಗಗಳು.–

3.11.4.1. ಪ್ರಾಯೋಜಕತ್ವದ ಫಲಕವನ್ನು ಪ್ರತಿಯೊಂದು ಬಳಕೆಗೆ ಅನುಮತಿಸತಕ್ಕದ್ದು ಮತ್ತು ಪರಿಸರವನ್ನು ವರ್ಧಿಸುವ ವಿನ್ಯಾಸ ಮತ್ತು ಸಂದೇಶವನ್ನು ಖಚಿತಪಡಿಸಿಕೊಳ್ಳಲು ಆಯುಕ್ತರು ಅಥವಾ ಅವರಿಂದ ನಿಯೋಜಿತರಾದ ಪ್ರಾಧಿಕಾರಿಯು ಇವುಗಳನ್ನು ಖುದ್ದಾಗಿ ಪರಿಶೀಲಿಸತಕ್ಕದ್ದು.



4. ವಿನ್ಯಾಸ ಮತ್ತು ನಿರ್ಮಾಣ ಮಾನದಂಡಗಳು.–

4.1 ಎಲ್ಲಾ ಜಾಹೀರಾತು ಫಲಕಗಳನ್ನು ಕಟ್ಟಡ ಮತ್ತು ಅಗ್ನಿಶಾಮಕ ಸಂಹಿತೆಗಳಿಗೆ ಅನುಗುಣವಾಗಿ ವಿನ್ಯಾಸಗೊಳಿಸತಕ್ಕದ್ದು ಮತ್ತು ನಿರ್ಮಿಸತಕ್ಕದ್ದು.

4.2 ಎಲ್ಲಾ ಜಾಹೀರಾತು ಫಲಕಗಳನ್ನು, ಕಟ್ಟಡದ ಮುಂಭಾಗಕ್ಕೆ ಗಣನೀಯ ರೀತಿಯ ಹಾನಿಯಾಗದಂತೆ ತೆಗೆಯಬಹುದಾದ ರೀತಿಯಲ್ಲಿ ಕಲ್ಲಿನ ಕಟ್ಟಡಗಳಿಗೆ ಅಂಟಿಸತಕ್ಕದ್ದು. ಗಾರೆಯ ಸಂದು ಆಗಿರುವಲ್ಲಿ ಅದಕ್ಕೆ ಜೋಡಣೆಯನ್ನು ಮಾಡತಕ್ಕದ್ದು. ಕಲ್ಲಿನ ಘಟಕಗಳ ಮೇಲ್ಮೈಯಲ್ಲಿ ಆ ರೀತಿ ಮಾಡುವಂತಿಲ್ಲ.

4.3 ಜಾಹೀರಾತು ಫಲಕದ ಯಾವುದೇ ಭಾಗವನ್ನು ರೂಪಿಸುವ ಗಾಜು, ಸುರಕ್ಷತಾ ಗಾಜು ಆಗಿರತಕ್ಕದ್ದು.

4.4 ಕಟ್ಟಡಕ್ಕೆ ಜೋಡಿಸಲಾದ ಎಲ್ಲಾ ಜಾಹೀರಾತು ಫಲಕಗಳನ್ನು ಗೋಡೆಗೆ ನೀರು ಒಳಗೆ ಹೋಗದಂತೆ ಸ್ಥಾಪಿಸಬೇಕು ಮತ್ತು ನಿರ್ವಹಿಸಬೇಕು ಮತ್ತು ಜಾಹಿರಾತು ರಚನೆಯು,ಪೂರಕ ವಸ್ತುಗಳ ಅನುಮತಿಸಬಹುದಾದ ಒತ್ತಡಗಳನ್ನು ಮೀರುವಂತಿರಬಾರದು.

4.5 ಆಧಾರ ನೀಡುವ ಕಟ್ಟುಪಟ್ಟಿಗಳನ್ನು ಜಾಹೀರಾತು ಫಲಕದ ಒಟ್ಟಾರೆ ವಿನ್ಯಾಸದ ಅವಿಭಾಜ್ಯ ಅಂಗವಾಗಿ ವಿನ್ಯಾಸಗೊಳಿಸತಕ್ಕದ್ದು ಮತ್ತು ತಾಂತ್ರಿಕವಾಗಿ ಕಾರ್ಯಸಾಧ್ಯವಾಗುವಷ್ಟರ ಮಟ್ಟಿಗೆ ಸಾರ್ವಜನಿಕ ದೃಷ್ಟಿಯಿಂದ ಮರೆಮಾಡತಕ್ಕದ್ದು.

4.6 ಯಾವುದೇ ಜಾಹೀರಾತು ಫಲಕದ ಮೇಲೆ ಧ್ವನಿವರ್ಧಕ ಘಟಕಗಳನ್ನು ನಿಷೇಧಿಸತಕ್ಕದ್ದು.

4.7 ಯಾವುದೇ ಫಲಕದ ಮೇಲೆ ನಿರ್ವಹಿಸಲ್ಪಡುವ, ಲಗತ್ತಿಸಿದ ಅಥವಾ ಅದರ ಮೇಲೆ ಇರಿಸಲಾದ ಕಟ್–ಔಟ್‌ನಲ್ಲಿ ಅಥವಾ ಯಾವುದೇ ಅನಿಯಮಿತ ರೂಪದಲ್ಲಿ ಇರಿಸಿದ ಎಲ್ಲಾ ಅಕ್ಷರಗಳನ್ನು, ಚಿತ್ರಗಳನ್ನು, ಅಕ್ಷರ ಸಂಕೇತಗಳನ್ನು ಅಥವಾ ಅವುಗಳನ್ನು ಪ್ರತಿನಿಧಿಸುವ ವಸ್ತುಗಳನ್ನು, ಫಲಕದ ರಚನೆಯ ಒಳಗೆ ಸುರಕ್ಷಿತವಾಗಿ ಮತ್ತು ಭದ್ರವಾಗಿ ನಿರ್ಮಿಸತಕ್ಕದ್ದು ಅಥವಾ ಜೋಡಿಸಿರತಕ್ಕದ್ದು.

4.8 ಯಾವುದೇ ಜಾಹೀರಾತು ಫಲಕವನ್ನು ಬೆಳಗಿಸಲು, ಅತ್ತಿತ್ತ ಸರಿಸುವಂತೆ ಮಾಡಲು ಅಥವಾ ಮೂಡಿಸುವಂತೆ ಮಾಡಲು ಬಳಸುವ ಎಲ್ಲಾ ವಿದ್ಯುತ್ ಸ್ಥಾಪನೆಗಳನ್ನು, ಸಾಧನಗಳನ್ನು, ಸರ್ಕ್ಯೂಟ್‌ಗಳನ್ನು, ಕೊಳವೆಗಳನ್ನು, ರೇಸ್‌ವೇಗಳನ್ನು ಅಥವಾ ಉಪಕರಣಗಳನ್ನು ಕಟ್ಟಡ ಸಂಹಿತೆಯ ಮತ್ತು ವಿದ್ಯುತ್ ಸಂಹಿತೆಯ ಅನುಸಾರವಾಗಿ ಸ್ಥಾಪಿಸತಕ್ಕದ್ದು ಮತ್ತು ನಿರ್ವಹಿಸತಕ್ಕದ್ದು. ವಿದ್ಯುತ್ ಘಟಕವನ್ನು ಹೊಂದಿರುವ ಫಲಕಗಳಿಗೆ ವಿದ್ಯುತ್ ಪರವಾನಗಿಯು ಅತ್ಯಗತ್ಯವಾಗಿರತಕ್ಕದ್ದು.

4.9 ಜಾಹೀರಾತು ಫಲಕ ಬೆಳಗುವ ವ್ಯವಸ್ಥೆಯ ಕೊಳವೆಗಳನ್ನು ಮತ್ತು ಇತರ ಘಟಕಗಳನ್ನು ಅದರ ಒಟ್ಟಾರೆ ರಚನೆಯ ಅವಿಭಾಜ್ಯ ಅಂಗವಾಗಿ ವಿನ್ಯಾಸಗೊಳಿಸತಕ್ಕದ್ದು ಮತ್ತು ತಾಂತ್ರಿಕವಾಗಿ ಕಾರ್ಯಸಾಧ್ಯವಾಗುವಷ್ಟರ ಮಟ್ಟಿಗೆ ಸಾರ್ವಜನಿಕರ ದೃಷ್ಟಿಯಿಂದ ಮರೆಮಾಡಿರತಕ್ಕದ್ದು.

5 ಚಾಲ್ತಿಯಲ್ಲಿರುವ ಪ್ರದರ್ಶನ ಫಲಕದಪರಿಗಣನಾರ್ಹ ಅಂಶಗಳು.–

5.1. ಯಾವುದೇ ನಿಯಮಾನುಸಾರವಲ್ಲದ, ರಸ್ತೆಯ ಅಥವಾ ಸ್ವಯಂ–ಜಾಹೀರಾತು ಅಥವಾ ಜಾಹೀರಾತು ರಚನೆಯನ್ನು ಮಾರ್ಪಾಡು ಮಾಡಿದರೆ, ಪುನರ್ ನಿರ್ಮಿಸಿದರೆ, ಬದಲಾಯಿಸಿದರೆ, ವಿಸ್ತರಿಸಿದರೆ ಅಥವಾ ಸ್ಥಳಾಂತರಿಸಿದರೆ, ಅವುಗಳನ್ನು ಈ ಉಪವಿಧಿಗಳಿಗೆ ಅನುಗುಣವಾಗಿ ಇರುವಂತೆ ಮಾಡತಕ್ಕದ್ದು. ಕೇವಲ ವಿಷಯವನ್ನು ಬದಲಾವಣೆ ಮಾಡಿದಲ್ಲಿ, ಅದನ್ನು ಈ ಉಪ–ಪ್ರಕರಣದ ಉದ್ದೇಶಗಳಿಗಾಗಿ ಮಾಡಿದ ಮಾರ್ಪಾಡು ಅಥವಾ ಬದಲಿ ಎಂದು ಪರಿಗಣಿಸಲಾಗುವುದಿಲ್ಲ. ಯಾವುದೇ ಮಾರ್ಪಾಡುಗಳಿಗೆ ಸಂಬಂಧಿಸಿದ ವೆಚ್ಚಗಳನ್ನು, ಜಾಹಿರಾತು ಪ್ರದರ್ಶಿಸುವ ಏಜೆನ್ಸಿಯೇ ಭರಿಸತಕ್ಕದ್ದು.

5.2. ಈ ಉಪವಿಧಿಗಳು ಜಾರಿಗೆ ಬಂದ ದಿನಾಂಕದಿಂದ ಆರು ತಿಂಗಳುಗಳ ಒಳಗಾಗಿ, ಯಾವುದೇ ಮಾರ್ಪಾಡು, ಮರು–ನಿರ್ಮಾಣ, ಬದಲಿ ಇತ್ಯಾದಿಗಳನ್ನು ಮಾಡತಕ್ಕದ್ದು, ಹಾಗೆ ಮಾಡಲು ವಿಫಲವಾದರೆ ದಂಡ ವಿಧಿಸತಕ್ಕದ್ದು.

5.3. ಚಾಲ್ತಿಯಲ್ಲಿರುವ ಸ್ವಯಂ–ಜಾಹೀರಾತು, ಅದರ ಮಟ್ಟಸ, ಎತ್ತರ ಮತ್ತು ಗಾತ್ರದಲ್ಲಿ, ಈ ಉಪವಿಧಿಗಳ ಅಗತ್ಯತೆಗಳನ್ನು ಮೀರಿದ್ದು, ಅದು ಶೇ 10ಕ್ಕಿಂತ ಹೆಚ್ಚಾಗಿರದಿದ್ದರೆ, ಅದನ್ನು ಕಾನೂನಿನ ಪ್ರಕಾರ ಸರಿಯಾಗಿದೆಯೆಂದು ಭಾವಿಸತಕ್ಕದ್ದು. ಚಾಲ್ತಿಯಲ್ಲಿರುವ ಸ್ವಯಂ–ಜಾಹೀರಾತಿಗೆ ನೆರೆಹೊರೆಯ ಜಾಹೀರಾತು ಫಲಕದಿಂದ ಇರುವ ಅಂತರಗಳಲ್ಲಿನ ವ್ಯತ್ಯಾಸ, ಬರಹಗಳ ಎತ್ತರ ಮತ್ತು ಬರಹದ ವಿಧಗಳಲ್ಲಿನ ವ್ಯತ್ಯಾಸವನ್ನು ಪರಭಾರೆ ಮಾಡಲಾಗದ ನಿರ್ದಿಷ್ಟ ಸಮಯದ ಅವಧಿಯವರೆಗೆ ನಿಯಮಾನುಸಾರವಾಗಿದೆಯೆಂದು ಪರಿಗಣಿಸತಕ್ಕದ್ದು. ಜಾಹೀರಾತು ಫಲಕವನ್ನು ಅಥವಾ ಗ್ರಾಫಿಕ್ ವರ್ಣಚಿತ್ರವನ್ನು ಬದಲಾವಣೆ ಮಾಡಿದರೆ, ಅದು ಈ ಉಪವಿಧಿಗಳ ಅಡಿಯಲ್ಲಿನ ಎಲ್ಲಾ ಅಗತ್ಯತೆಗಳಿಗೆ ಅನುಗುಣವಾಗಿರತಕ್ಕದ್ದು.

5.4. ಬಿಬಿಎಂಪಿ ಯು ಕಾನೂನು ಅನುಸರಣೆಯ ಪ್ರಮಾಣಪತ್ರವನ್ನು ಒದಗಿಸತಕ್ಕದ್ದು ಮತ್ತು ಅದನ್ನು ಹೊರಾಂಗಣ ಸಂಕೇತಗಳ ರಿಜಿಸ್ಟರ್‌ನಲ್ಲಿ ಸೇರಿಸತಕ್ಕದ್ದು, ಅದರಲ್ಲಿ ಈ ಉಪವಿಧಿಗಳ ಅಡಿಯಲ್ಲಿ ರಕ್ಷಣೆಗಳು ಮತ್ತು ಹೊಣೆಗಾರಿಕೆಗಳಿಗೆ ಬದ್ಧವಾಗಿರುವುದನ್ನು ಒಳಗೊಂಡಿರತಕ್ಕದ್ದು.

5.5. ಸದ್ಭಾವನೆಯಿಂದ ಹಣ ಪಾವತಿಸಿದ ಪ್ರಾಯೋಜಿತ ಸಾರ್ವಜನಿಕ ಮೂಲಸೌಕರ್ಯಗಳಿಗೆ ಸಂಬಂಧಿಸಿದ ಮೇಲಿನ ಜಾಹೀರಾತು ಹಕ್ಕುಗಳನ್ನು, ಕಾನೂನಿಗೆ ಅನುಸಾರವಾಗಿರುವಂತೆ ಪರ್ಯಾಯವಾಗಿ ಅನ್ವಯಮಾಡಿಕೊಳ್ಳತಕ್ಕದ್ದು. ಆದಾಗ್ಯೂ, ಆಯುಕ್ತರ ಅಥವಾ ಅವರ ನಿಯೋಜಿತ ಪ್ರಾಧಿಕಾರಿಯ ವಿವೇಚನೆಯಂತೆ, ಚಾಲ್ತಿಯಲ್ಲಿರುವ ಹಕ್ಕುಗಳು ಮುಂದುವರಿಯತಕ್ಕದ್ದು.

6. ಪ್ರಕಾಶಮಾನವಾದ ಮತ್ತು ಚಾಲಕ ಶಕ್ತಿಯ (ಡೈನಮಿಕ್) ಬೆಳಕಿನ ಪ್ರದರ್ಶಕಗಳು.–

6.1. ವಿವರಣೆ: ಬೆಳಕಿನ ಮೂಲವು ಆಂತರಿಕವಾದುದು, ಬಾಹ್ಯವಾದುದು ಅಥವಾ ಪರೋಕ್ಷವಾದುದಾಗಿರಬಹುದು. ಆಂತರಿಕ ಬೆಳಗುವಿಕೆ ಎಂದರೆ, ಅರೆಪಾರದರ್ಶಕ ಮೇಲ್ಮೈ ಮೂಲಕ ಬೆಳಕನ್ನು ಹೊರಸೂಸುವ ಮೂಲಕ ರಾತ್ರಿಯಲ್ಲಿ ಗ್ರಾಫಿಕ್ ಗೋಚರಿಸುವಂತೆ ಮಾಡುವಂತಾಗಿದ್ದು, ಅದು ಗ್ರಾಫಿಕ್‌ನಲ್ಲಿ ಮರೆಮಾಡಿದಂತೆಅದರಲ್ಲಿ ಒಳಗೊಂಡಿರುವಂತೆ ಇರುವ ಬೆಳಕಿನ ಮೂಲ. ಬಾಹ್ಯ ಬೆಳಗುವಿಕೆ ಎಂದರೆ, ಗ್ರಾಫಿಕ್‌ನ ಹೊರಗಿನ ಬೆಳಕಿನ ಮೂಲದಿಂದ ಪ್ರಕಾಶಮಾನವಾಗಿಸುವುದು.

6.2. ಬೆಳಕಿನ ಯೋಜನೆಯ ಅಗತ್ಯತೆಗಳು.–ಹೊರಾಂಗಣ ಜಾಹೀರಾತು ಫಲಕ ಮತ್ತು ಸಾರ್ವಜನಿಕ ಸಂದೇಶ ನೀಡುವುದಕ್ಕಾಗಿ ಬೆಳಕಿನ ಯೋಜನೆಯ ಅಗತ್ಯತೆಗಳು ಈ ಕೆಳಗಿನಂತಿರುತ್ತವೆ,–

6.2.1. ಸಂಕೇತ ರೂಪದ (ಸ್ಕೀಮ್ಯಾಟಿಕ್) ವೈರಿಂಗ್ ಲೇಔಟ್ ಮತ್ತು ವಿದ್ಯುತ್ ಮೂಲದ ಸಂಪರ್ಕದೊಂದಿಗೆ, ಲೈಟ್ ಕಂಬವಿರುವ ಸ್ಥಳಗಳನ್ನು, ಕಟ್ಟಡಕ್ಕೆ ಅಳವಡಿಸಲಾದ ದೀಪಗಳನ್ನು, ಮಧ್ಯಕಂಬದ (ಬೊಲ್ಲಾರ್ಡ್) ದೀಪಗಳನ್ನು ಮತ್ತು ಎಲ್ಲಾ ಇತರ ಬೆಳಗುವಿಕೆಯನ್ನು ತೋರಿಸುವ ಒಂದು ಯೋಜನೆ;

6.2.2. ಉದ್ದೇಶಿತ ಬೆಳಕಿನ ನೆಲೆವಸ್ತುಗಳ (Fixtures) ಛಾಯಾಚಿತ್ರಗಳು ಅಥವಾ ರೇಖಾಚಿತ್ರಗಳನ್ನು ಒಳಗೊಂಡಂತೆ, ಸ್ವಾಭಾವಿಕವಾಗಿ ಬೆಳಕು ಕೊಡುವ ವಸ್ತು(ಲುಮಿನೈರ್)ಗಳಿಗೆ ಮತ್ತು ದೀಪದ ಪ್ರಕಾರಗಳಿಗೆ, ಕಂಬಗಳಿಗೆ, ವೈರಿಂಗ್‌ಗೆ, ವಿದ್ಯುತ್ ವಾಹಕ ಕೊಳವೆಗಳಿಗೆ ಮತ್ತು ಉಪಸಲಕರಣೆಗಳ ನಿರ್ಮಾಣದ ಬಗ್ಗೆ ನಿರ್ದಿಷ್ಟ ವಿವರಣೆಗಳು;

6.2.3. ಎಲ್ಲಾ ಸ್ವತ್ತು ಲೈನ್ (property lines) ಗಳಲ್ಲಿ ಫೂಟ್–ಕ್ಯಾಂಡಲ್ ಅಳತೆಯನ್ನು ತೋರಿಸುವ ದ್ಯುತಿ ಮಾಪನದ (ಫೋಟೊಮೆಟ್ರಿಕ್) ಯೋಜನೆಗಳು;

6.2.4. ಕಂಬದ ಎತ್ತರ, ಕಟ್ಟಡಕ್ಕೆ ಲಗತ್ತಾಗಿಸಿದ ದೀಪಗಳ ಎತ್ತರ, ವಸ್ತುವನ್ನು ಎತ್ತರದ ಜಾಗದ ಮೇಲೆ ಇರಿಸುವ (ಮೌಂಟ್ ಮಾಡಬೇಕಾದ) ಎತ್ತರ ಮತ್ತು ಪ್ರಕಾಶಮಾನದ (ಲುಮಿನೇರ್‌ನ) ಎತ್ತರವೂ ಸೇರಿದಂತೆ ಕಂಬದ, ಪ್ರಕಾಶಿಸುವುದರ (ಲುಮಿನೇರ್) ಮತ್ತು ಅಡಿಪಾಯದ ವಿವರಗಳು;

6.2.5. ಅಗತ್ಯವಾದ ಬೆಳಕಿನ ಯೋಜನೆಯನ್ನು ನಿರ್ಧರಿಸಲುಯುಕ್ತವಾಗಿ ಅಗತ್ಯವಿರುವ ಇತರ ಮಾಹಿತಿ ಮತ್ತು ದತ್ತಾಂಶ; ಮತ್ತು

6.2.6. ಎಲ್ಲಾ ಲುಮಿನೈರ್‌ಗಳ ಒಟ್ಟು ಕಟ್–ಆಫ್ ಕೋನವನ್ನು ಮತ್ತು ಅವುಗಳಿಗೆ ಒರಗಿಕೊಂಡಿರುವ ಪಾರ್ಸೆಲ್‌ಗಳ ಜೊತೆಗಿನ ಸಂಬಂಧವನ್ನು ನಿರ್ಧರಿಸಲು ಸಾಕಾಗುವ ಎಲ್ಲಾ ರಚನೆಗಳು ಮತ್ತು ಲುಮಿನೈರ್‌ಗಳನ್ನು ಒಳಗೊಂಡಂತೆ ಸ್ಥಳದ ಆಕೃತಿಯ ನಕ್ಷೆ (ಎಲಿವೇಶನ್‌ಗಳು).

6.3. ಗರಿಷ್ಠ ಬೆಳಕಿನ ವಿನಿಯಮಗಳು.–

6.3.1. ಯಾವುದೇ ಸ್ವತ್ತಿನ ಲೇನ್ (property lines)ನ ಅನುಮತಿಸುವ ಗರಿಷ್ಠ ಬೆಳಕಿನ ಮಟ್ಟವು ಒಂದು ಫುಟ್–ಕ್ಯಾಂಡಲ್‌ನಷ್ಟು ಇರತಕ್ಕದ್ದು.

6.3.2. ಪಕ್ಕಕ್ಕೆ ಹೊಂದಿಕೊಂಡಂತಿರುವ ಸ್ವತ್ತುಗಳ ಮೇಲೆ ಯಾವುದೇ ಪ್ರಜ್ವಲಿಸುವಿಕೆಗೆ ಅನುಮತಿಸತಕ್ಕದ್ದಲ್ಲ.

6.4 ಲುಮಿನೈರ್ ಮಾನದಂಡಗಳು.–

6.4.1. ಎಲ್ಲ ಲುಮಿನೈರ್‌ಗಳನ್ನು ಕಟ್–ಆಫ್ ಲುಮಿನೈರ್‌ಗಳಾಗಿ ವಿನ್ಯಾಸಗೊಳಿಸತಕ್ಕದ್ದು. ಕಟ್–ಆಫ್ ಲುಮಿನೈರ್‌ಗಳು ಎಂದರೆ 75 ಡಿಗ್ರಿ ಅಥವಾ ಅದಕ್ಕಿಂತ ಕಡಿಮೆ ಕಟ್–ಆಫ್ ಕೋನವನ್ನು ಹೊಂದಿರುವಂತಹವು. ಕಟ್–ಆಫ್ ಲುಮಿನೈರ್‌ಗಳು ಈ ಮುಂದಿನ ಮಾನದಂಡಗಳಿಗೆ ಒಳಪಟ್ಟಿರುತ್ತವೆ.

6.4.2. ಯಾವುದೇ ಆಧಾರವಿಲ್ಲದೆ ಮುಕ್ತವಾಗಿ ನಿಲ್ಲಿಸುವ ಅಥವಾ ಒಂದು ಸಂರಚನೆಗೆ ಅಳವಡಿಸುವ, ಒಂದು ಕಟ್–ಆಫ್ ಲುಮಿನೇರ್‌ನ ಗರಿಷ್ಠ ಒಟ್ಟು ಎತ್ತರ, 7.5 ಮೀಟರ್ ಆಗಿರಬೇಕು. ಒಟ್ಟು ಎತ್ತರದಲ್ಲಿ 7.5 ಮೀಟರ್‌ಗಿಂತ ಹೆಚ್ಚಿರುವ ಯಾವುದೇ ಲುಮಿನೈರ್‌ಗೆ ವಿಶೇಷ ಬಳಕೆಯ ಅನುಮೋದನೆಯು ಅಗತ್ಯವಾಗಿದೆ.

6.4.3. ಕಟ್–ಆಫ್ ಲುಮಿನೇರ್‌ಅನ್ನು ವೀಕ್ಷಕರಿಂದ ಬೆಳಕಿನ ಮೂಲವನ್ನು ಸಂಪೂರ್ಣವಾಗಿ ಮರೆಮಾಡುವಂತೆ ವಿನ್ಯಾಸಗೊಳಿಸಿದ್ದು, ಅದು ಯಾವುದೇ ಹಂತದಲ್ಲೂ ಹೊಂದಿಕೊಂಡಿರುವ ಸ್ವತ್ತಿನ ಎಲ್ಲೆಗೆರೆ ಉದ್ದಕ್ಕೂ ನೆಲಮಟ್ಟದಿಂದ ಮೂರೂವರೆ ಅಡಿ ಎತ್ತರದಲ್ಲಿರಬೇಕು. 6.4.4. ಎಲೆಕ್ಟ್ರಾನಿಕ್ ಸಂದೇಶ ಫಲಕಗಳಿಗಾಗಿ, ಗರಿಷ್ಠ ಹೊಳಪನ್ನು ಹಗಲು ಹೊತ್ತಿನಲ್ಲಿ 5,000 ಯುನಿಟ್‌ಗಳಿಗೆ ಮತ್ತು ಮುಸ್ಸಂಜೆಯಿಂದ ಮುಂಜಾನೆಯ ನಡುವೆ 500 ಯೂನಿಟ್‌ಗಳಿಗೆ ಸೀಮಿತಗೊಳಿಸಲಾಗಿದೆ. ಜಾಹೀರಾತು ಫಲಕವು ಸ್ವಯಂಚಾಲಿತ ಮಬ್ಬು ನಿಯಂತ್ರಣ ವ್ಯವಸ್ಥೆಯನ್ನು ಹೊಂದಿದ್ದು, ಸೂರ್ಯಾಸ್ತದ ಒಂದೂವರೆ ಗಂಟೆಗಳ ಮೊದಲು ಮತ್ತು ಸೂರ್ಯೋದಯದ ಒಂದೂವರೆ ಗಂಟೆಗಳ ನಂತರದ ನಡುವಿನ ಅವಧಿಗೆ ಅನುಮತಿಸಲಾದ ಗರಿಷ್ಠ ಪ್ರಕಾಶಮಾನ ಮಟ್ಟದಿಂದ ಕೆಳಮಟ್ಟದ ಹಂತಕ್ಕೆ, ಎದ್ದು ಕಾಣುವಂತೆ ಪ್ರಕಾಶದಲ್ಲಿ ಬದಲಾವಣೆಯನ್ನು ಉಂಟುಮಾಡುವಂತಿರಬೇಕು.

6.5. ಪ್ರಕಾಶಮಾನತೆಯ(ಇಲ್ಯುಮಿನೇಶನ್) ಮಾನದಂಡಗಳು.–

6.5.1. ಒಳಬದಿಯಿಂದ ಪ್ರಕಾಶಿಸುವ ಜಾಹೀರಾತು ಫಲಕಗಳ ಮೇಲ್ಮೈ ಭಾಗವು ಪ್ರಕಾಶವನ್ನು ಚದುರಿಸುವ ಸೋಸುಕದಂತೆ ಕಾರ್ಯನಿರ್ವಹಿಸುತ್ತದೆ. ಜಾಹೀರಾತು ಫಲಕಗಳ ಮೇಲ್ಮೈ ಭಾಗವು ಪ್ರಕಾಶವನ್ನು ಹೊರಹೊಮ್ಮಿಸುವ ಎಲ್ಲ ಆಂತರಿಕ ಸಾಧನಗಳನ್ನು ಮರೆಮಾಡುವುದರಿಂದ ಹೊರಗೆ ಯಾವುದೇ ಬಲ್ಬ್‌ಗಳು ಅಥವಾ ಬೆಳಕಿನ ಘಟಕಗಳು ಗೋಚರಿಸುವುದಿಲ್ಲ.

6.5.2. ಹೆಬ್ಬಾತು–ಕುತ್ತಿಗೆಯಂತಹ (ಗೂಸ್–ನೆಕ್) ಪ್ರತಿಫಲಕಗಳು, ಬಾಹ್ಯ ಪ್ರಕಾಶಮಾನತೆ ಮತ್ತು ಆಂತರಿಕ ಪ್ರಕಾಶಮಾನತೆಯೂ ಸೇರಿದಂತೆ ಯಾವುದೇ ಜಾಹೀರಾತು ಫಲಕದ ಪ್ರಕಾಶಮಾನ ವ್ಯವಸ್ಥೆಯನ್ನು, ರಸ್ತೆಯ ಸುತ್ತಮುತ್ತಲಿನ ಸ್ವತ್ತುಗಳ ಮೇಲೆ ಪ್ರಜ್ವಲಿಸುವ ಅಥವಾ ಅವುಗಳ ಮೇಲೆ ನೇರ ಬೆಳಕು ಬೀರುವುದನ್ನು ತಡೆಯುವ ಮತ್ತು ಸಾರ್ವಜನಿಕ ಹಾದಿಯಲ್ಲಿ ಚಲಿಸುವ ಮೋಟಾರು ವಾಹನ ಚಾಲಕರು ಅಥವಾ ಪಾದಚಾರಿಗಳನ್ನು ವಿಚಲಿತರನ್ನಾಗಿಸದಂಥ ರೀತಿಯಲ್ಲಿ ವಿನ್ಯಾಸಗೊಳಿಸಬೇಕು, ಸ್ಥಾಪಿಸಬೇಕು, ರಕ್ಷಿಸಬೇಕು.

6.5.3. ಜಾಹೀರಾತು ಫಲಕದ ಎಲ್ಲ ಬಾಹ್ಯ ಪ್ರಕಾಶಮಾನತೆಯು ಚಿಹ್ನೆಯ ಮೇಲ್ಮೈಭಾಗದ ಮುದ್ರಿತ ಪ್ರದೇಶದ ಮೇಲೆ ಪ್ರಕಾಶವನ್ನು ಕೇಂದ್ರೀಕರಿಸುವಂತಿರಬೇಕು.

6.5.4. ಜಾಹೀರಾತು ಫಲಕದ ಮೇಲೆ ಪ್ರಕಾಶಮಾನತೆಯ ಪ್ರಜ್ವಲಿಸುವಿಕೆಯನ್ನು ಹೆಚ್ಚಿಸುವ ಕನ್ನಡಿಗಳು, ಹೊಳಪುಳ್ಳ ಲೋಹ ಅಥವಾ ಅತಿಹೆಚ್ಚು ನುಣುಪಾದ ಟೈಲ್ಸ್‌ನಂಥ ಪ್ರತಿಫಲಿತ ವಸ್ತುಗಳೊಂದಿಗೆ ಸಂಯೋಜಿಸಬಾರದು.

6.5.5. ಜಾಹೀರಾತು ಫಲಕದ ಅವಿಭಾಜ್ಯ ಅಂಗವಾಗಿ ವಿನ್ಯಾಸಗೊಳಿಸಲಾದ ನಿಯಾನ್, ಎಲ್‌ಇಡಿ ಲೈಟಿಂಗ್ ಅಥವಾ ಹೊರಕಾಣುವ ಬಲ್ಬ್‌ಗಳ ಬಳಕೆಯನ್ನು ಜಾಹೀರಾತು ವಿಷಯ ಅಥವಾ ಜಾಹೀರಾತು ಫಲಕದ ವಿನ್ಯಾಸ (ಅಸ್ಸೆಂಟ್)ದ ರೂಪದಲ್ಲಿ ವಸತಿ ರಹಿತ ಭೂ ಬಳಕೆಯಲ್ಲಿ ಮಾತ್ರ ಅನುಮತಿಸಲಾಗಿದೆ. ಬೆಳಕನ್ನು ಹಾಯಿಸಿದಾಗ ನಿರಂತರವಾಗಿ ಬೆಳಗುವಂತಿರಬೇಕು. ಮಿನುಗುವ (ಫ್ಲಾ ್ಯಶಿಂಗ್) ನಿಯಾನ್, ಮಿನುಗುವ ಎಲ್‌ಇಡಿ ಲೈಟಿಂಗ್ ಅಥವಾ ಮಿನುಗುವಿಕೆಯನ್ನು

ಹೊರಗಾಣಿಸುವ ಬಲ್ಬ್‌ಗಳನ್ನು ನಿಷೇಧಿಸಲಾಗಿದೆ. ಬಾಗಿಲುಗಳು ಮತ್ತು ಕಿಟಕಿಗಳ ಅಂಚುಗಳಿಗೆ ನಿಯಾನ್, ಎಲ್‌ಇಡಿ ಲೈಟಿಂಗ್ ಅಥವಾ ಹೊರಕಾಣುವ ಬಲ್ಬ್‌ಗಳನ್ನು ನಿಷೇಧಿಸಲಾಗಿದೆ.

6.5.6. ವಾಣಿಜ್ಯ ಭೂಮಿಯಲ್ಲಿನ ಬಳಕೆಯಲ್ಲಿ, ಜಾಹೀರಾತು ಫಲಕವು ಬಾಹ್ಯವಾಗಿ ಪ್ರಕಾಶಿಸುವಂತಿರಬಹುದು ಮತ್ತು ಆಂತರಿಕವಾಗಿ ಪ್ರಕಾಶಿಸುವಂತಿರುವ ಜಾಹೀರಾತು ಫಲಕಗಳು ಈ ಮುಂದಿನ ಪ್ರಕಾರಗಳಿಗೆ ಸೀಮಿತವಾಗಿರುತ್ತವೆ, ಅವುಗಳೆಂದರೆ:–

1. ರಿವರ್ಸ್ ಚಾನಲ್: ಅಕ್ಷರಗಳು ಅಥವಾ ಲಾಂಛನ(ಲೋಗೋ)ವನ್ನು ಅಳವಡಿಸಿರುವ ವಸ್ತುವಿನ ಮೇಲ್ಮೈ ಭಾಗದ ಮೇಲೆ ಅವುಗಳ ನೆರಳು ಬೀಳುವಂತೆ ಪ್ರಕಾಶಿಸುವ ವಿಧಾನ;
2. ಸ್ಟೆನ್ಸಿಲರ್ ಚಾನೆಲ್–ಕಟ್: ಅಕ್ಷರಗಳು ಅಥವಾ ಲಾಂಛನ(ಲೋಗೋ)ವನ್ನು ಮಾತ್ರ ಬೆಳಗಿಸಿಜಾಹೀರಾತು ಫಲಕದ ಉಳಿದ ಭಾಗವನ್ನು ಬೆಳಗಿಸದ ಲೈಟಿಂಗ್ ವಿಧಾನ; ಮತ್ತು
3. ಪ್ರಭಾವಳಿ(ಹಾಲೋ): ಅಕ್ಷರಗಳು ಅಥವಾ ಲಾಂಛನ(ಲೋಗೋ)ದ ಸುತ್ತ ಬೆಳಕಿನ ಒಂದು ಪ್ರಭಾವಲಯವನ್ನು ಸೃಷ್ಟಿಸಿ ಅವುಗಳನ್ನು ಅಳವಡಿಸಿರುವ ವಸ್ತುವಿನ ಮೇಲ್ಮೈ ಭಾಗವನ್ನು ಬೆಳಗಿಸದೆ ಇರುವ ಬೆಳಕಿನ ವಿಧಾನ.

6.6. ನಿಷೇಧಿತ ಬೆಳಕಿನ ವ್ಯವಸ್ಥೆ (ಲೈಟಿಂಗ್).–

6.6.1. ಪಾರಂಪರಿಕ ವೈಶಿಷ್ಟ್ಯತೆಯಿಂದ ಕೂಡಿರುವ ಸ್ಥಳಗಳಲ್ಲಿ ವರ್ಣಮಯ ಬೆಳಕಿನ ವ್ಯವಸ್ಥೆಯನ್ನು ನಿರ್ಬಂಧಿಸಲಾಗಿದೆ.

6.6.2. ಸ್ಪ್ಲೂಬ್ ದೀಪಗಳು, ಚಲಿಸುವ ಅಥವಾ ಸ್ಥಿರ ಸ್ಪಾಟ್‌ಲೈಟ್‌ಗಳು ಮತ್ತು ಫ್ಲಡ್‌ಲೈಟ್‌ಗಳನ್ನು ನಿಷೇಧಿಸಲಾಗಿದೆ.

6.6.3. ಮಧ್ಯಂತರ ಪಲ್ಸಿಂಗ್ ಬಳಕೆಯ ಮಿನುಗುವ ಗ್ರಾಫಿಕ್ಸ್ ಅನ್ನು ನಿಷೇಧಿಸಲಾಗಿದೆ.

7. ನಿಷೇಧಿತ ಜಾಹೀರಾತು ಫಲಕಗಳು.–

7.1. ಹೊರಾಂಗಣ ಜಾಹೀರಾತು ಅಥವಾ ಸಾರ್ವಜನಿಕರಿಗೆ ಸಂದೇಶ ಸಾರುವ ಜಾಹೀರಾತು ಫಲಕಗಳಿಗೆ ಅನುಮತಿ ನೀಡುವಾಗ ಈ ಮುಂದಿನ ನಿಷೇಧಗಳು ಅನ್ವಯವಾಗುತ್ತವೆ, –

7.1.1. ಆಫ್–ಪ್ರಿಮೈಸ್ ಜಾಹೀರಾತು ಫಲಕಗಳು, ಎಂದರೆ ಖಾಯಂ ಜಾಹೀರಾತು ಫಲಕಗಳು (ಹೋರ್ಡಿಂಗ್ಸ್ ಎಂದು ಕರೆಯಲಾಗುವ) ಮತ್ತು ತಾತ್ಕಾಲಿಕ ಆಫ್–ಪ್ರಿಮೈಸ್ ಜಾಹೀರಾತು ಫಲಕಗಳ ನಿಷೇಧವು ಸಾರ್ವಜನಿಕ ಸಾರಿಗೆ ನಿಲ್ದಾಣಗಳು, ಬೈಕ್– ಶೇರಿಂಗ್ ಕೇಂದ್ರಗಳು ಅಥವಾ ಕಾರ್–ಶೇರ್ ವ್ಯವಸ್ಥೆಗಳಲ್ಲಿ ಅಂಥ ಸೌಲಭ್ಯಗಳನ್ನು ಒದಗಿಸುವ ಪ್ರಾಯೋಜಕರು ನಿಲ್ಲಿಸುವಜಾಹೀರಾತು ಫಲಕಗಳನ್ನು ಒಳಗೊಂಡಿರುವುದಿಲ್ಲ. ಈ ನಿಷೇಧವು ವಾಣಿಜ್ಯೇತರ–ಸಂದೇಶ ಸಾರುವ ಜಾಹೀರಾತು ಫಲಕಗಳನ್ನು ಒಳಗೊಂಡಿರುವುದಿಲ್ಲ;

7.1.2. ಖಾಸಗಿ ವಸತಿ ಸ್ವತ್ತಿನಲ್ಲಿ ಯಾವುದೇ ಜಾಹೀರಾತನ್ನು ಹಾಕುವಂತಿಲ್ಲ;

7.1.3. ದೂರಸಂಪರ್ಕ ಗೋಪುರಗಳ ಮೇಲೆ ಹಾಕುವಜಾಹೀರಾತು ಫಲಕ;

7.1.4. ಸಾರ್ವಜನಿಕ ಹಾದಿಗೆ ಎದುರಾಗಿ ನಿಲ್ಲಿಸುವ ಎಲ್ಲ ಹೋರ್ಡಿಂಗ್‌ಗಳು;

7.1.5. ರಸ್ತೆ ಮುಂಭಾಗವನ್ನೂ ಮೀರಿ ಗೋಚರಿಸುವ ಇಳಿಜಾರು ಭೂಪ್ರದೇಶದ ಕಟ್ಟಡಗಳ ಮೇಲಿನ ಗೋಡೆ ಜಾಹೀರಾತು;

7.1.6. ಬಲೂನು ಮತ್ತು ಗಾಳಿ ಭರ್ತಿ ಅಥವಾ ಗಾಳಿಉಬ್ಬು ಜಾಹೀರಾತುಗಳು;

7.1.7. ಪರಿತ್ಯಕ್ತ ಜಾಹೀರಾತುಗಳು ಮತ್ತು ಜಾಹೀರಾತಿನ ಸಂರಚನೆಗಳು;

7.1.8. ಅನುಮತಿಸಲಾದ ವಿದ್ಯುನ್ಮಾನ ಸಂದೇಶ ಜಾಹೀರಾತು ಫಲಕಗಳನ್ನು ಹೊರತುಪಡಿಸಿ ಮಿನುಗುವ ಅಥವಾ ಅನಿಮೇಟೆಡ್ ಜಾಹೀರಾತು ಫಲಕಗಳು;

7.1.9. ಅನುಮತಿ ಇಲ್ಲದೆ ಅಳವಡಿಸುವಜಾಹೀರಾತು ಫಲಕಗಳು ಮತ್ತು ಭಿತ್ತಿಪತ್ರದ ಜಾಹೀರಾತುಗಳು;

7.1.10. ಗಾಳಿ ಅಥವಾ ಇತರ ನೈಸರ್ಗಿಕ ವಸ್ತುಗಳಿಂದಚಲನೆಗೊಳಪಡಿಸುವ ಉದ್ದೇಶದಿಂದ ಕೂಡಿರುವ ಅಥವಾ ತದನುಸಾರವಾಗಿಜಾಹೀರಾತುಗಳನ್ನು ಒಳಗೊಂಡಂತೆ, ಚಲನಶೀಲ ಜಾಹೀರಾತುಗಳು. ಗಡಿಯಾರಗಳನ್ನು ಈ ಉಪಬಂಧದಿಂದ ವಿನಾಯಿತಿ ನೀಡಲಾಗಿದೆ. ಆದಾಗ್ಯೂ ಅವುಗಳನ್ನು ಪ್ರಾಯೋಜಿತ ಮೂಲಭೂತ ಸೌಕರ್ಯಕ್ಕೆ ಪರಿಗಣಿಸತಕ್ಕದ್ದಲ್ಲ;

7.1.11. ಸಾರ್ವಜನಿಕ ದೀಪದ ಕಂಬಗಳು ಅಥವಾ ದಿಕ್ಸೂಚಿ ಸಂಕೇತ ವ್ಯವಸ್ಥೆ ಅಥವಾ ಸಂಚಾರ ವ್ಯವಸ್ಥೆಯ(ಟ್ರಾಫಿಕ್) ಕಂಬಗಳಿಗೆ ಹೊಂದಿಕೊಂಡಿರುವ ವಾಣಿಜ್ಯಜಾಹೀರಾತುಗಳು;

7.1.12. ಚಕ್ರರೂಪಿಸಂರಚನೆಯ ಮೇಲೆ ಜೋಡಿಸಲಾಗುವಜಾಹೀರಾತುಗಳು ಮತ್ತು ಸ್ಥಿರ ಸಂರಚನೆಯ ಮೇಲೆ ಜೋಡಿಸುವ, ಚಲನಶೀಲ ಸ್ವರೂಪದ ಮತ್ತು ಒಂದು ಸ್ಥಳದಲ್ಲಿ ಖಾಯಂ ಆಗಿ ಸ್ಥಾಪಿಸದ ಜಾಹೀರಾತುಗಳೂ ಸೇರಿದಂತೆ ಒಂದೆಡೆಯಿಂದ ಇನ್ನೊಂದೆಡೆ ಸಾಗಿಸಬಹುದಾದ (ಪೋರ್ಟಬಲ್) ಜಾಹೀರಾತುಗಳು;

7.1.13. ಕಟ್ಟಡ ಸಂಹಿತೆ, ಅಗ್ನಿಶಾಮಕ ಸುರಕ್ಷತಾ ಸಂಹಿತೆ ಅಥವಾ ಅನ್ವಯವಾಗುವ ಇತರ ವಿನಿಯಮಗಳ ಉಲ್ಲಂಘನೆಯಾಗಿರುವ ಸ್ಥಳದಲ್ಲಿ ಯಾವುದೇ ಜಾಹೀರಾತನ್ನು ಹಾಕತಕ್ಕದ್ದಲ್ಲ;

7.1.14. ಯಾವುದೇ ಪ್ರವೇಶ ಅಥವಾ ನಿರ್ಗಮನ ದ್ವಾರಗಳು, ಬೆಂಕಿ ಅನಾಹುತವಾದಲ್ಲಿ ಬಳಸುವ ತುರ್ತು ದಾರಿಗಳು ಅಥವಾ ಲಂಬಾಕಾರ ಕೊಳವೆಗಳ ಸಂಪರ್ಕಕ್ಕೆ ತಡೆ ಒಡ್ಡುವ ರೀತಿಯಲ್ಲಿ ಯಾವುದೇ ಜಾಹೀರಾತು ಫಲಕಗಳನ್ನು ನಿಲ್ಲಿಸತಕ್ಕದ್ದಲ್ಲ.

7.1.15. ಮಹತ್ವಪೂರ್ಣವಾದ ವಾಸ್ತುನಿರ್ಮಿತಿಗಳಿಗೆ ಅಡಚಣೆ ಅಥವಾ ಶಾಶ್ವತವಾಗಿ ಹಾನಿಯಾಗುವುದನ್ನು ತಪ್ಪಿಸುವ ಹಾಗೆ ಜಾಹೀರಾತು ಫಲಕಗಳನ್ನು ಹಾಕತಕ್ಕದ್ದು.

7.1.16. ಸರ್ಕಾರದ ಏಜೆನ್ಸಿಗಳು ಹಾಕಿರುವ ಅಥವಾ ಈ ವಿಭಾಗ ಅಥವಾ ಪ್ರಾಧಿಕಾರವು ಅಧಿಕೃತಗೊಳಿಸಿರುವ ಸ್ಥಳದಲ್ಲಿರುವಜಾಹೀರಾತು ಫಲಕಗಳನ್ನು ಹೊರತುಪಡಿಸಿ ಬೇರಾವುದೇ ಜಾಹೀರಾತು ಫಲಕಗಳನ್ನು ಸಾರ್ವಜನಿಕ ಆಸ್ತಿಯ ಮೇಲೆ ಹಾಕತಕ್ಕದ್ದಲ್ಲ.

7.1.17. ಅಕ್ರಮ ಅಥವಾ ಅವೈಜ್ಞಾನಿಕ ಸಂದೇಶವನ್ನು ಅಥವಾ ಸಾರ್ವಜನಿಕ ನೀತಿಗೆ ವಿರುದ್ಧವಾದ ಸಂದೇಶವನ್ನು ಪ್ರದರ್ಶಿಸುವ ಜಾಹೀರಾತು ಫಲಕಗಳನ್ನು ನಿಷೇಧಿಸಲಾಗಿದೆ.

7.2. ಸಂಚಾರಕ್ಕೆ ಅಡಚಣೆಯುಂಟು ಮಾಡುವಂತಹಯಾವುದೇ ಜಾಹೀರಾತು ಫಲಕಗಳನ್ನುನಿಷೇಧಿಸಲಾಗಿದೆ.–

7.2.1. ಸಂಚಾರ ಸಂಕೇತವನ್ನು ಹೋಲುವ ಕೆಂಪು, ಹಸಿರು ಅಥವಾ ಹಳದಿ ಬಣ್ಣದಲ್ಲಿ ಪ್ರಕಾಶಿಸುವ ಚಿಹ್ನೆಗಳೂ ಸೇರಿದಂತೆ ಯಾವುದೇ ಅಧಿಕೃತ ಟ್ರಾಫಿಕ್ ಚಿಹ್ನೆ, ಸಿಗ್ನಲ್ ಅಥವಾ ಸಾಧನ ಸಲಕರಣೆಯ ವಸ್ತುಸ್ಥಿತಿ, ಆಕಾರ ಅಥವಾ ಬಣ್ಣದಿಂದಾಗಿ ಅಡಚಣೆ ಉಂಟುಮಾಡುವ, ವೀಕ್ಷಣೆಗೆ ಅಡ್ಡಬರುವ ಅಥವಾ ಗೊಂದಲಮಯವಾಗಿಸುವ ಯಾವುದೇ ಚಿಹ್ನೆಯನ್ನು ನಿಷೇಧಿಸಲಾಗಿದೆ.

7.2.2. ನಿಲ್ಲಿ(STOP), ನೋಡಿ(LOOK), ಬಳಸು ಹಾದಿ(DETOUR), ಅಪಾಯ(DANGER), ಜಾಗ್ರತೆ(CAUTION), ಎಚ್ಚರಿಕೆ(WARNING), ಪದಗಳು ಅಥವಾ ಸಂಚಾರದ ಗತಿ ಬದಲಿಸುವ, ಅಡ್ಡಿಪಡಿಸುವ ಅಥವಾ ಗೊಂದಲಮಯವಾಗಿಸುವ ರೀತಿಯಲ್ಲಿರುವಂಥ ಪದ, ನುಡಿಗಟ್ಟು, ಸಂಕೇತ ಅಥವಾ ಲಿಪಿ ಇರುವ ಜಾಹೀರಾತು ಫಲಕಗಳನ್ನು ಬಳಕೆ ಮಾಡುವಂತಿಲ್ಲ.

7.3. ಪ್ರದರ್ಶನಗಳ ನಿಷೇಧ.–


7.3.1. ಈ ಉಪ–ವಿಧಿಗಳ ಉಪಬಂಧಗಳು, ಚಾಲ್ತಿಯಲ್ಲಿರುವ ಕಟ್ಟಡ ಉಪ–ವಿಧಿಗಳ ಉಪಬಂಧಗಳು, ಅಗ್ನಿಶಾಮಕ ಸುರಕ್ಷತಾ ವಿನಿಯಮಗಳು ಅಥವಾ ಅನ್ವಯವಾಗುವ ಇತರ ಯಾವುದೇ ನಿಯಮಗಳು ಮತ್ತು ವಿನಿಯಮಗಳನ್ನು ಉಲ್ಲಂಘಿಸುವ ಸ್ಥಳದಲ್ಲಿ ಯಾವುದೇ ಜಾಹೀರಾತು ಫಲಕಗಳನ್ನುನಿಲ್ಲಿಸಬಾರದು.

7.3.2. ಮಹತ್ವಪೂರ್ಣವಾದ ವಾಸ್ತುನಿರ್ಮಿತಿಗಳಿಗೆ ಅಡಚಣೆ ಅಥವಾ ಶಾಶ್ವತವಾಗಿ ಹಾನಿಯಾಗುವುದನ್ನು ತಪ್ಪಿಸುವ ಹಾಗೆ ಜಾಹೀರಾತು ಫಲಕಗಳನ್ನು ಹಾಕತಕ್ಕದ್ದು.

7.3.3. ಸ್ವತ್ತಿನ ಮಾಲೀಕರ ಪೂರ್ವಾನುಮತಿ ಇಲ್ಲದೆ ಖಾಸಗಿ ಸ್ವತ್ತಿನಲ್ಲಿ ಯಾವುದೇ ಜಾಹೀರಾತು ಫಲಕಗಳನ್ನುನಿಲ್ಲಿಸತಕ್ಕದ್ದಲ್ಲ.

7.3.4. ಸರ್ಕಾರದ ಏಜೆನ್ಸಿಗಳು ನೆಲೆಗೊಳಿಸಿರುವ ಅಥವಾ ಈ ಉಪ–ವಿಧಿಗಳು ಅಥವಾ ಬಿಬಿಎಂಪಿ ಅಧಿಕೃತಗೊಳಿಸಿದ ಜಾಹೀರಾತುಗಳನ್ನು ಹೊರತುಪಡಿಸಿ ಯಾವುದೇ ಜಾಹೀರಾತು ಫಲಕಗಳನ್ನು ಸಾರ್ವಜನಿಕ ಸ್ವತ್ತಿನಲ್ಲಿ ನಿಲ್ಲಿಸತಕ್ಕದ್ದಲ್ಲ.

7.3.5. ಯಾವುದೇ ಪ್ರವೇಶ ಅಥವಾ ನಿರ್ಗಮನ ದ್ವಾರಗಳು, ಬೆಂಕಿ ಅನಾಹುತವಾದಲ್ಲಿ ಬಳಸುವ ತುರ್ತು ದಾರಿಗಳು ಅಥವಾ ಲಂಬಾಕೃತಿಯ ಸೇವಾ ಕೊಳವೆಗಳಸಂಪರ್ಕಾವಕಾಶಕ್ಕೆ ತಡೆ ಒಡ್ಡುವ ರೀತಿಯಲ್ಲಿ ಯಾವುದೇ ಜಾಹೀರಾತು ಫಲಕಗಳನ್ನುನಿಲ್ಲಿಸತಕ್ಕದ್ದಲ್ಲ.



8. ಜಾರಿಗೊಳಿಸುವಿಕೆ.–

ಈ ಉಪ–ವಿಧಿಗಳನ್ನು ಜಾರಿಗೊಳಿಸುವುದಕ್ಕೆ ಸಂಬಂಧಪಟ್ಟಂತೆ, ಸ್ವತ್ತಿನ ಮಾಲೀಕರನ್ನು ಹೊಣೆಗಾರರನ್ನಾಗಿ ಮಾಡತಕ್ಕದ್ದು.

8.1. ಅನುಮತಿ ಇಲ್ಲದೆ ಅಥವಾ ಅಗತ್ಯ ಪರವಾನಗಿ ಪಡೆಯದೆ ಸಾರ್ವಜನಿಕ ಸ್ವತ್ತಿನಲ್ಲಿ ಅಥವಾ ಸಾರ್ವಜನಿಕ ಮಾರ್ಗದಲ್ಲಿ ಅಥವಾ ಸಾರ್ವಜನಿಕ ಅನುಭೋಗ ವ್ಯಾಪ್ತಿಯಲ್ಲಿ ಹಾಕಲಾಗಿರುವ ಯಾವುದೇ ಜಾಹೀರಾತು ಫಲಕಗಳನ್ನು ನೋಟಿಸ್ ನೀಡದೆ ತೆಗೆದುಹಾಕತಕ್ಕದ್ದು.

8.2. ಯಾವುದೇ ಅಗತ್ಯವಾದ ಪರವಾನಗಿ ಇಲ್ಲದೆ ಅಥವಾ ಈ ಉಪ–ವಿಧಿಗಳನ್ನು ಅಥವಾ ಹಿಂದಿನ ಜಾಹೀರಾತು–ವಿನಿಯಮಗಳನ್ನು ಉಲ್ಲಂಘಿಸಿ ಅಕ್ರಮವಾಗಿ ಜಾಹೀರಾತು ಫಲಕಗಳನ್ನುನಿರ್ಮಿಸಿದರೇ, ಪ್ರಾಧಿಕಾರವು ಆಸ್ತಿ ಮಾಲೀಕರಿಗೆ ನೋಟೀಸನ್ನು ಜಾರಿ ಮಾಡಿ ಏಳು ದಿನಗಳ ಒಳಗಾಗಿ ಅಂತಹ ಜಾಹೀರಾತು ಫಲಕಗಳನ್ನು ತೆಗೆದುಹಾಕುವಂತೆ ಅಥವಾ ಉಲ್ಲಂಘನೆಯನ್ನು ಸರಿಪಡಿಸಿಕೊಳ್ಳುವಂತೆ ಆತನಿಗೆ ಸೂಚನೆಯನ್ನು ನೀಡತಕ್ಕದ್ದು.

8.3. ಏಳು ದಿನಗಳೊಳಗೆ ಜಾಹೀರಾತು ಫಲಕವನ್ನು ತೆಗೆದುಹಾಕದಿದ್ದರೆ ಅಥವಾ ಉಲ್ಲಂಘನೆಯನ್ನು ಸರಿಪಡಿಸದಿದ್ದರೆ, ಬಿಬಿಎಂಪಿಯು ಆಸ್ತಿ ಮಾಲೀಕರ ವೆಚ್ಚದಲ್ಲಿಯೇಅಂತಹ ಜಾಹೀರಾತು ಫಲಕವನ್ನು ತೆಗೆದುಹಾಕತಕ್ಕದ್ದು.

8.4. ಸ್ವತ್ತಿನ ನೋಂದಾಯಿತ ಮಾಲೀಕರು, ಉತ್ತರಿಸಲು ಮತ್ತು ದಂಡ ಮತ್ತು ವೆಚ್ಚಗಳನ್ನು ಪಾವತಿಸಲು ಮೂಲತಃ ಹೊಣೆಗಾರರಾಗಿರುತ್ತಾರೆ.

8.5. ಉಪ–ವಿಧಿಗಳ ನಿಬಂಧನೆಗಳನ್ನು ಅನುಸರಿಸಲು ವಿಫಲವಾದರೆ, ಇತರ ಕಾನೂನು ಕ್ರಮಗಳನ್ನು ತೆಗೆದುಕೊಳ್ಳುವುದಲ್ಲದೆ ಅನುಸೂಚಿ –I ರಲ್ಲಿ ನಿರ್ದಿಷ್ಟಪಡಿಸಲಾದಂತೆ ದಂಡವನ್ನು ವಿಧಿಸಲಾಗುವುದು.

9. ಪರವಾನಗಿಯ ಅಗತ್ಯತೆಗಳಿಂದ ವಿನಾಯಿತಿಗಳು.–

ಈ ಮುಂದಿನಜಾಹೀರಾತುಗಳು ಮತ್ತು ಚಟುವಟಿಕೆಗಳಿಗೆ ಅನುಮತಿಯ ಅಗತ್ಯವಿಲ್ಲವಾದರೂ ಈ ಉಪ–ವಿಧಿಗಳ ಅನ್ವಯಿಕ ಅಗತ್ಯತೆಗಳನ್ನು ಪಾಲಿಸತಕ್ಕದ್ದು. ಈ ಉಪ–ವಿಧಿಗಳ ಮೂಲಕ ನಿರ್ದಿಷ್ಟವಾಗಿ ಅನುಮತಿಸಿದ ಹೊರತು ಯಾವುದೇ ಜಾಹೀರಾತು ಫಲಕವನ್ನು ಬೆಳಗಿಸುವಂತಿಲ್ಲ ಮತ್ತು ಅಧಿಕೃತ ಅನುಮತಿಯಿಲ್ಲದೆ ಯಾವುದೇ ಜಾಹೀರಾತು ಫಲಕವು ಸಾರ್ವಜನಿಕ ಹಾದಿಯನ್ನು ಅತಿಕ್ರಮಿಸತಕ್ಕದ್ದಲ್ಲ.

9.1. ಪರವಾನಗಿ ಪಡೆಯದೆಯೇ ಪುರಸ್ಕರಿಸಬಹುದಾದ ಮಾರ್ಪಾಟು ಮತ್ತು ನಿರ್ವಹಣಾ ಕಾರ್ಯಾಚರಣೆಗಳು:

9.1.1. ಅಸ್ತಿತ್ವದಲ್ಲಿರುವ ಬದಲಾಯಿಸಬಹುದಾದ ಸಂದೇಶ ಫಲಕ ಅಥವಾ ವಿದ್ಯುನ್ಮಾನ ಸಂದೇಶ ಫಲಕವನ್ನು ಬದಲಾಯಿಸುವುದು;

9.1.2. ಹಾಲಿ ಇರುವ ಕಾನೂನುಬದ್ಧ ಜಾಹೀರಾತು ಫಲಕದ ರಚನೆಯೊಳಗೆ ಜಾಹೀರಾತು ಫಲಕದ ದಿಕ್ಕನ್ನು(ಮುಖ) ಬದಲಾಯಿಸಬಹುದಾದರೂಜಾಹೀರಾತು ಫಲಕದ ರಚನೆ, ವಿಸ್ತೀರ್ಣ, ಎತ್ತರ ಅಥವಾ ಇತರ ಯಾವುದೇ ಆಯಾಮಕ್ಕೆ ಬದಲಾವಣೆಗಳನ್ನು ಮಾಡಬಾರದು; ಮತ್ತು

9.1.3. ಪ್ರಕಾಶಮಾನವಾಗಿಸುವ(ಇಲ್ಯುಮಿನೇಶನ್) ವಿಧದಲ್ಲಿ ಬದಲಾವಣೆಗಳು, ಉದಾಹರಣೆಗೆ, ಪ್ರತಿದೀಪಕ(ಫ್ಲೋರೆಸೆಂಟ್) ಬಲ್ಬ್‌ನಿಂದ ಎಲ್‌ಇಡಿ ಬಲ್ಬ್‌ಗಳಿಗೆ.

9.2. ನಿರ್ಮಾಣ ಜಾಹೀರಾತು ಫಲಕಗಳು:

9.2.1. ಆವರಣದಲ್ಲಿನ ನಿರ್ಮಾಣ ಯೋಜನೆಗಾಗಿ ಪ್ರತಿ ರಸ್ತೆ ಮುಂಭಾಗಕ್ಕೆ ಗರಿಷ್ಠ ಒಂದು ನಿರ್ಮಾಣ ಜಾಹೀರಾತು ಫಲಕಕ್ಕೆ ಅನುಮತಿಸತಕ್ಕದ್ದು.

9.2.2. ಕಟ್ಟಡದ ಪರವಾನಗಿಯನ್ನು ಅನುಮೋದಿಸಿದ ನಂತರವೇ ನಿರ್ಮಾಣ ಜಾಹೀರಾತು ಫಲಕಗಳನ್ನು ಪ್ರದರ್ಶಿಸತಕ್ಕದ್ದು ಮತ್ತು ನಿರ್ಮಾಣ ಪೂರ್ಣಗೊಂಡ ಅರವತ್ತು ದಿನಗಳ ಒಳಗೆ ತೆಗೆಯತಕ್ಕದ್ದು.

9.2.3. ನಿರ್ಮಾಣ ಜಾಹೀರಾತು ಫಲಕಗಳು, ಸ್ವತಂತ್ರವಾಗಿ ನಿಲ್ಲಿಸುವಜಾಹೀರಾತು ಫಲಕಗಳಾದರೆ ಅವುಗಳ ವಿಸ್ತೀರ್ಣ ಹತ್ತು ಚದರ ಮೀಟರ್‌ಗಳು ಮತ್ತು ಎತ್ತರ ಎರಡು ಮೀಟರ್‌ಗಳಿಗೆ ಸೀಮಿತವಾಗಿರಬೇಕು. ಆದರೆ ವಸತಿ ಜಿಲ್ಲೆಯೊಂದರಲ್ಲಾದರೆ ನಿರ್ಮಾಣ ಜಾಹೀರಾತು ಫಲಕವು, ನಾಲ್ಕು ಚದರ ಮೀಟರ್ ವಿಸ್ತೀರ್ಣಕ್ಕೆ ಸೀಮಿತವಾಗಿರಬೇಕು. ಸ್ವತಂತ್ರವಾಗಿನಿಲ್ಲಿಸುವ ನಿರ್ಮಾಣ ಜಾಹೀರಾತು ಫಲಕಗಳು ಯಾವುದೇ ಸ್ವತ್ತಿನ ಗಡಿರೇಖೆಯಿಂದ ಮೂರು ಮೀಟರ್‌ಗಳ ಸೆಟ್‌ಬ್ಯಾಕ್ ಅನ್ನು ಹೊಂದಿರತಕ್ಕದ್ದು.

9.2.4. ಮುಂಭಾಗದ ಕವರ್ ಅನ್ನು ಮರೆಮಾಡುವ ನಿರ್ಮಾಣ ಸ್ಥಳಗಳ ಜಾಹೀರಾತಿಗೆ ಡೆವಲಪರ್ ಹೆಸರು, ಕಟ್ಟಡದ ಹೆಸರು, ಪ್ರಥಮ ವಾಣಿಜ್ಯ ಅನುಭೋಗದಾರ ಮತ್ತು ಪ್ರಾಥಮಿಕ ಬಳಕೆಯ ಗುರುತಿಸುವಿಕೆಯ ವಿವರಗಳೊಂದಿಗೆ, ಆಸ್ತಿಯ ಒಳಗೆ ಒಂದೇ ಒಂದು ಜಾಹೀರಾತಿಗೆ ಅನುಮತಿಸತಕ್ಕದ್ದು.

9.3. ಮಾರ್ಗಸೂಚಕ ಚಿಹ್ನೆಗಳಿಗೆ ಅನುಮತಿ:

9.3.1. ಪ್ರತಿಯೊಂದು ಸಾರ್ವಜನಿಕ ಪ್ರವೇಶಕ್ಕೆ ಒಂದರಂತೆ ಗರಿಷ್ಠ ಒಂದು ಕಟ್ಟಡ ಮಾರ್ಗಸೂಚಕ ಚಿಹ್ನೆಯನ್ನು ಅನುಮತಿಸಲಾಗುವುದು.

9.3.2. ಕಟ್ಟಡದ ಮಾರ್ಗಸೂಚಕ ಚಿಹ್ನೆಯನ್ನು ಗೋಡೆಗೆ ಅಳವಡಿಸಿರತಕ್ಕದ್ದು ಮತ್ತು ಇದು 0.5 ಚದರ ಮೀಟರ್ ವಿಸ್ತೀರ್ಣಕ್ಕೆ ಸೀಮಿತವಾಗಿರತಕ್ಕದ್ದು.

9.3.3. ಕಟ್ಟಡ ಮಾರ್ಗಸೂಚಕ ಚಿಹ್ನೆಯನ್ನು ಹೊರಗಿನಿಂದ ಬೆಳಗಿಸತಕ್ಕದ್ದು.

9.4. ಹಬ್ಬದ ಅಲಂಕಾರಗಳು.–

9.4.1. ಎಲ್ಲ ವಲಯಗಳಲ್ಲಿ ಹಬ್ಬದ ತಾತ್ಕಾಲಿಕ ಅಲಂಕಾರಗಳಿಗೆ ಅನುಮತಿಸತಕ್ಕದ್ದು. ಹಬ್ಬದ ತಾತ್ಕಾಲಿಕ ಅಲಂಕಾರಗಳನ್ನು ಆಂತರಿಕವಾಗಿ ಅಥವಾ ಬಾಹ್ಯ ಮೂಲದಿಂದ ಪ್ರಕಾಶಿಸುವಂತೆ ಮಾಡಬಹುದಾಗಿದ್ದು ಬೆಳಕಿನ ಮಾನದಂಡಗಳಿಗೆ ಅನುಗುಣವಾಗಿರತಕ್ಕದ್ದು.

9.5. ಸರ್ಕಾರಿ ಜಾಹೀರಾತು ಫಲಕಗಳಿಗೆ ಅನುಮತಿ.–

9.5.1. ಸಂಚಾರ ಚಿಹ್ನೆಗಳು ಮತ್ತು ಸಿಗ್ನಲ್‌ಗಳು, ಕಾನೂನು ನೋಟೀಸುಗಳು, ರೈಲು–ರಸ್ತೆ ದಾಟುವ ಚಿಹ್ನೆಗಳು ಅಥವಾ ವಾಹನ ಸವಾರರು, ಸಾರಿಗೆ ಸವಾರರು, ಸೈಕಲ್ ಸವಾರರು ಅಥವಾ ಪಾದಚಾರಿಗಳಿಗೆ ಸಂಚಾರವನ್ನು ನಿಯಂತ್ರಿಸುವ ಅಥವಾ ಅವರಿಗೆ ಮಾಹಿತಿ ನೀಡುವ, ಆದರೆ ಅವುಗಳಿಗಷ್ಟೇ ಸೀಮಿತವಾಗಿರದ, ಚಿಹ್ನೆಗಳೂ ಸೇರಿದಂತೆ ಸರ್ಕಾರಿ ಏಜೆನ್ಸಿಯು ನಿಲ್ಲಿಸುವ ಅಥವಾ ಅಧಿಕೃತಗೊಳಿಸಿರುವ ಚಿಹ್ನೆಗಳನ್ನು ಯಾವುದೇ ಭೂ ಬಳಕೆ ವಲಯದಲ್ಲಿ ಅವು ಎಷ್ಟೇ ಸಂಖ್ಯೆ, ಯಾವುದೇ ಸಂರಚನೆ ಅಥವಾ ಗಾತ್ರದಲ್ಲಿದ್ದರೂ ಅನುಮತಿಸತಕ್ಕದ್ದು. ಅಂತಹ ಚಿಹ್ನೆಗಳ ಬೆಳಕಿನ ವ್ಯವಸ್ಥೆಯನ್ನು ಏಜೆನ್ಸಿಯ ಅವಶ್ಯಕತೆಗೆ ತಕ್ಕಂತೆ ಮಾಡಬಹುದಾಗಿದೆ.

9.5.2. ಶಾಲೆಗಳು ಮತ್ತು ಆಸ್ಪತ್ರೆಗಳಂತಹ ಸಾರ್ವಜನಿಕ ಸಂಸ್ಥೆಗಳಿಗೆ ಸಂಬಂಧಿಸಿದ ಜಾಹೀರಾತು ಫಲಕ.

9.6. ಬ್ಯಾನರ್‌ಗಳ – ಪ್ರದರ್ಶನಕ್ಕೆ ಅನುಮತಿ.–

9.6.1. ಯಾವುದೇ ಶೈಕ್ಷಣಿಕ ಕೇಂದ್ರ, ಸರ್ಕಾರಿ ಕಟ್ಟಡ, ಕರಕುಶಲ, ಕ್ರೀಡೆ ಮತ್ತು ಸಾಂಸ್ಕೃತಿಕ ಕೇಂದ್ರದ ಕಟ್ಟಡದ ಗೋಡೆಗಳ ಮೇಲೆ ಕಾರ್ಯಕ್ರಮಗಳು ಮತ್ತು ಪ್ರದರ್ಶನಗಳಿಗೆ ಪ್ರದರ್ಶನ ಬ್ಯಾನರ್‌ಗಳನ್ನು ಹಾಕಲು ಅನುಮತಿಸತಕ್ಕದ್ದು.

9.6.2. ಪ್ರದರ್ಶನ ಬ್ಯಾನರ್ ಛಾವಣಿಯ ಮಟ್ಟಕ್ಕಿಂತ ಎತ್ತರದಲ್ಲಿರಬಾರದು ಅಥವಾ ಸಾರ್ವಜನಿಕ ಹಾದಿಯನ್ನು ಅತಿಕ್ರಮಿಸತಕ್ಕದ್ದಲ್ಲ.

9.6.3. ಕಟ್ಟಡದ ಮುಂಭಾಗದಲ್ಲಿ ಹಾಕುವ ಬ್ಯಾನರ್‌ಗಳ ನಡುವೆ ಕನಿಷ್ಠ ಹತ್ತು ಮೀಟರ್‌ಗಳ ಅಂತರವಿರತಕ್ಕದ್ದು.

9.6.4. ಪ್ರತಿ ಪ್ರದರ್ಶನ ಬ್ಯಾನರ್‌ನಲ್ಲಿ ಸಂಕೇತಗಳನ್ನು ತೋರುವ ಸ್ಥಳದ ಗರಿಷ್ಠ ವಿಸ್ತೀರ್ಣವು ಇಪ್ಪತ್ತು ಚದರ ಮೀಟರ್‌ಗಳಿಗೆ ಸೀಮಿತವಾಗಿರತಕ್ಕದ್ದು.

9.6.5. ಬ್ಯಾನರ್ ಪ್ರದರ್ಶನದ ಅವಧಿಯನ್ನು ಪ್ರದರ್ಶನದ ಆರಂಭಕ್ಕೂ ಮುಂಚಿನ, ಪ್ರದರ್ಶನ ನಡೆಯುವ ಅವಧಿ ಮತ್ತು ಪ್ರದರ್ಶನ ಮುಗಿದ ನಂತರದ 2 ದಿನಗಳ ಅವಧಿಯೂ ಸೇರಿ ಒಟ್ಟು ಏಳು ದಿನಗಳ ಅವಧಿ ಎಂದು ಪರಿಭಾಷಿಸಲಾಗಿದೆ.

9.6.6. ಬ್ಯಾನರ್‌ಗಳು ಬಾಹ್ಯವಾಗಿ ಪ್ರಕಾಶಿಸುವಂತೆ ಮಾಡತಕ್ಕದ್ದು ಮತ್ತು ಬೆಳಕು ಮುದ್ರಿತ ಪ್ರದೇಶವನ್ನು ಕೇಂದ್ರೀಕರಿಸಿರತಕ್ಕದ್ದು.

9.6.7. ಪ್ರದರ್ಶನ ಬ್ಯಾನರ್‌ಗಳನ್ನು ಚಾಲ್ತಿಯಲ್ಲಿರುವ ಉಪ–ವಿಧಿಗಳು ಮತ್ತು ಅಗ್ನಿ ಸುರಕ್ಷತಾ ಮಾನದಂಡಗಳಲ್ಲಿ ಅನುಮತಿಸಲಾದಂತೆ ಬಾಳಿಕೆ ಬರುವ, ಹವಾಮಾನ–ನಿರೋಧಕ ವಸ್ತುವಿನಿಂದ ತಯಾರಿಸಿರತಕ್ಕದ್ದು.


9.6.8. ಪ್ರದರ್ಶನ ಬ್ಯಾನರ್‌ಗಳನ್ನು ಕಟ್ಟಡದ ಗೋಡೆಗೆ ಸುರಕ್ಷಿತವಾಗಿ ಅಳವಡಿಸಿರತಕ್ಕದ್ದು.


9.7. ಸ್ಮಾರಕ ಫಲಕಗಳು.–

9.7.1. ಯಾವುದೇ ಜಿಲ್ಲೆಯಲ್ಲಿ ಐತಿಹಾಸಿಕ ವ್ಯಕ್ತಿ, ಘಟನೆ, ಕಟ್ಟಡ ಅಥವಾ ತಾಣವನ್ನು ಸ್ಮರಿಸುವ ಸ್ಮಾರಕ ಫಲಕಗಳಿಗೆ ಅನುಮತಿಸತಕ್ಕದ್ದು.

9.7.2. ಸ್ಮಾರಕ ಫಲಕವನ್ನು ಸ್ವತಂತ್ರವಾಗಿ ಅಥವಾ ಗೋಡೆಗೆಆನಿಸಿ ಅಳವಡಿಸತಕ್ಕದ್ದು ಮತ್ತು 600 ಚದರ ಸೆಂ.ಮೀ ವಿಸ್ತೀರ್ಣಕ್ಕೆ ಸೀಮಿತವಾಗಿರತಕ್ಕದ್ದು.ಯಾವುದೇ ಆಧಾರವಿಲ್ಲದೆ ಸ್ವತಂತ್ರವಾಗಿ ನಿಲ್ಲಿಸುವ ಸ್ಮಾರಕ ಫಲಕದ ಎತ್ತರವು 1.2 ಮೀಟರ್‌ಗೆ ಸೀಮಿತವಾಗಿರಬೇಕು.

9.7.3. ಸ್ಮಾರಕ ಫಲಕದ ಮೇಲೆ ಹೊರಗಿನಿಂದ ಬೆಳಕು ಬೀರಲು ಅನುಮತಿಸತಕ್ಕದ್ದು.





9.8. ನಾಮಫಲಕಗಳು (ವಸತಿ ಕಟ್ಟಡಗಳು) .–

9.8.1. ನಾಮಫಲಕವು ಗೋಡೆಯ ಮೇಲಿರಬೇಕು ಮತ್ತು 600 ಚದರ ಸೆಂ.ಮೀ ಗಿಂತ ಹೆಚ್ಚು ವಿಸ್ತೀರ್ಣದಲ್ಲಿರಬಾರದು.

9.8.2. ಕಟ್ಟಡ ಅಥವಾ ನಿವಾಸಿಗಳ ಹೆಸರು ಮತ್ತು ವಿಳಾಸವನ್ನು ಸೂಚಿಸುವ ಗರಿಷ್ಠ ಒಂದು ನಾಮಫಲಕವನ್ನು ಎಲ್ಲಾ ವಸತಿ ಬಳಕೆಗಳಿಗೆ ಸಂಬಂಧಪಟ್ಟಂತೆ ಪ್ರತಿ ವಾಸಸ್ಥಳಕ್ಕೆ ಅನುಮತಿಸತಕ್ಕದ್ದು.

9.9. ವಾಹನ ನಿಲುಗಡೆ ಸೂಚನಾ ಫಲಕಗಳು.–

9.9.1. ದಿಕ್ಕು ಸೂಚಕ ಫಲಕಗಳು:

9.9.1.1. ಪಾರ್ಕಿಂಗ್ ಸ್ಥಳದಲ್ಲಿ ಆಧಾರ ಕಟ್ಟಿಲ್ಲದೇ ನಿಲ್ಲಿಸಬೇಕಾದ ದಿಕ್ಕು ಸೂಚಕ ಫಲಕದ ಎತ್ತರವು 1.2 ಮೀಟರ್‌ಗೆ ಸೀಮಿತವಾಗಿರತಕ್ಕದ್ದು ಮತ್ತು ಅದನ್ನು ಯಾವುದೇ ಆಸ್ತಿ ರೇಖೆಯಿಂದ 300 ಮಿ.ಮೀ. ಅಂತರದಲ್ಲಿ ನಿಲ್ಲಿಸಿರಬೇಕು.

9.9.1.2. ಪ್ರತಿಯೊಂದು ಪ್ರವೇಶ, ನಿರ್ಗಮನ, ವಾಹನ ಪಥದ ಛೇದಕಗಳು, ಡ್ರೈವ್–ಥ್ರೂ ಲೇನ್‌ಗಳು ಮತ್ತು ಯಾವುದೇ ವಾಹನ ನಿಲುಗಡೆ ಸ್ಥಳಕ್ಕೆ ಅದು ಮುಖ್ಯವಾದ ಬಳಕೆಗಾಗಿರಲಿ ಅಥವಾ ಪೂರಕ ಬಳಕೆಗಾಗಿರಲಿ ಒಂದೇ ರೀತಿಯಲ್ಲಿ ವೃತ್ತಾಕಾರದಲ್ಲಿ ಚಲಿಸಲು ಕಲ್ಪಿಸಿರುವ ಜಾಗಗಳಿಗೆ ಪಾರ್ಕಿಂಗ್ ಸ್ಥಳದ ದಿಕ್ಕಿನ ಫಲಕಗಳನ್ನು ಅನುಮತಿಸತಕ್ಕದ್ದು.

9.9.1.3. ವಾಹನ ನಿಲುಗಡೆ ದಿಕ್ಕು ಸೂಚಕ ಫಲಕಗಳು 40 ಚದರ ಸೆಂ.ಮೀ ವಿಸ್ತೀರ್ಣಕ್ಕೆ ಸೀಮಿತವಾಗಿರತಕ್ಕದ್ದು.

9.9.1.4. ಪಾರ್ಕಿಂಗ್ ಸ್ಥಳದ ದಿಕ್ಕು ಸೂಚಕ ಫಲಕಗಳು ಕಾಣುವಂತೆ ಮಾಡಲು ಅವುಗಳ ಒಳಗಡೆಯಲ್ಲಿ ಅಥವಾ ಹೊರಗಡೆಯಲ್ಲಿ ಬೆಳಕಿನ ವ್ಯವಸ್ಥೆಯನ್ನು ಮಾಡಬಹುದು.

9.9.2. ಮಾಹಿತಿ ಸೂಚಕ ಫಲಕಗಳು:

9.9.2.1. "ನಿಲುಗಡೆಗೆ ಅವಕಾಶವಿಲ್ಲ (ನೋ ಪಾರ್ಕಿಂಗ್)" ಅಥವಾ "ಅನಧಿಕೃತ ಬಳಕೆದಾರರ ವಾಹನವನ್ನು ಎಳೆದೊಯ್ಯಲಾಗುವುದು" ಮುಂತಾಗಿ ಪಾರ್ಕಿಂಗ್ ಸ್ಥಳದ ಕಾರ್ಯಾಚರಣೆ ಕುರಿತ ಮಾಹಿತಿಯನ್ನು ಒದಗಿಸಲು ಪಾರ್ಕಿಂಗ್ ಸ್ಥಳದಲ್ಲಿ ಕಲ್ಪಿಸಿರುವ ಮಾಹಿತಿ ಸೂಚನಾ ಫಲಕಗಳನ್ನು ಯಾವುದೇ ವಾಹನ ನಿಲುಗಡೆಗೆ ಅಗತ್ಯವಿರುವಂತೆ, ಪ್ರಮುಖ ಬಳಕೆಗಾಗಿಯಾಗಲೀ ಅಥವಾ ಪೂರಕ ಬಳಕೆಗಾಗಿಯಾಗಲೀ, ಅನುಮತಿಸತಕ್ಕದ್ದು.

9.9.2.2. ಆಧಾರ ಕಟ್ಟಿಲ್ಲದೇ ನಿಲ್ಲಿಸಿರುವ ಸೂಚನಾ ಫಲಕಗಳು ಎರಡು ಮೀಟರ್ ಎತ್ತರಕ್ಕೆ ಸೀಮಿತವಾಗಿರತಕ್ಕದ್ದು ಮತ್ತು ಯಾವುದೇ ಆಸ್ತಿ ರೇಖೆಯಿಂದ 300 ಮಿ.ಮೀ ಅಂತರದಲ್ಲಿರತಕ್ಕದ್ದು.


9.9.2.3. ವಾಹನ ನಿಲುಗಡೆ ಸ್ಥಳದ ಮಾಹಿತಿ ಸೂಚಕ ಫಲಕಗಳು ಒಂದು ಚದರ ಮೀಟರ್ ವಿಸ್ತೀರ್ಣಕ್ಕೆ ಸೀಮಿತವಾಗಿರತಕ್ಕದ್ದು.

9.10. ರಾಜಕೀಯ ಅಥವಾ ವಾಣಿಜ್ಯೇತರ ಸಂದೇಶ ಫಲಕಗಳು.–

9.10.1. ಬಿಬಿಎಂಪಿ ಅನುಮೋದಿಸಿದಂತೆ ಎಲ್ಲಾ ವಲಯಗಳಲ್ಲಿ ರಾಜಕೀಯ ಅಥವಾ ವಾಣಿಜ್ಯೇತರ ಸಂದೇಶ ಫಲಕಗಳಿಗೆ ಅನುಮತಿ ನೀಡತಕ್ಕದ್ದು.

9.10.2. ವಸತಿ ವಲಯಗಳಲ್ಲಿ, ಚಾಲ್ತಿಯಲ್ಲಿರುವ ಪರಿಷ್ಕೃತ ಮಾಸ್ಟರ್ ಪ್ಲಾ ನ್‌ನಲ್ಲಿ ವ್ಯಾಖ್ಯಾನಿಸಿರುವಂತೆ, ಅವುಗಳನ್ನು ರಸ್ತೆಯ ಪ್ರತಿಯೊಂದು ಬದಿಯಲ್ಲಿ 1.5 ಚದರ ಮೀಟರ್ ವಿಸ್ತೀರ್ಣಕ್ಕೆ ಸೀಮಿತಗೊಳಿಸತಕ್ಕದ್ದು. ಎಲ್ಲಾ ಇತರ ವಲಯಗಳಲ್ಲಿನ ರಾಜಕೀಯ ಅಥವಾ ವಾಣಿಜ್ಯೇತರ ಸಂದೇಶ ಫಲಕಗಳು ಪ್ರತಿ ಬದಿಯಲ್ಲಿ ಮೂರು ಚದರ ಮೀಟರ್ ಪ್ರದೇಶಕ್ಕೆ ಸೀಮಿತವಾಗಿರುತ್ತವೆ.

9.10.3. ರಾಜಕೀಯ ಅಥವಾ ವಾಣಿಜ್ಯೇತರ ಸಂದೇಶ ಫಲಕಗಳನ್ನು ಖಾಸಗಿ ಆಸ್ತಿಯ ಮೇಲೆ ಮಾತ್ರ ಆಸ್ತಿ ಮಾಲೀಕರಿಂದ ಅನುಮತಿ ಪಡೆದು ಬಿಬಿಎಂಪಿಯಿಂದ ಅನುಮತಿ ಪಡೆದು ಪ್ರದರ್ಶಿಸತಕ್ಕದ್ದು.



9.11. ಆಸ್ತಿ ಗುರುತಿನ ಸೂಚನಾ ಫಲಕಗಳು:

9.11.1. ಆಸ್ತಿ ಗುರುತಿನ ಸೂಚನಾ ಫಲಕಗಳನ್ನು ಕಟ್ಟಡದ ಮುಂಭಾಗದಲ್ಲಿ ಗೋಡೆಯ ಮೇಲೆ ಅಥವಾ ಕಾಂಪೌಂಡಿನ ಗೋಡೆಯ ಮೇಲೆ ಅಳವಡಿಸಿರತಕ್ಕದ್ದು ಮತ್ತು ಇದು 0.5 ಚದರ ಮೀಟರ್ ವಿಸ್ತೀರ್ಣಕ್ಕೆ ಸೀಮಿತವಾಗಿರತಕ್ಕದ್ದು.

9.11.2. ಎಲ್ಲಾ ಭೂ ಬಳಕೆಗೆ ಪ್ರತಿಯೊಂದು ಕಟ್ಟಡಕ್ಕೆ ಸಂಬಂಧಿಸಿದಂತೆ ಆಸ್ತಿ ನಿರ್ವಹಣಾ ಕಂಪನಿಯನ್ನು ಗುರುತಿಸಲು ಗರಿಷ್ಠ ಒಂದು ಆಸ್ತಿ ಗುರುತಿನ ಸೂಚನಾ ಫಲಕಕ್ಕೆ ಅನುಮತಿ ನೀಡತಕ್ಕದ್ದು.

9.12. ರಿಯಲ್ ಎಸ್ಟೇಟ್ ಫಲಕಗಳು:

9.12.1. ರಿಯಲ್ ಎಸ್ಟೇಟ್ ಫಲಕಗಳನ್ನು ಗೋಡೆಗೆ ಅಳವಡಿಸಿರಬೇಕು ಅಥವಾ ಆಧಾರ ಕಟ್ಟಿಲ್ಲದೇ ನಿಲ್ಲಿಸಿರಬೇಕು. ಆಧಾರ ಕಟ್ಟಿಲ್ಲದೇ ನಿಲ್ಲಿಸಿದ್ದರೆ, ರಿಯಲ್ ಎಸ್ಟೇಟ್ ಫಲಕಗಳು ಎರಡು ಮೀಟರ್ ಎತ್ತರಕ್ಕೆ ಸೀಮಿತವಾಗಿರತಕ್ಕದ್ದು.

9.12.2. ಎಲ್ಲಾ ಭೂ ಬಳಕೆಗೆ ಸಂಬಂಧಿಸಿದಂತೆ ರಸ್ತೆ ಮುಂಭಾಗದಲ್ಲಿ ಗರಿಷ್ಠ ಒಂದು ರಿಯಲ್ ಎಸ್ಟೇಟ್ ಸೂಚನಾ ಫಲಕಕ್ಕೆ ಅನುಮತಿ ನೀಡತಕ್ಕದ್ದು. ಸೂಚನಾ ಫಲಕವನ್ನು ಸಾರ್ವಜನಿಕ ಹಾದಿಗೆ ಅಭಿಮುಖವಾಗಿ ಸಮಾನಾಂತರವಾಗಿ ಅಥವಾ ಲಂಬವಾಗಿ ಸ್ಥಾಪಿಸಬಹುದು.

9.12.3. ಫಲಕದ ವಿಸ್ತೀರ್ಣವು ವಸತಿ ಭೂ ಬಳಕೆಗಾಗಿ ಎರಡು ಚದರ ಮೀಟರ್, ವಾಣಿಜ್ಯ ಭೂ ಬಳಕೆಗಾಗಿ ನಾಲ್ಕು ಚದರ ಮೀಟರ್ ಮತ್ತು ಉದ್ಯಾನವನಗಳು, ಕೈಗಾರಿಕಾ, ಸಾರ್ವಜನಿಕ ಮತ್ತು ಅರೆ–ಸಾರ್ವಜನಿಕ ಭೂ ಬಳಕೆಗಾಗಿ ಹತ್ತು ಚದರ ಮೀಟರ್‌ಗೆ ಸೀಮಿತವಾಗಿರುತ್ತದೆ.

9.12.4. ಈ ಎಲ್ಲಾ ಸೂಚನಾ ಫಲಕಗಳನ್ನು ಉದ್ದೇಶಿತ ಕಾರ್ಯ ಮುಕ್ತಾಯದ ಹದಿನೈದು ದಿನಗಳ ಒಳಗಾಗಿ ತೆಗೆಯಬೇಕು.

9.13. ಸ್ಕೋರ್‌ಬೋರ್ಡ್‌ಗಳು:

9.13.1. ಆಟದ ಸ್ಕೋರ್ ಅನ್ನು ದಾಖಲಿಸುವ ಮತ್ತು ಪ್ರದರ್ಶಿಸುವ ಸ್ಕೋರ್‌ಬೋರ್ಡ್‌ಗಳನ್ನು ಕ್ರೀಡಾಂಗಣಗಳು ಅಥವಾ ಕ್ರೀಡಾ ಪ್ರದೇಶಗಳ ಒಳಭಾಗದಲ್ಲಿ ಅಥವಾ ಕ್ರೀಡಾಂಗಣಗಳು ಅಥವಾ ಕ್ರೀಡಾ ಪ್ರದೇಶಗಳ ಹೊರಭಾಗದಲ್ಲಿ, ಆದರೆ ಕ್ರೀಡಾಂಗಣಗಳು ಅಥವಾ ಕ್ರೀಡಾ ಪ್ರದೇಶಗಳ ಗಡಿಯೊಳಗೆ ಇರಬೇಕು ಮತ್ತು ಮೈದಾನ ಮತ್ತು ತಂಡದ ಹೆಸರು ಮುಂತಾದುವುಗಳನ್ನು ಒಳಗೊಂಡಿರಬಹುದು. ಎಲ್ಲಾ ಮನರಂಜನಾ ಕ್ಷೇತ್ರಗಳಿಗೆ ಜಾಹೀರಾತನ್ನು ಅನುಮತಿಸತಕ್ಕದ್ದು. ಸ್ಕೋರ್‌ಬೋರ್ಡ್‌ನ ಸ್ಕೋರ್ ದಾಖಲಿಸುವ ಭಾಗವು ಎಲೆಕ್ಟ್ರಾನಿಕ್ ಸಂದೇಶ ಘಟಕವನ್ನು ಬಳಸಿಕೊಳ್ಳಬಹುದು.


10. ಅನುಮೋದನೆ ಪ್ರಕ್ರಿಯೆ.–

10.1 ಅರ್ಜಿ .– ಹೊರಾಂಗಣ ಸ್ವಯಂ ಜಾಹೀರಾತು ಅಥವಾ ಸಾರ್ವಜನಿಕ ಸಂದೇಶ ಅಥವಾ ಸಂಕೇತಗಳನ್ನು ಸೂಚಿಸುವ ಫಲಕಗಳನ್ನು ನಿಲ್ಲಿಸಲು ಅಥವಾ ಪ್ರದರ್ಶಿಸಲು ಪ್ರಸ್ತಾಪಿಸುವ ಅರ್ಜಿದಾರರು ಈ ಕೆಳಗಿನ ಪ್ರಕ್ರಿಯೆಗಳನ್ನು ಅನುಸರಿಸತಕ್ಕದ್ದು: –

10.1.1. ಆಯುಕ್ತರ ಆದೇಶದ ಮೇರೆಗೆ ನೇಮಕಗೊಂಡ ವಲಯ ಅಧಿಕಾರಿಗೆ, ಪ್ರತಿ ಸೂಚನಾ ಫಲಕ ಅಥವಾ ಪ್ರಾಯೋಜಿತ ಜಾಹೀರಾತು ಅಥವಾ ಸಾರ್ವಜನಿಕ ಸಂದೇಶ ಫಲಕಕ್ಕೆ ಪ್ರತ್ಯೇಕ ಅರ್ಜಿಯನ್ನು ಸಲ್ಲಿಸಬೇಕು.

10.1.2. ಅರ್ಜಿ ನಮೂನೆ 1 ರಲ್ಲಿ, ಹೆಸರು, ವಿಳಾಸ, ದೂರವಾಣಿ ಸಂಖ್ಯೆ, ಇ–ಮೇಲ್ ವಿಳಾಸ, ಪ್ಯಾನ್ ಮತ್ತು ಜಿಎಸ್‌ಟಿ ವಿವರಗಳು, ಆವರಣದ ಮಾಲೀಕರ ನಿರಾಕ್ಷೇಪಣಾ ಪತ್ರ(ಎನ್‌ಒಸಿ) ಮತ್ತು ವಿದ್ಯುತ್ ಸರಬರಾಜಿನ ವಿವರಗಳು ಯಾವುದಾದರೂ ಇದ್ದರೆ ಅವುಗಳನ್ನು ಮತ್ತು ರಸ್ತೆ (ಸ್ಟ್ರೀಟ್) ಗ್ರಾಫಿಕ್ ಅನ್ನು ನಿಲ್ಲಿಸುವ ಅಥವಾ ಪ್ರದರ್ಶಿಸುವ ಸ್ಥಳದ ವಿವರಗಳನ್ನು ಸಲ್ಲಿಸಬೇಕು.

10.1.3. ಸೂಚನಾ ಫಲಕ ಅಥವಾ ರಸ್ತೆ (ಸ್ಟ್ರೀಟ್) ಗ್ರಾಫಿಕ್ ಅನ್ನು ನಿಲ್ಲಿಸಬೇಕಾದ ಅಥವಾ ಪ್ರದರ್ಶಿಸಬೇಕಾದ ದಿನಾಂಕವನ್ನು ನಮೂದಿಸಿರಬೇಕು.



10.1.3.ಎ. ನಮೂನೆ ಸಂಖ್ಯೆ 1 ರಲ್ಲಿನ ಅರ್ಜಿಯನ್ನು ಆನ್‌ಲೈನ್ ಮೂಲಕವೂ ಈ ಕೆಳಗಿನ ಇಮೇಲ್ ಮೂಲಕ ವಲಯ ಜಂಟಿ ಆಯುಕ್ತರಿಗೆ ಸಲ್ಲಿಸಬಹುದು.–

1. jcmpura@bbmp.gov.in
2. jcbom@rediffmai.com
3. jcdasarahalli1@gmail.com
4. jcyel.bbmp@gmail.com
5. jceast@rediff.com
6. jcrrna@rediffmail.com
7. jcsouth@rediffmail.com
8. jcwest@rediff.com

10.1.3.ಬಿ. ವಲಯ ಜಂಟಿ ಆಯುಕ್ತರು ತಮ್ಮ ವಲಯದಲ್ಲಿ ಫಾರ್ಮ್ 3 ರಲ್ಲಿ ಒಂದು ರಿಜಿಸ್ಟರ್ ಅನ್ನು ನಿರ್ವಹಿಸಿ, ಫಾರ್ಮ್ 1 ರಲ್ಲಿ ಸ್ವೀಕರಿಸಲಾದ ಅರ್ಜಿಯ ವಿವರಗಳನ್ನು ಅದರಲ್ಲಿ ನಮೂದಿಸಿ, ಪ್ರತಿ ಅರ್ಜಿಗೆ ಕ್ರಮ

ಸಂಖ್ಯೆಯನ್ನು ನೀಡಿರುವುದನ್ನು ಖಚಿತಪಡಿಸಿಕೊಳ್ಳಬೇಕು ಮತ್ತು ಆಯುಕ್ತರಿಗೆ ಪ್ರತಿ ತಿಂಗಳು ಒಂದು ವಿವರ ಪಟ್ಟಿಯನ್ನು ಸಲ್ಲಿಸಬೇಕು.

10.1.3.ಸಿ. ಸೂಚನಾ ಫಲಕಗಳನ್ನು ಪ್ರದರ್ಶಿಸಲು ಅನುಮತಿ ಪಡೆಯುವುದಕ್ಕಾಗಿ ಪ್ರಯತ್ನದಲ್ಲಿ, ಯಾವುದೇ ತಪ್ಪು ಮಾಹಿತಿಯನ್ನು ಫಾರ್ಮ್ ಸಂಖ್ಯೆ 1 ರಲ್ಲಿ ನೀಡಿದರೆ, ಅರ್ಜಿಯನ್ನು ತಿರಸ್ಕರಿಸುವುದರ ಜೊತೆಗೆ ಅರ್ಜಿದಾರರು ದಂಡ ಮತ್ತು ಕ್ರಿಮಿನಲ್ ಕ್ರಮಕ್ಕೆ ಗುರಿಯಾಗತಕ್ಕದ್ದು.

10.1.4. ವಲಯದಲ್ಲಿರುವ ಭೂ ಬಳಕೆ ಮತ್ತು ಆವರಣವು ಇರುವ ಸ್ಥಳದ ವಿಶೇಷ ಗುಣಲಕ್ಷಣಗಳು, ಯಾವುದಾದರೂ ಇದ್ದರೆ, ಅದರ ಬಗ್ಗೆ ಮಾಹಿತಿಯನ್ನು ಸಲ್ಲಿಸಬೇಕು.

10.1.5. ಸೂಚನಾ ಫಲಕ ಅಥವಾ ರಸ್ತೆ (ಸ್ಟ್ರೀಟ್) ಗ್ರಾಫಿಕ್‌ನ ಮುದ್ರಕರು ಅಥವಾ ವಿನ್ಯಾಸಕರು ಅಥವಾ ತಯಾರಕರ ಹೆಸರು, ವಿಳಾಸ, ಸಂಪರ್ಕ ಸಂಖ್ಯೆ, ಇ–ಮೇಲ್ ವಿಳಾಸ ಮತ್ತು ಜಿಎಸ್‌ಟಿ ವಿವರಗಳನ್ನು ಸಲ್ಲಿಸಬೇಕು.

10.1.6. ಅರ್ಜಿಯ ದಿನಾಂಕದಂದು, ಅವರು ವ್ಯಾಪಾರವನ್ನು ನಡೆಸಲು ಮಾನ್ಯತೆ ಪಡೆದ ಮತ್ತು ಕಾನೂನುಬದ್ಧ ವ್ಯಾಪಾರ ಪರವಾನಗಿಯನ್ನು ಹೊಂದಿದ್ದಾರೆ ಮತ್ತು ಅವರು ಕಟ್ಟಡದ ಆಸ್ತಿ ತೆರಿಗೆಯ ಬಾಕಿ ಉಳಿಸಿಕೊಂಡಿಲ್ಲ ಎಂದು ಘೋಷಿಸಿರಬೇಕು.

10.1.7. ಉಪವಿಧಿಗಳಲ್ಲಿ ಹೇಳಿರುವುದರ ಹೊರತು ಯಾವುದೇ ವ್ಯತ್ಯಾಸ ಮಾಡಿಕೊಂಡಿದ್ದರೆ, ಗೊತ್ತುಪಡಿಸಿದ ವಲಯ ಅಧಿಕಾರಿಯು ಅಥವಾ ಪರಿಶೀಲನಾ ಸಮಿತಿಯು ಅದಕ್ಕೆ ಅನುಮೋದನೆ ನೀಡಿದ್ದರೆ ಅದರ ವಿವರಗಳನ್ನು ನೀಡಬೇಕು.

10.1.8. ಅರ್ಜಿದಾರರು ಈ ಮೊದಲು ಅರ್ಜಿಯನ್ನು ಪ್ರಸ್ತುತ ಉಪವಿಧಿಗಳ ಅಡಿಯಲ್ಲಿ, ರಸ್ತೆ–ಸೂಚನಾ ಫಲಕ ಅಥವಾ ಜಾಹೀರಾತಿಗಾಗಿ ಸಲ್ಲಿಸಿದ್ದಾರೆಯೇ ಎಂಬ ಬಗ್ಗೆ ಮಾಹಿತಿ ಸಲ್ಲಿಸಬೇಕು.

10.1.9. ಅರ್ಜಿದಾರನು ಈ ಉಪವಿಧಿಗಳಲ್ಲಿ ಪ್ರತಿಪಾದಿಸಿರುವ ನಿಯಮಗಳು ಮತ್ತು ಷರತ್ತುಗಳಿಗೆ ಬದ್ಧನಾಗಿರತಕ್ಕದ್ದು ಮತ್ತು ಪ್ರದರ್ಶನದ ಮುಂದುವರಿಕೆಯ ಸಮಯದಲ್ಲಿ ಅದನ್ನು ಪಾಲಿಸಲು ವಿಫಲನಾದ ಸಂದರ್ಭದಲ್ಲಿ, ಅವನು ದಂಡಕ್ಕೆ ಗುರಿಯಾಗತಕ್ಕದ್ದು ಎಂಬ ಬಗ್ಗೆ ನಮೂನೆ–2 ರಲ್ಲಿ ಮುಚ್ಚಳಿಕೆ ಪತ್ರ ಸಲ್ಲಿಸಬೇಕು.

10.1.9. ಎ. ದಂಡದ ಪ್ರಮಾಣವನ್ನು 5 ವರ್ಷಗಳಿಗೊಮ್ಮೆ ಪುನರ್ ಪರಿಶೀಲಿಸತಕ್ಕದ್ದು.

10.1.9. ಬಿ. ಸಂಬಂಧಪಟ್ಟ ವಲಯದ ಜಂಟಿ ಆಯುಕ್ತರಿಗೆ ಅನುಬಂಧದಲ್ಲಿ ನಿರ್ದಿಷ್ಟಪಡಿಸಿದಂತೆ ದಂಡ ವಿಧಿಸಲು ಅಧಿಕಾರ ಕೊಡಲಾಗಿದೆ.

10.1.9.ಸಿ. ದಂಡದ ಮೊತ್ತವನ್ನು ಪಾವತಿಸದಿದ್ದರೆ ಅಥವಾ ವಸೂಲಿ ಮಾಡದಿದ್ದರೆ, ಅದನ್ನು ಕರ್ನಾಟಕ ನಗರ ಪಾಲಿಕೆಗಳ ಅಧಿನಿಯಮ, 1976 ರ ಉಪಬಂಧಗಳ ಮೇರೆಗೆ ಆಸ್ತಿ ತೆರಿಗೆಯ ಬಾಕಿಯಂತೆ ವಸೂಲಿ ಮಾಡಲಾಗುತ್ತದೆ.

10.1.9. ಡಿ. ಹೀಗೆ ವಿಧಿಸಲಾದ ದಂಡವು ತಗಾದೆಯ ದಿನಾಂಕದಿಂದ 18% ರಷ್ಟು ಬಡ್ಡಿಯನ್ನು ಹೊಂದಿರುತ್ತದೆ.

10.1.10. ಈ ಕೆಳಗಿನ ವಿವರಗಳನ್ನು ಅಳತೆ ಪ್ರಮಾಣಕ್ಕನುಸಾರವಾಗಿ ತೋರಿಸುವ ಒಂದು ನಕ್ಷೆ, ಎಂದರೆ:–

10.1.10.1. ಆವರಣದ ಪ್ರದೇಶದಲ್ಲಿ ಸದ್ಯಕ್ಕೆ ಪ್ರದರ್ಶಿಸಲಾಗುತ್ತಿರುವ ಎಲ್ಲಾ ರಸ್ತೆ (ಸ್ಟ್ರೀಟ್) ಗ್ರಾಫಿಕ್ಸ್‌ಗಳು;

10.1.10.2. ಉದ್ದೇಶಿತ ಸೂಚನಾ ಫಲಕದ ಸ್ಥಳ, ಎತ್ತರ ಮತ್ತು ಗಾತ್ರ;

10.1.10.3. ಪ್ರದರ್ಶಿಸಲು ಉದ್ದೇಶಿಸಲಾದ ಮಾಹಿತಿಯ ವಸ್ತುಗಳು;

10.1.10.4. ಪ್ರಸ್ತಾವಿತ ರಸ್ತೆ (ಸ್ಟ್ರೀಟ್) ಗ್ರಾಫಿಕ್ಸ್ ಒಳಗೊಳ್ಳುವ ಫಲಕದ ವಿಸ್ತೀರ್ಣದ ಶೇಕಡಾವಾರು ಪ್ರಮಾಣ ಮತ್ತು

10.1.10.5. ನಿರ್ಮಾಣ, ಪ್ರದರ್ಶನ, ಬೆಳಕಿನ ವ್ಯವಸ್ಥೆ, ಯಾಂತ್ರಿಕ ಚಲನೆ, ಏನಾದರೂ ಇದ್ದರೆ, ಇವೆಲ್ಲವುಗಳ ನಿರ್ದಿಷ್ಟ ವಿವರಗಳು.

10.1.11. ಅಪೂರ್ಣವಾದ ಅಥವಾ ಮೇಲೆ ತಿಳಿಸಿದಂತಹ ಅಗತ್ಯ ವಿವರಗಳನ್ನು ಮತ್ತು ಲಗತ್ತುಗಳನ್ನು ಒಳಗೊಂಡಿರದ ಅರ್ಜಿಯನ್ನು ತಿರಸ್ಕರಿಸಲಾಗುತ್ತದೆ ಮತ್ತು ಸಂಬಂಧಪಟ್ಟ ಕಡತವನ್ನು ಮುಕ್ತಾಯಗೊಳಿಸಲಾಗುತ್ತದೆ.

10.2. ಅನುಮೋದನೆ ಅಥವಾ ನಿರಾಕರಣೆ:

10.2.1. ಅರ್ಜಿಯು ಕಟ್ಟಡದ ಉಪವಿಧಿಗಳು ಮತ್ತು ಇತರ ಕಾನೂನು ಅವಶ್ಯಕತೆಗಳನುಸಾರವಾಗಿ ಇದ್ದರೆ 10.1.2 ಖಂಡದ ಪ್ರಕಾರ, ಗೊತ್ತುಪಡಿಸಿದ ವಲಯ ಅಧಿಕಾರಿಗೆ ರಸ್ತೆ ಸೂಚನಾ ಫಲಕ ಅಥವಾ ಜಾಹೀರಾತನ್ನು ನಿಲ್ಲಿಸಲು ಮತ್ತು ಪ್ರದರ್ಶಿಸಲು ಅನುಮತಿ ನೀಡಲು ಅಧಿಕಾರ ನೀಡತಕ್ಕದ್ದು.

10.2.1.ಎ. ರಸ್ತೆ ಸೂಚನಾ ಫಲಕ ಅಥವಾ ಜಾಹೀರಾತು ಫಲಕವನ್ನು ನಿಲ್ಲಿಸಲು ಮತ್ತು ಪ್ರದರ್ಶಿಸಲು ಅನುಮತಿ ನೀಡಿದಾಗ, ಕಾಲಕಾಲಕ್ಕೆ ನವೀಕರಣ ಮಾಡುವುದಕ್ಕೆ ಒಳಪಟ್ಟು ವಲಯ ಕಚೇರಿಯು, ಅಗತ್ಯವಿರುವ ಹಿಂಬರಹ ಅಥವಾ ಪ್ರಮಾಣಪತ್ರವನ್ನು, ಮೂರು ವರ್ಷಗಳ ಅವಧಿಯನ್ನು ಉಲ್ಲೇಖಿಸಿ, ನೀಡತಕ್ಕದ್ದು.

10.2.1.ಬಿ. ರಸ್ತೆ ಸೂಚನಾ ಫಲಕ ಅಥವಾ ಜಾಹೀರಾತನ್ನು ಫಲಕವನ್ನು ನಿಲ್ಲಿಸಲು ಮತ್ತು ಪ್ರದರ್ಶಿಸುವುದಕ್ಕಾಗಿ ಮೂರು ವರ್ಷಗಳ ಅವಧಿಗೆ ಅಥವಾ ಅದರ ಭಾಗಕ್ಕೆ ವಿಧಿಸಬೇಕಾದ ಶುಲ್ಕದ ಪ್ರಮಾಣವನ್ನು ಮತ್ತು ವಿನಾಯಿತಿ ನೀಡಿಕೆಯನ್ನು ಕಾಲಕಾಲಕ್ಕೆ ಆಯುಕ್ತರು ಅಧಿಸೂಚಿಸತಕ್ಕದ್ದು.

10.2.2. ಗೊತ್ತುಪಡಿಸಿದ ವಲಯ ಅಧಿಕಾರಿಗಳು, ಅನುಮತಿ ನೀಡುವಾಗ, ರಸ್ತೆ–ಸೂಚನಾ ಫಲಕಕ್ಕೆ ಮತ್ತು ಜಾಹೀರಾತಿಗೆ ಸಂಬಂಧಿಸಿದ ನಿರ್ಬಂಧವು ಈ ಉಪವಿಧಿಗಳಿಗೆ ಮತ್ತು ಮಂಜೂರು ಮಾಡಲಾದ ಯಾವುದೇ ವ್ಯತ್ಯಾಸಗಳಿಗೆ ಅನುಗುಣವಾಗಿದೆ ಎಂಬುದನ್ನು ಖಚಿತಪಡಿಸಿಕೊಳ್ಳತಕ್ಕದ್ದು.

10.2.3. ಗೊತ್ತುಪಡಿಸಿದ ವಲಯ ಅಧಿಕಾರಿಗಳು ಅನುಮತಿ ನೀಡುವಾಗ ವಿಶೇಷ ಪರಿಗಣನೆಯ ನಿರ್ದಿಷ್ಟ ಪ್ರದೇಶಕ್ಕಾಗಿ ಅಳವಡಿಸಿಕೊಂಡಿರುವ ಯಾವುದೇ ವಿಶೇಷ ನಿಬಂಧನೆಗಳ ದೃಷ್ಟಿಯಿಂದ ಅರ್ಜಿಯನ್ನು ಪರಿಗಣಿಸಬಹುದೆಂಬುದನ್ನು ಮನವರಿಕೆ ಮಾಡಿಕೊಳ್ಳತಕ್ಕದ್ದು.

10.2.4. ನಿಯೋಜಿತ ವಲಯ ಅಧಿಕಾರಿಯು ಅರ್ಜಿಯನ್ನು ತಿರಸ್ಕರಿಸಿದರೆ, ಆತನು ಲಿಖಿತದಲ್ಲಿ ಟಿಪ್ಪಣಿ ಹಾಳೆಯಲ್ಲಿ ತಿರಸ್ಕರಿಸುವುದಕ್ಕೆ ಕಾರಣಗಳನ್ನು ತಿಳಿಸಬೇಕು ಮತ್ತು ಅರ್ಜಿದಾರರಿಗೆ, ಅರ್ಜಿಯಲ್ಲಿ ನಮೂದಿಸಿದ ವಿಳಾಸಕ್ಕೆ, ತಿರಸ್ಕರಿಸುವ ಕಾರಣಗಳನ್ನು ವಿವರಿಸಿ ಸೂಕ್ತ ಹಿಂಬರಹವನ್ನು ನೀಡತಕ್ಕದ್ದು.

10.2.5. ತಿರಸ್ಕರಿಸಿದ ಸಂದರ್ಭದಲ್ಲಿ, ಈ ಹಿಂದೆ ಸಲ್ಲಿಸಿದಂತಹುದೇ ವಾಸ್ತವಿಕ ಅಂಶಗಳನ್ನು ಅರ್ಜಿಯು ಒಳಗೊಂಡಿದ್ದರೆ, ಬೀದಿ ಬದಿಜಾಹೀರಾತು ಫಲಕ ಅಥವಾ ಜಾಹೀರಾತಿಗಾಗಿ ನಂತರದ ಯಾವುದೇ ಅರ್ಜಿಯನ್ನು ನಿರ್ವಹಿಸತಕ್ಕದ್ದಲ್ಲ.

10.2.6. ಅರ್ಜಿದಾರರ ಹೆಸರು ಕಪ್ಪು ಪಟ್ಟಿಯಲ್ಲಿ ಕಾಣಿಸಿಕೊಂಡರೆ ಅಥವಾ ಅರ್ಜಿದಾರನು ಬಿಬಿಎಂಪಿಗೆ ಬಾಕಿ ಉಳಿಸಿಕೊಂಡಿದ್ದರೆ, ಅಥವಾ ದಾವೆ ಹೂಡುವುದನ್ನು ಅಭ್ಯಾಸ ಮಾಡಿಕೊಂಡವನಾಗಿದ್ದರೆ ಅಥವಾ ಅದೇ ಅಂಶಗಳಿಗಾಗಿ ನ್ಯಾಯಾಲಯದಲ್ಲಿ ಅವನ ಮೊಕದ್ದಮೆ ಬಾಕಿ ಉಳಿದಿದ್ದರೆ, ನಿಯೋಜಿತ ವಲಯ ಅಧಿಕಾರಿಯು ಬೀದಿ ಬದಿಜಾಹೀರಾತು ಫಲಕ ಅಥವಾ ಜಾಹೀರಾತಿನ ಪರವಾನಗಿಯನ್ನು ಅನುಮೋದಿಸತಕ್ಕದ್ದಲ್ಲ.

10.2.7. ನಿಯೋಜಿತ ವಲಯ ಅಧಿಕಾರಿಯು, ಅಂಥ ಬೀದಿ ಬದಿಜಾಹೀರಾತು ಫಲಕ ಅಥವಾ ಜಾಹೀರಾತನ್ನು ಪ್ರದರ್ಶಿಸಲು ಪ್ರಸ್ತಾಪಿಸಲಾದ ಸ್ಥಳದ ಪ್ರಾದೇಶಿಕ ಅಧಿಕಾರವ್ಯಾಪ್ತಿಯನ್ನು ಹೊಂದಿಲ್ಲದಿದ್ದರೆ, ಬೀದಿ ಬದಿಜಾಹೀರಾತು ಫಲಕ ಅಥವಾ ಜಾಹೀರಾತಿನ ಪರವಾನಗಿಯನ್ನು ಅನುಮೋದಿಸುವುದಿಲ್ಲ.

10.3. ಪುನರ್ ಪರಿಶೀಲನಾ ಸಮಿತಿಗೆ ಮನವಿ.–

10.3.1. ನೇಮಕಗೊಂಡ ವಲಯ ಅಧಿಕಾರಿಯ ಆದೇಶದಿಂದ ಬಾಧಿತನಾದ ಯಾರೇ ವ್ಯಕ್ತಿಯು ಯುಕ್ತ ಶ್ರದ್ಧೆಯಿಂದ ತಿಳಿದುಕೊಂಡ ನಂತರವೂ, ಅವನ ಅರಿವಿಗೆ ಬಂದಿರದ ಹೊಸ ಮತ್ತು ಮಹತ್ವದ ವಿಷಯ ಅಥವಾ ಪುರಾವೆಗಳ ಆವಿಷ್ಕಾರದಿಂದ, ಅಥವಾ ನಿಯೋಜಿತ ವಲಯ ಅಧಿಕಾರಿಗಳ ಆದೇಶವನ್ನು ಜಾರಿಗೊಳಿಸಿದ ಸಮಯದಲ್ಲಿ ಅವನು ಮಂಡಿಸಲಾಗಿರದ ಅಥವಾ ದಾಖಲೆಯಲ್ಲಿ ಮೇಲ್ನೋಟಕ್ಕೆ ಸ್ಪಷ್ಟವಾಗಿ ಕಂಡುಬರುವ ಕೆಲವು ತಪ್ಪು ಅಥವಾ ದೋಷದ ಕಾರಣದಿಂದ ಅಥವಾ ಯಾವುದೇ ಇತರ ಸೂಕ್ತ ಕಾರಣಕ್ಕಾಗಿ ಆತನ ವಿರುದ್ಧ ಜಾರಿ ಮಾಡಿದ ಆದೇಶವನ್ನು ಪರಿಶೀಲನೆ ಮಾಡಲು ಅಥವಾ ಅವನ ವಿರುದ್ಧ ನೀಡಿದ ಆದೇಶವನ್ನು ಪರಿಶೀಲಿಸಲು ಅಪೇಕ್ಷಿಸಿದಲ್ಲಿ, ಆತನು ಆದೇಶದ ದಿನಾಂಕದಿಂದ ಹದಿನೈದು ದಿನಗಳ ಒಳಗಾಗಿ ಪುನರ್ ಪರಿಶೀಲನಾ ಸಮಿತಿಯ ಮುಂದೆ ಪರಿಶೀಲನೆಗೆ ಅರ್ಜಿ ಸಲ್ಲಿಸಬಹುದು. ಆದಾಗ್ಯೂ, ಅದನ್ನು ಹದಿನೈದು ದಿನಗಳ ಅವಧಿ ಮುಗಿದ ನಂತರ ಪುನರ್ ಪರಿಶೀಲನಾ ಅರ್ಜಿಯನ್ನು ಅನುಮತಿಸಲಾಗಿದೆ ಎಂದು ಭಾವಿಸತಕ್ಕದ್ದಲ್ಲ.

10.3.2. ಪುನರ್ ಪರಿಶೀಲನಾ ಸಮಿತಿಯು, ಬಾಧಿತ ವ್ಯಕ್ತಿಗೆ ತನ್ನ ಅಹವಾಲನ್ನು ಹೇಳಿಕೊಳ್ಳಲು ಅವಕಾಶವನ್ನು ನೀಡಿದ ನಂತರ, ನಿಯೋಜಿತ ವಲಯ ಅಧಿಕಾರಿಯ ಆದೇಶದ ಸತ್ಯಾಪನೆಯನ್ನು ಮೂವತ್ತು ದಿನಗಳಲ್ಲಿ ನಿರ್ಧರಿಸತಕ್ಕದ್ದು ಮತ್ತು ಅಂತಿಮ ಮತ್ತು ಪರಿಣಾಮಕಾರಿ ಆದೇಶವನ್ನು ಪ್ರಕಟಿಸತಕ್ಕದ್ದು.

10.3.3. ಪರಂತು, ಪುನರ್ ಪರಿಶೀಲನಾ ಅರ್ಜಿಯು ಬಾಕಿಯಿರುವ ಕಾರಣಕ್ಕಾಗಿ ಆಯುಕ್ತರು ಅಥವಾ ಅವರ ನಿಯೋಜಿತ ಪ್ರಾಧಿಕಾರಿಯು ತನ್ನ ಆದೇಶವನ್ನು ಪಾಲಿಸದೆ ಇರುವುದಕ್ಕೆ ಸಂಬಂಧಿಸಿದಂತೆ ತೆಗೆದುಕೊಳ್ಳಬಹುದಾದ ಅಥವಾ ತೆಗೆದುಕೊಳ್ಳಲು ಪ್ರಸ್ತಾವಿಸಬಹುದಾದ ಕ್ರಮವನ್ನು ಜಾರಿಗೊಳಿಸಲು ಬೀದಿ ಬದಿ ಜಾಹೀರಾತು ಫಲಕ ಅಥವಾ ಜಾಹೀರಾತನ್ನು ತೆಗೆದುಹಾಕುವುದಕ್ಕಾಗಿ ನಿಗದಿತ ಸಮಯವನ್ನು ವಿಸ್ತರಿಸುವ ಹಾಗೆ ಕಾರ್ಯಾಚರಣೆಗೊಳಿಸತಕ್ಕದ್ದಲ್ಲ.

10.3.4. ಈ ಉಪವಿಧಿಗಳಲ್ಲಿ ಏನೇ ಒಳಗೊಂಡಿದ್ದಾಗ್ಯೂ, ಪುನರ್ ಪರಿಶೀಲನಾ ಅರ್ಜಿಗೆ ಸಂಬಂಧಿಸಿದಂತೆ, ಅಪೀಲುಗಳಿಗೆ ಸಂಬಂಧಪಟ್ಟ ಸ್ಥಾಯಿ ಸಮಿತಿಯಲ್ಲಿನಿಹಿತವಾದ ಅಧಿಕಾರಗಳ ಮೇಲೆ ಪರಿಣಾಮ ಬೀರತಕ್ಕದ್ದಲ್ಲ ಅಥವಾ ಕುಗ್ಗಿಸತಕ್ಕದ್ದಲ್ಲ ಅಥವಾ ಮೊಟಕುಗೊಳಿಸತಕ್ಕದ್ದಲ್ಲ ಅಥವಾ ನಿರಾಕರಿಸತಕ್ಕದ್ದಲ್ಲ.

10.4. ಶುಲ್ಕ ವಿವರಗಳು:

10.4.1. ಪರವಾನಗಿ ಪಡೆಯಲು ಪಾವತಿಸಬೇಕಾದ ಶುಲ್ಕವು, ಅನುಸೂಚಿಯಲ್ಲಿ ನಿಗದಿಪಡಿಸಿದ ಶುಲ್ಕಕ್ಕೆ ಅನುಗುಣವಾಗಿರತಕ್ಕದ್ದು.

10.4.2. ಗೊತ್ತುಪಡಿಸಿದ ಶುಲ್ಕವನ್ನು ಸೂಚನಾ ಫಲಕಕ್ಕೆ ಸಂಬಂಧಿಸಿದ, ಸ್ವಯಂ ಜಾಹೀರಾತು ಶುಲ್ಕಕ್ಕೆ ಸೀಮಿತಗೊಳಿಸತಕ್ಕದ್ದು.

10.4.3. ನಾಮಫಲಕಗಳು, ಮನೆ ಸಂಖ್ಯೆಗಳಂಥ ಸೂಚನಾ ಫಲಕಗಳಿಗೆ, ಅದಕ್ಕೆ ಅನುಮತಿಸಬಹುದಾದ ಗರಿಷ್ಠ ಗಾತ್ರಕ್ಕೆ ಪರಿಮಿತಗೊಳಿಸಿ, ಶುಲ್ಕವನ್ನು ಪಾವತಿಸುವುದರಿಂದ ವಿನಾಯಿತಿ ನೀಡಲಾಗುತ್ತದೆ.

10.4.4. ಅನುಸೂಚಿ–II ರಲ್ಲಿ ಉಲ್ಲೇಖಿಸಿರುವಂತೆ ಪೂರ್ವ, ಪಶ್ಚಿಮ, ದಕ್ಷಿಣ, ಯಲಹಂಕ ಮತ್ತು ಮಹದೇವಪುರ ವಲಯಗಳಲ್ಲಿನ ಸ್ಥಳಗಳಿಗೆ ಗೊತ್ತುಪಡಿಸಿದ ಶುಲ್ಕವು, ಅನುಸೂಚಿ–III ರ ಅನುಸಾರವಾಗಿರತಕ್ಕದ್ದು.

10.4.5. ರಾಜರಾಜೇಶ್ವರಿನಗರ, ಬೊಮ್ಮನಹಳ್ಳಿ ಮತ್ತು ದಾಸರಹಳ್ಳಿ ವಲಯಗಳಲ್ಲಿನ ಸ್ಥಳಗಳಿಗೆ ಗೊತ್ತುಪಡಿಸಿದ ಶುಲ್ಕ, ಮತ್ತು ಅನುಸೂಚಿ –II ನ್ನು ಹೊರತುಪಡಿಸಿಇತರ ಸ್ಥಳಗಳಿಗೆ ಸಂಬಂಧಿಸಿದ ಶುಲ್ಕವು ಅನುಸೂಚಿ – IV ರ ಪ್ರಕಾರವಾಗಿರತಕ್ಕದ್ದು.

10.4.6. ಅನುಸೂಚಿ –V ರಲ್ಲಿ ಉಲ್ಲೇಖಿಸಲಾದ ಪ್ರದೇಶಗಳಲ್ಲಿ ಯಾವುದೇ ರೀತಿಯ ಜಾಹಿರಾತು ಫಲಕಗಳ ಪ್ರದರ್ಶನ ಮಾಡತಕ್ಕದ್ದಲ್ಲ.

10.5. ಬೀದಿ ಬದಿ ಜಾಹೀರಾತು ಫಲಕ (ಸ್ಟ್ರೀಟ್ ಸೈನೇಜ್) ಅಥವಾ ಜಾಹೀರಾತು ಪರಿಶೀಲನಾ ಸಮಿತಿ.–

10.5.1. ನಿಯೋಜಿತ ವಲಯ ಅಧಿಕಾರಿ ಹೊರಡಿಸಿದ ಆದೇಶಗಳನ್ನು ಪರಿಶೀಲಿಸಲು, ಉನ್ನತ ಮಟ್ಟದ ಬೀದಿ ಬದಿ ಜಾಹೀರಾತು ಫಲಕ(ಸ್ಟ್ರೀಟ್ ಸೈನೇಜ್) ಅಥವಾ ಜಾಹೀರಾತು ಪರಿಶೀಲನಾ ಸಮಿತಿ ಇರತಕ್ಕದ್ದು. ಪುನರ್ ಪರಿಶೀಲನಾ ಸಮಿತಿಯು ಬಾಧಿತರಿಂದ ಮೊದಲ ಹಂತದ ಅಪೀಲು ಸ್ವೀಕರಿಸಲು ಮತ್ತು ಸಾರ್ವಜನಿಕರ ಸುರಕ್ಷತೆಗೆ ಅಪಾಯವನ್ನುಂಟುಮಾಡುವ ಬೀದಿ ಬದಿ ಜಾಹೀರಾತು ಫಲಕ(ಸ್ಟ್ರೀಟ್ ಸೈನೇಜ್) ಅಥವಾ ಜಾಹೀರಾತು ಅಥವಾ ಸಾಧನಗಳನ್ನು ತೆಗೆದುಹಾಕಲು ಕಾರ್ಯನಿರ್ವಹಿಸುತ್ತದೆ.

10.5.2. ಆಯುಕ್ತರು, ಈ ಕೆಳಗಿನವರನ್ನು ಒಳಗೊಂಡಿರುವ ಪುನರ್ ಪರಿಶೀಲನಾ ಸಮಿತಿಯನ್ನು ಆದೇಶದ ಮೂಲಕ ರಚಿಸತಕ್ಕದ್ದು, ಎಂದರೆ:–

10.5.2.1. ವಿಶೇಷ ಆಯುಕ್ತರು (ಪ್ರಾಜೆಕ್ಟ್) – ಅಧ್ಯಕ್ಷರು;

10.5.2.2. ಜಂಟಿ ಆಯುಕ್ತರು (ಜಾಹೀರಾತು) – ಸದಸ್ಯ – ಕಾರ್ಯದರ್ಶಿ;

10.5.2.3. ಕಾನೂನು ಕೋಶದ ಮುಖ್ಯಸ್ಥರು–ಸದಸ್ಯರು;

10.5.2.4. ಸಂಬಂಧಪಟ್ಟ ವಲಯದ ಅಧಿಕಾರವ್ಯಾಪ್ತಿ ಹೊಂದಿರುವ ಹೆಚ್ಚುವರಿ ಆಯುಕ್ತರು / ಜಂಟಿ ಆಯುಕ್ತರು;

10.5.2.5. ಸಾರ್ವಜನಿಕ ಕ್ಷೇತ್ರದಲ್ಲಿ ಸಂಬಂಧಿತ ವಿಷಯದಲ್ಲಿ ಅನುಭವ ಹೊಂದಿರುವ ವಿನ್ಯಾಸ ತಜ್ಞರು–ಸದಸ್ಯರು; ಮತ್ತು

10.5.2.6. ಅಧಿಕಾರೇತರ ಸದಸ್ಯರುಗಳನ್ನು ನೇಮಕ ಮಾಡಿದ ದಿನಾಂಕದಿಂದ ಒಂದು ವರ್ಷದ ಅವಧಿಗೆ ಅಥವಾ ತೆಗೆದುಹಾಕುವವರೆಗೆ (ಇದರಲ್ಲಿ ಯಾವುದು ಮೊದಲು ಅಲ್ಲಿಯವರೆಗೆ) ನೇಮಕ ಮಾಡತಕ್ಕದ್ದು. ಯಾವುದೇ ಹುದ್ದೆ ಖಾಲಿಯಾದಲ್ಲಿ, ಖಾಲಿಹುದ್ದೆಯನ್ನು ಖಾಲಿಯಾದ ದಿನಾಂಕದಿಂದ ಮೂವತ್ತು ದಿನಗಳ ಒಳಗಾಗಿ ಆಯುಕ್ತರು ಆದೇಶದ ಮೂಲಕ ಭರ್ತಿ ಮಾಡತಕ್ಕದ್ದು.

10.5.2.7. ಅಧಿಕಾರೇತರ ಸದಸ್ಯರುಗಳಿಗೆ ಉಪವೇಶನ ಭತ್ಯೆ ಇರತಕ್ಕದ್ದಲ್ಲ.

10.5.2.8. ಪುನರ್ ಪರಿಶೀಲನಾ ಸಮಿತಿಯು, ನಿಯಮಿತ ಸುನಾವಣೆಯ ಜೊತೆಗೆ ಅನಧಿಕೃತ ಜಾಹೀರಾತು ಸಾಧನಗಳನ್ನು ತೆಗೆದು ಹಾಕುವುದು, ಅದರಲ್ಲೂ ವಿಶೇಷವಾಗಿ ಸಾರ್ವಜನಿಕರ ಸುರಕ್ಷತೆಗೆ ಬಾಧಕವಾಗುವಂತಹ ಜಾಹೀರಾತು ಸಂಬಂಧಿತ ಸಮಸ್ಯೆಗಳನ್ನು ಮೇಲ್ವಿಚಾರಣೆ ಮಾಡಲು ತಿಂಗಳಲ್ಲಿ ಕನಿಷ್ಠ ಪಕ್ಷ ಒಂದು ಬಾರಿ ಸಭೆ ಸೇರತಕ್ಕದ್ದು.

10.5.2.9. ಪುನರ್ ಪರಿಶೀಲನಾ ಸಮಿತಿಯು, ಯಾವುದೇ ಆದೇಶದ ನಿಖರತೆ, ಕಾನೂನುಬದ್ಧತೆ ಅಥವಾ ಒಡೆತನದ ಬಗ್ಗೆ ಸ್ವತಃ ಮನವರಿಕೆ ಮಾಡಿಕೊಳ್ಳುವ ಉದ್ದೇಶಕ್ಕಾಗಿ ನಿಯೋಜಿತ ವಲಯ ಅಧಿಕಾರಿಯ ಮುಂದೆ ನಡೆದ ವ್ಯವಹರಣೆಗಳ ದಾಖಲೆಗಳನ್ನು ಸಲ್ಲಿಸುವಂತೆ ಕೇಳಬಹುದು. ಅಹವಾಲನ್ನು ಹೇಳಿಕೊಳ್ಳಲು ಅವಕಾಶವನ್ನು ನೀಡಿದ ನಂತರ, ತನಗೆ ಸೂಕ್ತವೆಂದು ಭಾವಿಸಬಹುದಾದಂತೆ ಅದಕ್ಕೆ ಸಂಬಂಧಿಸಿದ ಆದೇಶಗಳನ್ನು ಮಾಡಬಹುದು.

10.5.2.10. ಸಭೆಗೆ ಅಗತ್ಯವಾದ ಕೋರಂ ಮೂರು ಸದಸ್ಯರದ್ದಾಗಿರತಕ್ಕದ್ದು. ಸಮಿತಿಯ ಅಭಿಪ್ರಾಯವು ಬಹುಮತದ್ದಾಗಿರತಕ್ಕದ್ದು.

10.5.2.11. ಪುನರ್ ಪರಿಶೀಲನಾ ಸಮಿತಿಯು, ನಿಯೋಜಿತ ವಲಯ ಅಧಿಕಾರಿಯ ಆದೇಶದ ವಿರುದ್ಧ ಸಲ್ಲಿಸಲಾದ ಪುನರ್ ಪರಿಶೀಲನಾ ಅರ್ಜಿಯನ್ನು ಸುನಾವಣೆ ಮಾಡತಕ್ಕದ್ದು ಮತ್ತು ಅರ್ಜಿಯನ್ನು ಸಲ್ಲಿಸಿದ ಮೂವತ್ತು ದಿನಗಳ ಅವಧಿಯ ಒಳಗಾಗಿ ಅಂತಹ ಅರ್ಜಿಯನ್ನು ವಿಲೇ ಮಾಡತಕ್ಕದ್ದು.

10.5.2.12. ಪುನರ್ ಪರಿಶೀಲನಾ ಸಮಿತಿಯು, ಸ್ವಯಂ ಪ್ರೇರಿತವಾಗಿ ತನ್ನ ಅಧಿಕಾರವನ್ನು ಚಲಾಯಿಸುವ ಮೂಲಕ ಮತ್ತು ಕರ್ನಾಟಕ ನಗರಪಾಲಿಕೆಗಳ ಅಧಿನಿಯಮ, 1976 ಮತ್ತು / ಅಥವಾ ಜಾರಿಯಲ್ಲಿರುವ ಇತರ ಕಾನೂನಿನಡಿಯಲ್ಲಿ ಪ್ರದತ್ತವಾದ ಅಂತಹ ಅಧಿಕಾರಗಳ ಮೇರೆಗೆ ವಿವಾದಾತ್ಮಕ ಜಾಹೀರಾತು ವಿಷಯಗಳನ್ನು ವಿಚಾರಣೆಗೆ ತೆಗೆದುಕೊಳ್ಳಲು ಅಧಿಕಾರ ಹೊಂದಿರುತ್ತದೆ.

10.5.2.13. ಪುನರ್ ಪರಿಶೀಲನಾ ಸಮಿತಿಯ ಪ್ರತಿಯೊಂದು ನಿರ್ಧಾರವು, ಆಯುಕ್ತರು ಹೊರಡಿಸುವ ಅಂತಿಮ ಆದೇಶಗಳಿಗೆ ಒಳಪಟ್ಟಿರತಕ್ಕದ್ದು.

10.5.2.14. ಪ್ರತಿಯೊಂದು ಸಂದರ್ಭದಲ್ಲಿ, ಪುನರ್ ಪರಿಶೀಲನಾ ಸಮಿತಿಯ ಚರ್ಚೆಗಳು ಬರವಣಿಗೆಯಲ್ಲಿ ಇಳಿಸತಕ್ಕದ್ದು ಮತ್ತು ಅದು ದಾಖಲೆಯ ಭಾಗದ ರೂಪದಲ್ಲಿರತಕ್ಕದ್ದು.

10.6. ವ್ಯತ್ಯಾಸಗಳು.–

ಆಯುಕ್ತರು ಅಥವಾ ಅವರ ನಿಯೋಜಿತ ಅಧಿಕಾರಿಯು ನಗರ ಅಥವಾ ಸಮುದಾಯಕ್ಕೆ ಜಾಹೀರಾತು ಫಲಕದ ನಿರ್ದಿಷ್ಟ ಸ್ವರೂಪ, ವಿಶಿಷ್ಟತೆ ಅಥವಾ ಮೌಲ್ಯವನ್ನು ಪರಿಗಣಿಸಿ ಗೊತ್ತುಪಡಿಸಿದ ಪ್ರದೇಶದಲ್ಲಿ ಅದನ್ನು ನಿಲ್ಲಿಸಲು ಅವಕಾಶ ಮಾಡಿಕೊಡುವ ಮೂಲಕ ಲಿಖಿತದಲ್ಲಿ, ಕೋರಿಕೆಯನ್ನು ಅನುಮೋದಿಸಬಹುದು.

10.6.1. ಆಯುಕ್ತರು, ಆದೇಶದ ಮೂಲಕ ಈ ಕೆಳಗಿನವರನ್ನು ಒಳಗೊಂಡಿರುವ ಒಂದು ವಿನ್ಯಾಸ ಪುನರ್ ಪರಿಶೀಲನಾ ಸಮಿತಿಯನ್ನು ರಚಿಸತಕ್ಕದ್ದು: –

10.6.1.1. ವಿಶೇಷ ಆಯುಕ್ತರು (ಪ್ರಾಜೆಕ್ಟ್);

10.6.1.2. ಜಂಟಿ ಆಯುಕ್ತರು (ಜಾಹೀರಾತು);

10.6.1.3. ಮುಖ್ಯ ಎಂಜಿನಿಯರ್ (ಪ್ರಾಜೆಕ್ಟ್);

10.6.1.4. ಸಾರ್ವಜನಿಕ ಕ್ಷೇತ್ರದಲ್ಲಿ ಸಂಬಂಧಿತ ವಿಷಯದಲ್ಲಿ ಅನುಭವ ಹೊಂದಿರುವ ವಿನ್ಯಾಸ ತಜ್ಞರು;

10.6.1.5. ಪ್ರಭಾವ ಬೀರುವ ಪ್ರದೇಶದೊಳಗಿನ ನೋಂದಾಯಿತ ಸ್ಥಳೀಯ ಸಮುದಾಯದ ಅಧ್ಯಕ್ಷ ಅಥವಾ ಕಾರ್ಯದರ್ಶಿ; ಮತ್ತು

10.6.2. ಅಧಿಕಾರೇತರ ಸದಸ್ಯರು ನೇಮಕದ ದಿನಾಂಕದಿಂದ ಒಂದು ವರ್ಷದ ಅವಧಿಗೆ ಅಥವಾ ಅಂತಹ ಸದಸ್ಯನನ್ನು ತೆಗೆದುಹಾಕುವವರೆಗೆ ಇವುಗಳಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಇರತಕ್ಕದ್ದು.

10.6.3. ಅಧಿಕಾರೇತರ ಸದಸ್ಯರಿಗೆ ಉಪವೇಶನ ಭತ್ಯೆ ಇರುವುದಿಲ್ಲ.

10.6.4. ವಿನ್ಯಾಸ ಪುನರ್ ಪರಿಶೀಲನಾ ಸಮಿತಿಯು, ವ್ಯತ್ಯಾಸದ ಬಗ್ಗೆ ಅರ್ಜಿಗಳು ಬಂದಾಗಲೆಲ್ಲಾ ಸಭೆ ಸೇರತಕ್ಕದ್ದು.

10.6.5. ವಿನ್ಯಾಸ ಪುನರ್ ಪರಿಶೀಲನಾ ಸಮಿತಿಯ ಪ್ರತಿಯೊಂದು ನಿರ್ಧಾರವು, ಆಯುಕ್ತರು ಹೊರಡಿಸುವ ಅಂತಿಮ ಆದೇಶಗಳಿಗೆ ಒಳಪಟ್ಟಿರತಕ್ಕದ್ದು.

10.6.6. ಪ್ರತಿಯೊಂದು ಸಂದರ್ಭದಲ್ಲಿ, ವಿನ್ಯಾಸ ಪುನರ್ ಪರಿಶೀಲನಾ ಸಮಿತಿಯ ಚರ್ಚೆಗಳು ಬರವಣಿಗೆಯಲ್ಲಿ ಇಳಿಸತಕ್ಕದ್ದು ಮತ್ತು ಅದು ದಾಖಲೆಯ ಭಾಗದ ರೂಪದಲ್ಲಿರತಕ್ಕದ್ದು.

10.6.7. ವಿನ್ಯಾಸ ಪುನರ್ ಪರಿಶೀಲನಾ ಸಮಿತಿಯು, ಸಮುದಾಯ ಮತ್ತು ಅರ್ಜಿದಾರರಿಂದಲೂ ಸಹ ಮಾಹಿತಿಯನ್ನು ಪಡೆಯತಕ್ಕದ್ದು.

10.6.8. ವಿನ್ಯಾಸ ಪುನರ್ ಪರಿಶೀಲನಾ ಸಮಿತಿಯು, ಪರಿಶೀಲನೆಯ ಆದೇಶವನ್ನು ಹೊರಡಿಸುವ ಮುಂಚೆ, ವಿಶೇಷ ಪ್ರದೇಶ ಪರಿಗಣನೆಗಳು, ವಿಶೇಷ ರಸ್ತೆ, ಪ್ರದರ್ಶನಗಳು, ವಿಶೇಷ ಜಾಹಿರಾತು ಫಲಕ ಪರಿಶೀಲನೆ ಮತ್ತು ಇತರ ಮಾನದಂಡಗಳನ್ನು ಗಣನೆಗೆ ತೆಗೆದುಕೊಳ್ಳತಕ್ಕದ್ದು.

11. ಇತರ ಷರತ್ತುಗಳು.–

11.1. ಯಾರೇ ವ್ಯಕ್ತಿಯು ತಂಬಾಕು ಆಧಾರಿತ ಅಥವಾ ಆಲ್ಕೋಹಾಲ್ ಯುಕ್ತ ಉತ್ಪನ್ನಗಳ ಬಗ್ಗೆ ಜಾಹೀರಾತು ಮಾಡತಕ್ಕದ್ದಲ್ಲ.

11.2. ಯಾರೇ ವ್ಯಕ್ತಿ ಅಥವಾ ಜಾಹೀರಾತು ಏಜೆನ್ಸಿಯು ಜಾಹಿರಾತುಗಳನ್ನು ಪ್ರದರ್ಶಿಸುವಾಗ ಕನ್ನಡ ಭಾಷೆಗೆ ಹೆಚ್ಚಿನ ಆದ್ಯತೆ ನೀಡತಕ್ಕದ್ದು ಮತ್ತು ವ್ಯಾಕರಣದ ತಪ್ಪುಗಳಿಗೆ ಅವಕಾಶ ನೀಡತಕ್ಕದ್ದಲ್ಲ.

11.3. ಖಾಸಗಿ–ಪಕ್ಷಕಾರರು ತಮ್ಮ ಸ್ವಂತ ಹಣವನ್ನು ಬಳಸಿಕೊಂಡುಬಿಬಿಎಂಪಿಯು ಜಾಹೀರಾತು ಹಾಕಲು ಅವಕಾಶ ನೀಡಿರುವಂತಹ ಬಸ್ ತಂಗುದಾಣ, ಪಾದಚಾರಿ – ಮಾರ್ಗಗಳು, ಸ್ಕೈ–ವಾಕ್, ರಸ್ತೆ ವಿಭಜಕಗಳು ಮತ್ತು ಇತರ ನಾಗರಿಕ ಮೂಲಸೌಕರ್ಯಗಳನ್ನು ಸೃಜಿಸುವ ಸಾರ್ವಜನಿಕ–ಖಾಸಗಿ ಪಾಲುದಾರಿಕೆ ಯೋಜನೆಗಳಿಗೆ ಈ ಉಪವಿಧಿಗಳು ಅನ್ವಯವಾಗತಕ್ಕದ್ದಲ್ಲ.

12. ನಿರಸನ ಮತ್ತು ಉಳಿಸುವಿಕೆಗಳು.–

12.1 ಬೆಂಗಳೂರು ಮಹಾನಗರ ಪಾಲಿಕೆ ಜಾಹೀರಾತು ಉಪವಿಧಿಗಳು, 2006 ಅನ್ನು ಈ ಮೂಲಕ ನಿರಸನಗೊಳಿಸಲಾಗಿದೆ.

ಪರಂತು ಅಂಥ ನಿರಸನವು ಈ ಕೆಳಗಿನವುಗಳಿಗೆ ಬಾಧಕವಾಗತಕ್ಕದ್ದಲ್ಲ.

(ಎ) ಸದರಿ ಉಪವಿಧಿಗಳ ಹಿಂದಿನ ಕಾರ್ಯಾಚರಣೆ ಅಥವಾ ಅದರ ಅಡಿಯಲ್ಲಿ ಯುಕ್ತವಾಗಿ ಮಾಡಿದ ಅಥವಾ ಮಾಡಲು ಎಡೆಕೊಟ್ಟ ಯಾವುದೇ ಕಾರ್ಯ; ಅಥವಾ

(ಬಿ) ಸದರಿ ಉಪವಿಧಿಗಳ ಅಡಿಯಲ್ಲಿ ಆರ್ಜಿಸಿದ, ಪ್ರಾಪ್ತವಾದ ಅಥವಾ ಭರಿಸಿದ ಯಾವುದೇ ಹಕ್ಕು, ವಿಶೇಷಾಧಿಕಾರ, ಹೊಣೆಗಾರಿಕೆ ಅಥವಾ ಬಾಧ್ಯತೆ.

(ಸಿ) ನಿರಸನಗೊಂಡ ಯಾವುದೇ ಉಪವಿಧಿಗಳಲ್ಲಿನ ಅಥವಾ ಉಪವಿಧಿಗಳ ಆದೇಶದಲ್ಲಿನ ಯಾವುದೇ ಉಲ್ಲೇಖವನ್ನು, ಈ ಉಪವಿಧಿಗಳ ಉಲ್ಲೇಖವೆಂಬುದಾಗಿ ಅರ್ಥೈಸತಕ್ಕದ್ದು.

(ಡಿ) ನಿರಸಿತ ಉಪವಿಧಿಗಳ ಮೇರೆಗೆ ಪ್ರಾರಂಭಿಸಲಾದ ಹಾಗೂ ಈ ಉಪವಿಧಿಗಳ ಪ್ರಾರಂಭದ ದಿನಾಂಕದಂದು ಬಾಕಿಯಿರುವ ಎಲ್ಲಾ ವ್ಯವಹರಣೆಗಳನ್ನು ಈ ಉಪವಿಧಿಗಳ ಉಪಬಂಧಗಳಿಗನುಸಾರವಾಗಿ ಮುಂದುವರಿಸತಕ್ಕದ್ದು ಮತ್ತು ವಿಲೆ ಮಾಡತಕ್ಕದ್ದು.

12.2. ಬಿಬಿಎಂಪಿ ಹೊರಾಂಗಣ ಜಾಹಿರಾತು ಫಲಕಗಳಲ್ಲಿ ಮತ್ತು ಸಾರ್ವಜನಿಕ ಸಂದೇಶ ಉಪವಿಧಿಗಳು, 2018 ರಲ್ಲಿ ಏನೇ ಒಳಗೊಂಡಿದ್ದಾಗ್ಯೂ, ಸಾರ್ವಜನಿಕ ಖಾಸಗಿ ಪಾಲುದಾರಿಕೆ ಮಾದರಿಯಲ್ಲಿ ಸ್ಕೈವಾಕ್‌ಗಳು, ಶೌಚಾಲಯಗಳು ಮತ್ತು ಬಸ್ ತಂಗುದಾಣಗಳಲ್ಲಿ ಪ್ರದರ್ಶಿಸುವ ಜಾಹೀರಾತುಗಳು, ಬೆಂಗಳೂರು ಮಹಾನಗರ ಪಾಲಿಕೆ ಜಾಹೀರಾತು ಉಪವಿಧಿಗಳು, 2006ರ ಉಪಬಂಧಗಳ ಮೇರೆಗೆ ಬಿಬಿಎಂಪಿ ಮತ್ತು ಜಾಹೀರಾತು ಏಜೆನ್ಸಿಗಳ ಮೂಲಕ ಮತ್ತು ಅವರ ನಡುವೆ ಮಾಡಿಕೊಂಡ ಕರಾರುಗಳ ಅಥವಾ ಒಪ್ಪಂದಗಳ ಕಾರಣದಿಂದಾಗಿ ಪ್ರದರ್ಶಿತವಾಗುತ್ತಿರುವ ಜಾಹೀರಾತುಗಳು. ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ಪ್ರಮಾಣೀಕರಿಸಿದ ಜೈವಿಕ ವಿಘಟನೀಯ ವಸ್ತುಗಳನ್ನು ಅಂಥ ಏಜೆನ್ಸಿಗಳು ಬಳಸುವುದಕ್ಕೆ ಒಳಪಟ್ಟು, ಕರ್ನಾಟಕ ಸರ್ಕಾರವು ಅಧಿಸೂಚನೆ ಸಂಖ್ಯೆ ಎಫ್‌ಇಇ 17 ಇಪಿಸಿ 2012, ದಿನಾಂಕ: 11.03.2016ರ ಅಡಿಯಲ್ಲಿ ಹೊರಡಿಸಿರುವ ನಿರ್ದೇಶನಗಳನ್ನು ಉಲ್ಲಂಘಿಸದಂತೆ ಇರತಕ್ಕದ್ದು ಮತ್ತು ಅವುಗಳನ್ನು ಹಾಗೇ ಉಳಿಸತಕ್ಕದ್ದು.

12.3. ಅದಲ್ಲದೆ, ಬಿಬಿಎಂಪಿ ಹೊರಾಂಗಣ ಜಾಹೀರಾತು ಫಲಕ ಮತ್ತು ಸಾರ್ವಜನಿಕ ಸಂದೇಶ ಉಪವಿಧಿಗಳು 2018ರಲ್ಲಿ ಏನೇ ಒಳಗೊಂಡಿದ್ದರೂ, ಬಿಬಿಎಂಪಿಯ ಪರಿಮಿತಿಯೊಳಗೆ, ಪಿಪಿಪಿ ಮಾದರಿಯಲ್ಲಿ ನಿರ್ಮಿಸಿದ ನಿರ್ಮಾಣಗಳ ಮೇಲೆ ಪ್ರದರ್ಶಿಸಿದ ಜಾಹೀರಾತು ಫಲಕಗಳಿಗೆ ಸಂಬಂಧಿಸಿದಂತೆ 01–07–2017 ರಂದು ಜಾರಿಗೆ ಬಂದಿರುವ ದರ ಪಟ್ಟಿಯಂತೆ ಶುಲ್ಕದ ತಗಾದೆ ಅಧಿಕಾರವನ್ನು ಈ ಮೂಲಕ ಉಳಿಸಲಾಗಿದೆ.

12.4. ಇದಲ್ಲದೇ, ಬಿಬಿಎಂಪಿ ಹೊರಾಂಗಣ ಜಾಹಿರಾತು ಫಲಕಗಳು ಮತ್ತು ಸಾರ್ವಜನಿಕ ಸಂದೇಶ ಉಪವಿಧಿಗಳು, 2018ರಲ್ಲಿ ಏನೇ ಒಳಗೊಂಡಿದ್ದಾಗ್ಯೂ, ವೈಮಾನಿಕ ಪ್ರದರ್ಶನ, ಸರ್ಕಾರ / ಪಾಲಿಕೆ ಪ್ರಾಯೋಜಿತ ಜಾಹೀರಾತುಗಳನ್ನು ಪ್ರದರ್ಶಿಸುವಂತಹ ವಿಶೇಷ ಸಂದರ್ಭಗಳಲ್ಲಿ, ಅಂತಹ ಸೀಮಿತ ಅವಧಿ, ಸ್ಥಳ ಮತ್ತು ಸಮಯಕ್ಕಾಗಿ ಬಿಬಿಎಂಪಿಯು ಜಾಹೀರಾತು ಫಲಕ / ಜಾಹೀರಾತನ್ನು ಪ್ರದರ್ಶಿಸುವುದಕ್ಕೆ ಅನುಮತಿ ನೀಡುವುದನ್ನು ಈ ಮೂಲಕ ಉಳಿಸಲಾಗಿದೆ.

ಅನುಸೂಚಿ – I

[ಉಪ–ವಿಧಿ 8.5ನ್ನು ನೋಡಿ

ಕರಡು ಪ್ರತಿಯಲ್ಲಿದ್ದಂತೆ	ಕ್ರ. ಸಂ.	ಉಪವಿಧಿ ಸಂಖ್ಯೆ	ವಿಷಯ	ದಂಡ
-----	01.	2.5.1	ಜಾಹೀರಾತು ಫಲಕದಲ್ಲಿ ಅಗತ್ಯತೆಗಳನ್ನು ತಿಳಿಸದಿರುವುದು	ಉಲ್ಲಂಘನೆಯ ಬಗ್ಗೆ ದೂರು ಬಂದಲ್ಲಿ ಈ ಮುಂದಿನಂತೆ ದಂಡನೀಯವಾಗತಕ್ಕದ್ದು: (ಎ) ಒಂದು ಸಾವಿರ ರೂ.ಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಮತ್ತು ಉಲ್ಲಂಘನೆಯು ಮುಂದುವರೆದ ಸಂದರ್ಭದಲ್ಲಿ, ಮೊದಲ ಉಲ್ಲಂಘನೆಯು ನಿರ್ಣೀತವಾದ ತರುವಾಯದ ಉಲ್ಲಂಘನೆ ಮುಂದುವರೆಯುತ್ತಿರುವ ಅವಧಿಯಲ್ಲಿ ಪ್ರತಿದಿನಕ್ಕೆ ಮುನ್ನೂರು ರೂಪಾಯಿಗಳಿಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ **ಅಥವಾ** (ಬಿ) ಅಂತಹ ಉಲ್ಲಂಘನೆಯನ್ನು ನಿಲ್ಲಿಸುವಂತೆ ಆಯುಕ್ತರಿಂದ ನೋಟಿಸ್ ಸ್ವೀಕರಿಸಿದ ನಂತರ ಉಲ್ಲಂಘನೆ ಮುಂದುವರಿದ ಪ್ರತಿ ದಿನದ ಉಲ್ಲಂಘನೆಗೆ ಇನ್ನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡನೀಯವಾಗಿರತಕ್ಕದ್ದು.
--- --	02.	2.5.3	ಸಂಯೋಜಿತ ಜಾಹೀರಾತು ಫಲಕದ ಮೇಲೆ ವಿವಿಧ ಉದ್ಯಮಗಳ ಹೆಸರುಗಳನ್ನು ಪ್ರಕಟಿಸದಿರುವುದು	–ಮೇಲಿನಂತೆ–
-----	03.	2.5.4	ಅನುಮೋದಿತ ಬಾರ್–ಕೋಡ್ ಅನ್ನು ಪ್ರಕಟಿಸದಿರುವುದು	–ಮೇಲಿನಂತೆ–
-----	04.	3.1	ಜಾಹೀರಾತಿನ ಅಳತೆಗಳನ್ನು ಅನುಸರಿಸುವಲ್ಲಿ ವಿಫಲತೆ	–ಮೇಲಿನಂತೆ–
-----	05.	3.2.1	ಜಾಹೀರಾತು ಫಲಕಗಳನ್ನು ಪ್ರದರ್ಶಿಸಲು ಅನುಮತಿ ನೀಡುವ ದಸ್ತಾವೇಜುಗಳನ್ನು ಹಾಜರುಪಡಿಸದಿರುವುದು (ಉದಾ: ಜಾಹೀರಾತುಗಳನ್ನು ವಸತಿ ಪ್ರದೇಶದಲ್ಲಿ ಪ್ರದರ್ಶಿಸುವುದು ಅಥವಾ ಅನುಮತಿಯಿಲ್ಲದೆ ಪ್ರದರ್ಶಿಸುವುದು)	–ಮೇಲಿನಂತೆ–
-----	06.	3.2.2	"ರಸ್ತೆಗಳಲ್ಲಿ ಸ್ವತಂತ್ರವಾಗಿ ನಿಲ್ಲಿಸಿರುವ ಜಾಹೀರಾತು ಫಲಕಗಳ" ನಿಷೇಧಿತ ಪ್ರದರ್ಶನ	–ಮೇಲಿನಂತೆ–
-----	07.	3.2.3	ಒಂದಕ್ಕಿಂತ ಹೆಚ್ಚು "ಸ್ವತಂತ್ರವಾಗಿ ನಿಲ್ಲಿಸಿರುವ ಜಾಹೀರಾತು ಫಲಕದ" ಅಳವಡಿಕೆ	–ಮೇಲಿನಂತೆ–
-----	08.	3.2.8	ಮುಂಭಾಗದಲ್ಲಿ ಕನಿಷ್ಠ 15 ಮೀ. ಅಂತರ ಬಿಡಬೇಕಾಗಿರುವ ಯಾವುದೇ ರೀತಿಯ ಉಲ್ಲಂಘನೆ.	–ಮೇಲಿನಂತೆ–

-----	09.	3.2.8	ಉಪವಿಧಿಗಳನ್ನು ಉಲ್ಲಂಘಿಸಿ 15 ಮೀ. ಗಿಂತ ಕಡಿಮೆ ಮುಂಭಾಗವಿರುವ ಸ್ವತ್ತುಗಳಲ್ಲಿ "ಸ್ವತಂತ್ರವಾಗಿ ನಿಲ್ಲಿಸಿರುವ ಜಾಹೀರಾತು ಫಲಕ" ಗಳ ಪ್ರದರ್ಶನ.	–ಮೇಲಿನಂತೆ–
-----	10.	3.2.7	ಆಯುಕ್ತರ ಆದೇಶವಿಲ್ಲದೆ ಉದ್ಯಾನವನ, ಬಯಲು ಸ್ಥಳಗಳು ಮತ್ತು ಆಟದ ಮೈದಾನಗಳಲ್ಲಿ "ಸ್ವತಂತ್ರವಾಗಿ ನಿಲ್ಲಿಸಿರುವ ಜಾಹೀರಾತು ಫಲಕ" ಗಳ ಅಳವಡಿಕೆ	–ಮೇಲಿನಂತೆ–
-----	11.	3.2.4	ವಾಣಿಜ್ಯ ಮತ್ತು ಮಿಶ್ರ ಬಳಕೆಯ ಪ್ರದೇಶ ಇತ್ಯಾದಿಗಳಲ್ಲಿ "ಪ್ರದೇಶದ ಅಳತೆ"ಯ ಉಲ್ಲಂಘನೆ, ಇತ್ಯಾದಿ.	–ಮೇಲಿನಂತೆ–
-----	12.	3.2.5	ವಾಣಿಜ್ಯ ಪ್ರದೇಶದಲ್ಲಿ "ಪ್ರದೇಶದ ಅಳತೆ"ಯ ಉಲ್ಲಂಘನೆ.	–ಮೇಲಿನಂತೆ–
-----	13.	3.2.9	ಸಾರ್ವಜನಿಕ ಹಕ್ಕಿನ ಹಾದಿಯಲ್ಲಿ ಅಥವಾ ಅದರ ಮೇಲೆ ಅತಿಕ್ರಮಣ ಮಾಡುವುದರ ಮೂಲಕ ಸ್ವತಂತ್ರವಾಗಿ ನಿಲ್ಲಿಸಿರುವ ಜಾಹೀರಾತು ಫಲಕಗಳ ಪ್ರದರ್ಶನ	–ಮೇಲಿನಂತೆ–
-----	14.	3.2.10	ಸ್ವತಂತ್ರವಾಗಿ ನಿಲ್ಲಿಸಿರುವ ಜಾಹೀರಾತು ಫಲಕಗಳ ಕಂಬಕ್ಕೆ ಅಥವಾ ಅದರ ಬುಡಕ್ಕೆ ತಾತ್ಕಾಲಿಕ ಜಾಹೀರಾತುಗಳನ್ನು ಅಳವಡಿಸಿರುವುದು	–ಮೇಲಿನಂತೆ–
----	15.	3.2.11	ಸ್ವತಂತ್ರವಾಗಿ ನಿಲ್ಲಿಸಿರುವ ಜಾಹೀರಾತು ಫಲಕಗಳನ್ನು ಬೆಳಗಿಸಲು ದೀಪಗಳು ನೇರವಾಗಿ ಜಾಹೀರಾತಿನ ಮೇಲೆ ಬೀಳದೆ, ಬೇರೆಡೆ ಬೀಳುವುದು	–ಮೇಲಿನಂತೆ–
-----	16.	3.2.12	"ಸ್ವತಂತ್ರವಾಗಿ ನಿಲ್ಲಿಸಿರುವ ಜಾಹೀರಾತು ಫಲಕ" ಗಳ ನಡುವಿನ ಅಂತರದ ಉಲ್ಲಂಘನೆ	–ಮೇಲಿನಂತೆ–
-----	17.	3.2.13	"ಸ್ವತಂತ್ರವಾಗಿ ನಿಲ್ಲಿಸಿರುವ ಜಾಹೀರಾತು ಫಲಕ" ಗಳ ಪಠ್ಯದಲ್ಲಿ ಕನಿಷ್ಠ 40:60 ರ ಅನುಪಾತ ಉಲ್ಲಂಘನೆ	–ಮೇಲಿನಂತೆ–
-----	18.	3.2.15	ಸ್ಮಾರಕ ಗ್ರಾಫಿಕ್ ಅನ್ನು ಶೇ.20 ಕ್ಕೂ ಮೀರಿ ಹೆಚ್ಚಿನ ಗಾತ್ರದಲ್ಲಿ ಪ್ರದರ್ಶನ	–ಮೇಲಿನಂತೆ–
-----	19.	3.2.6	ಶಾಪಿಂಗ್ ಸೆಂಟರ್, ಮಾಲ್, ಬಹೂಪಯೋಗಿ ಕಟ್ಟಡವು, "ಸ್ವತಂತ್ರವಾಗಿ ನಿಲ್ಲಿಸಿರುವ ಜಾಹೀರಾತು ಕಂಬಗಳಿಗೆ ಸಂಬಂಧಿಸಿದ" ವಿಸ್ತೀರ್ಣದ ಮಿತಿಯನ್ನು ಮೀರಿದ್ದರೆ.	–ಮೇಲಿನಂತೆ–
-----	20.	3.2.6	ಶಾಪಿಂಗ್ ಸೆಂಟರ್, ಮಾಲ್, ಬಹೂಪಯೋಗಿ ಕಟ್ಟಡಗಳಲ್ಲಿನ ಅಧಿಭೋಗದಾರನು "ಸ್ವತಂತ್ರವಾಗಿ ನಿಲ್ಲಿಸಿರುವ ಜಾಹೀರಾತು ಫಲಕ"ಗಳನ್ನು ಅನಧಿಕೃತವಾಗಿ ಬಳಸುತ್ತಿದ್ದರೆ.	–ಮೇಲಿನಂತೆ–
-----	21.	3.2.6	ಶಾಪಿಂಗ್ ಸೆಂಟರ್, ಮಾಲ್ ಮತ್ತು ಬಹೂಪಯೋಗಿ ಕಟ್ಟಡದೊಳಗಿನ ಅಧಿಭೋಗದಾರನು ಮುಂಭಾಗದಲ್ಲಿ ಗೋಡೆಯ ಬಳಿ "ಸ್ವತಂತ್ರವಾಗಿ ನಿಲ್ಲಿಸಿರುವ ಜಾಹೀರಾತು ಫಲಕ" ಗಳನ್ನು ಅನಧಿಕೃತವಾಗಿ ಪ್ರದರ್ಶಿಸಿದ್ದರೆ.	–ಮೇಲಿನಂತೆ–
-----	22.	3.3.1	ಆನಿಂಗ್ ಜಾಹೀರಾತುಗಳಿಗೆ ಸಂಬಂಧಿಸಿದಂತೆ ಕನಿಷ್ಠ 2.2 ಮೀಟರ್ ಲಂಬ ತೆರವನ್ನು ಕಾಯ್ದುಕೊಳ್ಳದಿದ್ದರೆ	–ಮೇಲಿನಂತೆ–
-----	23.	3.3.2	ವಸತಿ ಪ್ರದೇಶದಲ್ಲಿ ಮಾರ್ಕೀಗಳ ಬಳಕೆ	–ಮೇಲಿನಂತೆ–
-----	24.	3.3.2	ಗರಿಷ್ಠ ಜಾಹೀರಾತು ಪ್ರದೇಶದ ಉಲ್ಲಂಘನೆ	–ಮೇಲಿನಂತೆ–

-----	25.	3.3.3	ಉಪವಿಧಿಗಳು ಮತ್ತು ಅಗ್ನಿಶಾಮಕ ಸುರಕ್ಷತಾ ಮಾನದಂಡಗಳ ಅಡಿಯಲ್ಲಿ ಅನುಮತಿಸದೇ ಇರುವ ವಸ್ತುಗಳನ್ನು ಆನಿಂಗ್, ಕೆನೋಪಿ, ಮಾರ್ಕೀಗಳಿಗಾಗಿ ಬಳಸುವುದು.	–ಮೇಲಿನಂತೆ–
-----	26.	3.3.4	ಸಾರ್ವಜನಿಕ ಹಾದಿಯ ರೇಖೆಯವರೆಗೆ ಆನಿಂಗ್, ಕೆನೋಪಿ, ಮಾರ್ಕೀಗಳನ್ನು ನಿರ್ಮಿಸುವುದು	–ಮೇಲಿನಂತೆ–
-----	27.	3.3.6	ಉಪವಿಧಿಗಳಿಗೆ ವಿರುದ್ಧವಾಗಿ ಆಧಾರಕ್ಕಾಗಿ ಬಾಹ್ಯ ಕಾಲಮ್‌ಗಳನ್ನು ಅಥವಾ ಕಂಬಗಳನ್ನು ನಿಲ್ಲಿಸುವುದು	–ಮೇಲಿನಂತೆ–
-----	28.	3.3.7	ಆನಿಂಗ್ ಮತ್ತು ಕೆನೋಪಿ ಫಲಕಗಳನ್ನು ಅವುಗಳ ಒಳಗಿನಿಂದ ಬೆಳಗಿಸುವುದು	–ಮೇಲಿನಂತೆ–
-----	29.	3.3.8	ನಿರ್ಬಂಧವಿದ್ದರೂ ಹಿಂದಿನಿಂದ ಬೆಳಕು ಬೀರುವ ಮತ್ತು ಜಲಪಾತಗಳಿರುವ ಮೇಲ್ಕಟ್ಟುಗಳನ್ನು ನಿರ್ಮಿಸುವುದು	–ಮೇಲಿನಂತೆ–
-----	30.	3.3.9	ಮೇಲ್ಮೈ ವಿಸ್ತೀರ್ಣ 25% ಮೀರಿದ ಎಲ್ಲಾ ಮೂರು ಫಲಕಗಳ ಮೇಲೆ ಮುದ್ರಣ	–ಮೇಲಿನಂತೆ–
-----	31.	3.3.10	0.6 ಮೀ. ಎತ್ತರವನ್ನು ಮೀರಿ ಘನ ಆನಿಂಗ್ ಮೇಲ್ಭಾಗದಲ್ಲಿ ಅಕ್ಷರಗಳನ್ನು, ಒಳಗೊಂಡ ಫಲಕಗಳನ್ನು ರಚಿಸುವುದು ಮತ್ತು / ಅಥವಾ ಒಂದು ಮೀ. ಗಿಂತ ಹೆಚ್ಚಿನ ಎತ್ತರದ ಮಾರ್ಕೀ ಛಾವಣಿಯ ಮೇಲೆ ಅಕ್ಷರಗಳನ್ನು ಜೋಡಿಸಿರುವ ಮಾರ್ಕೀಗಳನ್ನು ನಿರ್ಮಿಸುವುದು.	–ಮೇಲಿನಂತೆ–
-----	32.	3.3.11	ಕಂಬಗಳ ನಡುವೆ ಮತ್ತು ಕಂಬಗಳು ಮತ್ತು ಯಾವುದೇ ಕಟ್ಟಡದ ಗೋಡೆಯ ಮಧ್ಯೆ ಕನಿಷ್ಠ 1.5 ಮೀ. ಅಂತರವನ್ನು ಬಿಡದೇ ಇರುವುದು.	–ಮೇಲಿನಂತೆ–
-----	33	3.3.12	ಆನಿಂಗ್ ಫಲಕಗಳ ಅಡಿಯಲ್ಲಿ ಯಾವುದೇ ನಿಯಮಗಳ ಉಲ್ಲಂಘನೆ– ಪ್ರತಿಯೊಂದಕ್ಕೂ	–ಮೇಲಿನಂತೆ–
-----	34.	3.3.13	2 ನೇ ಮಹಡಿಯ ಕಿಟಕಿ ಹಲಗೆಯ ಕೆಳಗೆ ಮಾರ್ಕೀಗಳ ಛಾವಣಿಯ ರಚನೆಯನ್ನು ಮಾಡದಿರುವುದು ಮತ್ತು ಲಂಬದಲ್ಲಿ ಕನಿಷ್ಠ 2.5 ಮೀಟರ್‌ಗಳ ಜಾಗ ಬಿಡದೇ ನಿರ್ಮಿಸಿರುವುದು.	–ಮೇಲಿನಂತೆ–
-----	35.	3.3.14	ಅನುಮತಿಸಲಾದ ಉದ್ದೇಶವನ್ನು ಹೊರತುಪಡಿಸಿ ಬೇರೆ ಉದ್ದೇಶಕ್ಕಾಗಿ ಮಾರ್ಕೀಗಳನ್ನು ಬಳಸುವುದು.	–ಮೇಲಿನಂತೆ–
-----	36.	3.3.14	ದಹಿಸಲಾಗದ ವಸ್ತುಗಳೊಂದಿಗೆ ಮಾರ್ಕೀಗಳನ್ನು ನಿರ್ಮಿಸದಿರುವುದು.	–ಮೇಲಿನಂತೆ–
-----	37.	3.3.15	ಮಾರ್ಕೀಗಳಿಂದ ನೀರನ್ನು ಸಾರ್ವಜನಿಕ ದಾರಿಯ ಮೇಲೆ ಹನಿಹನಿಯಾಗಿ ಬೀಳಲು, ತೊಟ್ಟಿಕ್ಕಲು, ಅಥವಾ ಹರಿಯಲು ಬಿಡುವುದು.	–ಮೇಲಿನಂತೆ–
-----	38.	3.3.15	ಮಾರ್ಕೀಯಿಂದ ನೀರು ಸಾರ್ವಜನಿಕ ಹಾದಿಯ ಮೇಲೆ ಹರಿಯದಂತೆ ತಡೆಯಲು ಪ್ರತಿ ಮಾರ್ಕೀಯ ಭಾಗವಾಗಿ ಮಳೆ ನೀರು ಕೆಳಗೆ ಹರಿಯುವಂತೆ ಕೊಳವೆಗಳು, ಚರಂಡಿಗಳು ಮತ್ತು ಗಟಾರಗಳನ್ನು ನಿರ್ಮಿಸದಿರುವುದು	–ಮೇಲಿನಂತೆ–
-----	39.	3.4	"ಮುಂಚಾಚು ಜಾಹಿರಾತು ಫಲಕಗಳ" (ಪ್ರಾಜೆಕ್ಟಿಂಗ್ ಸೈನ್ಸ್) ಯಾವುದೇ ಷರತ್ತುಗಳನ್ನು ಪಾಲಿಸದಿರುವುದು – ಪ್ರತಿಯೊಂದಕ್ಕೂ	–ಮೇಲಿನಂತೆ–
-----	40.	3.5	"ಕಿಟಕಿ ಜಾಹಿರಾತು ಫಲಕಗಳ" (ವಿಂಡೋ ಸೈನ್ಸ್) ಯಾವುದೇ ಷರತ್ತುಗಳನ್ನು ಪಾಲಿಸದಿರುವುದು – ಪ್ರತಿಯೊಂದಕ್ಕೂ	–ಮೇಲಿನಂತೆ–
-----	41.	3.6	"ಕಂಬಗಳ ಮೇಲಿನ ತಾತ್ಕಾಲಿಕ ಜಾಹಿರಾತು ಫಲಕಗಳ" (ಟೆಂಪೊರರಿ ಪೋಲ್ ಸೈನ್ಸ್) ಯಾವುದೇ ಷರತ್ತುಗಳನ್ನು ಪಾಲಿಸದಿರುವುದು – ಪ್ರತಿಯೊಂದಕ್ಕೂ	–ಮೇಲಿನಂತೆ–
-----	42.	3.7	"ಎಲೆಕ್ಟ್ರಾನಿಕ್ ಸಂದೇಶ ಜಾಹಿರಾತು ಫಲಕಗಳ" (ಎಲೆಕ್ಟ್ರಾನಿಕ್ ಮೆಸೇಜ್ ಸೈನ್ಸ್) ಯಾವುದೇ ಷರತ್ತುಗಳನ್ನು ಪಾಲಿಸದಿರುವುದು – ಪ್ರತಿಯೊಂದಕ್ಕೂ	–ಮೇಲಿನಂತೆ–

-----	43.	3.8	"ಗೋಡೆ ಜಾಹಿರಾತು ಫಲಕಗಳ" (ವಾಲ್ ಸೈನ್ಸ್) ಯಾವುದೇ ಷರತ್ತುಗಳನ್ನು ಪಾಲಿಸದಿರುವುದು – ಪ್ರತಿಯೊಂದಕ್ಕೂ	–ಮೇಲಿನಂತೆ–
-----	44.	3.9	"ಛಾವಣಿಯ ಗೋಡೆಯ ಜಾಹಿರಾತು ಫಲಕಗಳ" (ರೂಫ್ ವಾಲ್ ಸೈನ್ಸ್) ಯಾವುದೇ ಷರತ್ತುಗಳನ್ನು ಪಾಲಿಸದಿರುವುದು – ಪ್ರತಿಯೊಂದಕ್ಕೂ	–ಮೇಲಿನಂತೆ–
-----	45.	3.10	"ವಾಹನ ಜಾಹಿರಾತು ಫಲಕಗಳ" (ವೆಹಿಕಲ್ ಸೈನ್ಸ್) ಯಾವುದೇ ಷರತ್ತುಗಳನ್ನು ಪಾಲಿಸದಿರುವುದು – ಪ್ರತಿಯೊಂದಕ್ಕೂ	–ಮೇಲಿನಂತೆ–
-----	46.	3.11.1	"ಗೋಡೆ ಜಾಹಿರಾತು ಫಲಕಗಳ" (ವಾಲ್ ಸೈನ್ಸ್) ಯಾವುದೇ ಷರತ್ತುಗಳನ್ನು ಪಾಲಿಸದಿರುವುದು – ಪ್ರತಿಯೊಂದಕ್ಕೂ	–ಮೇಲಿನಂತೆ–
-----	47.	3.11	"ಪ್ರಾಯೋಜಿತ ಜಾಹೀರಾತು ಫಲಕಗಳ" (ಸ್ಪಾನ್ಸರ್ಡ್ ಅಡ್ವರ್ಟೈಸ್‌ಮೆಂಟ್ ಸೈನ್ಸ್) ಯಾವುದೇ ಷರತ್ತುಗಳನ್ನು ಪಾಲಿಸದಿರುವುದು – ಪ್ರತಿಯೊಂದಕ್ಕೂ	–ಮೇಲಿನಂತೆ–
-----	48.	3.11.2	"ಪಾದಚಾರಿ ಸೇತುವೆಗಳು ಮತ್ತು ಅಂಡರ್ ಪಾಸ್" ಗಳ ಯಾವುದೇ ಷರತ್ತುಗಳನ್ನು ಪಾಲಿಸದಿರುವುದು – ಪ್ರತಿಯೊಂದಕ್ಕೂ	–ಮೇಲಿನಂತೆ–
-----	49.	3.11.3	ಇ–ಶೌಚಾಲಯಗಳಿಗೆ ಸಂಬಂಧಿಸಿದ ಷರತ್ತುಗಳನ್ನು ಪಾಲಿಸದಿರುವುದು	–ಮೇಲಿನಂತೆ–
-----	50.	3.11.4	ಸಾರ್ವಜನಿಕ ಉದ್ಯಾನವನಗಳು, ಮನೋರಂಜನಾ ಮೈದಾನಗಳ ಜಾಹೀರಾತು ಫಲಕಗಳು, ಬೀದಿ ಪೀಠೋಪಕರಣಗಳು, ಸಾರ್ವಜನಿಕ ಕಲೆ, ಕ್ರೀಡಾಂಗಣಗಳು ಮತ್ತು ಕ್ರೀಡಾ ರಂಗಗಳಿಗೆ ಸಂಬಂಧಿಸಿದ ಷರತ್ತುಗಳ ಉಲ್ಲಂಘನೆ.	–ಮೇಲಿನಂತೆ–
-----	51.	4	ವಿನ್ಯಾಸ ಮತ್ತು ನಿರ್ಮಾಣ ಮಾನದಂಡಗಳಿಗೆ ಸಂಬಂಧಿಸಿದ ಷರತ್ತುಗಳ ಉಲ್ಲಂಘನೆ– ಪ್ರತಿಯೊಂದಕ್ಕೂ	–ಮೇಲಿನಂತೆ–
-----	52.	5.1	ನಿಯಮಗಳಿಗೆ ಅನುಗುಣವಾಗಿ ಇಲ್ಲದ ಬೀದಿ ಬದಿ ಸ್ವಯಂ ಜಾಹೀರಾತು ಅಥವಾ ಜಾಹೀರಾತು ರಚನೆಗಳನ್ನು ಈ ಉಪವಿಧಿಗಳಿಗೆ ಅನುಗುಣವಾಗಿ ಆರು ತಿಂಗಳ ಒಳಗಿನ ಅವಧಿಯಲ್ಲಿ (ಈ ಉಪವಿಧಿಗಳು ಜಾರಿಗೆ ಬಂದ ನಂತರ) ಅನುಸರಿಸದಿರುವುದು.	–ಮೇಲಿನಂತೆ–
-----	53.	5.3	ಆರು ತಿಂಗಳೊಳಗಿನ ಅವಧಿಯಲ್ಲಿ ಅನುಸರಣೆಯ ಪ್ರಮಾಣಪತ್ರವನ್ನು ಪಡೆಯದಿರುವುದು (ಈ ಉಪವಿಧಿಗಳು ಜಾರಿಗೆ ಬಂದ ನಂತರ)	–ಮೇಲಿನಂತೆ–
-----	54.	6.2	"ಬೆಳಕಿನ ಯೋಜನೆ ಅವಶ್ಯಕತೆಗಳ (ಲೈಟಿಂಗ್ ಪ್ಲಾನ್ ರಿಕ್ವೈರ್‌ಮೆಂಟ್ಸ್" ಯಾವುದೇ ಅವಶ್ಯಕತೆಗಳನ್ನು ಪಾಲಿಸದಿರುವುದು – ಪ್ರತಿಯೊಂದಕ್ಕೂ	–ಮೇಲಿನಂತೆ–
-----	55.	6.3	"ಗರಿಷ್ಠ ಬೆಳಕಿನ ನಿಯಮಗಳ (ಮ್ಯಾಕ್ಸಿಮಂ ಲೈಟಿಂಗ್ ರೆಗ್ಯುಲೇಷನ್ಸ್)" ಯಾವುದೇ ಷರತ್ತುಗಳನ್ನು ಪಾಲಿಸದಿರುವುದು – ಪ್ರತಿಯೊಂದಕ್ಕೂ	–ಮೇಲಿನಂತೆ–
-----	55.	6.4	"ಲುಮಿನೇರ್" ಮಾನದಂಡಗಳನ್ನು ಪಾಲಿಸದಿರುವುದು – ಪ್ರತಿಯೊಂದಕ್ಕೂ	–ಮೇಲಿನಂತೆ–
-----	56.	6.5	"ಪ್ರಕಾಶಮಾನ (ಇಲ್ಯುಮಿನೇಷನ್)" ದ ಯಾವುದೇ ಮಾನದಂಡಗಳನ್ನು ಪಾಲಿಸದಿರುವುದು – ಪ್ರತಿಯೊಂದಕ್ಕೂ	–ಮೇಲಿನಂತೆ–
-----	57.	6.6	"ಲೈಟಿಂಗ್"ಗೆ ಸಂಬಂಧಿಸಿದ ಯಾವುವೇ ನಿರ್ಬಂಧಗಳಿಗೆ ಬದ್ಧವಾಗಿಲ್ಲದಿರುವುದು – ಪ್ರತಿಯೊಂದಕ್ಕೂ	–ಮೇಲಿನಂತೆ–
-----	58.	7	ನಿಷೇಧಿತ ಜಾಹೀರಾತು ಫಲಕಗಳ ಬಳಕೆ – ಪ್ರತಿಯೊಂದಕ್ಕೂ	–ಮೇಲಿನಂತೆ–
-----	59.	7.2	ನಿಷೇಧಿತ ಜಾಹೀರಾತು ಫಲಕದಿಂದ ವಾಹನ ಸಂಚಾರಕ್ಕೆ ಅಪಾಯವನ್ನುಂಟುಮಾಡುವುದು – ಪ್ರತಿಯೊಂದಕ್ಕೂ	–ಮೇಲಿನಂತೆ–

-----	60	7.3	ನಿಷೇಧಿತ ಜಾಹೀರಾತು ಫಲಕಗಳ ಪ್ರದರ್ಶನ – ಪ್ರತಿಯೊಂದಕ್ಕೂ	–ಮೇಲಿನಂತೆ–
-----	61.	8.1	ನೋಟೀಸನ್ನು ಜಾರಿಗೊಳಿಸಿದರೂ ಸಾರ್ವಜನಿಕ ಆಸ್ತಿಯಲ್ಲಿ ಅಥವಾ ಸಾರ್ವಜನಿಕ ರಸ್ತೆಯಲ್ಲಿ ಅಥವಾ ಸಾರ್ವಜನಿಕ ಜಾಗದಲ್ಲಿ ಅನುಮತಿಯಿಲ್ಲದೆ ಅಥವಾ ಅಗತ್ಯವಾದ ಜಾಹೀರಾತು ಫಲಕಕ್ಕೆ ಅನುಮತಿಯಿಲ್ಲದೆ ಹಾಕಲಾದ ಯಾವುದೇ ಜಾಹೀರಾತು ಫಲಕವನ್ನು, ತೆಗೆದುಹಾಕದಿರುವುದು.	–ಮೇಲಿನಂತೆ–
-----	62.	8.2	ನೋಟೀಸನ್ನು ಜಾರಿಗೊಳಿಸಿದರೂ ಅಗತ್ಯ ಪರವಾನಗಿ ಇಲ್ಲದೆ, ಅಥವಾ ಉಪ–ವಿಧಿಯನ್ನು ಉಲ್ಲಂಘಿಸಿ ಕಾನೂನುಬಾಹಿರವಾಗಿ ನಿರ್ಮಿಸಲಾದ ಯಾವುದೇ ಜಾಹೀರಾತು ಫಲಕವನ್ನು ತೆಗೆದುಹಾಕದಿರುವುದು.	–ಮೇಲಿನಂತೆ–
-----	63.	9.1	ಬದಲಾವಣೆ ಮತ್ತು ನಿರ್ವಹಣೆ ಕಾರ್ಯಾಚರಣೆಗಳಿಗೆ ಸಂಬಂಧಿಸಿದ ಯಾವುದೇ ಷರತ್ತುಗಳ ಉಲ್ಲಂಘನೆ – ಪ್ರತಿಯೊಂದಕ್ಕೂ	–ಮೇಲಿನಂತೆ–
-----	64.	9.2	ನಿರ್ಮಾಣ ಜಾಹೀರಾತು ಫಲಕಗಳಿಗೆ ಸಂಬಂಧಿಸಿದ ಯಾವುವೇ ಷರತ್ತುಗಳ ಉಲ್ಲಂಘನೆ – ಪ್ರತಿಯೊಂದಕ್ಕೂ	–ಮೇಲಿನಂತೆ–
-----	65.	9.3	ದಿಕ್ಕು ಸೂಚಕ ಜಾಹೀರಾತು ಫಲಕಗಳಿಗೆ ಸಂಬಂಧಿಸಿದ ಯಾವುವೇ ಷರತ್ತುಗಳ ಉಲ್ಲಂಘನೆ	–ಮೇಲಿನಂತೆ–
-----	66.	9.4.1	ಹಬ್ಬದ ಅಲಂಕಾರಗಳಿಗೆ ಸಂಬಂಧಿಸಿದ ಲೈಟಿಂಗ್ ಮಾನದಂಡಗಳಿಗೆ ಬದ್ಧವಾಗಿಲ್ಲದಿರುವುದು.	–ಮೇಲಿನಂತೆ–
-----	67.	9.6	ಬ್ಯಾನರ್ ಪ್ರದರ್ಶನಕ್ಕೆ ಸಂಬಂಧಿಸಿದ ಯಾವುದೇ ಷರತ್ತುಗಳ ಉಲ್ಲಂಘನೆ.	–ಮೇಲಿನಂತೆ–
-----	68.	9.7	ಸ್ಮಾರಕ ಫಲಕಗಳಿಗೆ ಸಂಬಂಧಿಸಿದ ಯಾವುದೇ ಷರತ್ತುಗಳಿಗೆ ಬದ್ಧವಾಗಿಲ್ಲದಿರುವುದು – ಪ್ರತಿಯೊಂದಕ್ಕೂ	–ಮೇಲಿನಂತೆ–
-----	69.	9.8	ನಾಮಫಲಕಗಳಿಗೆ (ವಸತಿ ಕಟ್ಟಡಗಳು) ಸಂಬಂಧಿಸಿದ ಯಾವುದೇ ಷರತ್ತುಗಳಿಗೆ ಬದ್ಧವಾಗಿಲ್ಲದಿರುವುದು – ಪ್ರತಿಯೊಂದಕ್ಕೂ	–ಮೇಲಿನಂತೆ–
-----	70.	9.9	ವಾಹನ ನಿಲುಗಡೆ ಸೂಚನಾಫಲಕಗಳಿಗೆ ಸಂಬಂಧಿಸಿದ ನಿರ್ದೇಶನಗಳು / ಮಾಹಿತಿಗಳ ಉಲ್ಲಂಘನೆ – ಪ್ರತಿಯೊಂದಕ್ಕೂ	–ಮೇಲಿನಂತೆ–
	71.	9.10	ರಾಜಕೀಯ ಅಥವಾ ವಾಣಿಜ್ಯೇತರ ಸಂದೇಶ ಕಳುಹಿಸುವಿಕೆಗೆ ಸಂಬಂಧಿಸಿದ ನಿರ್ದೇಶನಗಳು / ಷರತ್ತುಗಳ ಉಲ್ಲಂಘನೆ.	–ಮೇಲಿನಂತೆ–
-----	72	9.11	ಆಸ್ತಿ ಗುರುತಿನ ಫಲಕಗಳಿಗೆ ಸಂಬಂಧಿಸಿದ ಷರತ್ತುಗಳ ಉಲ್ಲಂಘನೆ – ಪ್ರತಿಯೊಂದಕ್ಕೂ	–ಮೇಲಿನಂತೆ–
-----	73	9.12	ರಿಯಲ್ ಎಸ್ಟೇಟ್ ಜಾಹೀರಾತು ಫಲಕಗಳಿಗೆ ಸಂಬಂಧಿಸಿದ ಷರತ್ತುಗಳ ಉಲ್ಲಂಘನೆ – ಪ್ರತಿಯೊಂದಕ್ಕೂ	–ಮೇಲಿನಂತೆ–
-----	74.	9.13	ಸ್ಕೋರ್ ಬೋರ್ಡ್‌ಗಳಿಗೆ ಸಂಬಂಧಿಸಿದ ಷರತ್ತುಗಳ ಉಲ್ಲಂಘನೆ – ಪ್ರತಿಯೊಂದಕ್ಕೂ	–ಮೇಲಿನಂತೆ–
-----	75.	10	ಅನುಮೋದನೆ ಪ್ರಕ್ರಿಯೆಗೆ ಸಂಬಂಧಿಸಿದ ಯಾವುದೇ ಷರತ್ತುಗಳ ಉಲ್ಲಂಘನೆ – ಪ್ರತಿಯೊಂದಕ್ಕೂ	–ಮೇಲಿನಂತೆ–
-----	76.		ಮೇಲಿನ ಪಟ್ಟಿಯ ವ್ಯಾಪ್ತಿಗೆ ಬರದಿರುವ ಯಾವುದೇ ಉಪೇಕ್ಷೆ / ಉಲ್ಲಂಘನೆ.	–ಮೇಲಿನಂತೆ–

(ಸೂಚನೆ:ಜಾಹೀರಾತು ಫಲಕದ ಪ್ರದರ್ಶನಕ್ಕಾಗಿ ಈ ಉಪ–ವಿಧಿಗಳಿಗೆ ಅನುಗುಣವಾಗಿ ಷರತ್ತುಗಳ ಉಲ್ಲಂಘನೆಯು, ಹೆಚ್ಚುವರಿಯಾಗಿ ಎರಡು ವರ್ಷಗಳ ಅಥವಾ ಅದಕ್ಕಿಂತ ಹೆಚ್ಚಿನ ಅವಧಿಗೆ ಯಾವುದೇ ಭವಿಷ್ಯದ ಪ್ರದರ್ಶನಕ್ಕೆ ನಿರ್ಬಂಧವನ್ನು ವಿಧಿಸಲು ಕಾರಣವಾಗಬಹುದು, ಇದನ್ನು ಬಿಬಿಎಂಪಿ ಆಯುಕ್ತರು ಅಥವಾ ಅವರಿಂದ ನಿಯೋಜಿತರಾದ ಅಧಿಕಾರಿಗಳು ನಿರ್ಧರಿಸುತ್ತಾರೆ.)

ಅನುಸೂಚಿ – II

ಪೂರ್ವ, ಪಶ್ಚಿಮ, ದಕ್ಷಿಣ, ಯಲಹಂಕ ಮತ್ತು ಮಹದೇವಪುರ ವಲಯಗಳ ಈ ಮುಂದಿನ ಸ್ಥಳಗಳಿಗೆ, ಶುಲ್ಕವನ್ನು ಉಪ–ವಿಧಿಗಳ ಪ್ಯಾರಾ –10.4.4.4 ರಂತೆ ಲೆಕ್ಕ ಹಾಕಬೇಕು.

ಪೂರ್ವ ವಲಯ

1. ಎಂ.ಜಿ.ರಸ್ತೆ: – ಟ್ರಿನಿಟಿ ವೃತ್ತದಿಂದ ಕುಂಬ್ಳೆ ವೃತ್ತ
2. ರೆಸಿಡೆನ್ಸಿ ರಸ್ತೆ: – ರಿಚ್ಮಂಡ್ ನಿಂದ ಮೇಯೋಹಾಲ್ ವರೆಗೆ
3. ಬ್ರಿಗೇಡ್ ರಸ್ತೆ: – ಎಂ.ಜಿ.ರಸ್ತೆಯಿಂದ ವೆಲ್ಲಾರ ಜಂಕ್ಷನ್ ವರೆಗೆ
4. ಕಮರ್ಷಿಯಲ್ ಸ್ಟ್ರೀಟ್: – ಕಾಮರಾಜ ರಸ್ತೆಯಿಂದ ಒ.ಪಿ.ಎಚ್.ರಸ್ತೆವರೆಗೆ
5. ಕಾಮರಾಜ ರಸ್ತೆ: – ಕಾಮರಾಜ ಜಂಕ್ಷನ್‌ನಿಂದ ಸೇಂಟ್ ಜಾನ್ ಚರ್ಚ್ ಜಂಕ್ಷನ್‌ವರೆಗೆ
6. ರಿಚ್ಮಂಡ್ ರಸ್ತೆ: – ಡಿಸೋಜಾ ವೃತ್ತದಿಂದ ರಿಚ್ಮಂಡ್ ವೃತ್ತದವರೆಗೆ
7. ಇನ್‌ಫೆಂಟ್ರಿ ರಸ್ತೆ: – ವಿಶ್ವೇಶ್ವರಯ್ಯ ಕಟ್ಟಡದಿಂದ ಸಫೀನಾ ಪ್ಲಾಜಾದವರೆಗೆ
8. ಕನ್ನಿಂಗ್‌ಹ್ಯಾಮ್ ರಸ್ತೆ: – ಕ್ವೀನ್ಸ್ ವೃತ್ತದಿಂದ ಚಂದ್ರಿಕಾ ಹೋಟೆಲ್ ವರೆಗೆ
9. ಹೊಸ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ರಸ್ತೆ: – ವಿಂಡ್ಸರ್ ಮ್ಯಾನರ್ ಜಂಕ್ಷನ್‌ನಿಂದ ಹೆಬ್ಬಾಳ ಮೇಲ್ಸೇತುವೆಯವರೆಗೆ
10. ವಿಟ್ಠಲ ಮಲ್ಯ ರಸ್ತೆ: – ಸೇಂಟ್ ಮಾರ್ಕ್ ರಸ್ತೆಯಿಂದ ರಾಜರಾಮ್ ಮೋಹನ್ ರಾಯ್ ರಸ್ತೆಯವರೆಗೆ
11. ಕ್ವೀನ್ಸ್ ರಸ್ತೆ: – ಪಶುವೈದ್ಯಕೀಯ ಆಸ್ಪತ್ರೆಯಿಂದ ಇಂಡಿಯನ್ ಎಕ್ಸ್‌ಪ್ರೆಸ್ ರಸ್ತೆಯವರೆಗೆ
12. ಜಯಮಹಲ್ ಮುಖ್ಯರಸ್ತೆ: – ಮೆಕ್ರಿ ವೃತ್ತದಿಂದ ಕ್ವೀನ್ಸ್ ರಸ್ತೆಯವರೆಗೆ
13. ಕಸ್ತೂರಿ ಬಾ ರಸ್ತೆ: – ಗಾಂಧಿ ಪ್ರತಿಮೆಯಿಂದ ಯು.ಬಿ.ಸಿಟಿ ಜಂಕ್ಷನ್‌ವರೆಗೆ
14. ಕಮರ್ಷಿಯಲ್ ರಸ್ತೆ: – ಮೇಯೋ ಹಾಲ್ ನಿಂದ ಡಿಸೋಜಾ ವೃತ್ತದವರೆಗೆ
15. ಅರಮನೆ ರಸ್ತೆ: – ಸಿಂಧು ಹೋಟೆಲ್‌ನಿಂದ ಮೌಂಟ್ ಕಾರ್ಮೆಲ್ ರೈಲ್ವೆ ಸೇತುವೆಯವರೆಗೆ
16. ವಿಕ್ಟೋರಿಯಾ ರಸ್ತೆ: – ಇಂಡಿಯಾ ಗ್ಯಾರೇಜ್ ನಿಂದ ಡಿಸೋಜಾ ವೃತ್ತದವರೆಗೆ
17. ಹಳೆಯ ವಿಮಾನ ನಿಲ್ದಾಣ ರಸ್ತೆ: – ದೊಮ್ಮಲೂರು ಮೇಲ್ಸೇತುವೆಯಿಂದ ಹಳೆಯ ವಿಮಾನ ನಿಲ್ದಾಣದ ಗೇಟ್‌ವರೆಗೆ
18. ಸೇಂಟ್ ಮಾರ್ಕ್ ರಸ್ತೆ: – ಎಂ.ಜಿ.ರಸ್ತೆಯ ಕುಂಬ್ಳೆ ವೃತ್ತದಿಂದ ರೆಸಿಡೆನ್ಸಿ ರಸ್ತೆಯವರೆಗೆ
19. ಹೊಸೂರು ರಸ್ತೆ: – ವೆಲ್ಲಾರ ಜಂಕ್ಷನ್‌ನಿಂದ ಪಕ್ಕದಲ್ಲಿರುವ ಬೃಹತ್ ಕಾಲುವೆಯ ಮೂಲಕ ಕ್ರಿಶ್ಚಿಯನ್ ಸಮುದಾಯ ಸ್ಮಶಾನದವರೆಗೆ

ಪಶ್ಚಿಮ ವಲಯ

1. ಸಂಪಿಗೆ ರಸ್ತೆ: – ಮಂತ್ರಿ ಮಾಲ್ ನಿಂದ ಮಲ್ಲೇಶ್ವರಂ ವೃತ್ತದವರೆಗೆ
2. ಕುಮಾರ ಕೃಪಾ ರಸ್ತೆ: – ಶಿವಾನಂದ ವೃತ್ತದಿಂದ ರಾಜೀವ್‌ಗಾಂಧಿ ಪ್ರತಿಮೆಯವರೆಗೆ
3. ಟಿ.ಚೌಡಯ್ಯ ರಸ್ತೆ: – ಕಾವೇರಿ ಜಂಕ್ಷನ್‌ನಿಂದ ಮಲ್ಲೇಶ್ವರಂ 18 ನೇ ಮುಖ್ಯ ರಸ್ತೆಯವರೆಗೆ

ದಕ್ಷಿಣ ವಲಯ

1. ಹೊಸೂರು ರಸ್ತೆ: –ಕ್ರಿಶ್ಚಿಯನ್ ಸಮುದಾಯದ ಸ್ಮಶಾನದ ಪಕ್ಕದ ಬೃಹತ್ ಕಾಲುವೆಯಿಂದ ಸೆಂಟ್ರಲ್ ಸಿಲ್ಕ್‌ಬೋರ್ಡ್ ಜಂಕ್ಷನ್ ವರೆಗೆ
2. ಬಿ.ಟಿ.ಎಂ. ಮುಖ್ಯ ರಸ್ತೆ: – ರಾಘವೇಂದ್ರ ಮಠದಿಂದ ಸೆಂಟ್ರಲ್ ಸಿಲ್ಕ್ ಬೋರ್ಡ್ ಜಂಕ್ಷನ್ ವರೆಗೆ
3. ಕೋರಮಂಗಲ ವರ್ತುಲ ರಸ್ತೆ: – ದೊಮ್ಮಲೂರು ಮೇಲ್ಸೇತುವೆಯಿಂದ ಕೋರಮಂಗಲ ಬಿ.ಡಿ.ಎ ಕಾಂಪ್ಲೆಕ್ಸ್ ವರೆಗೆ
4. ಜಯನಗರ: – ಜಯನಗರ ವಾಣಿಜ್ಯ ಸಂಕೀರ್ಣದ ಸುತ್ತಮುತ್ತಲಿನ ರಸ್ತೆ (ಎಡ ಮತ್ತು ಬಲ)
5. ಆರ್.ವಿ.ರಸ್ತೆ: – ಲಾಲ್‌ಬಾಗ್ ಪಶ್ಚಿಮ ದ್ವಾರದಿಂದ ಬಿ.ಟಿ.ಎಂ. ಸೇರುವ ರಸ್ತೆ

ಯಲಹಂಕ ವಲಯ

1. ಹೊಸ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ರಸ್ತೆ: – ಹೆಬ್ಬಾಳ ಮೇಲ್ಸೇತುವೆಯಿಂದ ಬಿಬಿಎಂಪಿ ವ್ಯಾಪ್ತಿಯವರೆಗೆ

ಮಹದೇವಪುರ ವಲಯ

1. ಮಾರತ್‌ಹಳ್ಳಿ ಮುಖ್ಯ ರಸ್ತೆ: – ಹಳೆಯ ವಿಮಾನ ನಿಲ್ದಾಣದ ಗೇಟ್‌ನಿಂದ ಮಾರತ್‌ಹಳ್ಳಿ ವರ್ತುಲ ರಸ್ತೆಯವರೆಗೆ

ಬಿಬಿಎಂಪಿಯ ವ್ಯಾಪ್ತಿಯಲ್ಲಿರುವ ಸ್ಥಳಗಳು

01. ಬಿಎಂಟಿಸಿ ಬಸ್ ನಿಲ್ದಾಣ,
02. ಕೆ.ಎಸ್.ಆರ್.ಟಿ.ಸಿ ಬಸ್ ನಿಲ್ದಾಣ,
03. ಖಾಸಗಿ ಬಸ್ ನಿಲ್ದಾಣ, ಉದಾ: ಕಲಾಸಿಪಾಳ್ಯಂ, ಇತ್ಯಾದಿ
04. ಮೆಟ್ರೋ ನಿಲ್ದಾಣಗಳು,
05. ರೈಲ್ವೆ ನಿಲ್ದಾಣ / ಫ್ಲಾಟ್ ಫಾರ್ಮ್‌ಗಳು
06. ಎಚ್‌ಎಎಲ್ ವಿಮಾನ ನಿಲ್ದಾಣ.

ಅನುಸೂಚಿ –III

ಅನುಸೂಚಿ–II ರಲ್ಲಿ ಉಲ್ಲೇಖಿಸಲಾದ ಸ್ಥಳಗಳಿಗೆ ಶುಲ್ಕ ಪಟ್ಟಿ

ಕ್ರ. ಸಂ.	ಜಾಹೀರಾತಿನ ವಿಧಗಳು		ಪ್ರತಿ ಚ. ಮೀ. ಗೆ ಪ್ರತಿ ತಿಂಗಳಿಗೆ ದರ(ಹತ್ತಿರದ ರೂಪಾಯಿಯ ಮೌಲ್ಯಕ್ಕೆ ಸರಿಹೊಂದಿಸಲಾಗಿದೆ)
1	ಪ್ರಕಾಶಮಾನವಾದ (ಇಲ್ಯುಮಿನೇಟೆಡ್) ಜಾಹೀರಾತು	ಪ್ರಕಾಶಮಾನತೆ (15% ಆರೋಗ್ಯ ಕರ ಸೇರಿದಂತೆ)	ರೂ.780
2	ಪ್ರಕಾಶಮಾನವಲ್ಲದ (ನಾನ್ ಇಲ್ಯುಮಿನೇಟೆಡ್) ಜಾಹೀರಾತು	ಪ್ರಕಾಶಮಾನವಲ್ಲದ (ನಾನ್ಇಲ್ಯುಮಿನೇಟೆಡ್) (15% ಆರೋಗ್ಯ ಕರ ಸೇರಿದಂತೆ)	ರೂ.540
3	ನಿಯಾನ್	ನಿಯಾನ್ (15% ಆರೋಗ್ಯ ಕರ ಸೇರಿದಂತೆ)	ರೂ.1050
4	ತ್ರಿವಿಧ ಗೋಚರತೆ(ಟ್ರೈ ವಿಷನ್)	ತ್ರಿವಿಧ ಗೋಚರತೆ(ಟ್ರೈ ವಿಷನ್) (15% ಆರೋಗ್ಯ ಕರ ಸೇರಿದಂತೆ)	ರೂ.1560
5	ಎಲೆಕ್ಟ್ರಾನಿಕ್ಸ್	ಎಲೆಕ್ಟ್ರಾನಿಕ್ಸ್ (15% ಆರೋಗ್ಯ ಕರ ಸೇರಿದಂತೆ)	ರೂ.1560
6	ಬ್ಯಾನರ್‌ಗಳು	ಬ್ಯಾನರ್‌ಗಳು (ಪ್ರತಿ ವಾರಕ್ಕೆ ಮತ್ತು ಪ್ರತಿ ಮೀಟರ್‌ಗೆ)	ರೂ.270
7	ಬಂಟಿಂಗ್ಸ್‌ಗಳು	ಬಂಟಿಂಗ್ಸ್‌ಗಳು (ಪ್ರತಿ ಕಿಲೋ ಗ್ರಾಂಗೆ)	ರೂ.300

ಅನುಸೂಚಿ – IV

ರಾಜರಾಜೇಶ್ವರಿನಗರ, ಬೊಮ್ಮನಹಳ್ಳಿ, ದಾಸರಹಳ್ಳಿ ವಲಯಗಳು ಮತ್ತು ಅನುಸೂಚಿ– IIರಲ್ಲಿ ಪ್ರಸ್ತಾಪಿಸದ ಸ್ಥಳಗಳಿಗೆ ಸಂಬಂಧಿಸಿದಂತೆ, ಉಪ–ವಿಧಿ ಸಂ. 10.4.5. ರ ಪ್ರಕಾರ ನಿಗದಿಪಡಿಸಲಾದ ದರ ಪಟ್ಟಿ.

ಕ್ರ. ಸಂ.	ಜಾಹೀರಾತಿನ ವಿಧಗಳು		ಪ್ರತಿ ಚ. ಮೀ. ಗೆ ಪ್ರತಿ ತಿಂಗಳಿಗೆ ದರ(ಹತ್ತಿರದ ರೂಪಾಯಿಯ ಮೌಲ್ಯಕ್ಕೆ ಸರಿಹೊಂದಿಸಲಾಗಿದೆ)
1	ಪ್ರಕಾಶಮಾನವಾದ (ಇಲ್ಯುಮಿನೇಟೆಡ್) ಜಾಹೀರಾತು	ಪ್ರಕಾಶಮಾನವಾದ ಜಾಹೀರಾತು (15% ಆರೋಗ್ಯ ಕರ ಸೇರಿದಂತೆ)	ರೂ.600
2	ಪ್ರಕಾಶಮಾನವಲ್ಲದ (ನಾನ್ ಇಲ್ಯುಮಿನೇಟೆಡ್) ಜಾಹೀರಾತು	ಪ್ರಕಾಶಮಾನವಲ್ಲದ (ನಾನ್ಇಲ್ಯುಮಿನೇಟೆಡ್)ಜಾಹೀರಾತು (15% ಆರೋಗ್ಯ ಕರ ಸೇರಿದಂತೆ)	ರೂ.390
3	ನಿಯಾನ್	ನಿಯಾನ್ (15% ಆರೋಗ್ಯ ಕರ ಸೇರಿದಂತೆ)	ರೂ.780
4	ತ್ರಿವಿಧ ಗೋಚರತೆ(ಟ್ರೈ ವಿಷನ್)	ತ್ರಿವಿಧ ಗೋಚರತೆ(ಟ್ರೈ ವಿಷನ್) (15% ಆರೋಗ್ಯ ಕರ ಸೇರಿದಂತೆ)	ರೂ.1170
5	ಎಲೆಕ್ಟ್ರಾನಿಕ್ಸ್	ಎಲೆಕ್ಟ್ರಾನಿಕ್ಸ್ (15% ಆರೋಗ್ಯ ಕರ ಸೇರಿದಂತೆ)	ರೂ.1170
6	ಬ್ಯಾನರ್‌ಗಳು	ಬ್ಯಾನರ್‌ಗಳು (ಪ್ರತಿ ವಾರಕ್ಕೆ ಮತ್ತು ಪ್ರತಿ ಮೀಟರ್‌ಗೆ)	ರೂ.270
7	ಬಂಟಿಂಗ್ಸ್‌ಗಳು	ಬಂಟಿಂಗ್ಸ್‌ಗಳು (ಪ್ರತಿ ಕಿಲೋ ಗ್ರಾಂಗೆ)	ರೂ.300

ಅನುಸೂಚಿ– V

ಯಾವುದೇ ರೀತಿಯ ಜಾಹೀರಾತು ಫಲಕಗಳ ಪ್ರದರ್ಶನದ ನಿಷೇಧಿತ ಪ್ರದೇಶಗಳು

(ಉಪ–ವಿಧಿ ಸಂ. 10.4.6ನ್ನು ನೋಡಿ)

ಕ್ರ. ಸಂ.	ಸ್ಥಳಗಳು
1	ಕುಮಾರ ಕೃಪಾ ರಸ್ತೆ, ವಿಂಡ್ಸರ್ ಮ್ಯಾನರ್ ಜಂಕ್ಷನ್‌ನಿಂದ ಶಿವಾನಂದ ವೃತ್ತದವರೆಗೆ.
2	ರಾಜಭವನ ರಸ್ತೆ. ಹೈ ಗ್ರೌಂಡ್ಸ್‌ನಿಂದ ಮಿನ್ಸ್ಕ್ ಚೌಕದವರೆಗೆ.
3	ಅಂಬೇಡ್ಕರ್ ವೀಧಿ, ಕೆ ಆರ್ ವೃತ್ತದಿಂದ ಇನ್‌ಫೆಂಟ್ರಿ ರಸ್ತೆ ಜಂಕ್ಷನ್ ವರೆಗೆ.
4	ಪೋಸ್ಟ್ ಆಫೀಸ್ ರಸ್ತೆ, ಕೆ ಆರ್ ವೃತ್ತದಿಂದ ಎಸ್‌ಬಿಐ ವೃತ್ತದವರೆಗೆ (ಕೆ ಜಿ ರಸ್ತೆ)
5	ಚಾಲುಕ್ಯ ವೃತ್ತದಿಂದ ಬಸವೇಶ್ವರ ವೃತ್ತದವರೆಗೆ
6	ಮಹಾರಾಣಿ ಕಾಲೇಜು ರಸ್ತೆ
7	ಕೆ ಆರ್ ವೃತ್ತ
8	ಕಬ್ಬನ್ ಪಾರ್ಕ್ ಮತ್ತು ಲಾಲ್‌ಬಾಗ್‌ನ ಪರಿಸರ
9	ನೃಪತುಂಗ ರಸ್ತೆ, ಕೆ ಆರ್ ವೃತ್ತದಿಂದ ಪೊಲೀಸ್ ಕಾರ್ನರ್ ಜಂಕ್ಷನ್ ವರೆಗೆ
10	ಅರಮನೆ ರಸ್ತೆ, ಎಸ್‌ಬಿಐ ವೃತ್ತ (ಕೆ ಜಿ ರಸ್ತೆ) ದಿಂದ ಚಾಲುಕ್ಯ ವೃತ್ತದವರೆಗೆ.
11	ಓಲ್ಡ್ ಹೈ ಗ್ರೌಂಡ್ ಪೊಲೀಸ್ ವೃತ್ತದಿಂದ, ಬಾಲಬ್ರೂಹಿ ಅತಿಥಿ ಗೃಹ
12	ಗಾಲ್ಫ್ ಕ್ಲಬ್‌ನಿಂದ ವಿಂಡ್ಸರ್ ಮ್ಯಾನರ್ ಜಂಕ್ಷನ್ ಕಡೆಗೆ

ಕ್ರಮ ಸಂಖ್ಯೆ .....

ನಮೂನೆ ಸಂಖ್ಯೆ – 1

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

[ಉಪ–ವಿಧಿ 10.1ನ್ನು ನೋಡಿ]

ಹೊರಾಂಗಣ ಸ್ವಯಂ ಜಾಹೀರಾತು / ಸಾರ್ವಜನಿಕ ಸಂದೇಶ ಅಥವಾ ಜಾಹೀರಾತು ಫಲಕಗಳನ್ನು ನಿಲ್ಲಿಸುವುದಕ್ಕಾಗಿ ಅಥವಾ ಪ್ರದರ್ಶಿಸುವುದಕ್ಕಾಗಿ ಅರ್ಜಿ (ವರ್ಗಾಯಿಸಲಾಗದು)

(ಪ್ರತಿಯೊಂದು ಜಾಹೀರಾತು ಫಲಕಕ್ಕೆ ಅಥವಾ ಪ್ರಾಯೋಜಿತ ಜಾಹೀರಾತು ಸಂದೇಶ ಫಲಕಕ್ಕೆ ಪ್ರತ್ಯೇಕ ಅರ್ಜಿಯನ್ನು ಸಲ್ಲಿಸಬೇಕು)

ಸೂಚನೆ:ಯಾವುದೇ ಕಾಲಮ್ ಅನ್ನು ಖಾಲಿ ಬಿಡಬಾರದು. ನಿರ್ದಿಷ್ಟಪಡಿಸಿದ ಅಗತ್ಯ ದಾಖಲೆಗಳನ್ನು ಲಗತ್ತಿಸದಿರುವ ಅಪೂರ್ಣ ಅರ್ಜಿಯು ತಿರಸ್ಕರಿಸಲ್ಪಡುತ್ತದೆ ಮತ್ತು ಕಡತವನ್ನು ಮುಕ್ತಾಯಗೊಳಿಸಲಾಗುತ್ತದೆ.

ಇವರಿಗೆ,
ವಲಯ ಜಂಟಿ ಆಯುಕ್ತರು, .., ಬೆಂಗಳೂರು.

1	ಅರ್ಜಿದಾರನ/ರ ಹೆಸರು (ಸಂಸ್ಥೆ / ಕಂಪನಿ / ಸಂಸ್ಥೆ ಇತ್ಯಾದಿ ಆಗಿದ್ದರೆ, ದಾಖಲೆಗಳ ಪ್ರತಿಗಳೊಂದಿಗೆ ವಿವರಗಳು)	
2	ಅರ್ಜಿದಾರನ/ರ ನೋಂದಾಯಿತ ವಿಳಾಸ	
3	ಸಂಪರ್ಕ ಸಂಖ್ಯೆ: ಮೊಬೈಲ್ ಸಂಖ್ಯೆ.	
4	ಇಮೇಲ್ ವಿಳಾಸ	
5	ಪ್ಯಾನ್ ಸಂಖ್ಯೆ.	
6	ಜಿಎಸ್‌ಟಿ ವಿವರಗಳು	
7	ಆಸ್ತಿಯ ಮಾಲೀಕರ ಎನ್‌ಒಸಿ (ಅನ್ವಯಿಸಿದರೆ)ಯನ್ನು ಲಿಖಿತವಾಗಿ ಲಗತ್ತಿಸಬೇಕು	

8	ವಿದ್ಯುತ್ ಸರಬರಾಜಿನ ವಿವರಗಳು (ಪ್ರತಿಗಳನ್ನು ಲಗತ್ತಿಸಬೇಕು)	
9	ಸ್ಟ್ರೀಟ್ ಗ್ರಾಫಿಕ್ ಅನ್ನು ಎಲ್ಲಿ ಸ್ಥಾಪಿಸಬೇಕು ಅಥವಾ ಪ್ರದರ್ಶಿಸಬೇಕು ಎಂಬ ಬಗ್ಗೆ ವಿವರಗಳು, (ಅಂದಾಜು ಚಿತ್ರವನ್ನು ಲಗತ್ತಿಸಬೇಕು)	
10	ಜಾಹೀರಾತು ಫಲಕ/ ಬೀದಿ ಬದಿ (ಸ್ಟ್ರೀಟ್) ಗ್ರಾಫಿಕ್ ಅನ್ನು ನಿಲ್ಲಿಸಬೇಕಾದ ಅಥವಾ ಪ್ರದರ್ಶಿಸಬೇಕಾದ ದಿನಾಂಕ	
11	ಜಾಹೀರಾತು ಫಲಕ/ ಬೀದಿ ಬದಿ (ಸ್ಟ್ರೀಟ್) ಗ್ರಾಫಿಕ್ ಅನ್ನು ಸಾರ್ವಜನಿಕ ಆಸ್ತಿಯಲ್ಲಿ ಸ್ಥಾಪಿಸಬೇಕಾದರೆ, ಅಗತ್ಯವಾದ ಅನುಮತಿಯನ್ನು ಪಡೆಯಲಾಗಿದೆಯೆ ಅಥವಾ ಇಲ್ಲವೇ ಎಂದು ತಿಳಿಸಿ. ಪಡೆದಿದ್ದರೆ ಲಿಖಿತ ಅನುಮತಿಯ ಪ್ರತಿಯನ್ನು ಲಗತ್ತಿಸಬೇಕು.	
12	ವಲಯದ ಭೂ ಬಳಕೆಯ ವಿವರಗಳು ಮತ್ತು ಸ್ಥಳವಿರುವ ಪ್ರದೇಶದ ವಿಸ್ತೀರ್ಣವನ್ನು, ಯಾವುದಾದರೂ ದಾಖಲೆಗಳಿದ್ದರೆ, ಅವುಗಳೊಂದಿಗೆ ಒದಗಿಸುವುದು.	
13	ಸ್ಕೇಲ್‌ಗೆ ಅನುಗುಣವಾಗಿ ಒಂದು ಚಿತ್ರವನ್ನು ಬಿಡಿಸಿ; ಅದು ಈ ಕೆಳಗಿನವುಗಳನ್ನು ಒಳಗೊಂಡಿರಬೇಕು: 1. ಸ್ಥಳಲ್ಲಿ ಸದ್ಯಕ್ಕೆ ಪ್ರದರ್ಶಿಸಿರುವ ಎಲ್ಲಾ ಬೀದಿ ಬದಿ (ಸ್ಟ್ರೀಟ್) ಗ್ರಾಫಿಕ್ಸ್‌ಗಳು. 2. ಉದ್ದೇಶಿತ ಸಂಕೇತದ ಸ್ಥಳ, ಎತ್ತರ ಮತ್ತು ಗಾತ್ರ. 3. ಪ್ರದರ್ಶಿಸಲು ಉದ್ದೇಶಿಸಲಾದ ಮಾಹಿತಿಯ ವಸ್ತುಗಳು. 4. ಪ್ರಸ್ತಾವಿತ ಬೀದಿ ಬದಿ (ಸ್ಟ್ರೀಟ್) ಗ್ರಾಫಿಕ್ಸ್‌ನಿಂದ ಆವರಿಸಲ್ಪಡುವ ಜಾಹೀರಾತು ಪ್ರದೇಶದ ಶೇಕಡಾವಾರು ವಿಸ್ತೀರ್ಣ. 5. ನಿರ್ಮಾಣ ಅಥವಾ ಪ್ರದರ್ಶನ, ಬೆಳಗುವ ವ್ಯವಸ್ಥೆ, ಯಾಂತ್ರಿಕ ಚಲನೆ, ಯಾವುದಾದರೂ ಇದ್ದರೆ, ಅವುಗಳ ತಾಂತ್ರಿಕ ವಿವರಗಳನ್ನು ಒದಗಿಸುವುದು.	
14	ಜಾಹೀರಾತು ಫಲಕ / ಬೀದಿ ಬದಿ (ಸ್ಟ್ರೀಟ್) ಗ್ರಾಫಿಕ್‌ನ ಮುದ್ರಕ / ವಿನ್ಯಾಸಕ / ತಯಾರಕರ ಹೆಸರು ಮತ್ತು ವಿಳಾಸ. ಎ) ಸಂಪರ್ಕ ಸಂಖ್ಯೆ ಬಿ) ಇ–ಮೈಲ್ ವಿಳಾಸ ಸಿ) ಪ್ಯಾನ್ ಸಂಖ್ಯೆ ಡಿ) ಜಿಎಸ್‌ಟಿ ವಿವರಗಳು	
15	ಅರ್ಜಿದಾರ/ರು ಅರ್ಜಿಯ ದಿನಾಂಕದಂದು, ಒಂದು ವಹಿವಾಟನ್ನು ನಡೆಸಲು ಸೂಕ್ತ ಮತ್ತು ಕಾನೂನುಬದ್ಧ ವ್ಯಾಪಾರ ಪರವಾನಗಿಯನ್ನು ಹೊಂದಿದ್ದಾರೆಯೇ ಎಂಬುದಕ್ಕೆ ದಾಖಲೆ ಪ್ರತಿಗಳೊಂದಿಗೆ ವಿವರಗಳನ್ನು ಒದಗಿಸುವುದು.	
16	ಆಸ್ತಿ ತೆರಿಗೆಯನ್ನು ಪಾವತಿಸಲಾಗಿದೆಯೆ ಅಥವಾ ಇಲ್ಲವೇ ಎಂಬುದರ ಬಗ್ಗೆ ಇತ್ತೀಚಿನ ಮಾಹಿತಿ ನೀಡುವುದು. ಪಾವತಿಸಿದ್ದರೆ ದಾಖಲೆಗಳ ಪ್ರತಿಗಳೊಂದಿಗೆ ವಿವರಗಳನ್ನು ಒದಗಿಸುವುದು.	
17	ಜಾಹೀರಾತು ನೀತಿಯಿಂದ ಯಾವುದೇ ವ್ಯತ್ಯಾಸಕ್ಕೆ, ಅನುಮೋದನೆ ಪ್ರಾಧಿಕಾರ / ಪರಿಶೀಲನಾ ಸಮಿತಿಯಿಂದ ಅನುಮೋದನೆ ಪಡೆದಿದ್ದರೆ, ದಾಖಲೆಗಳ ಪ್ರತಿಗಳೊಂದಿಗೆ ಅವುಗಳ ವಿವರಗಳನ್ನು ಒದಗಿಸುವುದು.	
18	ಬೀದಿ ಬದಿ ಜಾಹೀರಾತಿಗಾಗಿ ಅಥವಾ ಜಾಹೀರಾತಿಗಾಗಿ ಪ್ರಸ್ತುತ ಜಾಹೀರಾತು ನೀತಿಯಡಿಯಲ್ಲಿ ಅರ್ಜಿದಾರರ/ರು ಈ ಮೊದಲು ಈ ರೀತಿಯ ಅರ್ಜಿಯನ್ನು ಸಲ್ಲಿಸಿದ್ದರೆ, ಆ ದಾಖಲೆಗಳ ಪ್ರತಿಗಳೊಂದಿಗೆ ವಿವರಗಳನ್ನು ಒದಗಿಸುವುದು.	
19	ಅಗತ್ಯವಿರುವ ಅರ್ಜಿ ಶುಲ್ಕವನ್ನು ಪಾವತಿಸಲಾಗಿದೆಯೆ. ಡಿಡಿ ಸಂಖ್ಯೆ, ಬ್ಯಾಂಕ್ / ಶಾಖೆಯ ಹೆಸರು ಇರುವ ದಾಖಲೆಗಳ ಪ್ರತಿಗಳೊಂದಿಗೆ ವಿವರಗಳನ್ನು ಒದಗಿಸುವುದು.	
20	ಅರ್ಜಿಯೊಂದಿಗೆ ಲಗತ್ತಿಸಿದ ದಾಖಲೆಗಳ ಸಂಖ್ಯೆ.	

ಈ ಕೆಳಗಿನ ಷರತ್ತುಗಳು ಅನ್ವಯವಾಗತಕ್ಕದ್ದು:

1. ಫಲಕದಲ್ಲಿ ತಯಾರಕರ ಉತ್ಪನ್ನ / ಸೇವೆಗಳಿಗೆ ಸಂಬಂಧಿಸಿದ 3 ಅಥವಾ 4 ಸಾಲುಗಳ ಜಾಹೀರಾತನ್ನು ಕನ್ನಡದಲ್ಲಿ ಪ್ರದರ್ಶಿಸತಕ್ಕದ್ದು.
2. ಪ್ರತಿ ವರ್ಷ ಏಪ್ರಿಲ್ 1 ರಿಂದ ಮಾರ್ಚ್ 31 ರ ಒಳಗೆ ಜಾಹೀರಾತು ಶುಲ್ಕವನ್ನು ಮುಂಚಿತವಾಗಿ ಪಾವತಿಸತಕ್ಕದ್ದು.
3. ಬಿಬಿಎಂಪಿಗೆ ಲಿಖಿತ ಮಾಹಿತಿ ನೀಡದೆ ಬೋರ್ಡ್‌ನ ಗಾತ್ರವನ್ನು ಹೆಚ್ಚಿಸತಕ್ಕದ್ದಲ್ಲ ಅಥವಾ ಕಡಿಮೆ ಮಾಡತಕ್ಕದ್ದಲ್ಲ.
4. ಕಾರ್ಪೊರೇಷನ್ ಆಸ್ತಿಯಲ್ಲಿ ಅಥವಾ ಅಡ್ಡಲಾಗಿ ಬೋರ್ಡ್ ಅನ್ನು ನಿಲ್ಲಿಸತಕ್ಕದ್ದಲ್ಲ.
5. ಯಾವುದೇ ಕಾರಣಕ್ಕಾಗಿ ಎಸ್‌ಎಎಸ್ ನಮೂನೆಯಲ್ಲಿ ಘೋಷಿಸಲಾದ ವಿಳಾಸವನ್ನು ಬದಲಾಯಿಸಿದರೆ ಅಥವಾ ಅಂಗಡಿ ಮುಚ್ಚಿದ್ದರೆ, ಬಾಕಿ ಶುಲ್ಕವನ್ನು ಪಾವತಿಸಿ ಅದನ್ನು ಬಿಬಿಎಂಪಿಗೆ ಲಿಖಿತವಾಗಿ ತಿಳಿಸತಕ್ಕದ್ದು.
6. ಮಾನದಂಡಗಳ ಪ್ರಕಾರ ಶುಲ್ಕವನ್ನು ಪಾವತಿಸದಿದ್ದರೆ, ವ್ಯಾಪಾರ ಪರವಾನಗಿ ಮತ್ತು ಇತರ ಪರವಾನಗಿಯನ್ನು ರದ್ದುಗೊಳಿಸುವುದೂ ಸೇರಿದಂತೆ, ಕಾನೂನಿನ ಪ್ರಕಾರ ಕ್ರಮ ಕೈಗೊಳ್ಳತಕ್ಕದ್ದು.
7. ನಿಗಮದ ಅಧಿಕಾರಿಗಳು ಯಾವುದೇ ಸಮಯದಲ್ಲಿ ಪರಿಶೀಲನೆ ಮಾಡಿದ ಸಂದರ್ಭದಲ್ಲಿ, ಘೋಷಿತ ಅಳತೆಯಲ್ಲಿ ಯಾವುದೇ ವ್ಯತ್ಯಾಸಗಳು ಅಥವಾ ಜಾಹೀರಾತು ಶುಲ್ಕವನ್ನು ಪಾವತಿಸುವುದನ್ನು ತಪ್ಪಿಸಲು ಮೋಸ ಮಾಡುವ ಪ್ರಯತ್ನವು ಕಂಡುಬಂದರೆ, ಕಾನೂನಿನ ಪ್ರಕಾರ ಸಂಬಂಧಪಟ್ಟ ಅಂಗಡಿ ಮಾಲೀಕರ ವಿರುದ್ಧ ಶಿಸ್ತು ಕ್ರಮವನ್ನು ಕೈಗೊಳ್ಳಲಾಗುತ್ತದೆ ಮತ್ತು ವಿಧಿಸುವ ಜುಲ್ಮಾನೆಯು ಜಾಹೀರಾತು ಶುಲ್ಕದ ಎರಡು ಪಟ್ಟು ಹೆಚ್ಚಿನ ದಂಡವನ್ನು ಒಳಗೊಂಡಿರುತ್ತದೆ.
8. ಸುಸ್ತಿದಾರನೂ (ಡೀಫಾಲ್ಟರ್) ಸಹ ವರ್ಷಕ್ಕೆ 18% ಬಡ್ಡಿಯನ್ನು ಪಾವತಿಸಲು ಹೊಣೆಗಾರನಾಗಿರುತ್ತಾನೆ.
9. ಮೇಲೆ ತಿಳಿಸಿದ ಯಾವುದೇ ಷರತ್ತುಗಳನ್ನು ಉಲ್ಲಂಘಿಸಿದರೆ, ಬಿಬಿಎಂಪಿಯು ಯಾವುದೇ ಸೂಚನೆ ನೀಡದೆ, ಬೋರ್ಡ್‌ಗಳನ್ನು ತೆಗೆದುಹಾಕುತ್ತದೆ ಮತ್ತು ಬೋರ್ಡ್ ತೆಗೆಯುವ ವೆಚ್ಚವನ್ನು ಮತ್ತು ಆಡಳಿತಾತ್ಮಕ ವೆಚ್ಚವಾಗಿ ಪ್ರತಿ ಅಂಗಡಿಗೆ ರೂ. 5,000 ಮತ್ತು ಆ ನಿರ್ದಿಷ್ಟ ಅವಧಿಗೆ ಜಾಹೀರಾತು ಶುಲ್ಕವನ್ನು ವಸೂಲು ಮಾಡತಕ್ಕದ್ದು.

ಈ ಅರ್ಜಿಯಲ್ಲಿ ಒದಗಿಸಲಾದ ವಿವರಗಳನ್ನು ನನ್ನಿಂದ / ನಮ್ಮಿಂದ ಯುಕ್ತವಾಗಿ ಭರ್ತಿ ಮಾಡಲಾಗಿದೆ ಮತ್ತು ಒದಗಿಸಲಾದ ವಿವರಗಳು ನನ್ನ / ನಮ್ಮ ತಿಳುವಳಿಕೆಯ ಮಟ್ಟಿಗೆ ಸರಿಯಾಗಿವೆ ಮತ್ತು ನಿಖರವಾಗಿವೆ. ನಾನು / ನಾವು ಮೇಲಿನ ಷರತ್ತುಗಳನ್ನು ಪಾಲಿಸುತ್ತೇನೆ/ವೆ. ಸುಳ್ಳು ಘೋಷಣೆ ಮಾಡಿದರೆ, ಅದಕ್ಕೆ ದಂಡ ವಿಧಿಸಲಾಗುತ್ತದೆಂಬ ಬಗ್ಗೆ ನನಗೆ/ನಮಗೆ ಅರಿವಿದೆ. ಅರ್ಜಿ ಶುಲ್ಕಕ್ಕೆ ಸಂಬಂಧಿಸಿದ ಪಾವತಿಯನ್ನು ಸ್ವೀಕರಿಸಿದ್ದರೆ, ಅದು ಲೆಕ್ಕಪತ್ರಗಳ ಪರಿಶೀಲನೆಗೆ ಒಳಪಟ್ಟಿರುತ್ತದೆ ಎಂದೂ ಸಹ ನನಗೆ/ ನಮಗೆ ತಿಳಿದಿರುತ್ತವೆ ಎಂದು ಈ ಮೂಲಕ ನಾನು/ನಾವು ಪ್ರಮಾಣೀಕರಿಸುತ್ತೇನೆ/ವೆ.

ಸ್ಥಳ: ಬೆಂಗಳೂರು

ದಿನಾಂಕ: ಅರ್ಜಿದಾರನ/ರ ಸಹಿ

ಕ್ರ. ಸಂ. .....

ನಮೂನೆ – 2

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

[ಉಪ–ವಿಧಿ10.1.9ನ್ನುನೋಡಿ]

ಅರ್ಜಿದಾರರಿಂದ ಮುಚ್ಚಳಿಕೆ ಪತ್ರ

(ಪ್ರತಿಯೊಂದು ಜಾಹೀರಾತು ಫಲಕ ಪ್ರಾಯೋಜಿತ ಜಾಹೀರಾತಿಗೆ ಪ್ರತ್ಯೇಕ ಮುಚ್ಚಳಿಕೆ ಪತ್ರವನ್ನು ಸಲ್ಲಿಸಬೇಕು)

ಅರ್ಜಿದಾರರ ಮುಚ್ಚಳಿಕೆ ಪತ್ರ

ನಾನು / ನಾವು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ, ಬಿಬಿಎಂಪಿ ಹೊರಾಂಗಣ ಜಾಹೀರಾತು ಫಲಕ ಮತ್ತು ಸಾರ್ವಜನಿಕ ಸಂದೇಶದ ಉಪ–ವಿಧಿಗಳು, 2019 ಅನ್ನು ಎಚ್ಚರಿಕೆಯಿಂದ ಓದಿಕೊಂಡಿದ್ದೇನೆ/ವೆ. ಅರ್ಜಿ ನಮೂನೆ –1 ರಲ್ಲಿ ಕೋರಿದ ಪರಿಹಾರಕ್ಕೆ ಸಂಬಂಧಿಸಿದಂತೆ ಅನ್ವಯವಾಗುವ ಎಲ್ಲಾ ಉಪ–ವಿಧಿಗಳಿಗೆ ನಾನು / ನಾವು ಬದ್ಧರಾಗಿರುತ್ತೇನೆ/ವೆ ಎಂದು ನಾನು / ನಾವು ಈ ಮೂಲಕ ಒಪ್ಪಿಗೆ ನೀಡುತ್ತೇವೆ. ನಾನು / ನಾವು ಕಾಲಕಾಲಕ್ಕೆ ನಿಗದಿಪಡಿಸಿದ ಉಪ–ವಿಧಿಗಳಿಗೆ ಬದ್ಧರಾಗಿರಲು ಒಪ್ಪುತ್ತೇನೆ/ವೆ. ಪ್ರದರ್ಶನ(ಎಕ್ಸಿಬಿಷನ್) ನಡೆಯುತ್ತಿರುವ ಸಮಯದಲ್ಲಿ, ಕರ್ತವ್ಯ ಲೋಪ ಉಂಟಾದಲ್ಲಿ, ಅರ್ಜಿಯನ್ನು ತಿರಸ್ಕರಿಸುವುದರ ಜೊತೆಗೆ, ನಾನು / ನಾವು ದಂಡಕ್ಕೆ ಒಳಗಾಗುತ್ತೇವೆ.

ನಾನು / ನಾವು ಉಪ–ವಿಧಿಗಳನ್ನು ಪಾಲಿಸಲು ವಿಫಲವಾದರೆ, ಯಾವುದೇ ಕಾರಣಗಳನ್ನು ನೀಡದೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ಅನುಮತಿಯನ್ನು ಹಿಂಪಡೆಯುವ ಹಕ್ಕನ್ನು ಹೊಂದಿರುತ್ತದೆ ಎಂದು ನಾನು / ನಾವು ಒಪ್ಪಿಕೊಳ್ಳುತ್ತೇವೆ. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ಜಾಹೀರಾತು ತೆರಿಗೆಗಳನ್ನು ಹೊರತುಪಡಿಸಿ ದಂಡವನ್ನು ಸಂಗ್ರಹಿಸುವ ಹಕ್ಕನ್ನು ಹೊಂದಿದೆ ಮತ್ತು ಜಾಹೀರಾತು ಫಲಕಗಳನ್ನು ತೆಗೆದುಹಾಕುವ ಹಕ್ಕನ್ನು ಹೊಂದಿದೆ ಎಂದು ನಾವು ತಿಳಿದಿದ್ದೇವೆ.

ದಿನಾಂಕ:
ಸ್ಥಳ :

ಅರ್ಜಿದಾರರ ಸಹಿ
ಹೆಸರು:
ವಿಳಾಸ:

ಕ್ರ. ಸಂ. .....

ನಮೂನೆ – 3

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

[ಉಪ–ವಿಧಿ10.1.3ನ್ನುನೋಡಿ]

(ಹೊರಾಂಗಣ ಸ್ವಯಂ ಜಾಹೀರಾತು / ಸಾರ್ವಜನಿಕ ಸಂದೇಶ ಅಥವಾ ಜಾಹೀರಾತು ಫಲಕಗಳನ್ನುನಿಲ್ಲಿಸುವುದಕ್ಕಾಗಿ ಅಥವಾ ಪ್ರದರ್ಶಿಸುವುದಕ್ಕಾಗಿ ವಲಯ ಜಂಟಿ ಆಯುಕ್ತರ ಕಚೇರಿಯಲ್ಲಿ ಸ್ವೀಕರಿಸಿದ ಅರ್ಜಿಗಳ ರಿಜಿಸ್ಟರ್)

1	2	3	4	5	6	7	8	9	10	11	12	13	14	15	16	17	18	19	20	21	22	23	24
ಅರ್ಜಿಯ ಕ್ರಮ ಸಂಖ್ಯೆ	ಅರ್ಜಿದಾರರ ಹೆಸರು (ವ್ಯಾಪಾರ ಸಂಸ್ಥೆ / ಕಂಪನಿ / ಸಂಸ್ಥೆ, ಇತ್ಯಾದಿ ಆಗಿದ್ದರೆ, ದಾಖಲೆಗಳ ಪ್ರತಿಗಳೊಂದಿಗೆ ವಿವರಗಳು)	ಅರ್ಜಿದಾರನ/ರ ನೋಂದಾಯಿತ ವಿಳಾಸ	ಸಂಪರ್ಕ ಸಂಖ್ಯೆ.: ಮೊಬೈಲ್ ಸಂಖ್ಯೆ.	ಇಮೇಲ್ ವಿಳಾಸ	ಪ್ಯಾನ್ ಸಂಖ್ಯೆ.	ಜಿಎಸ್‌ಟಿ ವಿವರಗಳು	ಆಸ್ತಿಯ ಮಾಲೀಕರು ಲಿಖಿತವಾಗಿ ಎನ್‌ಒಸಿ ನೀಡಿದ್ದಾರೆಯೇ ಅಥವಾ ಇಲ್ಲವೇ	ವಿದ್ಯುತ್ ಸರಬರಾಜು ವಿವರಗಳು	ಬೀದಿ ಬದಿ (ಸ್ಟ್ರೀಟ್) ಗ್ರಾಫಿಕ್ ಅನ್ನು ಎಲ್ಲಿ ನಿಲ್ಲಿಸಬೇಕು ಅಥವಾ ಪ್ರದರ್ಶಿಸಬೇಕು, ಎಂಬ ಬಗ್ಗೆ ಅಂದಾಜು ನಕ್ಷೆಯನ್ನು ಲಗತ್ತಿಸಿದೆಯೇ ಅಥವಾ ಇಲ್ಲವೇ ಎಂಬ ವಿವರಗಳು	ಜಾಹೀರಾತು ಫಲಕ / ಸ್ಟ್ರೀಟ್ ಗ್ರಾಫಿಕ್ ಅನ್ನು ನಿಲ್ಲಿಸಬೇಕಾದ ಅಥವಾ ಪ್ರದರ್ಶಿಸಬೇಕಾದ ದಿನಾಂಕ	ಜಾಹೀರಾತು ಫಲಕ / ಬೀದಿ ಬದಿ (ಸ್ಟ್ರೀಟ್) ಗ್ರಾಫಿಕ್ ಅನ್ನು ಸಾರ್ವಜನಿಕ ಆಸ್ತಿಯಲ್ಲಿ ನಿಲ್ಲಿಸಬೇಕಾದರೆ, ಅಗತ್ಯವಾದ ಅನುಮತಿಯನ್ನು ಪಡೆಯಲಾಗಿದೆಯೇ ಅಥವಾ ಇಲ್ಲವೇ	ವಲಯ ಭೂ ಬಳಕೆಯ ವಿವರಗಳು ಮತ್ತು ಸ್ಥಳವಿರುವಪ್ರದೇಶದ ವಿಸ್ತೀರ್ಣದ ವಿವರಗಳನ್ನು ನಮೂದಿಸಬೇಕು.	ಸ್ಕೇಲ್‌ಗೆ ಅನುಗುಣವಾಗಿ ಇವುಗಳನ್ನು ಒಳಗೊಂಡ ಒಂದು ಚಿತ್ರವನ್ನು ಲಗತ್ತಿಸಿದೆಯೇ: 01. ಸ್ಥಳದಲ್ಲಿ ಈಗಾಗಲೇ ಇರುವ ಎಲ್ಲಾ ಬೀದಿ ಬದಿ (ಸ್ಟ್ರೀಟ್) ಗ್ರಾಫಿಕ್ಸ್‌ಗಳು. 02. ಉದ್ದೇಶಿತ ಜಾಹೀರಾತು ಫಲಕದ ಸ್ಥಳ, ಎತ್ತರ ಮತ್ತು ಗಾತ್ರ. 03. ಪ್ರದರ್ಶಿಸಲು ಉದ್ದೇಶಿಸಲಾದ ಮಾಹಿತಿಯ ವಸ್ತುಗಳು. 04. ಉದ್ದೇಶಿತ	ಜಾಹೀರಾತು ಫಲಕ / ಬೀದಿ ಬದಿ (ಸ್ಟ್ರೀಟ್) ಗ್ರಾಫಿಕ್ ಮುದ್ರಕ / ವಿನ್ಯಾಸಕ / ತಯಾರಕರ ಹೆಸರು ಮತ್ತು ವಿಳಾಸ. ಎ) ಸಂಪರ್ಕ ಸಂಖ್ಯೆ. ಬಿ) ಇ–ಮೇಲ್ ವಿಳಾಸ ಸಿ) ಪ್ಯಾನ್ ಸಂ. ಡಿ) ಜಿಎಸ್‌ಟಿ ವಿವರಗಳು	ವ್ಯಾಪಾರವನ್ನು ನಡೆಸಲು ಅರ್ಜಿಯ ದಿನಾಂಕದಂದು ಅರ್ಜಿದಾರರು ಯುಕ್ತ ಮತ್ತು ಕಾನೂನುಬದ್ಧ ವ್ಯಾಪಾರ ಪರವಾನಗಿಯನ್ನು ಹೊಂದಿದ್ದಾರೆಯೇ	ಆಸ್ತಿ ತೆರಿಗೆಯನ್ನು ಇಲ್ಲಿಯವರೆಗೆ ಪಾವತಿಸಲಾಗಿದೆಯೆ ಅಥವಾ ಇಲ್ಲವೇ.	ಜಾಹೀರಾತು ನೀತಿಯಿಂದ ಯಾವುದೇ ವ್ಯತ್ಯಾಸವಿದ್ದರೆ, ಅನುಮೋದನೆ ಅಧಿಕಾರಿ / ಪರಿಶೀಲನಾ ಸಮಿತಿಯಿಂದ ಅನುಮೋದನೆ ಪಡೆದಿದೆಯೇ	ಬೀದಿ ಬದಿ ಜಾಹೀರಾತು ಫಲಕ ಅಥವಾ ಜಾಹೀರಾತಿಗಾಗಿ ಪ್ರಸ್ತುತ ಜಾಹೀರಾತು ನೀತಿಯಡಿಯಲ್ಲಿ ಅರ್ಜಿದಾರರು / ರು ಈ ಮೊದಲು ಅಂತಹ ಅರ್ಜಿಯನ್ನು ಸಲ್ಲಿಸಿದ್ದಾರೆಯೇ.	ಅಗತ್ಯವಿರುವ ಅರ್ಜಿ ಶುಲ್ಕವನ್ನು ಪಾವತಿಸಲಾಗಿದೆಯೆ. ವಿವರಗಳನ್ನು ಒದಗಿಸಿ.	ಅರ್ಜಿಯೊಂದಿಗೆ ಲಗತ್ತಿಸಿದ ದಾಖಲೆಗಳ ಸಂಖ್ಯೆ	ವಿವರಗಳೊಂದಿಗೆ ಅಗತ್ಯವಿರುವ ಶುಲ್ಕದ ಮೊತ್ತ	ಜಂಟಿ ಆಯುಕ್ತರ ಸಹಿ	ಷರಾ

													ಬೀದಿ ಬದಿ (ಸ್ಟ್ರೀಟ್) ಗ್ರಾಫಿಕ್ಸ್‌ನಿಂದ ಆವರಿಸಲ್ಪಡುವ ಜಾಹೀರಾತು ಫಲಕದ ಪ್ರದೇಶದ ಶೇಕಡಾವಾರು ವಿಸ್ತೀರ್ಣ. 05. ನಿರ್ಮಾಣ ಅಥವಾ ಪ್ರದರ್ಶನ, ಬೆಳಗುವ ವ್ಯವಸ್ಥೆ, ಯಾಂತ್ರಿಕ ಚಲನೆ, ಯಾವುದಾದರೂ ಇದ್ದರೆ, ಅವುಗಳ ತಾಂತ್ರಿಕ ವಿವರಗಳನ್ನು ಒದಗಿಸಬೇಕು.										

ಬಿ.ಹೆಚ್. ಅನಿಲ್ ಕುಮಾರ್
ಆಯುಕ್ತರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ ಘಟಕ, ಬೆಂಗಳೂರು. (ಪಿ7) ಪ್ರತಿಗಳು: 500

FRNI No. KARBIL/2001/47147

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

ಭಾಗ–IVA Part–IVA	ಬೆಂಗಳೂರು, ಮಂಗಳವಾರ, ಅಕ್ಟೋಬರ್ ೧೫, ೨೦೧೯ (ಆಶ್ವಯುಜ ೨೩, ಶಕ ವರ್ಷ ೧೯೪೦) Bengaluru, Tuesday, October 15, 2019 (Ashwayuja 23, Shaka Varsha 1940)	ನಂ. ೯೦೪ No. 904

ಕರ್ನಾಟಕ ವಿಧಾನ ಪರಿಷತ್ತು ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಕವಿಪ:ಶಾರಶಾ:21/ವಿಪನಾ/19, ಬೆಂಗಳೂರು, ದಿನಾಂಕ: 12–10–2019

ಕರ್ನಾಟಕ ವಿಧಾನ ಪರಿಷತ್ತಿನ ಸದಸ್ಯರಾದ **ಶ್ರೀ ಎಸ್.ಆರ್. ಪಾಟೀಲ್,** ಅವರನ್ನು ವಿಧಾನ ಪರಿಷತ್ತಿನ ಮಾನ್ಯ ವಿರೋಧ ಪಕ್ಷದ ನಾಯಕರನ್ನಾಗಿ ದಿನಾಂಕ: 10.10.2019ರಿಂದ ಜಾರಿಗೆ ಬರುವಂತೆ ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮಗಳ ನಿಯಮ 2(2)ರ ರೀತ್ಯಾ ಮಾನ್ಯ ಸಭಾಪತಿಯವರು ಮಾನ್ಯತೆ ನೀಡಿರುತ್ತಾರೆ.

ಕೆ.ಆರ್. ಮಹಾಲಕ್ಷ್ಮಿ
ಕಾರ್ಯದರ್ಶಿ
ಕರ್ನಾಟಕ ವಿಧಾನ ಪರಿಷತ್ತು

KARNATAKA LEGISLATIVE COUNCIL SECRETARIAT
NOTIFICATION
No. KLC/Legn/21/LOP/2019, Bengaluru, dated: 12.10.2019

Sri S.R. Patil, Member of Legislative Council is recognized as the Hon'ble Leader of Opposition in Karnataka Legislative Council by the Hon'ble Chairman, Legislative Council with effect from 10th October, 2019 as per Rule 2(2) of the Rules of Procedure and Conduct of Business in the Karnataka Legislative Council.

K.R.Mahalakshmi
Secretary
Karnataka Legislative Council

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ ಘಟಕ, ಬೆಂಗಳೂರು. (ಪಿ7) ಪ್ರತಿಗಳು: ೫೦

FRNI No. KARBIL/2001/47147

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

ಭಾಗ–IVA	ಬೆಂಗಳೂರು, ಬುಧವಾರ, ಅಕ್ಟೋಬರ್ ೧೬, ೨೦೧೯ (ಆಶ್ವಯುಜ ೨೪, ಶಕ ವರ್ಷ ೧೯೪೦)	ನಂ. ೯೦೫
Part–IVA	Bengaluru, Wednesday, October 16, 2019 (Ashwayuja 24, Shaka Varsha 1940)	No. 905

ಸಂಸದೀಯ ವ್ಯವಹಾರಗಳ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಸಂವ್ಯಶಾಇ 03 ಶಾಸನ 2018, ಬೆಂಗಳೂರು, ದಿನಾಂಕ: 16–10–2019

ಬೆಂಗಳೂರು ಡಾ: ಬಿ.ಆರ್.ಅಂಬೇಡ್ಕರ್ ಅರ್ಥಶಾಸ್ತ್ರ ವಿದ್ಯಾಲಯ ವಿಶ್ವವಿದ್ಯಾಲಯ ವಿಧೇಯಕ, 2018ಕ್ಕೆ 2019ರ ಸೆಪ್ಟೆಂಬರ್ ತಿಂಗಳ 21ನೇ ದಿನಾಂಕದಂದು ರಾಷ್ಟ್ರಪತಿಯವರ ಒಪ್ಪಿಗೆ ದೊರೆತಿದ್ದು, ಸಾಮಾನ್ಯ ತಿಳುವಳಿಕೆಗಾಗಿ ಇದನ್ನು 2019ರ ಕರ್ನಾಟಕ ಅಧಿನಿಯಮ ಸಂಖ್ಯೆ: 20 ಎಂಬುದಾಗಿ ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಿಸಬೇಕೆಂದು ಆದೇಶಿಸಲಾಗಿದೆ.

2019ರ ಕರ್ನಾಟಕ ಅಧಿನಿಯಮ ಸಂಖ್ಯೆ: 20

(2019ರ ಅಕ್ಟೋಬರ್ ತಿಂಗಳ 16ನೇ ದಿನಾಂಕದಂದು ಕರ್ನಾಟಕ ರಾಜ್ಯ ಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)

ಬೆಂಗಳೂರು ಡಾ: ಬಿ.ಆರ್. ಅಂಬೇಡ್ಕರ್ ಅರ್ಥಶಾಸ್ತ್ರ ವಿದ್ಯಾಲಯ ವಿಶ್ವವಿದ್ಯಾಲಯ ಅಧಿನಿಯಮ, 2018

(2019ರ ಸೆಪ್ಟೆಂಬರ್ 21ನೇ ದಿನಾಂಕದಂದು ರಾಷ್ಟ್ರಾಧ್ಯಕ್ಷರಿಂದ ಅನುಮತಿಯನ್ನು ಪಡೆಯಲಾಗಿದೆ)

ಬೆಂಗಳೂರು ಡಾ: ಬಿ.ಆರ್. ಅಂಬೇಡ್ಕರ್ ಅರ್ಥಶಾಸ್ತ್ರ ವಿದ್ಯಾಲಯ ವಿಶ್ವವಿದ್ಯಾಲಯವನ್ನು ಬೆಂಗಳೂರಿನಲ್ಲಿ ಸ್ಥಾಪಿಸಿ ಮತ್ತು ನಿಗಮಿತಗೊಳಿಸುವುದಕ್ಕಾಗಿ ಉಪಬಂಧವನ್ನು ಕಲ್ಪಿಸಲು ಒಂದು ಅಧಿನಿಯಮ.

ರಾಜ್ಯದಲ್ಲಿ ಅಸ್ತಿತ್ವದಲ್ಲಿರುವ ಸಂಸ್ಥೆಗಳು ಅರ್ಥಶಾಸ್ತ್ರ ಮತ್ತು ಇತರ ಸಮಾಜ ವಿಜ್ಞಾನಗಳ ಕ್ಷೇತ್ರಗಳಲ್ಲಿಯ ಬೆಳವಣಿಗೆ ಮತ್ತು ಅಭಿವೃದ್ಧಿಯಲ್ಲಿ ಹೆಚ್ಚುತ್ತಿರುವ ಸಂಕೀರ್ಣತೆಯನ್ನು ಹಾಗೂ ತಂತ್ರಜ್ಞಾನದ ಮೂಲಕ ನಿರ್ದಿಷ್ಟವಾಗಿ ಹೆಸರಾಂತ ಮತ್ತು ಗುಣಮಟ್ಟದ ಅರ್ಥಶಾಸ್ತ್ರಜ್ಞರನ್ನು ತಯಾರಿಸಲು ಜಾಗತಿಕವಾಗಿ ಒಟ್ಟುಗೂಡಿ ಬೆಳೆಯುತ್ತಿರುವ ವಿಶ್ವದ ಪರಿಣಾಮವಾಗಿರುವ ಅನಿಶ್ಚಿತತೆಗಳನ್ನು ಪೂರೈಸಲು ಸಾಧ್ಯವಾಗದಿರುವುದರಿಂದ ಮತ್ತು ಸರ್ಕಾರದ, ಅರ್ಥಶಾಸ್ತ್ರ, ಉದ್ಯಮ ಶೈಕ್ಷಣಿಕ ಕ್ಷೇತ್ರಗಳ ಮತ್ತು ಸಮಾಜದ ಅಗತ್ಯತೆಗಳನ್ನು ದೊಡ್ಡ ಮಟ್ಟದಲ್ಲಿ ಪೂರೈಸುವುದಕ್ಕೆ ಶೈಕ್ಷಣಿಕ, ಸಂಶೋಧನಾ, ಸಮಾಲೋಚನಾ, ವೈಚಾರಿಕ ವೇದಿಕೆ (Think Tank), ತರಬೇತಿ ಮತು ಜ್ಞಾನ ಪ್ರಸಾರಗಳಲ್ಲಿ ಬಹುವಿಧದ ಕಾರ್ಯಗಳನ್ನು ನಿರ್ವಹಿಸಲು ಮತ್ತು ಈ ವಿಷಯಗಳಲ್ಲಿ ಶ್ರೇಷ್ಟತೆಯ ವಿದ್ಯಾಲಯವನ್ನಾಗಿ ಬೆಂಗಳೂರು ಡಾ: ಬಿ.ಆರ್. ಅಂಬೇಡ್ಕರ್ ಅರ್ಥಶಾಸ್ತ್ರ ವಿದ್ಯಾಲಯ ವಿಶ್ವವಿದ್ಯಾಲಯ ಎಂದು ಕರೆಯಲಾಗುವ ಹೊಸ ವಿಶ್ವವಿದ್ಯಾಲಯವನ್ನು ಬೆಂಗಳೂರಿನಲ್ಲಿ ಸ್ಥಾಪಿಸುವುದು ಮತ್ತು ನಿಗಮಿತಗೊಳಿಸುವುದು ಹಾಗೂ ಅದಕ್ಕೆ ಸಂಬಂಧಿಸಿದ ಅಥವಾ ಆನುಷಂಗಿಕ ವಿಷಯಗಳಿಗಾಗಿ ಉಪಬಂಧವನ್ನು ಕಲ್ಪಿಸುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಅರವತ್ತೊಂಬತ್ತನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:–

ಅಧ್ಯಾಯ I
ಪ್ರಾಥಮಿಕ

1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.– (1) ಈ ಅಧಿನಿಯಮವನ್ನು ಬೆಂಗಳೂರು ಡಾ: ಬಿ.ಆರ್. ಅಂಬೇಡ್ಕರ್ ಅರ್ಥಶಾಸ್ತ್ರ ವಿದ್ಯಾಲಯ ವಿಶ್ವವಿದ್ಯಾಲಯ ಅಧಿನಿಯಮ, 2018 ಎಂದು ಕರೆಯತಕ್ಕದ್ದು.

(2) ಇದು ರಾಜ್ಯ ಸರ್ಕಾರವು ಸರ್ಕಾರಿ ರಾಜ್ಯಪತ್ರದಲ್ಲಿ ಅಧಿಸೂಚನೆಯ ಮೂಲಕ ಗೊತ್ತುಪಡಿಸುವ ಅಂಥ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

2. **ಪರಿಭಾಷೆಗಳು.**– ಈ ಅಧಿನಿಯಮದಲ್ಲಿ ಅನ್ಯಥಾ ಅಗತ್ಯಪಡಿಸಿದ ಹೊರತು,–

(1) **"ಶೈಕ್ಷಣಿಕ ಪರಿಷತ್ತು"** ಎಂದರೆ, ವಿಶ್ವವಿದ್ಯಾಲಯದ ಶೈಕ್ಷಣಿಕ ಪರಿಷತ್ತು;

(2) **"ಗೊತ್ತುಪಡಿಸಿದ ದಿನಾಂಕ"** ಎಂದರೆ, ಈ ಅಧಿನಿಯಮವನ್ನು ಪ್ರಾರಂಭಿಸುವುದಕ್ಕಾಗಿ ಗೊತ್ತುಪಡಿಸಿದ ದಿನಾಂಕ;

(3) **"ಪ್ರಾಧಿಕಾರಗಳು"** ಎಂದರೆ, ವಿಶ್ವವಿದ್ಯಾಲಯದ ಪ್ರಾಧಿಕಾರಗಳು;

(4) **"ಕುಲಾಧಿಪತಿ"** ಎಂದರೆ ವಿಶ್ವವಿದ್ಯಾಲಯದ ಕುಲಾಧಿಪತಿ;

(5) **"ಕಾರ್ಯನಿರ್ವಾಹಕ ಪರಿಷತ್ತು"** ಎಂದರೆ, ವಿಶ್ವವಿದ್ಯಾಲಯದ ಕಾರ್ಯನಿರ್ವಾಹಕ ಪರಿಷತ್ತು;

(6) **"ಅಧಿಕಾರಿಗಳು"** ಎಂದರೆ, ವಿಶ್ವವಿದ್ಯಾಲಯದ ಅಧಿಕಾರಿಗಳು;

(7) **"ಸಹ ಕುಲಾಧಿಪತಿ"** ಎಂದರೆ, ವಿಶ್ವವಿದ್ಯಾಲಯದ ಸಹ ಕುಲಾಧಿಪತಿ;

(8) **"ಕುಲಸಚಿವ"** ಎಂದರೆ, ವಿಶ್ವವಿದ್ಯಾಲಯದ ಕುಲಸಚಿವ;

(9) **"ವಿನಿಯಮಗಳು"** ಎಂದರೆ, ಈ ಅಧಿನಿಯಮದ 30ನೇ ಪ್ರಕರಣಗಳ ಅಡಿಯಲ್ಲಿ ಮಾಡಿದ ವಿಶ್ವವಿದ್ಯಾಲಯದ ವಿನಿಯಮಗಳು;

(10) **"ಅನುಸೂಚಿ"** ಎಂದರೆ, ಈ ಅಧಿನಿಯಮಕ್ಕೆ ಲಗತ್ತಿಸಲಾದ ಅನುಸೂಚಿ;

(11) **"ಸೊಸೈಟಿ"** ಎಂದರೆ, ಕರ್ನಾಟಕ ಸೊಸೈಟಿಗಳ ನೋಂದಣಿ ಅಧಿನಿಯಮ 1960ರ (1960ರ ಕರ್ನಾಟಕ ಅಧಿನಿಯಮ 17) ಅಡಿಯಲ್ಲಿ ನೋಂದಾಯಿಸಿದ ಬೆಂಗಳೂರು ಡಾ: ಬಿ.ಆರ್. ಅಂಬೇಡ್ಕರ್ ಅರ್ಥಶಾಸ್ತ್ರ ವಿದ್ಯಾಲಯ ಸೊಸೈಟಿ;

(12) **"ಅಧ್ಯಾಪಕರು"** ಎಂದರೆ, ಒಂದು ವಿಶ್ವವಿದ್ಯಾಲಯದ ಅಥವಾ ಬೋಧನೆಯನ್ನು ನೀಡುವ ವಿಶ್ವವಿದ್ಯಾಲಯದಲ್ಲಿನ ಘಟಕ ಕಾಲೇಜಿನ ಗೌರವ/ವಿಶ್ರಾಂತ/ಹಂಗಾಮಿ (adjunct) ಪ್ರಾಧ್ಯಾಪಕರು, ಸಹ ಪ್ರಾಧ್ಯಾಪಕರು/ಸಹಾಯಕ ಪ್ರಾಧ್ಯಾಪಕರು/ಗ್ರಂಥಪಾಲಕರು/ಉಪ ಗ್ರಂಥ ಪಾಲಕರು/ಸಹಾಯಕ ಗ್ರಂಥಪಾಲಕರು ಮತ್ತು ದೈಹಿಕ ಶಿಕ್ಷಣದ ನಿರ್ದೇಶಕರು/ಉಪ ನಿರ್ದೇಶಕರು/ಸಹಾಯಕ ನಿರ್ದೇಶಕರು ಇವರುಗಳನ್ನು ಒಳಗೊಂಡ ಪ್ರಾಧ್ಯಾಪಕರು;

(13) **"ವಿಶ್ವವಿದ್ಯಾಲಯ"** ಎಂದರೆ, ಈ ಅಧಿನಿಯಮದ ಅಡಿಯಲ್ಲಿ ಸ್ಥಾಪಿಸಿದ ಬೆಂಗಳೂರು ಡಾ: ಬಿ.ಆರ್. ಅಂಬೇಡ್ಕರ್ ಅರ್ಥಶಾಸ್ತ್ರ (BASE) ವಿದ್ಯಾಲಯ ವಿಶ್ವವಿದ್ಯಾಲಯ;

(14) **"ವಿಶ್ವವಿದ್ಯಾನಿಲಯ ಅನುದಾನಗಳ ಆಯೋಗ (ಯುಜಿಸಿ)"** ಎಂದರೆ, ವಿಶ್ವವಿದ್ಯಾನಿಲಯ ಅನುದಾನಗಳ ಆಯೋಗ ಅಧಿನಿಯಮ, 1956ರ (1956ರ ಕೇಂದ್ರ ಅಧಿನಿಯಮ 3) ಅನುಸಾರವಾಗಿ ಕೇಂದ್ರ ಸರ್ಕಾರವು ಸ್ಥಾಪಿಸಿದ ವಿಶ್ವವಿದ್ಯಾನಿಲಯ ಅನುದಾನಗಳ ಆಯೋಗ; ಮತ್ತು

(15) **"ಕುಲಪತಿ"** ಎಂದರೆ ವಿಶ್ವವಿದ್ಯಾಲಯದ ಕುಲಪತಿ.

ಅಧ್ಯಾಯ II
ವಿಶ್ವವಿದ್ಯಾಲಯ

3. **ವಿಶ್ವವಿದ್ಯಾಲಯದ ಸ್ಥಾಪನೆ ಮತ್ತು ನಿಗಮನ.**– (1) 4ನೇ ಪ್ರಕರಣದಲ್ಲಿ ಹೇಳಲಾದ ವಿಶ್ವವಿದ್ಯಾಲಯದ ಉದ್ದೇಶಗಳ ಮುಂದುವರಿಕೆಗಾಗಿ ಬೆಂಗಳೂರು ಡಾ: ಬಿ.ಆರ್. ಅಂಬೇಡ್ಕರ್ ಅರ್ಥಶಾಸ್ತ್ರ ವಿದ್ಯಾಲಯ ವಿಶ್ವವಿದ್ಯಾಲಯ ಎಂದು ಕರೆಯಲಾಗುವ ಏಕಾತ್ಮಕ, ಸಂಯೋಜನೆಯನ್ನು ನೀಡದಿರುವ ವಿಶ್ವವಿದ್ಯಾಲಯವನ್ನು ಕರ್ನಾಟಕ ರಾಜ್ಯದಲ್ಲಿ ಸ್ಥಾಪಿಸತಕ್ಕದ್ದು.

(2) ವಿಶ್ವವಿದ್ಯಾಲಯವು, ಈ ಅಧಿನಿಯಮದ ಉಪಬಂಧಗಳಿಗೆ ಒಳಪಟ್ಟು ಸ್ವತ್ತನ್ನು ಆರ್ಜಿಸುವ ಮತ್ತು ಧಾರಣ ಮಾಡುವ, ಕರಾರು ಮಾಡಿಕೊಳ್ಳುವ ಹಾಗೂ ಈ ಅಧಿನಿಯಮದ ಉದ್ದೇಶಗಳಿಗಾಗಿ ಅವಶ್ಯಕವಾದ ಅಂಥ ಇತರ ಕಾರ್ಯಗಳನ್ನು ಕೈಗೊಳ್ಳುವ ಅಧಿಕಾರದೊಂದಿಗೆ ಶಾಶ್ವತ ಉತ್ತರಾಧಿಕಾರವನ್ನು ಮತ್ತು ಸಾಮಾನ್ಯ ಮೊಹರನ್ನು ಹೊಂದಿರುವ, ಮೇಲೆ ಹೇಳಿದ ಹೆಸರಿನ ಒಂದು ನಿಗಮಿತ ನಿಕಾಯವಾಗಿರತಕ್ಕದ್ದು ಮತ್ತು ಅದು ಸದರಿ ಹೆಸರಿನಿಂದ ದಾವೆ ಹೂಡತಕ್ಕದ್ದು ಮತ್ತು ದಾವೆಗೆ ಗುರಿಯಾಗತಕ್ಕದ್ದು.

(3) ವಿಶ್ವವಿದ್ಯಾನಿಲಯದಿಂದ ಅಥವಾ ಅದರ ವಿರುದ್ಧ ಹೂಡಲಾದ ಎಲ್ಲಾ ದಾವೆಗಳಲ್ಲಿ ಮತ್ತು ಇತರ ಕಾನೂನು ವ್ಯವಹರಣೆಗಳಲ್ಲಿ, ವಾದಪತ್ರಗಳಿಗೆ ರಿಜಿಸ್ಟ್ರಾರರು ಸಹಿ ಮಾಡಿ ಸತ್ಯಾಪನೆ ಮಾಡತಕ್ಕದ್ದು ಮತ್ತು ಅಂತಹ ದಾವೆಗಳಲ್ಲಿನ ಮತ್ತು ವ್ಯವಹರಣೆಗಳಲ್ಲಿನ ಎಲ್ಲ ಆದೇಶಿಕೆಗಳನ್ನು ರಿಜಿಸ್ಟ್ರಾರರಿಗೆ ನೀಡತಕ್ಕದ್ದು ಮತ್ತು ಅವರಿಗೆ ಜಾರಿ ಮಾಡತಕ್ಕದ್ದು.

(4) ವಿಶ್ವವಿದ್ಯಾಲಯದ ಕೇಂದ್ರ ಸ್ಥಾನವು ಬೆಂಗಳೂರಿನಲ್ಲಿ ಇರತಕ್ಕದ್ದು.

4. **ವಿಶ್ವವಿದ್ಯಾಲಯದ ಉದ್ದೇಶಗಳು.– (1)** ಅರ್ಥಶಾಸ್ತ್ರಗಳು ಮತ್ತು ಸಂಬಂಧಿತ ವಿಷಯಗಳ ಕಲಿಕೆ ಮತ್ತು ಜ್ಞಾನದ ಮುನ್ನಡೆ ಮತ್ತು ಪ್ರಸಾರ (disseminate) ಹಾಗೂ ರಾಷ್ಟ್ರೀಯ ಅಭಿವೃದ್ಧಿಯಲ್ಲಿ ಅವುಗಳ ಪಾತ್ರವು ವಿಶ್ವವಿದ್ಯಾಲಯದ ಉದ್ದೇಶಗಳಾಗಿರತಕ್ಕದ್ದು. ಉನ್ನತ ಶಿಕ್ಷಣ ಕ್ಷೇತ್ರದಲ್ಲಿ ದೊಡ್ಡಮಟ್ಟದಲ್ಲಿ ಸಮಾಜ ಸೇವೆಗೈಯ್ಯಲು ಜವಾಬ್ದಾರಿ ಪ್ರಜ್ಞೆಯನ್ನು ವಿದ್ಯಾರ್ಥಿಗಳಲ್ಲಿ ಮತ್ತು ಸಂಶೋಧನಾ ವಿದ್ವಾಂಸರಲ್ಲಿ ಬೆಳೆಸುವುದು ಹಾಗೂ ಜ್ಞಾನವನ್ನು ಅಭಿವೃದ್ಧಿಗೊಳಿಸಲು ಉಪನ್ಯಾಸಗಳು, ವಿಚಾರಸಂಕೀರ್ಣಗಳು, ಚರ್ಚಾ ಗೋಷ್ಠಿಗಳು ಮತ್ತು ಸಮಾವೇಶಗಳನ್ನು ಆಯೋಜಿಸುವುದು ಮತ್ತು ಅರ್ಥಶಾಸ್ತ್ರೀಯ ಕಾರ್ಯ ತಂತ್ರಗಳನ್ನು ಸಾಮಾಜಿಕ ಅಭಿವೃದ್ಧಿಯ ಸಮರ್ಥ ಸಾಧನಗಳನ್ನಾಗಿ ಮಾಡುವುದು, ಪರೀಕ್ಷೆಗಳನ್ನು ನಡೆಸುವುದು ಹಾಗೂ ಪದವಿಗಳು ಮತ್ತು ಇತರ ಶೈಕ್ಷಣಿಕ ಮನ್ನಣೆಗಳನ್ನು ನೀಡುವುದು ಹಾಗೂ ವಿಶ್ವವಿದ್ಯಾಲಯದ ಎಲ್ಲಾ ಅಥವಾ ಯಾವುದೇ ಉದ್ದೇಶಗಳನ್ನು ಮತ್ತು ಭಾರತದ ಸಂವಿಧಾನದಲ್ಲಿ ಪ್ರತಿಷ್ಟಾಪಿಸಲಾದ ಮೌಲ್ಯಗಳನ್ನು ಈಡೇರಿಸುವುದಕ್ಕೆ ಆನುಷಂಗಿಕ, ಅವಶ್ಯಕ ಅಥವಾ ನೆರವಾಗುವ ಅಂಥ ಎಲ್ಲಾ ಕಾರ್ಯಗಳನ್ನು ಮಾಡುವುದು.

(2) ವಿಶ್ವವಿದ್ಯಾನಿಲಯವು, ಎಲ್ಲಾ ವ್ಯಕ್ತಿಗಳಿಗೆ, ಎಲ್ಲಾ ಧರ್ಮದವರಿಗೂ ಅವರು ಹೆಣ್ಣಾಗಿರಲಿ ಅಥವಾ ಗಂಡಾಗಿರಲಿ ಮತ್ತು ಯಾವುದೇ ಜನಾಂಗ, ಪಂಥ, ಜಾತಿ ಅಥವಾ ವರ್ಗಕ್ಕೆ ಸೇರಿರಲಿ, ಮುಕ್ತವಾಗಿರತಕ್ಕದ್ದು ಮತ್ತು ಅದಕ್ಕೆ ಅಧ್ಯಾಪಕನಾಗಿ ಅಥವಾ ವಿದ್ಯಾರ್ಥಿಯಾಗಿ ಪ್ರವೇಶ ಪಡೆಯಲು ಅಥವಾ ಅದರಲ್ಲಿ ಯಾವುದೇ ಹುದ್ದೆಯನ್ನು ಧಾರಣ ಮಾಡಲು ಅಥವಾ ಅದರಲ್ಲಿ ಪದವೀಧರನಾಗಲು ಅಥವಾ ಅದರ ಯಾವುದೇ ವಿಶೇಷಾಧಿಕಾರವನ್ನು ಅನುಭವಿಸಲು ಅಥವಾ ಚಲಾಯಿಸಲು ಹಕ್ಕುಳ್ಳವನಾಗಿರುವುದಕ್ಕೆ ಯಾವುದೇ ಧಾರ್ಮಿಕ ನಂಬಿಕೆ ಅಥವಾ ನಿಷ್ಠೆಯ ಬಗ್ಗೆ ಯಾವೊಬ್ಬ ವ್ಯಕ್ತಿಯ ಮೇಲೆ ಯಾವುದೇ ಅರ್ಹತೆಯನ್ನು ವಿಶ್ವವಿದ್ಯಾನಿಲಯವು ವಿಧಿಸುವುದು ಕಾನೂನು ಬದ್ಧವಾಗಿರತಕ್ಕದ್ದಲ್ಲ.

(3) ವಿಶ್ವವಿದ್ಯಾಲಯದ ಗುರಿಗಳು ಮತ್ತು ಉದ್ದೇಶಗಳು ಈ ಮುಂದಿನಂತೆ ಇರತಕ್ಕದ್ದು,–

(ಎ) ಅರ್ಥಶಾಸ್ತ್ರಗಳು ಮತ್ತು ಸಂಬಂಧಿತ ವಿಷಯಗಳ ಮೇಲೆ ಕೇಂದ್ರೀಕರಿಸಿ ಉನ್ನತ ಶಿಕ್ಷಣ ಕ್ಷೇತ್ರದಲ್ಲಿ ಜಾಗತಿಕವಾಗಿ ಗುರುತಿಸುವ ಶ್ರೇಷ್ಠ ಸಂಸ್ಥೆಯಾಗುವುದು;

(ಬಿ) ಬೋಧನೆ, ಸಂಶೋಧನೆ, ತರಬೇತಿ ಮತ್ತು ನೀತಿ ಸಮರ್ಥನೆಗಾಗಿ ಸ್ವಾಯತ್ತ ಸಂಸ್ಥೆಯನ್ನು ಮುಂದುವರಿಕೆ ಶಿಕ್ಷಣ ಕೇಂದ್ರವಾಗಿ ಅಭಿವೃದ್ಧಿಗೊಳಿಸುವುದು;

(ಸಿ) ಸಾರ್ವಜನಿಕ ಮತ್ತು ಖಾಸಗಿ ವಲಯದಿಂದ ನೀತಿ ರಚನೆಕಾರರಿಗೆ ಮತ್ತು ಇತರರಿಗೆ ತರಬೇತಿ ಕಾರ್ಯಕ್ರಮಗಳನ್ನು ಕೈಗೊಳ್ಳುವುದು;

(ಡಿ) ಅರ್ಥಶಾಸ್ತ್ರಗಳು ಮತ್ತು ಇತರ ಸಮಾಜ ವಿಜ್ಞಾನಗಳ ಕ್ಷೇತ್ರಗಳಲ್ಲಿ ಸಮಾಲೋಚನೆಯನ್ನು ನೀಡುವುದು ಮತ್ತು ಪ್ರಾಯೋಜಿತ ಕಾರ್ಯಕ್ರಮಗಳನ್ನು ಅಂಗೀಕರಿಸುವುದು;

(ಇ) ಜರ್ನಲುಗಳು, ಸಂಶೋಧನಾ ಲೇಖನಗಳು, ಕಾರ್ಯನಿರ್ವಹಣಾ ಪತ್ರಗಳು, ನೀತಿ ಸಂಕ್ಷೇಪಗಳು ಮತ್ತು ಲೇಖನಗಳು ಇವುಗಳನ್ನು ಒಳಗೊಂಡಂತೆ ಸಾಂದರ್ಭಿಕ ಪತ್ರಿಕೆಗಳು, ಜರ್ನಲುಗಳು, ನಿಯತಕಾಲಿಕೆಗಳು ಮತ್ತು ಪುಸ್ತಕಗಳ ಪ್ರಕಟಣೆಯನ್ನು ತಾವಾಗಿಯೇ ಕೈಗೊಳ್ಳುವುದು ಹಾಗೂ ನೆರವನ್ನು ಕಲ್ಪಿಸುವುದು; ಅದರ ಯಾವುದೇ ಗುರಿಗಳು ಮತ್ತು ಉದ್ದೇಶಗಳ ಮುಂದುವರಿಕೆಗಾಗಿ ಮತ್ತು ಮುನ್ನಡೆಯ ಚಟುವಟಿಕೆಗಳು ಮತ್ತು ಗ್ರಂಥಾಲಯ ಮಾಹಿತಿ ಸೇವೆಗಳನ್ನು ವರ್ಧಿಸಲು (augmenting) ಡಿಜಿಟಲ್ ಮಾಧ್ಯಮಗಳು, ದೃಶ್ಯ ಮಾಧ್ಯಮಗಳು, ಮುದ್ರಣ ಮಾಧ್ಯಮಗಳನ್ನು ಬಳಸಿಕೊಳ್ಳುವುದು.

(ಎಫ್) ಬೋಧನೆ, ಸಂಶೋಧನೆ, ತರಬೇತಿ ಮತ್ತು ನೀತಿ ಸಮರ್ಥನೆ ಕ್ಷೇತ್ರಗಳಲ್ಲಿ ಅರ್ಥಶಾಸ್ತ್ರ ಮತ್ತು ಇತರ ಸಂಬಂಧಿತ ಶಿಕ್ಷಣ ವಿಷಯಗಳಲ್ಲಿ ಮತ್ತು ವಿದ್ಯಾರ್ಥಿಗಳು, ವಸ್ತುಗಳು ಮತ್ತು ದತ್ತಾಂಶಗಳನ್ನು ವಿನಿಮಯ ಮಾಡುವಲ್ಲಿ ಏರ್ಪಾಡುಗಳನ್ನು ಮಾಡುವುದು, ಗೋಷ್ಠಿಗಳು, ಸಮ್ಮೇಳನಗಳು, ಕಾರ್ಯಾಗಾರಗಳು, ಚರ್ಚೆಗಳನ್ನು ಆಯೋಜಿಸುವುದು ಮತ್ತು ಸಂಶೋಧನೆ ಮತ್ತು ಯೋಜನಾ ಸಮಾಲೋಚನೆಯನ್ನು ಕೈಗೊಳ್ಳುವುದು ಇವುಗಳಲ್ಲಿ ಅಂತರರಾಷ್ಟ್ರೀಯ, ರಾಷ್ಟ್ರೀಯ, ರಾಜ್ಯ ಮತ್ತು ಇತರ ಸ್ಥಳೀಯ ಏಜೆನ್ಸಿಗಳು ಅಥವಾ ಸಂಸ್ಥೆಗಳೊಂದಿಗೆ ಸಹಕರಿಸುವುದು, ಜೊತೆಗೂಡಿ ಕೆಲಸ ಮಾಡುವುದು ಮತ್ತು ಕಾರ್ಯನಿರ್ವಹಿಸುವುದು;

(ಜಿ) ವಿಶ್ವವಿದ್ಯಾನಿಲಯದ ಕಾರ್ಯಕ್ರಮಗಳಲ್ಲಿ ಭಾಗವಹಿಸಲು ಸರ್ಕಾರಗಳು, ವಿಶ್ವವಿದ್ಯಾನಿಲಯಗಳು, ಸಂಸ್ಥೆಗಳು, ನೀತಿ ಸಮರ್ಥನೆ ಸಮೂಹಗಳು ಮತ್ತು ಅಂಥ ಇತರ ಭಾರತೀಯ ಮತ್ತು ವಿದೇಶಗಳ ಸಂಘಟನೆಗಳ ಪ್ರತಿನಿಧಿಗಳನ್ನು ಆಹ್ವಾನಿಸುವುದು ಮತ್ತು ಶೈಕ್ಷಣಿಕ, ನೀತಿ ರಚನೆ ಹಾಗೂ ವ್ಯವಹಾರ ಕ್ಷೇತ್ರಗಳಲ್ಲಿ ಶ್ರೇಷ್ಠರಾದ ಹಾಗೂ ರಾಷ್ಟ್ರೀಯ ಮತ್ತು ಅಂತರ ರಾಷ್ಟ್ರೀಯ ಖ್ಯಾತರಾದ ವ್ಯಕ್ತಿಗಳನ್ನು ಆಹ್ವಾನಿಸುವುದು;

(ಎಚ್) ಮೇಲೆ ಉಲ್ಲೇಖಿಸಲಾದ ಅಥವಾ ಒಳಗೊಂಡಿರುವ ವಿಶ್ವವಿದ್ಯಾಲಯದ ಯಾವುದೇ ಅಥವಾ ಎಲ್ಲಾ ಧ್ಯೇಯೋದ್ದೇಶಗಳನ್ನು ಸಾಧಿಸಲು ಅವಶ್ಯವಾದ ಪ್ರಾಸಂಗಿಕ ಮತ್ತು ಅತ್ಯಗತ್ಯ ಅಥವಾ ಸಹಾಯಕವೆಂದು ವಿಶ್ವವಿದ್ಯಾನಿಲಯವು ಪರಿಗಣಿಸಬಹುದಾದ ಅಂಥ ಎಲ್ಲಾ ಕಾನೂನಾತ್ಮಕ ಕ್ರಮಗಳು ಮತ್ತು ಕೆಲಸಗಳನ್ನು ತಾನಾಗಿಯೇ ಅಥವಾ ಜಂಟಿಯಾಗಿ ಇತರ ಸಂಸ್ಥೆಗಳೊಂದಿಗೆ (entities) ಅಥವಾ ಸಂಘಟನೆಗಳೊಂದಿಗೆ ಅಥವಾ ವ್ಯಕ್ತಿಗಳೊಂದಿಗೆ ಸೇರಿ ಮಾಡುವುದು;

(ಐ) ಸಮಾಜ ಮತ್ತು ಆರ್ಥಿಕ ಅಭಿವೃದ್ಧಿಯ ಸಂಬಂಧದಲ್ಲಿ ಸಂಶೋಧನೆಯನ್ನು ಉತ್ತೇಜಿಸುವುದಕ್ಕಾಗಿ ವಿಶ್ವವಿದ್ಯಾನಿಲಯವು ಸಕ್ಷಮವಾಗಿರುವ ಮಿತಿಯೊಳಗೆ ಅಂಥ ಎಲ್ಲಾ ಕ್ರಮಗಳನ್ನು ಸಾಮಾನ್ಯವಾಗಿ ಕೈಗೊಳ್ಳುವುದು ಮತ್ತು ಕಾರ್ಯನಿರ್ವಾಹಕ ಪರಿಷತ್ತು ಅನುಮೋದಿಸಬಹುದಾದ ಅಂಥ ಎಲ್ಲಾ ಶೈಕ್ಷಣಿಕ ಪ್ರಕಾರ್ಯಗಳನ್ನು ನಿರ್ವಹಿಸುವುದು ಹಾಗೂ ಅಂಥ ಶೈಕ್ಷಣಿಕ ಚಟುವಟಿಕೆಗಳನ್ನು ಕೈಗೊಳ್ಳುವುದು; ಮತ್ತು

(ಜೆ) ಅರ್ಥಶಾಸ್ತ್ರ, ಶಿಕ್ಷಣ ಮತ್ತು ಸಂಬಂಧಪಟ್ಟ ವಿಷಯಗಳ ಕ್ಷೇತ್ರಗಳಲ್ಲಿ, ಕಾರ್ಯನಿರ್ವಾಹಕ ಪರಿಷತ್ತು, ಕಾಲಕಾಲಕ್ಕೆ ಇಚ್ಛಿಸುವ ಇತರ ಕಾರ್ಯಗಳು ಮತ್ತು ಕಾಲಕಾಲಕ್ಕೆ, ರಾಜ್ಯ ಸರ್ಕಾರ ಅಥವಾ ಕೇಂದ್ರ ಸರ್ಕಾರ ಅಥವಾ ಇತರ ಸರ್ಕಾರಿ ಏಜೆನ್ಸಿಗಳು, ಕಾರ್ಪೊರೇಟ್ ನಿಕಾಯಗಳು ಸರ್ಕಾರಿ ಅಥವಾ ಖಾಸಗಿ ವಹಿಸಿಕೊಡುವ ಕಾರ್ಯಗಳನ್ನು ಕೈಗೊಳ್ಳುವುದು.

5. ವಿಶ್ವವಿದ್ಯಾಲಯದ ಅಧಿಕಾರಗಳು ಮತ್ತು ಕರ್ತವ್ಯಗಳು.– ಈ ಮುಂದಿನವು ವಿಶ್ವವಿದ್ಯಾಲಯದ ಅಧಿಕಾರಗಳು ಮತ್ತು ಕರ್ತವ್ಯಗಳಾಗಿರತಕ್ಕದ್ದು, ಎಂದರೆ:–

(i) ವಿಶ್ವವಿದ್ಯಾನಿಲಯದ ಧ್ಯೇಯೋದ್ದೇಶಗಳನ್ನು ಉತ್ತೇಜಿಸುವುದಕ್ಕಾಗಿ ವಿಶ್ವವಿದ್ಯಾನಿಲಯದ ಮತ್ತು ಸಂಶೋಧನೆ, ಶಿಕ್ಷಣ ಹಾಗೂ ಬೋಧನೆಗಾಗಿನ ಅಂಥ ಕೇಂದ್ರಗಳ ಆಡಳಿತ ನಡೆಸುವುದು ಮತ್ತು ಮೇಲ್ವಿಚಾರಣೆ ಮಾಡುವುದು;

(ii) ಅರ್ಥಶಾಸ್ತ್ರ ಮತ್ತು ಇತರ ಸಮಾಜ ವಿಜ್ಞಾನ ವಿಷಯಗಳಿಗೆ ಸಂಬಂಧಿಸಿದಂತೆ ಅರಿವು ಅಥವಾ ಕಲಿಕೆಯ ಅಂಥ ವಿಭಾಗಗಳಲ್ಲಿ, ವಿಶ್ವವಿದ್ಯಾನಿಲಯವು ಸೂಕ್ತವೆಂದು ಭಾವಿಸಬಹುದಾದಂತೆ ಬೋಧನೆಗೆ ಅವಕಾಶವನ್ನು ಕಲ್ಪಿಸುವುದು ಮತ್ತು ಈ ವಿಷಯಗಳಲ್ಲಿ ಸಂಶೋಧನೆಗಾಗಿ ಜ್ಞಾನದ ಪ್ರಗತಿ ಮತ್ತು ಪ್ರಸಾರಕ್ಕಾಗಿ ಅವಕಾಶವನ್ನು ಕಲ್ಪಿಸುವುದು;

(iii) ವಿಶೇಷಾಧಿಕ (extra-mural) ಕಲಿಕೆ ಮತ್ತು ವಿಸ್ತರಣಾ ಸೇವೆಗಳನ್ನು ಏರ್ಪಡಿಸುವುದು ಮತ್ತು ಕೈಗೊಳ್ಳುವುದು;

(iv) ವಿಶ್ವವಿದ್ಯಾನಿಲಯವು ನಿರ್ಧರಿಸಬಹುದಾದಂತೆ ಅಂಥ ಷರತ್ತುಗಳಿಗೆ ಒಳಪಟ್ಟು ಪರೀಕ್ಷೆಗಳನ್ನು ನಡೆಸುವುದು ಮತ್ತು ಡಿಪ್ಲೊಮಾಗಳು ಅಥವಾ ಪ್ರಮಾಣಪತ್ರಗಳನ್ನು ನೀಡುವುದು, ವ್ಯಕ್ತಿಗಳಿಗೆ ಪದವಿಗಳು ಮತ್ತು ಇತರ ಶೈಕ್ಷಣಿಕ ಪ್ರಶಸ್ತಿಗಳನ್ನು ಪ್ರದಾನ ಮಾಡುವುದು ಮತ್ತು ಉತ್ತಮ ಹಾಗೂ ಯುಕ್ತ ಕಾರಣಕ್ಕಾಗಿ ಯಾವುದೇ ಅಂಥ ಡಿಪ್ಲೋಮಾಗಳು, ಪ್ರಮಾಣ ಪತ್ರಗಳು, ಪದವಿಗಳು ಅತವಾ ಇತರ ಶೈಕ್ಷಣಿಕ ಪ್ರಶಸ್ತಿಗಳನ್ನು ಹಿಂತೆಗೆದುಕೊಳ್ಳುವುದು;

(v) ವಿನಿಯಮಗಳಲ್ಲಿ ಹೇಳಲಾದ ರೀತಿಯಲ್ಲಿ ವ್ಯಕ್ತಿಗಳಿಗೆ ಗೌರವ ಪದವಿಗಳು ಅಥವಾ ಇತರ ಪ್ರಶಸ್ತಿಗಳನ್ನು ಪ್ರದಾನ ಮಾಡುವುದು;

(vi) ಶುಲ್ಕಗಳು ಮತ್ತು ಇತರ ಚಾರ್ಜುಗಳನ್ನು ನಿಗದಿಪಡಿಸುವುದು, ಕೇಳಿಪಡೆದುಕೊಳ್ಳುವುದು ಮತ್ತು ಸ್ವೀಕರಿಸುವುದು;

(vii) ವಿಶ್ವವಿದ್ಯಾನಿಲಯವು, ತನ್ನ ಧ್ಯೇಯೋದ್ದೇಶಗಳ ಪ್ರಗತಿಗಾಗಿ ಅವಶ್ಯವೆಂದು ಅಭಿಪ್ರಾಯಪಡುವ ಅಂಥ ವಿಶೇಷ ಕೇಂದ್ರಗಳು, ವಿಶೇಷವಾದ ವ್ಯಾಸಂಗ ಕೇಂದ್ರಗಳು ಅಥವಾ ಸಂಶೋಧನೆ ಮತ್ತು ಬೋಧನೆಗಾಗಿ ಇತರ ಘಟಕಗಳನ್ನು ಸ್ಥಾಪಿಸುವುದು;

(viii) ನಿವಾಸಗಳ ಸಭಾಂಗಣಗಳು ಮತ್ತು ವಸತಿನಿಲಯಗಳನ್ನು ಪ್ರಾರಂಭಿಸುವುದು ಮತ್ತು ನಿರ್ವಹಿಸುವುದು ಹಾಗೂ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳಿಗಾಗಿ ನಿವಾಸದ ಸ್ಥಳಗಳನ್ನು ಮಾನ್ಯ ಮಾಡುವುದು ಮತ್ತು ಅಂಥ ಯಾವುದೇ ನಿವಾಸದ ಸ್ಥಳಕ್ಕೆ ನೀಡಲದ ಅಂಥ ಮಾನ್ಯತೆಯನ್ನು ಹಿಂಪಡೆಯುವುದು;

(ix) ನಿವಾಸದ ಸಭಾಂಗಣಗಳನ್ನು ಮೇಲ್ವಿಚಾರಣೆ ಮಾಡುವುದು ಮತ್ತು ನಿಯಂತ್ರಿಸುವುದು ಮತ್ತು ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳ ಶಿಸ್ತನ್ನು ನಿಯಂತ್ರಿಸುವುದು ಹಾಗೂ ಅವರ ಆರೋಗ್ಯ ವೃದ್ಧಿಗಾಗಿ ಏರ್ಪಾಡುಗಳನ್ನು ಮಾಡುವುದು;

(x) ಮಹಿಳಾ ವಿದ್ಯಾರ್ಥಿಗಳಿಗೆ ನಿವಾಸ, ಶಿಸ್ತು ಮತ್ತು ಬೋಧನೆಯ ಸಂಬಂಧದಲ್ಲಿ ಅಂಥ ಏರ್ಪಾಡುಗಳನ್ನು ಮಾಡುವುದು;

(xi) ಶೈಕ್ಷಣಿಕ, ತಾಂತ್ರಿಕ, ಆಡಳಿತಾತ್ಮಕ, ಲಿಪಿಕ ಮತ್ತು ಇತರ ಹುದ್ದೆಗಳನ್ನು ಸೃಷ್ಟಿಸುವುದು ಮತ್ತು ಅವುಗಳಿಗೆ ನೇಮಕಗಳನ್ನು ಮಾಡುವುದು;

(xii) ವಿಶ್ವವಿದ್ಯಾನಿಲಯದ ಸಿಬ್ಬಂದಿಯಲ್ಲಿ ಶಿಸ್ತನ್ನು ನಿಯಂತ್ರಿಸಿ ಜಾರಿಗೊಳಿಸುವುದು ಹಾಗೂ ಅವಶ್ಯವೆಂದು ಭಾವಿಸಬಹುದಾದ ಅಂಥ ಶಿಸ್ತು ಕ್ರಮಗಳನ್ನು ತೆಗೆದುಕೊಳ್ಳುವುದು;

(xiii) ವಿಶ್ವವಿದ್ಯಾನಿಲಯವು ಅಗತ್ಯಪಡಿಸುವ ಪ್ರೊಫೆಸರ್‌ಷಿಪ್‌ಗಳು, ಅಸೋಸಿಯೇಟ್ ಪ್ರೊಫೆಸರ್ ಶಿಪ್‌ಗಳು, ಅಸಿಸ್ಟೆಂಟ್ ಪ್ರೊಫೆಸರ್‌ಷಿಪ್‌ಗಳು ಮತ್ತು ಯಾವುದೇ ಇತರ ಬೋಧಕ, ಶೈಕ್ಷಣಿಕ ಅಥವಾ ಸಂಶೋಧನಾ ಹುದ್ದೆಗಳನ್ನು ಪ್ರಾರಂಭಿಸುವುದು;

(xiv) ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕರು, ಸಹ ಪ್ರಾಧ್ಯಾಪಕರು, ಸಹಾಯಕ ಪ್ರಾಧ್ಯಾಪಕರುಗಳನ್ನಾಗಿ ಅಥವಾ ಅನ್ಯಥಾ ಶಿಕ್ಷಕರು ಮತ್ತು ಸಂಶೋಧಕರನ್ನಾಗಿ ವ್ಯಕ್ತಿಗಳನ್ನು ನೇಮಿಸುವುದು;

(xv) ಪ್ರಶಂಸನೀಯ (meritorious) ವಿದ್ಯಾರ್ಥಿಗಳಿಗಾಗಿ ಫೆಲೋಷಿಪ್‌ಗಳು, ವಿದ್ಯಾರ್ಥಿವೇತನಗಳು, ಬಹುಮಾನಗಳು ಮತ್ತು ಪದಕಗಳನ್ನು ಪ್ರಾರಂಭಿಸುವುದು ಮತ್ತು ನೀಡುವುದು. ಸಂಶೋಧನೆ ಹಾಗೂ ಇತರ ಕೃತಿಗಳ ಮುದ್ರಣ, ನಕಲು ಮಾಡುವುದು ಮತ್ತು ಪ್ರಕಣೆಗೆ ಅವಕಾಶ ಕಲ್ಪಿಸುವುದು ಹಾಗೂ ಪ್ರದರ್ಶನಗಳನ್ನು ಆಯೋಜಿಸುವುದು;

(xvi) ಅರ್ಥಶಾಸ್ತ್ರ ಮತ್ತು ಸಮಾಜ ವಿಜ್ಞಾನದ ಎಲ್ಲಾ ಅಂಶಗಳಲ್ಲಿಯೂ ಸಂಶೋಧನೆಯನ್ನು ಪ್ರಾಯೋಜಿಸುವುದು ಮತ್ತು ಕೈಗೊಳ್ಳುವುದು;

(xvii) ರಾಜ್ಯದ ಇತರ ಭಾಗಗಳಲ್ಲಿ ಅರ್ಥಶಾಸ್ತ್ರ ಮತ್ತು ಇತರ ವಿಷಯಗಳಲ್ಲಿ ಸಂಶೋಧನೆ ಮತ್ತು ಉತ್ಕೃಷ್ಟತಾ ಕೇಂದ್ರಗಳನ್ನು ಸ್ಥಾಪಿಸುವುದು;

(xviii) ವಿಶ್ವವಿದ್ಯಾನಿಲಯವು ಕಾಲಕಾಲಕ್ಕೆ ನಿರ್ಧರಿಸಬಹುದಾದ ಅಂಥ ನಿಬಂಧನೆಗಳು ಮತ್ತು ಷರತ್ತುಗಳ ಮೇಲೆ ಒಪ್ಪಂದವಾದ ಅಂಥ ಉದ್ದೇಶಗಳಿಗಾಗಿ ಅರ್ಥಶಾಸ್ತ್ರ, ಸಮಾಜ ವಿಜ್ಞಾನಗಳು ಮತ್ತು ಇತರ ಸಂಬಂಧಿಕ ವಿಷಯಗಳಲ್ಲಿ ಶಿಕ್ಷಣ, ಬೋಧನೆ ಮತ್ತು ಸಂಶೋಧನೆಯ ವಿಷಯದಲ್ಲಿ ಯಾವುದೇ ಇತರ ಸಂಘಟನೆಯೊಡನೆ ಸಹಕರಿಸುವುದು;

(xix) ವಿಶ್ವವಿದ್ಯಾನಿಲಯದ ಧ್ಯೇಯೋದ್ದೇಶಗಳಿಗೆ ಪೂರ್ಣವಾಗಿ ಅಥವಾ ಭಾಗಶಃ ಸದೃಶವಾಗಿರುವ ವಿಶ್ವದ ಯಾವುದೇ ಭಾಗದಲ್ಲಿನ ಉನ್ನತ ಕಲಿಕೆ ಸಂಸ್ಥೆಗಳೊಡನೆ, ಶಿಕ್ಷಕರು ಮತ್ತು ವಿದ್ವಾಂಸರನ್ನು ವಿನಿಮಯಗೊಳಿಸುವ ಮೂಲಕ, ಸಾಮಾನ್ಯವಾಗಿ ಸಮಾನ ಧ್ಯೇಯೋದ್ದೇಶಿಗೆ ಅನುಕೂಲವಾಗಬಹುದಾದ ಅಂಥ ವಿಧಾನದಲ್ಲಿ ಸಹಕರಿಸುವುದು;

(xx) ವಿಶ್ವವಿದ್ಯಾನಿಲಯದ ವೆಚ್ಚಗಳನ್ನು ನಿಯಂತ್ರಿಸುವುದು ಮತ್ತು ಲೆಕ್ಕಪತ್ರಗಳನ್ನು ನಿರ್ವಹಿಸುವುದು;

(xxi) ವಿಶ್ವವಿದ್ಯಾನಿಲಯವು ಅವಶ್ಯವೆಂದು ಪರಿಗಣಿಸಬಹುದಾದ ಅಂಥ ತರಗತಿ ಕೊಠಡಿಗಳು ಮತ್ತು ವ್ಯಾಸಂಗ ಸಭಾಂಗಣಗಳನ್ನು ವಿಶ್ವವಿದ್ಯಾನಿಲಯದ ಆವರಣದೊಳಗೆ ಅಥವಾ ತನ್ನ ಅಧಿಕಾರ ವ್ಯಾಪ್ತಿಯಲ್ಲಿ ಎಲ್ಲಿಯಾದರೂ ಸ್ಥಾಪಿಸಿ ನಿರ್ವಹಿಸುವುದು ಹಾಗೂ ಅದಕ್ಕೆ ಸಮರ್ಪಕವಾಗಿ ಪೀಠೋಪಕರಣಗಳನ್ನು ಸಜ್ಜುಗೊಳಿಸುವುದು ಮತ್ತು ವಿಶ್ವವಿದ್ಯಾನಿಲಯಕ್ಕೆ ಅನುಕೂಲಕರ ಅಥವಾ ಅವಶ್ಯವೆಂದು ಕಂಡುಬರುವ ಅಂಥ ಗ್ರಂಥಾಲಯಗಳು ಮತ್ತು ವಾಚನಾಲಯಗಳನ್ನು ಸ್ಥಾಪಿಸಿ ನಿರ್ವಹಿಸುವುದು;

(xxii) ವಿಶ್ವವಿದ್ಯಾನಿಲಯವು ಸ್ಥಾಪನೆಯಾದ ಉದ್ದೇಶಗಳಿಗೆ ಸಂಗತವಾಗುವ ವಿಶ್ವವಿದ್ಯಾನಿಲಯದ ಉದ್ದೇಶಗಳಿಗಾಗಿ ಅನುದಾನಗಳು, ದತ್ತಿಗಳು, ದೇಣಿಗಳು, ಕೊಡಗೆಗಳು ಮತ್ತು ಕಾಣಿಕೆಗಳನ್ನು ಸ್ವೀಕರಿಸುವುದು;

(xxiii) ರಾಜ್ಯ ಸರ್ಕಾರದ ಪೂರ್ವಾನುಮೋದನೆಯೊಂದಿಗೆ ವಿಶ್ವವಿದ್ಯಾನಿಲಯದ ಉದ್ದೇಶಗಳಿಗಾಗಿ ಅವಶ್ಯವಾಗಬಹುದಾದ ಅಥವಾ ಅನುಕೂಲವಾಗಬಹುದಾದ ಯಾವುದೇ ಭೂಮಿ ಅಥವಾ ಕಟ್ಟಡ ಅಥವಾ ಕಾಮಗಾರಿಗಳನ್ನು ತಾನು ಸೂಕ್ತ ಮತ್ತು ಕ್ರಮಬದ್ಧವೆಂದು ಭಾವಿಸಬಹುದಾದ ಅಂಥ ನಿಬಂಧನೆಗಳು ಮತ್ತು ಷರತ್ತುಗಳ ಮೇಲೆ ಖರೀದಿಸುವುದು, ಗುತ್ತಿಗೆಯ ಮೇಲೆ ತೆಗೆದುಕೊಳ್ಳುವುದು ಅಥವಾ ದಾನವಾಗಿ ಅಥವ ಅನ್ಯಥಾ ಸ್ವೀಕರಿಸುವುದು ಮತ್ತು ಅಂಥ ಕಟ್ಟಡಗಳು ಅಥವಾ ಕಾಮಗಾರಿಗಳನ್ನು ನಿರ್ಮಿಸುವುದು ಅಥವಾ ಬದಲಾಯಿಸುವುದು ಮತ್ತು ನಿರ್ವಹಿಸುವುದು;

(xxiv) ವಿಶ್ವವಿದ್ಯಾನಿಲಯದ ಹಿತಾಸಕ್ತಿಗಳು ಮತ್ತು ಚಟುವಟಿಕೆಗಳಿಗೆ ಬಾಧಕವಾಗದಂತೆ ತಾನು ಸೂಕ್ತ ಮತ್ತು ಕ್ರಮಬದ್ಧವೆಂದು ಭಾವಿಸಬಹುದಾದಂತೆ ಅಂಥ ನಿಬಂಧನೆಗಳ ಮೇಲೆ, ರಾಜ್ಯ ಸರ್ಕಾರದ ಪೂರ್ವಾನುಮೋದನೆಯೊಂದಿಗೆ, ವಿಶ್ವವಿದ್ಯಾನಿಲಯದ ಚರ ಸ್ವತ್ತುಗಳ ಎಲ್ಲಾ ಅಥವಾ ಯಾವುದೇ ಭಾಗವನ್ನು ಮಾರಾಟ ಮಾಡುವುದು, ವಿನಿಯಮ ಮಾಡುವುದು, ಗುತ್ತಿಗೆ ನೀಡುವುದು ಅಥವಾ ಅನ್ಯಥಾ ವಿಲೇವಾರಿ ಮಾಡುವುದು;

(xxv) ಭಾರತ ಸರ್ಕಾರದ ಮತ್ತು ಇತರ ಪ್ರಾಮಿಸರಿ ನೋಟುಗಳು, ಬಿಲ್ಸ್ ಆಫ್ ಎಕ್ಸ್‌ಚೇಂಜ್, ಚೆಕ್‌ಗಳು ಅಥವಾ ಇತರ ನೆಗೋಷಿಯಬಲ್ ಇನ್ಸ್ಟ್ರುಮೆಂಟ್‌ಗಳನ್ನು ಡ್ರಾ ಮಾಡುವುದು ಮತ್ತು ಸ್ವೀಕರಿಸುವುದು, ತಯಾರು

ಮಾಡುವುದು ಮತ್ತು ಎಂಡಾರ್ಸ್ ಮಾಡುವುದು, ಡಿಸ್ಕೌಂಟ್ ಮಾಡುವುದು ಮತ್ತು ನೆಗೋಷಿಯೇಟ್ ಮಾಡುವುದು;

(xxvi) ವಿಶ್ವವಿದ್ಯಾನಿಲಯಕ್ಕೆ ಸೇರಿದ ಅಥವಾ ವಿಶ್ವವಿದ್ಯಾನಿಲಯದ ಉದ್ದೇಶಗಳಿಗಾಗಿ ಆರ್ಜಿಸಬೇಕಾದ ಸರ್ಕಾರದ ಭದ್ರತೆಗಳನ್ನೂ ಒಳಗೊಂಡಂತೆ ಸ್ಥಿರ ಅಥವಾ ಚರ ಸ್ವತ್ತಿನ ಸಂಬಂಧದಲ್ಲಿನ ಹಸ್ತಾಂತರಗಳು, ವರ್ಗಾವಣೆಗಳು, ಮರು–ಹಸ್ತಾಂತರಣಗಳು, ಅಡಮಾನಗಳು, ಗುತ್ತಿಗೆಗಳು, ಪರವಾನಗಿಗಳು ಮತ್ತು ಒಪ್ಪಂದಗಳನ್ನು ಕಾರ್ಯಗತಗೊಳಿಸುವುದು;

(xxvii) ವಿಶ್ವವಿದ್ಯಾನಿಲಯದ ಯಾವುದೇ ಲಿಖಿತ ಅಥವಾ ವ್ಯವಹಾರವನ್ನು ವ್ಯವಹರಿಸುವುದಕ್ಕಾಗಿ ತಾನು ಸೂಕ್ತವೆಂದು ಭಾವಿಸುವ ಯಾವೊಬ್ಬ ವ್ಯಕ್ತಿ ಅಥವಾ ಏಜೆನ್ಸಿಯನ್ನು ನೇಮಿಸುವುದು;

(xxviii) ಅನುದಾನಗಳನ್ನು ಪಡೆಯುವುದಕ್ಕಾಗಿ ಕೇಂದ್ರ ಸರ್ಕಾರ, ರಾಜ್ಯ ಸರ್ಕಾರ, ಯುಜಿಸಿ ಅಥವಾ ಇತರ ನಿಕಾಯಗೊಂದಿಗೆ ಯಾವುದೇ ಒಪ್ಪಂದವನ್ನು ಮಾಡಿಕೊಳ್ಳುವುದು;

(xxix) ತಾನು ಯುಕ್ತವೆಂದು ಭಾವಿಸಬಹುದಾದ ಅಂಥ ನಿಬಂಧನೆಗಳ ಮೇಲೆ ಹಣದ ಅನುದಾನಗಳು, ಯಾವುದೇ ರೂಪದ ಭದ್ರತೆಗಳು ಅಥವಾ ಸ್ವತ್ತನ್ನು ಸ್ವೀಕರಿಸುವುದು;

(xxx) ವಿಶ್ವವಿದ್ಯಾನಿಲಯದ ಎಲ್ಲಾ ಅಥವಾ ಯಾವುದೇ ಸ್ವತ್ತುಗಳು ಅಥವಾ ಆಸ್ತಿಗಳ ಮೇಲೆ ಹಣ ಹೂಡಲಾದ ಅಥವಾ ಆಧರಿಸಿದ ಬಾಂಡುಗಳ ಅಡಮಾನಗಳ, ಪ್ರಾಮಿಸರಿ ನೋಟುಗಳ ಅಥವಾ ಇತರ ಹೊಣೆಗಾರಿಕೆಗಳ ಅಥವಾ ಭದ್ರತೆಗಳ ಮೇಲೆ ಅಥವಾ ಯಾವುದೇ ಭದ್ರತೆಗಳಿಲ್ಲದೇ ಮತ್ತು ತಾನು ಸೂಕ್ತವೆಂದು ಭಾವಿಸುವ ಅಂಥ ನಿಬಂಧನೆಗಳು ಹಾಗೂ ಷರತ್ತುಗಳ ಮೇಲೆ ಹಣವನ್ನು ಎತ್ತುವುದು ಮತ್ತು ಸಾಲ ಪಡೆಯುವುದು ಮತ್ತು ನಿಧಿಯನ್ನು ಎತ್ತುವುದಕ್ಕೆ ಪ್ರಾಸಂಗಿಕವಾದ ಎಲ್ಲಾ ವೆಚ್ಚಗಳಿಗೆ, ವಿಶ್ವವಿದ್ಯಾನಿಲಯದ ನಿಧಿಯಿಂದ ಪಾವತಿಸುವುದು ಮತ್ತು ಯಾವುದೇ ಸಾಲ ಪಡೆದ ಹಣವನ್ನು ಮರುಪಾವತಿ ಮಾಡುವುದು ಮತ್ತು ಪುನ: ಪಡೆದುಕೊಳ್ಳುವುದು;

(xxxi) ಅಂಥ ಭದ್ರತೆಗಳಲ್ಲಿ ಅಥವಾ ಅವುಗಳ ಮೇಲೆ ಮತ್ತು ಕಾಲಕಾಲಕ್ಕೆ ಪರಿನಿಯಮಗಳಲ್ಲಿ ನಿಯಮಿಸಬಹುದಾದ ಅಂಥ ವಿಧಾನದಲ್ಲಿ ವಿಶ್ವವಿದ್ಯಾನಿಲಯದ ನಿಧಿಗಳನ್ನು ಹೂಡುವುದು ಅಥವಾ ವಿಶ್ವವಿದ್ಯಾನಿಲಯಕ್ಕೆ ಹಣವನ್ನು ವಹಿಸಿಕೊಡುವುದು ಮತ್ತು ಯಾವುದೇ ಅಂಥ ಹೂಡಿಕೆಯನ್ನು ಸ್ಥಳಾಂತರಿಸುವುದು;

(xxxii) ವಿಶ್ವವಿದ್ಯಾನಿಲಯದ ವ್ಯವಹಾರಗಳು ಮತ್ತು ವ್ಯವಸ್ಥಾಪನೆಗಳನ್ನು ನಿಯಂತ್ರಿಸುವುದಕ್ಕಾಗಿ ಮತ್ತು ಅವುಗಳನ್ನು ಬದಲಾವಣೆ ಮಾಡುವುದಕ್ಕಾಗಿ ಪರಿವರ್ತಿಸುವುದಕ್ಕಾಗಿ ಹಾಗೂ ತೆಗೆದುಹಾಕುವುದಕ್ಕಾಗಿ ಅವಶ್ಯಕವೆಂದು ಪರಿಗಣಿಸುವ, ಅಂಥ ಪರಿನಿಯಮಗಳನ್ನು, ಕಾಲಕಾಲಕ್ಕೆ ರಚಿಸುವುದು;

(xxxiii) ಪರಿನಿಯಮಗಳಲ್ಲಿ ನಿಯಮಿಸಬಹುದಾದ ಅಂಥ ವಿಧಾನದಲ್ಲಿ ಮತ್ತು ಅಂಥ ಷರತ್ತುಗಳಿಗೊಳಪಟ್ಟು ಶೈಕ್ಷಣಿಕ, ತಾಂತ್ರಿಕ, ಆಡಳಿತಾತ್ಮಕ ಮತ್ತು ಇತರ ಸಿಬ್ಬಂದಿಯ ಪ್ರಯೋಜನಕ್ಕಾಗಿ ತಾನು ಸೂಕ್ತವೆಂದು ಭಾವಿಸುವ ಅಂಥ ವಿಶ್ರಾಂತಿ ವೇತನ, ವಿಮಾ, ಭವಿಷ್ಯನಿಧಿ ಮತ್ತು ಗ್ರ್ಯಾಚುಟಿಯಂಥವುಗಳನ್ನು ಸ್ಥಾಪಿಸುವುದು ಮತ್ತು ವಿಶ್ವವಿದ್ಯಾನಿಲಯದ ಸಿಬ್ಬಂದಿಯ ಪ್ರಯೋಜನಕ್ಕಾಗಿ ತಾನು ಸೂಕ್ತವೆಂದು ಭಾವಿಸುವ ಅಂಥ ಅನುದಾನಗಳನ್ನು ಮಾಡುವುದು ಮತ್ತು ಸಂಸ್ಥೆಗಳಲ್ಲಿ ನೆರವು ನೀಡುವುದು ಮತ್ತು ಸಂಘಗಳು, ಸಂಸ್ಥೆಗಳು, ನಿಧಿಗಳು, ನ್ಯಾಸಗಳಿಗೆ ನೆರವಾಗಲು ಮತ್ತು ವಿಶ್ವವಿದ್ಯಾನಿಲಯದ ಸಿಬ್ಬಂದಿ ಮತ್ತು ವಿದ್ಯಾರ್ಥಿಗಳಿಗೆ ಪ್ರಯೋಜನವಾಗುವಂತೆ ಸಾಗಣೆಯನ್ನು (conveyance) ಲೆಕ್ಕ ಹಾಕುವುದು;

(xxxiv) ಕುಲಪತಿ ಅಥವಾ ಯಾವುದೇ ಸಮಿತಿ ಅಥವಾ ಯಾವುದೇ ಉಪ–ಸಮಿತಿ ಅಥವಾ ತನ್ನ ಪ್ರಾಧಿಕಾರಗಳ ಯಾವೊಬ್ಬ ಅಥವಾ ಹೆಚ್ಚಿನ ಸದಸ್ಯರಿಗೆ ಅಥವಾ ತನ್ನ ಅಧಿಕಾರಿಗಳಿಗೆ ಪರಿನಿಯಮಗಳನ್ನು ರಚಿಸುವ ಅಧಿಕಾರವನ್ನು ಹೊರತುಪಡಿಸಿ, ತನ್ನ ಎಲ್ಲಾ ಅಥವಾ ಯಾವುದೇ ಅಧಿಕಾರಗಳನ್ನು ಪ್ರತ್ಯಾಯೋಜಿಸುವುದು;

(xxxv) ಮೇಲೆ ಹೇಳಿದ ಧ್ಯೇಯೋದ್ದೇಶಗಳು ಅಥವಾ ಅವುಗಳಲ್ಲಿ ಯಾವುದಾದರೂ ಒಂದನ್ನು ಸಾಧಿಸಲು ಅಥವಾ ವಿಸ್ತರಿಸಲು ಅವಶ್ಯವಾದುದು, ನೆರವಾದುದು ಅಥವಾ ಪ್ರಾಸಂಗಿಕವಾದುದು ಎಂದು ವಿಶ್ವವಿದ್ಯಾನಿಲಯವು ಪರಿಗಣಿಸುವ ಅಂಥ ಎಲ್ಲಾ ಇತರ ಕ್ರಮಗಳು ಮತ್ತು ಕಾರ್ಯಗಳನ್ನು ಮಾಡುವುದು.

6. ವಿಶ್ವವಿದ್ಯಾಲಯಕ್ಕೆ ಪ್ರವೇಶ.– (1) ಈ ಅಧಿನಿಯಮದ ಮತ್ತು ಪರಿನಿಯಮಗಳ ಉಪಬಂಧಗಳಿಗೆ ಒಳಪಟ್ಟು ವಿಶ್ವವಿದ್ಯಾಲಯವು ಎಲ್ಲ ವ್ಯಕ್ತಿಗಳ ಪ್ರವೇಶಕ್ಕೆ ಮುಕ್ತವಾಗಿರತಕ್ಕದ್ದು.

(2) (1)ನೇ ಉಪಪ್ರಕರಣದಲ್ಲಿರುವುದಾವುದೂ,–

(ಎ) ನಿಯಮಿಸಲಾದ ಶೈಕ್ಷಣಿಕ ವಿದ್ಯಾರ್ಹತೆಯನ್ನು ಅಥವಾ ಗುಣಮಟ್ಟವನ್ನು ಹೊಂದಿರದ ಯಾವೊಬ್ಬ ವ್ಯಕ್ತಿಗೆ ಯಾವುದೇ ಅಧ್ಯಯನ ಕ್ರಮಕ್ಕೆ ಪ್ರವೇಶ ನೀಡಲು;

(ಬಿ) ಪದವಿ, ಡಿಪ್ಲೊಮಾ ಅಥವಾ ಇತರ ಶೈಕ್ಷಣಿಕ ಪ್ರಶಸ್ತಿಯನ್ನು ನೀಡಲು ಅಗತ್ಯವಿರುವ ಕನಿಷ್ಠ ಮಟ್ಟಕ್ಕಿಂತ ಕಡಿಮೆಯ ಶೈಕ್ಷಣಿಕ ಪ್ರಗತಿಯನ್ನು ತೋರಿಸುವ ಯಾವೊಬ್ಬ ವಿದ್ಯಾರ್ಥಿಯನ್ನು ವಿಶ್ವವಿದ್ಯಾಲಯದ ಹಾಜರಿಪಟ್ಟಿಯಲ್ಲಿ ಉಳಿಸಿಕೊಳ್ಳಲು; ಅಥವಾ

(ಸಿ) ವಿಶ್ವವಿದ್ಯಾಲಯದ ಹಿತಾಸಕ್ತಿಗೆ ಅಥವಾ ಇತರ ವಿದ್ಯಾರ್ಥಿಗಳ ಮತ್ತು ಅಧ್ಯಾಪಕ ಹಕ್ಕುಗಳು ಮತ್ತು ವಿಶೇಷಾಧಿಕಾರಗಳಿಗೆ ಪ್ರತಿಕೂಲವಾದ ನಡತೆಯುಳ್ಳ ಯಾವೊಬ್ಬ ವ್ಯಕ್ತಿಗೆ ಪ್ರವೇಶ ನೀಡಲು ಅಥವಾ ಯಾವೊಬ್ಬ ವಿದ್ಯಾರ್ಥಿಯನ್ನು ಉಳಿಸಿಕೊಳ್ಳಲು,

– ವಿಶ್ವವಿದ್ಯಾಲಯವನ್ನು ಅಗತ್ಯಪಡಿಸತಕ್ಕದ್ದಲ್ಲ.

(3) (2)ನೇ ಉಪಪ್ರಕರಣದ ಉಪಬಂಧಗಳಿಗೊಳಪಟ್ಟು, ಸರ್ಕಾರವು ಆದೇಶದ ಮೂಲಕ, ಅಂಥ ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದಂತೆ ಅನುಸೂಚಿತ ಜಾತಿಗಳು, ಅನುಸೂಚಿತ ಪಂಗಡಗಳು ಮತ್ತು ಇತರ ಹಿಂದುಳಿದ ವರ್ಗಗಳಿಗೆ ಸೇರಿದ ವಿದ್ಯಾರ್ಥಿಗಳಿಗಾಗಿ ಅದರಲ್ಲಿನ ಅಂಥ ಶೇಕಡಾವಾರು ಸೀಟುಗಳನ್ನು ಮೀಸಲಿಡತಕ್ಕದ್ದು ಎಂದು ವಿಶ್ವವಿದ್ಯಾನಿಲಯಕ್ಕೆ ನಿರ್ದೇಶಿಸತಕ್ಕದ್ದು ಮತ್ತು ಅಂಥ ನಿರ್ದೇಶನವನ್ನು ನೀಡಿರುವಲ್ಲಿ ವಿಶ್ವವಿದ್ಯಾನಿಲಯವು ಅದಕ್ಕನುಸಾರವಾಗಿ ಮೀಸಲಾತಿಯನ್ನು ಮಾಡತಕ್ಕದ್ದು.

7. ನಿರ್ದೇಶನಗಳನ್ನು ನೀಡಲು ಅಧಿಕಾರ.– ಕುಲಾಧಿಪತಿಯು, ತಾನಾಗಿಯೇ ಆಗಲೀ ಅಥವಾ ಸರ್ಕಾರದ ಶಿಫಾರಸಿನ ಮೇಲಾಗಲೀ ವಿಶ್ವವಿದ್ಯಾಲಯದ ಆಡಳಿತ ಮತ್ತು ಶೈಕ್ಷಣಿಕ ಕಾರ್ಯನಿರ್ವಹಣೆಯ ಮತ್ತು ವಿಶೇಷವಾಗಿ ಶಾಂತಿ ಮತ್ತು ನೆಮ್ಮದಿಯನ್ನು ಕಾಯ್ದುಕೊಂಡುಬರುವ ದೃಷ್ಟಿಯಿಂದ ಹಾಗೂ ಸ್ವತ್ತು ಮತ್ತು ಹಣಕಾಸು ವ್ಯವಸ್ಥೆಯನ್ನು ಸಂರಕ್ಷಿಸುವುದಕ್ಕಾಗಿ ಅವಶ್ಯಕ ಅಥವಾ ಯುಕ್ತವಾಗಬಹುದಾದ ಅಂಥ ನಿರ್ದೇಶನಗಳನ್ನು ನೀಡಬಹುದು.

8. ವಿಶ್ವವಿದ್ಯಾಲಯದ ಆದೇಶಗಳನ್ನು ರದ್ದುಗೊಳಿಸಲು ಅಧಿಕಾರ.– ಸರ್ಕಾರವು, ಸರ್ಕಾರಿ ರಾಜ್ಯಪತ್ರದಲ್ಲಿ ಆದೇಶವನ್ನು ಪ್ರಕಟಿಸುವ ಮೂಲಕ ವಿಶ್ವವಿದ್ಯಾಲಯದ ಯಾವುದೇ ಆದೇಶ, ಅಧಿಸೂಚನೆ, ನಿರ್ಣಯ ಅಥವಾ ಯಾವುದೇ ವ್ಯವಹರಣೆಗಳು, ಈ ಅಧಿನಿಯಮ ಅಥವಾ ಪರಿನಿಯಮಗಳು, ವಿನಿಯಮಗಳು ಅಥವಾ ಆರ್ಡಿನೆನ್ಸ್‌ಗಳ ಉಪಬಂಧಗಳಿಗೆ ಸುಸಂಗತವಾಗಿಲ್ಲವೆಂದು ಅಥವಾ ಅನ್ಯಥಾ ಸರ್ಕಾರದ ಕಾರ್ಯನೀತಿಗೆ ಅಸಂಗತವಾಗಿದೆಯೆಂದು ಅಭಿಪ್ರಾಯಪಟ್ಟಲ್ಲಿ ಅವುಗಳನ್ನು ರದ್ದುಗೊಳಿಸಬಹುದು.

ಅಧ್ಯಾಯ –III
ವಿಶ್ವವಿದ್ಯಾಲಯದ ಅಧಿಕಾರಿಗಳು

9. ವಿಶ್ವವಿದ್ಯಾಲಯದ ಅಧಿಕಾರಿಗಳು.– ವಿಶ್ವವಿದ್ಯಾಲಯವು ಈ ಮುಂದಿನ ಅಧಿಕಾರಿಗಳನ್ನು ಒಳಗೊಂಡಿರತಕ್ಕದ್ದು, ಎಂದರೆ:–

(1) ಕುಲಾಧಿಪತಿಯವರು;

(2) ಸಹ–ಕುಲಾಧಿಪತಿಯವರು;

(3) ಕುಲಪತಿಯವರು;

(4) ಕುಲಸಚಿವರು;

(5) ಪರೀಕ್ಷೆಗಳ ನಿಯಂತ್ರಕರು ;

(6) ಹಣಕಾಸು ಅಧಿಕಾರಿ;

(7) ಡೀನ್ (ಡೀನರು);

☎ ವಿಶ್ವವಿದ್ಯಾಲಯದ ಅಧಿಕಾರಿಗಳೆಂದು ಪರಿನಿಯಮಗಳಿಂದ ಘೋಷಿತರಾಗಬಹುದಾದ ಅಂಥ ಇತರ ಅಧಿಕಾರಿಗಳು.

10. ಕುಲಾಧಿಪತಿಯವರು.– (1) ಕರ್ನಾಟಕದ ರಾಜ್ಯಪಾಲರು ವಿಶ್ವವಿದ್ಯಾಲಯದ ಕುಲಾಧಿಪತಿಯಾಗಿರತಕ್ಕದ್ದು. ಅವರು ತಮ್ಮ ಪದದ ಆಧಾರದಿಂದ ವಿಶ್ವವಿದ್ಯಾಲಯದ ಮುಖ್ಯಸ್ಥರಾಗಿರತಕ್ಕದ್ದು ಮತ್ತು ಅವರು ಹಾಜರಾಗಿದ್ದಾಗ, ವಿಶ್ವವಿದ್ಯಾಲಯದ ಯಾವುದೇ ಘಟಿಕೋತ್ಸವದ ಅಧ್ಯಕ್ಷರಾಗಿರತಕ್ಕದ್ದು ಮತ್ತು ಪದವಿಗಳು, ಡಿಪ್ಲೊಮಾ ಅಥವಾ ಇತರ ಶೈಕ್ಷಣಿಕ ಪ್ರಶಸ್ತಿಗಳನ್ನು ಅವುಗಳನ್ನು ಸ್ವೀಕರಿಸಲು ಹಕ್ಕುಳ್ಳ ವ್ಯಕ್ತಿಗಳಿಗೆ ಪ್ರದಾನ ಮಾಡತಕ್ಕದ್ದು.

(2) ಪ್ರಾಧಿಕಾರಗಳಿಗೆ ವ್ಯಕ್ತಿಗಳನ್ನು ನಾಮನಿರ್ದೇಶನ ಮಾಡಲು ಕುಲಾಧಿಪತಿಯವರಿಗೆ ಅಧಿಕಾರವನ್ನು ಪ್ರದತ್ತಗೊಳಿಸಿರುವಲ್ಲಿ, ಕುಲಾಧಿಪತಿಯವರು ಅವಶ್ಯಕವಿರುವಷ್ಟರಮಟ್ಟಿಗೆ ಸಾಕಷ್ಟು ಪ್ರಾತಿನಿಧ್ಯ ಪಡೆಯದ ಹಿತಾಸಕ್ತಿಗಳನ್ನು ಪ್ರತಿನಿಧಿಸಲು ವ್ಯಕ್ತಿಗಳನ್ನು ನಾಮನಿರ್ದೇಶಿಸತಕ್ಕದ್ದು.

(3) ಕುಲಾಧಿಪತಿಯವರು ಸ್ವತಃ ತಾವಾಗಿಯೇ ಆಗಲೀ ಅಥವಾ ಅರ್ಜಿಯ ಮೇಲಾಗಲೀ ಯಾವುದೇ ವ್ಯವಹರಣೆಗಳ ಸಂಬಂಧದಲ್ಲಿ ಅಂಥ ವ್ಯವಹರಣೆಗಳ ಸಕ್ರಮತೆ ಅಥವಾ ಯಥಾರ್ಥತೆ, ಕೈಗೊಳ್ಳಲಾದ ಯಾವುದೇ

ತೀರ್ಮಾನ ಅಥವಾ ಅದರಲ್ಲಿ ಜಾರಿ ಮಾಡಲಾದ ಆದೇಶದ ಕಾನೂನು ಸಮ್ಮತತೆ ಅಥವಾ ಔಚಿತ್ಯದ ಬಗ್ಗೆ ತಾವೇ ಮನದಟ್ಟು ಮಾಡಿಕೊಳ್ಳಲು ವಿಶ್ವವಿದ್ಯಾಲಯದ ಯಾವೊಬ್ಬ ಅಧಿಕಾರಿ ಅಥವಾ ಯಾವುದೇ ಪ್ರಾಧಿಕಾರದ ದಾಖಲೆಗಳನ್ನು ತರಿಸಿಕೊಂಡು ಪರೀಕ್ಷಿಸಬಹುದು ಮತ್ತು ಯಾವುದೇ ಸಂದರ್ಭದಲ್ಲಿ ಯಾವುದೇ ಅಂಥ ತೀರ್ಮಾನ ಅಥವಾ ಆದೇಶವನ್ನು ಮಾರ್ಪಾಟುಗೊಳಿಸಬೇಕು, ರದ್ದುಗೊಳಿಸಬೇಕು, ಪರಿಷ್ಕರಣಗೊಳಿಸಬೇಕು ಅಥವಾ ಪುನರ್ ಪರಿಶೀಲನೆಗಾಗಿ ಹಿಂದಕ್ಕೆ ಕಳುಹಿಸಬೇಕೆಂದು ಕುಲಾಧಿಪತಿಯವರಿಗೆ ತೋರಿದರೆ ಅವರು ತದನುಸಾರವಾಗಿ ಆದೇಶಗಳನ್ನು ಜಾರಿ ಮಾಡಬಹುದು:

ಪರಂತು, ಈ ಪ್ರಕರಣದ ಅಡಿಯಲ್ಲಿ ಅಧಿಕಾರಗಳನ್ನು ಚಲಾಯಿಸುವುದಕ್ಕಾಗಿ, ಪ್ರತಿಯೊಂದು ಅರ್ಜಿಯನ್ನು, ಅರ್ಜಿಯ ಸಂಬಂಧದಲ್ಲಿನ ವ್ಯವಹರಣೆ, ತೀರ್ಮಾನ ಅಥವಾ ಆದೇಶವನ್ನು ಅರ್ಜಿದಾರರಿಗೆ ತಿಳಿಸಿದ ದಿನಾಂಕದಿಂದ ಮೂರು ತಿಂಗಳೊಳಗೆ ಕುಲಾಧಿಪತಿಯವರಿಗೆ ಸಲ್ಲಿಸತಕ್ಕದ್ದು:

ಮತ್ತು ಪರಂತು, ಯಾವೊಬ್ಬ ವ್ಯಕ್ತಿಗೆ ಪ್ರತಿಕೂಲವಾದ ಯಾವುದೇ ಆದೇಶವನ್ನು ಅಂಥ ವ್ಯಕ್ತಿಗೆ ತನ್ನ ಮನವಿಯನ್ನು ಸಲ್ಲಿಸಲು ಅವಕಾಶವನ್ನು ನೀಡಿದ್ದ ಹೊರತು, ಜಾರಿ ಮಾಡತಕ್ಕದ್ದಲ್ಲ.

11. ಪರಿಶೀಲನೆ.– (1) ಕುಲಾಧಿಪತಿಯವರು ತಾವು ನಿರ್ದೇಶಿಸಬಹುದಾದಂಥ ವ್ಯಕ್ತಿ ಅಥವಾ ವ್ಯಕ್ತಿಗಳಿಂದ, ವಿಶ್ವವಿದ್ಯಾಲಯದ, ಅದರ ಕಟ್ಟಡಗಳ, ವಿಶ್ವವಿದ್ಯಾಲಯದ ಗ್ರಂಥಾಲಯಗಳ, ವಸ್ತುಸಂಗ್ರಹಾಲಯಗಳ ಮತ್ತು ಉಪಕರಣಗಳ ಹಾಗೂ ವಿಶ್ವವಿದ್ಯಾಲಯದಿಂದ ನಿರ್ವಹಿಸಲಾದ ಅಥವಾ ಮಾನ್ಯತೆ ಪಡೆದ ಯಾವುವೇ ಸಂಸ್ಥೆಗಳ ಮತ್ತು ವಿಶ್ವವಿದ್ಯಾಲಯದಿಂದ ನಡೆಸಲಾದ ಅಥವಾ ಮಾಡಲಾದ ಸಂಶೋಧನೆ, ಬೋಧನೆ ಮತ್ತು ಇತರೆ ಕೆಲಸದ ಪರಿಶೀಲನೆ ನಡೆಸುವಂತೆ ಮಾಡಲು ಅಥವಾ ವಿಚಾರಣೆ ಮಾಡುವಂತೆ ಮಾಡಲು ಹಕ್ಕನ್ನು ಹೊಂದಿರತಕ್ಕದ್ದು ಹಾಗೂ ವಿಶ್ವವಿದ್ಯಾಲಯಕ್ಕೆ ಸಂಬಂಧಿಸಿದ ಯಾವುದೇ ವಿಷಯದ ಬಗ್ಗೆ ವಿಚಾರಣೆ ನಡೆಸುವಂತೆ ಮಾಡತಕ್ಕದ್ದು. ಕುಲಾಧಿಪತಿಯವರು, ಪ್ರತಿಯೊಂದು ಸಂದರ್ಭದಲ್ಲೂ ಅಂಥ ಪರಿಶೀಲನೆ ಅಥವಾ ವಿಚಾರಣೆ ನಡೆಸುವ ತಮ್ಮ ಆಶಯದ ಬಗ್ಗೆ ವಿಶ್ವವಿದ್ಯಾಲಯಕ್ಕೆ ನೋಟೀಸನ್ನು ನೀಡತಕ್ಕದ್ದು ಮತ್ತು ವಿಶ್ವವಿದ್ಯಾಲಯವು ಅಲ್ಲಿ ಪ್ರಾತಿನಿಧ್ಯ ಪಡೆಯಲು ಹಕ್ಕುಳ್ಳದ್ದಾಗಿರತಕ್ಕದ್ದು.

(2) ಕುಲಾಧಿಪತಿಯವರು, ಅಂಥ ಪರಿಶೀಲನೆ ಅಥವಾ ವಿಚಾರಣೆಯ ಪರಿಣಾಮಗಳ ಸಂಬಂಧದಲ್ಲಿ ತಮ್ಮ ಅಭಿಪ್ರಾಯಗಳನ್ನು ಕಾರ್ಯನಿರ್ವಾಹಕ ಪರಿಷತ್ತಿಗೆ ತಿಳಿಸತಕ್ಕದ್ದು ಮತ್ತು ಅದರ ಮೇಲಣ ಕಾರ್ಯನಿರ್ವಾಹಕ ಪರಿಷತ್ತಿನ ಅಭಿಪ್ರಾಯವನ್ನು ಖಚಿತಪಡಿಸಿಕೊಂಡ ತರುವಾಯ ಕೈಗೊಳ್ಳಬೇಕಾದ ಕ್ರಮದ ಬಗ್ಗೆ ವಿಶ್ವವಿದ್ಯಾಲಯಕ್ಕೆ ಸಲಹೆಯನ್ನು ನೀಡಿ ಅಂಥ ಕ್ರಮವನ್ನು ಕೈಗೊಳ್ಳುವುದಕ್ಕೆ ಕಾಲಮಿತಿಯನ್ನು ನಿಗದಿಪಡಿಸಬಹುದು.

(3) ಕಾರ್ಯನಿರ್ವಾಹಕ ಪರಿಷತ್ತು, ಅಂಥ ಪರಿಶೀಲನೆ ಅಥವಾ ವಿಚಾರಣೆಯ ಪರಿಣಾಮಗಳ ಬಗ್ಗೆ ತಾನು ತೆಗೆದುಕೊಳ್ಳಬೇಕೆಂದು ಉದ್ದೇಶಿಸಲಾದ ಅಥವಾ ತೆಗೆದುಕೊಳ್ಳಲಾದ ಕ್ರಮ, ಯಾವುದಾದರೂ ಇದ್ದಲ್ಲಿ, ಆ ಬಗ್ಗೆ ಕುಲಾಧಿಪತಿಯವರಿಗೆ ವರದಿ ಸಲ್ಲಿಸತಕ್ಕದ್ದು. ಅಂಥ ವರದಿಯನ್ನು ಕುಲಾಧಿಪತಿಯವರು ನಿರ್ದೇಶಿಸಬಹುದಾದ ಅಂಥ ಕಾಲದೊಳಗೆ ಸಲ್ಲಿಸತಕ್ಕದ್ದು.

(4) (2)ನೇ ಉಪಪ್ರಕರಣದ ಅಡಿಯಲ್ಲಿ ನಿಗದಿಪಡಿಸಬಹುದಾದ ಕಾಲಮಿತಿಯೊಳಗೆ ಕಾರ್ಯನಿರ್ವಾಹಕ ಪರಿಷತ್ತು, ಕುಲಾಧಿಪತಿಯವರಿಗೆ ಸಮಾಧಾನವಾಗುವಂತೆ ಕ್ರಮ ಕೈಗೊಳ್ಳದಿರುವಲ್ಲಿ, ಕುಲಾಧಿಪತಿಯವರು, ಕಾರ್ಯನಿರ್ವಾಹಕ ಪರಿಷತ್ತಿನಿಂದ ಸಲ್ಲಿಸಲಾದ ವಿವರಣೆ ಅಥವಾ ಮಾಡಿಕೊಳ್ಳಲಾದ ಮನವಿಯನ್ನು ಪರಿಗಣಿಸಿದ ತರುವಾಯ, ತಾವು ಉಚಿತವೆಂದು ಭಾವಿಸಬಹುದಾದ ಅಂಥ ನಿರ್ದೇಶನಗಳನ್ನು ಹೊರಡಿಸಬಹುದು ಮತ್ತು ಕಾರ್ಯನಿರ್ವಾಹಕ ಪರಿಷತ್ತು ಅಂಥ ನಿರ್ದೇಶನಗಳನ್ನು ಪಾಲಿಸತಕ್ಕದ್ದು. ಕುಲಾಧಿಪತಿಯವರ ಅಂಥ ನಿರ್ದೇಶನಗಳನ್ನು ಕಾರ್ಯನಿರ್ವಾಹಕ ಪರಿಷತ್ತು ಪಾಲಿಸದಿದ್ದ ಪಕ್ಷದಲ್ಲಿ, ಕುಲಾಧಿಪತಿಯವರು ಅಂಥ ನಿರ್ದೇಶನಗಳನ್ನು ಪಾಲಿಸುವುದಕ್ಕಾಗಿ ಯಾವೊಬ್ಬ ವ್ಯಕ್ತಿ ಅಥವಾ ನಿಕಾಯವನ್ನು ನೇಮಿಸಲು ಅಧಿಕಾರವನ್ನು ಹೊಂದಿರತಕ್ಕದ್ದು ಮತ್ತು ಆ ಬಗೆಗಿನ ವೆಚ್ಚಗಳಿಗಾಗಿ ಅವಶ್ಯಕವಾಗಬಹುದಾದ ಅಂಥ ಆದೇಶಗಳನ್ನು ಹೊರಡಿಸಬಹುದು.

(5) ಕುಲಾಧಿಪತಿಯವರು, ಈ ಅಧಿನಿಯಮದ ಮೂಲಕ ಅಥವಾ ಅದರ ಅಡಿಯಲ್ಲಿ ತಮಗೆ ಪ್ರದತ್ತಗೊಳಿಸಬಹುದಾದ ಅಂಥ ಇತರ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಅಂಥ ಇತರ ಕರ್ತವ್ಯಗಳನ್ನು ನಿರ್ವಹಿಸತಕ್ಕದ್ದು.

12. ಸಹ–ಕುಲಾಧಿಪತಿ.– ಕರ್ನಾಟಕ ರಾಜ್ಯದಲ್ಲಿ ಉನ್ನತ ಶಿಕ್ಷಣ ಖಾತೆಯ ಪ್ರಭಾರವನ್ನು ಹೊಂದಿರುವ ಸಚಿವರು, ವಿಶ್ವವಿದ್ಯಾಲಯದ ಸಹ ಕುಲಾಧಿಪತಿಯಾಗಿರತಕ್ಕದ್ದು.

13. ಕುಲಪತಿ.– (1) ಕುಲಪತಿಯು ಪೂರ್ಣಕಾಲಿಕ ವಿಶ್ವವಿದ್ಯಾನಿಲಯದ ಅಧಿಕಾರಿಯಾಗಿರತಕ್ಕದ್ದು ಮತ್ತು ಪ್ರಧಾನ ಶೈಕ್ಷಣಿಕ ಮತ್ತು ಕಾರ್ಯನಿರ್ವಾಹಕ ಅಧಿಕಾರಿಯಾಗಿತಕ್ಕದ್ದು.

(2) ಆತನು ಅತ್ಯುನ್ನತ ಮಟ್ಟದ ಸಾಮರ್ಥ್ಯ, ಪ್ರಾಮಾಣಿಕತೆ, ನೈತಿಕತೆ ಮತ್ತು ಸಾಂಸ್ಥಿಕ ಬದ್ಧತೆಯನ್ನುಳ್ಳ ವ್ಯಕ್ತಿಯಾಗಿರತಕ್ಕದ್ದು. ಹಾಗೂ, ಕುಲಪತಿಯು, ಅರ್ಥಶಾಸ್ತ್ರ, ಹಣಕಾಸು ನಿರ್ವಹಣೆ, ಸಮಾಜವಿಜ್ಞಾನ, ಗಣಿತ, ಅಂಕಿಅಂಶಗಳು, ಬ್ಯಾಂಕಿಂಗ್ ಅಥವಾ ಇತರ ಸಂಬಂಧಿತ ವಿಷಯಗಳಲ್ಲಿ ಕನಿಷ್ಠ ಇಪ್ಪತ್ತೈದು ವರ್ಷಗಳ ಬೋಧನಾ ಅನುಭವವನ್ನು ಹೊಂದಿರತಕ್ಕದ್ದು. ಅದರಲ್ಲಿ ಕನಿಷ್ಠ ಹತ್ತು ವರ್ಷಗಳು ಯು.ಜಿ.ಸಿ. ಪ್ರಮಾಣಕಗಳ ಅನುಸಾರವಾಗಿ

ಪ್ರಾಧ್ಯಾಪಕನಾಗಿ ಅಥವಾ ಪ್ರತಿಷ್ಠಿತ ಸಂಶೋಧನೆ ಮತ್ತು ಅಭಿವೃದ್ಧಿ ಅಥವಾ ಆಡಳಿತಾತ್ಮಕ ಸಂಘಟನೆಗಳಲ್ಲಿ ಸಮಾನವಾದ ಹುದ್ದೆಯನ್ನು ಹೊಂದಿರುವ ಶ್ರೇಷ್ಠ ಶೈಕ್ಷಣಿಕ ತಜ್ಞನಾಗಿರತಕ್ಕದ್ದು.

(3) ಕುಲಪತಿಯ ಅಧಿಕಾರಗಳು, ಪ್ರಕಾರ್ಯಗಳು, ಕರ್ತವ್ಯಗಳು ಮತ್ತು ಹೊಣೆಗಾರಿಕೆಗಳು ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದಂತೆ ಇರತಕ್ಕದ್ದು.

(4) ಕುಲಪತಿಯು, ಕುಲಾಧಿಪತಿಯವರಿಂದ ಈ ಮುಂದಿನ ಕಾರ್ಯವಿಧಾನದ ಅನುಸಾರವಾಗಿ ನೇಮಕಗೊಳ್ಳತಕ್ಕದ್ದು, ಎಂದರೆ:–

(i) ಸಾಮಾನ್ಯವಾಗಿ ಸ್ಥಾನಿಕ ಕುಲಪತಿಯ ಪದಾವಧಿಯು ಮುಕ್ತಾಯಗೊಳ್ಳುವ ಮೂರು ತಿಂಗಳುಗಳ ಮೊದಲು ಕುಲಪತಿಯ ನೇಮಕಕ್ಕಾಗಿ ರಾಜ್ಯ ಸರ್ಕಾರವು ಶೋಧನಾ ಮತ್ತು ಆಯ್ಕೆ ಸಮಿತಿಯನ್ನು ರಚಿಸತಕ್ಕದ್ದು;

(ii) ಶೋಧನಾ ಮತ್ತು ಆಯ್ಕೆ ಸಮಿತಿಯು ಪ್ರತಿಯೊಬ್ಬರೂ ಶ್ರೇಷ್ಠ ಶಿಕ್ಷಣ ತಜ್ಞರಾಗಿರುವ, ವಿಶ್ವವಿದ್ಯಾಲಯದ ಕುಲಪತಿ ಅಥವಾ ರಾಷ್ಟ್ರೀಯ ಪ್ರಾಮುಖ್ಯತೆಯುಳ್ಳ ಸಂಸ್ಥೆಯ ಕುಲಪತಿ ದರ್ಜೆಗೆ ಕಡಿಮೆಯಲ್ಲದ ದರ್ಜೆಯ ಐವರು ಸದಸ್ಯರನ್ನು ಒಳಗೊಂಡಿರತಕ್ಕದ್ದು. ಈ ಸದಸ್ಯರಲ್ಲಿ ಒಬ್ಬರನ್ನು ಕುಲಾಧಿಪತಿಯು, ಒಬ್ಬರನ್ನು ಯು.ಜಿ.ಸಿ.ಯು ಇಬ್ಬರನ್ನು ರಾಜ್ಯ ಸರ್ಕಾರವು ಮತ್ತು ಒಬ್ಬರನ್ನು ಕಾರ್ಯನಿರ್ವಾಹಕ ಪರಿಷತ್ತು ನಾಮನಿರ್ದೇಶನ ಮಾಡತಕ್ಕದ್ದು. ರಾಜ್ಯ ಸರ್ಕಾರವು ಈ ಸದಸ್ಯರಲ್ಲಿ ಒಬ್ಬರನ್ನು ಶೋಧನಾ ಮತ್ತು ಆಯ್ಕೆ ಸಮಿತಿಯ ಅಧ್ಯಕ್ಷರನ್ನಾಗಿ ನೇಮಕ ಮಾಡತಕ್ಕದ್ದು:

ಪರಂತು, ಸಭೆಯ ಕೋರಂ ಮೂರು ಸಸ್ಯರಾಗಿರತಕ್ಕದ್ದು:

ಮತ್ತು ಪರಂತು, ನಾಮನಿರ್ದೇಶಿತರಾದ ಅಂಥ ಸದಸ್ಯರಲ್ಲಿ, ಅವರು ನೇಮಕವಾಗಿರುವುದನ್ನು ತಿಳಿಸಿದ ಒಂದು ತಿಂಗಳೊಳಗಾಗಿ ಪೂರಕವಾಗಿ ಸ್ಪಂದಿಸದಿದ್ದರೆ, ಸ್ವಯಂಚಾಲಿತವಾಗಿ ಬೇರೊಬ್ಬ ನಾಮನಿರ್ದೇಶಿತರಿಂದ ಅವರನ್ನು ಬದಲಿಸತಕ್ಕದ್ದು.

(iii) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಅಥವಾ ಪ್ರಧಾನ ಕಾರ್ಯದರ್ಶಿ ಅಥವಾ ಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾಖೆ ಅಥವಾ ರಾಜ್ಯ ಸರ್ಕಾರದ ಉಪ ಕಾರ್ಯದರ್ಶಿಯ ದರ್ಜೆಗಿಂತ ಕಡಿಮೆಯಲ್ಲದ ದರ್ಜೆಯ ಆತನ ನಾಮನಿರ್ದೇಶಿತನು ಶೋಧನಾ ಮತ್ತು ಆಯ್ಕೆ ಸಮಿತಿಯ ಸಂಚಾಲಕನಾಗಿರತಕ್ಕದ್ದು. ಸಂಚಾಲಕನು, ಶೋಧನಾ ಮತ್ತು ಆಯ್ಕೆ ಸಮಿತಿಗೆ ಅದಕ್ಕೆ ವಹಿಸಿದ ಕೆಲಸದಲ್ಲಿ ನೆರವಾಗತಕ್ಕದ್ದು ಮತ್ತು ಖ್ಯಾತ ವ್ಯಕ್ತಿಗಳಿಂದ ಸ್ವೀಕೃತವಾದ ನಾಮನಿರ್ದೇಶನಗಳ ಆಧಾರದ ಮೇಲೆ ಕುಲಪತಿಯ ಸ್ಥಾನಕ್ಕೆ ಅರ್ಜಿಗಳನ್ನು ಆಹ್ವಾನಿಸಿದ ತರುವಾಯ ಎಲ್ಲಾ ಅರ್ಹ ಅಭ್ಯರ್ಥಿಗಳ ಲಭ್ಯವಿರುವ ದತ್ತಾಂಶಗಳನ್ನು ಕೂಡಾ ಅದರ ಮುಂದೆ ಮಂಡಿಸತಕ್ಕದ್ದು ಹಾಗೂ ಅಂಥ ದತ್ತಾಂಶದಿಂದ ಶೋಧನಾ ಮತ್ತು ಆಯ್ಕೆ ಸಮಿತಿಯು ಆಯ್ಕೆಯಾದ ಅಭ್ಯರ್ಥಿಗಳ ಪಟ್ಟಿಯನ್ನು ಸಿದ್ಧಪಡಿಸತಕ್ಕದ್ದು.

(5) ರಾಜ್ಯ ಸರ್ಕಾರದ ಅಥವಾ ವಿಶ್ವವಿದ್ಯಾಲಯದ ವ್ಯವಹಾರಗಳೊಂದಿಗೆ ಪ್ರಸ್ತುತ ಸಂಬಂಧವಿರುವ ಯಾವೊಬ್ಬ ವ್ಯಕ್ತಿಯನ್ನೂ ಶೋಧನಾ ಮತ್ತು ಆಯ್ಕೆ ಸಮಿತಿಯ ಸದಸ್ಯರನ್ನಾಗಿ ನಾಮನಿರ್ದೇಶನ ಮಾಡತಕ್ಕದ್ದಲ್ಲ.

(6) ಶೋಧನಾ ಮತ್ತು ಆಯ್ಕೆ ಸಮಿತಿಯು, ತಾನು ರಚನೆಯಾದ ದಿನಾಂಕದಿಂದ ಎರಡು ತಿಂಗಳೊಳಗೆ, (2)ನೇ ಉಪಪ್ರಕರಣದ ಅಡಿಯಲ್ಲಿನ ಅಗತ್ಯತೆಗಳನ್ನು ಪೂರೈಸುವ ಮತ್ತು ಅರ್ಥಶಾಸ್ತ್ರ ಮತ್ತು/ ಅಥವಾ ಸಮಾಜ ವಿಜ್ಞಾನಗಳ ಕ್ಷೇತ್ರದಿಂದ ಖ್ಯಾತ ಶಿಕ್ಷಣ ತಜ್ಞರಾದ ಮೂರು ವ್ಯಕ್ತಿಗಳ ಹೆಸರಿನ ಒಂದು ಪಟ್ಟಿಯನ್ನು ರಾಜ್ಯ ಸರ್ಕಾರಕ್ಕೆ ಸಲ್ಲಿಸತಕ್ಕದ್ದು. ಹೆಸರುಗಳ ಪಟ್ಟಿಯನ್ನು ಅಕಾರಾದಿ ಕ್ರಮದಲ್ಲಿ ಜೋಡಿಸತಕ್ಕದ್ದು. ರಾಜ್ಯ ಸರ್ಕಾರವು ಅವರ ಅರ್ಹತೆ, ಸಮದರ್ಶಿತ್ವ ಮತ್ತು ಸಾಮಾಜಿಕ ನ್ಯಾಯ ಇವುಗಳನ್ನು ಗಮನದಲ್ಲಿಟ್ಟುಕೊಂಡು ಆ ಪಟ್ಟಿಯಲ್ಲಿನ ಒಬ್ಬರ ಹೆಸರನ್ನು ವಿಶ್ವವಿದ್ಯಾನಿಲಯದ ಕುಲಪತಿಯನ್ನಾಗಿ ನೇಮಿಸಲು ಕುಲಾಧಿಪತಿಯವರಿಗೆ ಶಿಫಾರಸ್ಸು ಮಾಡತಕ್ಕದ್ದು:

ಪರಂತು, ರಾಜ್ಯ ಸರ್ಕಾರವು ಶಿಫಾರಸ್ಸು ಮಾಡಿದ ಹೆಸರು ಕುಲಾಧಿಪತಿಯವರಿಗೆ ತೃಪ್ತಿಕರವಾಗದಿದ್ದಲ್ಲಿ, ಕುಲಾಧಿಪತಿಯವರು, ಕಾರಣಗಳನ್ನು ದಾಖಲಿಸಿ, ಸಲ್ಲಿಸಲಾದ ಶಿಫಾರಸ್ಸನ್ನು ಮರುಪರಿಗಣಿಸಲು ಕೋರಬಹುದು. ರಾಜ್ಯ ಸರ್ಕಾರವು, ಯುಕ್ತ ಪರಿಗಣನೆಯ ತರುವಾಯ, ಕುಲಪತಿಯವರ ನೇಮಕಕ್ಕಾಗಿ ಅಂತಿಮ ಶಿಫಾರಸ್ಸನ್ನು ಸಲ್ಲಿಸತಕ್ಕದ್ದು ಹಾಗೂ ಶಿಫಾರಸ್ಸು ಸಲ್ಲಿಕೆಯಾದ ಮೂವತ್ತು ದಿನಗಳೊಳಗೆ ಕುಲಾಧಿಪತಿಯವರು ಅಂಥ ವ್ಯಕ್ತಿಯನ್ನು ಕುಲಪತಿಯನ್ನಾಗಿ ನೇಮಿಸತಕ್ಕದ್ದು:

ಮತ್ತು ಪರಂತು, ಈ ಅಧಿನಿಯಮದ ಅಡಿಯಲ್ಲಿ ಸ್ಥಾಪಿತವಾದ ವಿಶ್ವವಿದ್ಯಾನಿಲಯದ ಮೊದಲ ಕುಲಪತಿಯನ್ನು, ರಾಜ್ಯ ಸರ್ಕಾರವು, ತಾನು ನಿರ್ದಿಷ್ಟಪಡಿಸಬಹುದಾದ ಅಂಥ ನಿಬಂಧನೆ ಮತ್ತು ಷರತ್ತುಗಳಿಗೆ ಒಳಪಟ್ಟು ನೇಮಕ ಮಾಡತಕ್ಕದ್ದು.

(7) ಕುಲಪತಿಯಾಗಿ ನೇಮಕವಾಗಬೇಕಾದ ವ್ಯಕ್ತಿಯು ಕುಲಪತಿಯಾಗಿ ಸ್ಪಷ್ಟ ನಾಲ್ಕು ವರ್ಷಗಳ ಪದಾವಧಿಯನ್ನು ಹೊಂದಿರತಕ್ಕದ್ದು ಮತ್ತು ಅರವತ್ತೇಳು ವರ್ಷಗಳ ವಯಸ್ಸಾದಾಗ ಪದವನ್ನು ಹೊಂದಿರುವುದು ರದ್ದಾಗತಕ್ಕದ್ದು.

(8) ಕುಲಪತಿಯವರು, ಕುಲಾಧಿಪತಿಯವರ ಮತ್ತು ರಾಜ್ಯ ಸರ್ಕಾರದ ಇಷ್ಟಪರ್ಯಂತ ಗರಿಷ್ಠ ನಾಲ್ಕು ವರ್ಷಗಳ ಅವಧಿಯವರೆಗೆ ಪದಧಾರಣ ಮಾಡತಕ್ಕದ್ದು. ಅವರು ಎರಡನೇ ಅವಧಿಗೆ ಪುನರ್‌ನೇಮಕಕ್ಕೆ ಅರ್ಹರಾಗಿರತಕ್ಕದ್ದಲ್ಲ.

(9) ಕುಲಪತಿಯವರನ್ನು, ಈ ಅಧಿನಿಯಮದ ಉಪಬಂಧಗಳನ್ನು ಉದ್ದೇಶಪೂರ್ವಕವಾಗಿ ಬಿಟ್ಟುಬಿಡುವ ಅಥವಾ ನೆರವೇರಿಸಲು ನಿರಾಕರಿಸುವ ಅಥವಾ ಅವರಲ್ಲಿ ನಿಹಿತವಾದ ಅಧಿಕಾರಗಳನ್ನು ದುರುಪಯೋಗಪಡಿಸಿಕೊಂಡ ಕಾರಣದ ಮೇಲೆ ಅಥವಾ (10)ನೇ ಉಪಪ್ರಕರಣದ ಅಡಿಯಲ್ಲಿ ಕುಲಾಧಿಪತಿಯವರಿಂದ ಆದೇಶಿಸಲಾದ ವಿಚಾರಣೆಯ ವರದಿಯನ್ನು ಪರಿಗಣಿಸಿದ ತರುವಾಯದ ಹೊರತು ಪದದಿಂದ ತೆಗೆದು ಹಾಕತಕ್ಕದ್ದಲ್ಲ.

(10) ವಿಚಾರಣೆಯನ್ನು ನಡೆಸುವ ಉದ್ದೇಶಕ್ಕಾಗಿ ಕುಲಾಧಿಪತಿಯು, ಉಚ್ಚ ನ್ಯಾಯಾಲಯದ ಅಥವಾ ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರಾಗಿರುವ ಅಥವಾ ಆಗಿದ್ದ ಒಬ್ಬ ವ್ಯಕ್ತಿಯನ್ನು ನೇಮಕ ಮಾಡತಕ್ಕದ್ದು. ವಿಚಾರಣಾ ಪ್ರಾಧಿಕಾರವು, ಕುಲಪತಿಯು ಮನವಿಯನ್ನು ಸಲ್ಲಿಸಲು ಅವಕಾಶ ನೀಡಿದ ನಂತರ ವಿಚಾರಣೆ ನಡೆಸತಕ್ಕದ್ದು ಮತ್ತು ತನ್ನ ತೀರ್ಮಗಳು ಮತ್ತು ಶಿಫಾರಸ್ಸುಗಳನ್ನು ಕುಲಾಧಿಪತಿಯವರಿಗೆ ಸಲ್ಲಿಸತಕ್ಕದ್ದು. ಕುಲಾಧಿಪತಿಯವರು, ಅದನ್ನು ಪರಿಗಣಿಸಿದ ತರುವಾಯ ತನ್ನ ಅಭಿಪ್ರಾಯದಲ್ಲಿ ಅಗತ್ಯಪಡಿಸಬಹುದಾದಂತೆ ಸಿವಿಲ್ ಅಥವಾ ಕ್ರಿಮಿನಲ್ ವ್ಯವಹರಣೆಗಳನ್ನು ಒಳಗೊಂಡಂತೆ ವಿಷಯದ ಮೇಲೆ ಯುಕ್ತ ಕ್ರಮವನ್ನು ತೆಗೆದುಕೊಳ್ಳತಕ್ಕದ್ದು.

(11) ಕುಲಪತಿಯವರ ಉಪಲಬ್ಧಿಗಳು ಮತ್ತು ಇತರ ಸೇವಾ ಷರತ್ತುಗಳು, ಕಾಲಕಾಲಕ್ಕೆ ವಿಶ್ವವಿದ್ಯಾನಿಲಯ ಅನುದಾನಗಳ ಆಯೋಗವು ಹೇಳಲಾದ ಅಂಥ ಷರತ್ತುಗಳಿಗೆ ಒಳಪಟ್ಟು ಕುಲಾಧಿಪತಿಯು ನಿರ್ಧರಿಸಬಹುದಾದಂತೆ ಇರತಕ್ಕದ್ದು:

ಪರಂತು, ರಾಜ್ಯ ವಿಶ್ವವಿದ್ಯಾನಿಲಯಗಳಲ್ಲಿ ಕುಲಪತಿಯವರ ಉಪಲಬ್ಧಿಗಳು ಏಕರೂಪ ರಚನೆಯಲ್ಲಿ ಇರತಕ್ಕದ್ದು.

(12) ನಿವೃತ್ತಿಹೊಂದಿದ ಒಬ್ಬ ವ್ಯಕ್ತಿಯು ಕುಲಪತಿಯಾಗಿ ನೇಮಕಗೊಂಡರೆ, ಅವರು ಕುಲಪತಿಯಾಗಿ ನೇಮಕಗೊಂಡ ಮೇಲೆ ಉಪಲಬ್ಧಿಗಳು ಒಳಗೊಂಡಂತೆ ಸೇವಾ ನಿಬಂಧನೆ ಮತ್ತು ಷರತ್ತುಗಳು ಕುಲಾಧಿಪತಿಯವರು ನಿರ್ಧರಿಸಿದಂತೆ ಇರತಕ್ಕದ್ದು.

(13) ವಿಶ್ವವಿದ್ಯಾನಿಲಯದಲ್ಲಿ ಸೇವೆಯಲ್ಲಿರುವ ಪ್ರಾಧ್ಯಾಪಕರನ್ನು ಕುಲಪತಿಯಾಗಿ ನೇಮಿಸಿದಲ್ಲಿ, ನೇಮಕಾತಿಗೆ ಮೊದಲು ಆತನು ಹೊಂದಿದ ಹುದ್ದೆಯಲ್ಲಿ ಲೀನ್ ಅನ್ನು ಆತನು ಉಳಿಸಿಕೊಳ್ಳತಕ್ಕದ್ದು.

14. ಕುಲಪತಿಯ ಪ್ರಕಾರ್ಯಗಳು ಮತ್ತು ಅಧಿಕಾರಗಳು.– (1) ಕುಲಪತಿಯು ವಿಶ್ವವಿದ್ಯಾನಿಲಯದ ಪ್ರಧಾನ ಕಾರ್ಯನಿರ್ವಾಹಕ ಮತ್ತು ವಿದ್ಯಾವಿಷಯಕ ಅಧಿಕಾರಿಯಾಗಿರತಕ್ಕದ್ದು ಮತ್ತು ವಿಶ್ವವಿದ್ಯಾನಿಲಯದ ವ್ಯವಹಾರಗಳ ಮೇಲೆ ಸಾಮಾನ್ಯ ನಿಯಂತ್ರಣವನ್ನು ಹೊಂದಿರತಕ್ಕದ್ದು. ಅವನು ವಿಶ್ವವಿದ್ಯಾನಿಲಯದಲ್ಲಿ ಶಿಸ್ತುಪಾಲನೆಗೆ ಅವಶ್ಯವಾದ ಎಲ್ಲ ಅಧಿಕಾರಗಳನ್ನು ಚಲಾಯಿಸತಕ್ಕದ್ದು.

(2) ಅವನು ಕಾರ್ಯನಿರ್ವಾಹಕ ಪರಿಷತ್ತು, ವಿದ್ಯಾವಿಷಯಕ ಪರಿಷತ್ತು, ಹಣಕಾಸು ಸಮಿತಿ ಹಾಗೂ ಅನುಸೂಚಿ ಮತ್ತು ಪರಿನಿಯಮಗಳ ಮೂಲಕ ಕಲ್ಪಿಸಲಾದ ವಿಶ್ವವಿದ್ಯಾಲಯದ ಇತರ ಪ್ರಾಧಿಕಾರಗಳು ಮತ್ತು ನಿಕಾಯಗಳಿಗೆ ಸಹ ಪದನಿಮಿತ್ತ ಅಧ್ಯಕ್ಷನಾಗಿರತಕ್ಕದ್ದು. ಅವನು ಕುಲಾಧಿಪತಿಯ ಮತ್ತು ಸಹ-ಕುಲಾಧಿಪತಿಯ ಗೈರುಹಾಜರಿಯಲ್ಲಿ ಘಟಿಕೋತ್ಸವದ ಅಧ್ಯಕ್ಷತೆಯನ್ನು ವಹಿಸತಕ್ಕದ್ದು. ಅವನು ವಿಶ್ವವಿದ್ಯಾನಿಲಯದ ಇತರ ಪ್ರಾಧಿಕಾರಗಳ ಅಥವಾ ನಿಕಾಯಗಳ ಸಭೆಗಳ ಅಧ್ಯಕ್ಷತೆಯನ್ನು ವಹಿಸತಕ್ಕದ್ದು ಮತ್ತು ಅವನು ಮತ ಚಲಾಯಿಸಲು ಹಕ್ಕುಳ್ಳವನಾಗಿರತಕ್ಕದ್ದು.

(3) ಅವನು ಈ ಅಧಿನಿಯಮದ, ಪರಿನಿಯಮಗಳ, ಆರ್ಡಿನೆನ್ಸ್‌ಗಳ ಮತ್ತು ವಿನಿಯಮಗಳ ಎಲ್ಲಾ ಉಪಬಂಧಗಳ ಪಾಲನೆಯನ್ನು ಖಚಿತಪಡಿಸಿಕೊಳ್ಳತಕ್ಕದ್ದು ಮತ್ತು ಆ ಉದ್ದೇಶಕ್ಕಾಗಿ ಅವಶ್ಯವಾದ ಎಲ್ಲ ಅಧಿಕಾರಗಳನ್ನು ಹೊಂದಿರತಕ್ಕದ್ದು.

(4) ಅವನು ತಾನಾಗಿಯೇ ಆಗಲಿ ಅಥವಾ ತನ್ನಿಂದ ಲಿಖಿತದಲ್ಲಿ ಅಧಿಕೃತನಾದ ವಿಶ್ವವಿದ್ಯಾನಿಲಯದ ಯಾವೊಬ್ಬ ಅಧಿಕಾರಿಯ ಮೂಲಕವೇ ಆಗಲಿ, ಕಾರ್ಯನಿರ್ವಾಹಕ ಪರಿಷತ್ತು, ವಿದ್ಯಾವಿಷಯಕ ಪರಿಷತ್ತು, ಹಣಕಾಸು ಸಮಿತಿ ಹಾಗೂ ಅವನು ಪದನಿಮಿತ್ತ ಅಧ್ಯಕ್ಷನಾಗಿರುವ ವಿಶ್ವವಿದ್ಯಾಲಯದ ಇತರ ಪ್ರಾಧಿಕಾರಗಳು ಮತ್ತು ನಿಕಾಯಗಳ ಸಭೆಗಳನ್ನು ಕರೆಯಬಹುದು ಮತ್ತು ಈ ಪ್ರಾಧಿಕಾರಗಳ ತೀರ್ಮಾನಗಳನ್ನು ಜಾರಿಗೆ ತರಲು ಮತ್ತು ಕಾರ್ಯಗತಗೊಳಿಸಲು ಅವಶ್ಯವಾಗಬಹುದಾದ ಅಂಥ ಎಲ್ಲ ಕಾರ್ಯಗಳನ್ನು ನೆರವೇರಿಸತಕ್ಕದ್ದು.

(5) ಕುಲಪತಿಯು, ತ್ವರಿತ ಕ್ರಮವು ಅಗತ್ಯವೆಂದು ಅವನು ಅಭಿಪ್ರಾಯಪಡುವ ಯಾವುದೇ ತುರ್ತು ಸಂದರ್ಭದಲ್ಲಿ ಅವನು ಅವಶ್ಯವೆಂದು ಭಾವಿಸುವಂಥ ಕ್ರಮವನ್ನು ತೆಗೆದುಕೊಳ್ಳತಕ್ಕದ್ದು ಮತ್ತು ಆ ತರುವಾಯ ಅತಿ ಶೀಘ್ರ ಸಮಯದಲ್ಲಿ ಸಾಮಾನ್ಯವಾಗಿ ವ್ಯವಹರಿಸುತ್ತಿದ್ದಂಥ ಪ್ರಾಧಿಕಾರಕ್ಕೆ ಅಥವಾ ನಿಕಾಯಕ್ಕೆ ತೆಗೆದುಕೊಂಡ ಕ್ರಮದ ಬಗ್ಗೆ ವರದಿ ಮಾಡತಕ್ಕದ್ದು:

ಪರಂತು, ಕುಲಪತಿಯು ತೆಗೆದುಕೊಂಡ ಕ್ರಮವನ್ನು ಸಂಬಂಧಪಟ್ಟ ಪ್ರಾಧಿಕಾರ ಅಥವಾ ನಿಕಾಯವು ಅನುಮೋದಿಸದಿದ್ದರೆ, ಅವರು ಆ ವಿಷಯವನ್ನು ಕುಲಾಧಿಪತಿಗೆ ಒಪ್ಪಿಸಬಹುದು, ಆ ಬಗ್ಗೆ ಅವರ ತೀರ್ಮಾನವೇ ಅಂತಿಮವಾಗಿರತಕ್ಕದ್ದು:

ಮತ್ತು ಪರಂತು, ಈ ಉಪಪ್ರಕರಣದ ಮೇರೆಗೆ ಕುಲಪತಿಯ ವರದಿಯ ಆಧಾರದ ಮೇಲೆ ಪ್ರಾಧಿಕಾರ ಅಥವಾ ನಿಕಾಯವು ತೆಗೆದುಕೊಂಡ ತೀರ್ಮಾನದಿಂದ ವಿಶ್ವವಿದ್ಯಾನಿಲಯದ ಸೇವೆಯಲ್ಲಿರುವ ಯಾವೊಬ್ಬ ವ್ಯಕ್ತಿಯು ಬಾಧಿತನಾದರೆ,

ಆ ವ್ಯಕ್ತಿಯು ಅವನಿಗೆ ತೀರ್ಮಾನವನ್ನು ತಿಳಿಸಿದ ದಿನಾಂಕದಿಂದ ಮೂವತ್ತು ದಿನಗಳೊಳಗಾಗಿ ಕುಲಾಧಿಪತಿಯ ಮುಂದೆ ಅಪೀಲು ಹೂಡಬಹುದು ಮತ್ತು ಅಂಥ ಅಪೀಲಿನ ಮೇಲೆ ಕುಲಾಧಿಪತಿಯ ತೀರ್ಮಾನವೇ ಅಂತಿಮವಾಗಿರತಕ್ಕದ್ದು:

ಅಲ್ಲದೆ ಪರಂತು, ಈ ಉಪಪ್ರಕರಣದ ಮೇರೆಗೆ ಪ್ರದತ್ತವಾದ ಅಧಿಕಾರಗಳನ್ನು ವಿಶ್ವವಿದ್ಯಾನಿಲಯದ ನೌಕರರ ವೇತನ ಶ್ರೇಣಿಯನ್ನು ಪರಿಷ್ಕರಿಸಲು ಚಲಾಯಿಸತಕ್ಕದ್ದಲ್ಲ ಮತ್ತು ಈ ಉಪ ಪ್ರಕರಣದ ಮೇರೆಗೆ ಅಧಿಕಾರಗಳನ್ನು ಚಲಾಯಿಸಿ ಪರಿನಿಯಮಗಳು ಅಥವಾ ವಿನಿಯಮಗಳನ್ನು ರಚಿಸಿದರೆ ಅವು ಈ ಅಧಿನಿಯಮದ ಸೂಕ್ತ ಉಪಬಂಧಗಳ ಮೇರೆಗೆ ಕುಲಾಧಿಪತಿಯ ಅನುಮೋದನೆಗೆ ಒಳಪಟ್ಟಿರತಕ್ಕದ್ದು ಮತ್ತು ಆರ್ಡಿನೆನ್ಸ್‌ಗಳನ್ನು ರಚಿಸಿದ್ದರೆ, ಅವುಗಳನ್ನು ಈ ಅಧಿನಿಯಮದ ಅನುಸಾರವಾಗಿ ಅಗತ್ಯಪಡಿಸಲಾದಂತೆ ಕುಲಾಧಿಪತಿಗೆ ಸಲ್ಲಿಸತಕ್ಕದ್ದು.

(6) ಕುಲಪತಿಯು ವಿಶ್ವವಿದ್ಯಾಲಯದ ಪರಿನಿಯಮಗಳು, ಆರ್ಡಿನೆನ್ಸ್‌ಗಳು ಮತ್ತು ವಿನಿಯಮಗಳ ಮೂಲಕ ಉಪಬಂಧಿಸಬಹುದಾದ ಅಂಥ ಇತರ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಅಂಥ ಪ್ರಕಾರ್ಯಗಳನ್ನು ನೆರವೇರಿಸತಕ್ಕದ್ದು.

15. ಕುಲಪತಿಯ ಹುದ್ದೆಯು ಖಾಲಿ ಇರುವ ಕಾಲದಲ್ಲಿ ಕಾರ್ಯವ್ಯವಸ್ಥೆ.– ರಜೆ, ಅನಾರೋಗ್ಯ ಅಥವಾ ಕುಲಪತಿಯ ಪದದಲ್ಲಿನ ಖಾಲಿ ಸ್ಥಾನವನ್ನು ಭರ್ತಿ ಮಾಡದೆ ಉಳಿದ ಕಾರಣದಿಂದಾಗಿ ಕುಲಪತಿಯ ತಾತ್ಕಾಲಿಕ ಗೈರುಹಾಜರಿಯ ಅವಧಿಯಲ್ಲಿ, ಕುಲಾಧಿಪತಿಯು, ರಾಜ್ಯ ಸರ್ಕಾರದೊಂದಿಗೆ ಸಮಾಲೋಚಿಸಿ, ಖಾಯಂ ಏರ್ಪಾಡುಗಳನ್ನು ಮಾಡುವವರೆಗೆ, ವಿಶ್ವವಿದ್ಯಾನಿಲಯದ ಅತ್ಯಂತ ಹಿರಿಯ ಪ್ರಾಧ್ಯಾಪಕರನ್ನು ವಿಶ್ವವಿದ್ಯಾನಿಲಯದ ಪ್ರಭಾರ ಕುಲಪತಿಯನ್ನಾಗಿ ನಿಯೋಜಿಸಬಹುದು.

16. ಕುಲಸಚಿವರು.– (1) ಕುಲಸಚಿವನನ್ನು ರಾಜ್ಯ ಸರ್ಕಾರವು ನೇಮಕಮಾಡತಕ್ಕದ್ದು.

(2) ವಿಶ್ವವಿದ್ಯಾನಿಲಯದ ಕುಲಸಚಿವನಾಗಿ ನೇಮಕಗೊಳ್ಳಬೇಕಾದ ವ್ಯಕ್ತಿಯು ಯಾವುದೇ ವಿಶ್ವವಿದ್ಯಾನಿಯದ ವ್ಯವಸ್ಥೆಯಲ್ಲಿ ಸಾಮಾನ್ಯವಾಗಿ ಪ್ರಾಧ್ಯಾಪಕನಾಗಿದ್ದು ಇಪ್ಪತ್ತೈದು ವರ್ಷಗಳ ಒಟ್ಟು ಬೋಧನಾ ಅನುಭವವನ್ನು ಹೊಂದಿದ್ದು ಅದರಲ್ಲಿ ಕನಿಷ್ಠ ಐದು ವರ್ಷಗಳು ಆಯ್ಕೆ (selected) ಪ್ರಾಧ್ಯಾಪಕನಾಗಿರತಕ್ಕದ್ದು ಅಥವಾ ಐಎಎಸ್ ಅಥವಾ ಕೆಎಎಸ್ (ಹಿರಿಯ ಶ್ರೇಣಿ) ವೃಂದಕ್ಕೆ ಸೇರಿರುವ ವ್ಯಕ್ತಿಯಾಗಿರತಕ್ಕದ್ದು.

(3) ಕುಲಸಚಿವನಾಗಿ ನೇಮಕಗೊಂಡ ವ್ಯಕ್ತಿಯ ಪದಾವಧಿಯು ಮೂರು ವರ್ಷಗಳ ಮಿತಿಯನ್ನು ಹೊಂದಿರತಕ್ಕದ್ದು.

(4) ಕುಲಸಚಿವನು ಕಾರ್ಯನಿರ್ವಾಹಕ ಪರಿಷತ್ತು ಮತ್ತು ವಿದ್ಯಾವಿಷಯಕ ಪರಿಷತ್ತಿನ ಪದನಿಮಿತ್ತ ಕಾರ್ಯದರ್ಶಿಯಾಗಿರತಕ್ಕದ್ದು. ಹಣಕಾಸು ಸಮಿತಿಯ, ವಾಸಂಗ ವಿಭಾಗದ ಸದಸ್ಯನಾಗಿರತಕ್ಕದ್ದು ಮತ್ತು ಇತರ ಪ್ರಾಧಿಕಾರಗಳ ಸದಸ್ಯನಾಗಿರುವನೆಂದು ಭಾವಿಸತಕ್ಕದ್ದು.

(5) ಈ ಮುಂದಿನವುಗಳು ಕುಲಸಚಿವನ ಕರ್ತವ್ಯಗಳಾಗಿರತಕ್ಕದ್ದು,–

(i) ವಿಶ್ವವಿದ್ಯಾನಿಲಯದ ದಾಖಲೆಗಳ, ಸಾಮಾನ್ಯ ಮೊಹರಿನ ಮತ್ತು ಕುಲಪತಿ ಅಥವಾ ಕಾರ್ಯನಿರ್ವಾಹಕ ಪರಿಷತ್ತು ಅವನ ವಶಕ್ಕೆ ಒಪ್ಪಿಸುವಂಥ ಇತರ ಸ್ವತ್ತಿನ ಅಭಿರಕ್ಷಕನಾಗಿರುವುದು;

(ii) ಕಾರ್ಯನಿರ್ವಾಹಕ ಪರಿಷತ್ತು, ವಿದ್ಯಾವಿಷಯಕ ಪರಿಷತ್ತಿನ ಅಥವಾ ವ್ಯಾಸಂಗ ವಿಭಾಗಗಳ, ಅಧ್ಯಯನ ಮಂಡಲಿಯ ಮತ್ತು ವಿಶ್ವವಿದ್ಯಾನಿಲಯದ ಸಂಬಂಧಿತ ಯಾವುದೇ ಪ್ರಾಧಿಕಾರದ ಅಥವಾ ನಿಕಾಯಗಳ ಸಭೆಗಳನ್ನು ಕರೆಯುವ ನೋಟೀಸುಗಳನ್ನು ಹೊರಡಿಸುವುದು ಮತ್ತು ಅಂಥ ಎಲ್ಲ ಸಭೆಗಳ ನಡವಳಿಗಳನ್ನು ಇಡುವುದು;

(iii) ಅವನು ಕಾಯದರ್ಶಿಯಾಗಿರುವ ಪ್ರಾಧಿಕಾರಗಳ ಮತ್ತು ನಿಕಾಯಗಳ ಅಧಿಕೃತ ಪತ್ರವ್ಯವಹಾರವನ್ನು ನಡೆಸುವುದು;

(iv) ವಿಶ್ವವಿದ್ಯಾನಿಲಯದ ಸಂಬಂಧಿತ ಪ್ರಾಧಿಕಾರಗಳ ಮತ್ತು ನಿಕಾಯಗಳ ಸಭೆಗಳ ಕಾರ್ಯಸೂಚಿಯ ಪ್ರತಿಗಳನ್ನು, ಅವುಗಳನ್ನು ಹೊರಡಿಸಿದ ಕೂಡಲೇ, ಮತ್ತು ಸಭೆಗಳನ್ನು ನಡೆಸಿದ ಒಂದು ತಿಂಗಳೊಳಗಾಗಿ ಅವುಗಳ ನಡವಳಿಗಳನ್ನು ಕುಲಾಧಿಪತಿಗೆ ಮತ್ತು ರಾಜ್ಯಸರ್ಕಾರಕ್ಕೆ ಒದಗಿಸುವುದು;

(v) ಕಾರ್ಯನಿರ್ವಾಹಕ ಪರಿಷತ್ತು, ವಿದ್ಯಾವಿಷಯಕ ಪರಿಷತ್ತು, ಹಣಕಾಸು ಸಮಿತಿ, ವ್ಯಾಸಂಗ ವಿಭಾಗಗಳು ಮತ್ತು ಪ್ರಾಧಿಕಾರಗಳ ಮೂಲಕ ನೇಮಕಗೊಂಡ ಯಾವುದೇ ನಿಕಾಯ ಅಥವಾ ಸಮಿತಿಯ ಎಲ್ಲಾ ಸಭೆಗಳ ನಡವಳಿಗಳನ್ನು ಇಟ್ಟುಕೊಳ್ಳುವುದು;

(vi) ಕುಲಪತಿ ಅಥವಾ ಯುಕ್ತವಾಗಿ ಅಧಿಕೃತಗೊಳಿಸಲಾದ ಅಧಿಕಾರಿಯು ಕಾರ್ಯನಿರ್ವಹಿಸದಿದ್ದಾಗ ಕಾರ್ಯನಿರ್ವಾಹಕ ಪರಿಷತ್ತಿನ ಸಭೆಯನ್ನು ಕರೆಯುವುದು ಮತ್ತು ವಿಶ್ವವಿದ್ಯಾನಿಲಯದ ಕೆಲಸವನ್ನು ಕಾರ್ಯಗತಗೊಳಿಸಲು ಅದರ ನಿರ್ದೇಶನಗಳನ್ನು ಕೈಗೊಳ್ಳುವುದು;

(vii) ಆತನ ಕರ್ತವ್ಯಗಳು ಮತ್ತು ಪ್ರಕಾರ್ಯಗಳ ಸಮರ್ಥ ನಿರ್ವಹಣೆಗಾಗಿ ಕುಲಪತಿಗೆ ನೇರವಾಗಿ ಜವಾಬ್ದಾರನಾಗಿರುವುದು;

(viii) ಕಾರ್ಯನಿರ್ವಾಹಕ ಪರಿಷತ್ತು ಅಥವಾ ಕುಲಪತಿಯು ಕಾಲಕಾಲಕ್ಕೆ ವಹಿಸಬಹುದಾದ ಅಂಥ ಇತರ ಕರ್ತವ್ಯಗಳನ್ನು ನೆರವೇರಿಸುವುದು.

(6) ರಿಜಿಸ್ಟ್ರಾರನು ಆರ್ಡಿನೆನ್ಸ್‌ಗಳು ಅಥವಾ ಪರಿನಿಯಮಗಳು, ಉಪಬಂಧಿಸಬಹುದಾದಂಥ ಮತ್ತು ಕುಲಪತಿಯು ಕಾಲಕಾಲಕ್ಕೆ ಹಂಚಿಕೆ ಮಾಡಬಹುದಾದ ಅಂಥ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಅಂಥ ಇತರ ಕರ್ತವ್ಯಗಳನ್ನು ನೆರವೇರಿಸತಕ್ಕದ್ದು.

17. ಪರೀಕ್ಷೆಗಳ ನಿಯಂತ್ರಕ.– (1) ಪರೀಕ್ಷಾ ನಿಯಂತ್ರಕನನ್ನು, ವಿಶ್ವವಿದ್ಯಾನಿಲಯದ ವ್ಯವಸ್ಥೆಯಲ್ಲಿ ಸಹಾಯಕ ಪ್ರಾಧ್ಯಾಪಕನಾಗಿ ಕನಿಷ್ಠ ಏಳು ವರ್ಷಗಳ ಅನುಭವವನ್ನು ಮತ್ತು ಡಾಕ್ಟರ್ ಡಿಗ್ರಿಯನ್ನು ಹೊಂದಿರುವ ಸಹಾಯಕ ಪ್ರಾಧ್ಯಾಪಕರ ಪೈಕಿಯಿಂದ ಒಬ್ಬರನ್ನು ಮೂರು ವರ್ಷಗಳ ಅವಧಿಗಾಗಿ ರಾಜ್ಯ ಸರ್ಕಾರವು ನೇಮಕಮಾಡತಕ್ಕದ್ದು.

(2) ಪರೀಕ್ಷಾ ನಿಯಂತ್ರಕನು ವಿಶ್ವವಿದ್ಯಾನಿಲಯದ ಸಂಬಂಧಪಟ್ಟ ವಿದ್ಯಾವಿಷಯಕ ಪರಿಷತ್ತಿನ ಸದಸ್ಯನಾಗಿರತಕ್ಕದ್ದು. ಆತನು ಅಗತ್ಯವಿದ್ದಾಗಲೆಲ್ಲ ಕಾಯನಿರ್ವಾಹಕ ಪರಿಷತ್ತಿನ ಮತ್ತು ಹಣಕಾಸು ಸಮಿತಿಯ ಸಭೆಗಳಿಗೆ ಆಹ್ವಾನಿತನಾಗಿರತಕ್ಕದ್ದು.

(3) ಪರೀಕ್ಷಾ ನಿಯಂತ್ರಕನು ಪರೀಕ್ಷೆಯನ್ನು ನಡೆಸುವ ಮತ್ತು ಅದಕ್ಕೆ ಪ್ರಾಸಂಗಿಕವಾದ ಹಾಗೂ ಅದಕ್ಕೆ ಪೂರಕವಾಗಿರುವ ಎಲ್ಲಾ ಇತರ ವಿಷಯಗಳ ಪ್ರಭಾರಿಯಾಗಿರತಕ್ಕದ್ದು ಮತ್ತು ಪರಿನಿಯಮಗಳು ಅಥವಾ ಆರ್ಡಿನೆನ್ಸ್‌ಗಳ ಮೂಲಕ ಉಪಬಂಧಿಸಬಹುದಾದ ಅಥವಾ ಕುಲಪತಿಯು ಆತನಿಗೆ ಹಂಚಿಕೆ ಮಾಡಬಹುದಾದ ಅಂಥ ಇತರ ಕರ್ತವ್ಯಗಳನ್ನು ನಿರ್ವಹಿಸತಕ್ಕದ್ದು. ಪರೀಕ್ಷಾ ನಿಯಂತ್ರಕನಿಗೆ ವಿಶ್ವವಿದ್ಯಾಲಯದ ಚಟುವಟಿಕೆಗಳ ಗಾತ್ರ ಮತ್ತು ಮಿತಿಯ ಆಧಾರದ ಮೇಲೆ ಉಪ/ಸಹಾಯಕ ಪರೀಕ್ಷಾ ನಿಯಂತ್ರಕರ ಹಂತದಲ್ಲಿ ಒಬ್ಬರು ಅಥವಾ ಹೆಚ್ಚಿನ ವ್ಯಕ್ತಿಗಳು ಸಹಾಯಕರಾಗಿರಬಹುದು.

18. ಹಣಕಾಸು ಅಧಿಕಾರಿ.– (1) ಹಣಕಾಸು ಅಧಿಕಾರಿಯನ್ನು ರಾಜ್ಯಲೆಕ್ಕಪತ್ರಗಳ ಇಲಾಖೆಯ ಅಧಿಕಾರಿಗಳ ಪೈಕಿಯಿಂದ ರಾಜ್ಯ ಸರ್ಕಾರವು ನೇಮಕ ಮಾಡತಕ್ಕದ್ದು.

(2) ಹಣಕಾಸು ಅಧಿಕಾರಿಯ ನೇಮಕದ ಪದಾವಧಿಯು ಮೂರು ವರ್ಷಗಳಾಗಿರತಕ್ಕದ್ದು ಮತ್ತು ಹಣಕಾಸು ಅಧಿಕಾರಿಯ ಉಪಲಬ್ಧಿಗಳು ಹಾಗೂ ನೇಮಕಾತಿಯ ಇತರ ನಿಬಂಧನೆಗಳು ಮತ್ತು ಷರತ್ತುಗಳು ಪರಿನಿಯಮಗಳಲ್ಲಿ ಉಪಬಂಧಿಸಬಹುದಾದಂತೆ ಇರತಕ್ಕದ್ದು.

(3) ಹಣಕಾಸು ಅಧಿಕಾರಿಯು, ಹಣಕಾಸು ಸಮಿತಿಯ ನಿಯಂತ್ರಣಕ್ಕೊಳಪಟ್ಟು, ಪರಿನಿಯಮಗಳ, ಆರ್ಡಿನೆನ್ಸ್‌ಗಳ ಮತ್ತು ವಿನಿಯಮಗಳ ಮೂಲಕ ನಿಯಮಿಸಬಹುದಾದಂತೆ ಅಥವಾ ಕುಲಪತಿಯು ಕಾಲ ಕಾಲಕ್ಕೆ ಅಗತ್ಯಪಡಿಸಬಹುದಾದಂತೆ ಅಂಥ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಅಂಥ ಕರ್ತವ್ಯಗಳನ್ನು ಮತ್ತು ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದು. ಆತನು ಹಣಕಾಸು ಸಮಿತಿಯ ಪದನಿಮಿತ್ತ ಸದಸ್ಯ–ಕಾರ್ಯದರ್ಶಿಯಾಗಿರತಕ್ಕದ್ದು ಮತ್ತು ಅಗತ್ಯವಿರಬಹುದಾದಂತೆ ವಿಶ್ವವಿದ್ಯಾಲಯದ ಇತರ ಪ್ರಾಧಿಕಾರಗಳ ಅಥವಾ ನಿಕಾಯಗಳ ಸಭೆಗಳಲ್ಲಿ ಆಹ್ವಾನಿತನಾಗಿರತಕ್ಕದ್ದು.

(4) ವಿಶ್ವವಿದ್ಯಾಲಯದ ಚಟುವಟಿಕೆಗಳ ಗಾತ್ರ ಮತ್ತು ಮಿತಿಗಳ ಆಧಾರದ ಮೇಲೆ ಹಣಕಾಸು ಅಧಿಕಾರಿಯು, ಉಪ ಹಣಕಾಸು ಅಧಿಕಾರಿ ಮತ್ತು ಸಹಾಯಕ ಹಣಕಾಸು ಅಧಿಕಾರಿಗಳ ಹಂತದ ಒಬ್ಬರು ಅಥವಾ ಹೆಚ್ಚಿನ ವ್ಯಕ್ತಿಗಳಿಂದ ನೇರವನ್ನು ಪಡೆಯಬಹುದು.

19. ಡೀನ್.– (1) ವಿಶ್ವವಿದ್ಯಾಲಯದ ಪ್ರತಿಯೊಂದು ವ್ಯಾಸಂಗ ವಿಭಾಗಕ್ಕೂ ಒಬ್ಬ ಡೀನ್ ಇರತಕ್ಕದ್ದು, ಆತನು ಸಂಬಂಧಪಟ್ಟ ವ್ಯಾಸಂಗ ವಿಭಾಗದ ಮುಖ್ಯ ಶೈಕ್ಷಣಿಕ ಅಧಿಕಾರಿಯಾಗಿರತಕ್ಕದ್ದು.

(2) ಆತನು ವಿಶ್ವವಿದ್ಯಾಲಯದ ಪ್ರಾಧ್ಯಾಪಕರುಗಳ ಪೈಕಿ ಕುಲಪತಿಯ ಮೂಲಕ ನೇಮಕಗೊಳ್ಳತಕ್ಕದ್ದು.

(3) ಡೀನ್‌ನ ನೇಮಕಾತಿ ಪ್ರಕ್ರಿಯೆ, ಆತನ ಪದಾವಧಿ ಮತ್ತು ಆತನ ಅಧಿಕಾರಗಳು, ಪ್ರಕಾರ್ಯಗಳು, ಕರ್ತವ್ಯಗಳು ಮತ್ತು ಜವಾಬ್ದಾರಿಗಳು ಪರಿನಿಯಮಗಳಲ್ಲಿ ಉಪಬಂಧಿಸಿದಂತೆ ಇರತಕ್ಕದ್ದು.

ಅಧ್ಯಾಯ–IV

ವಿಶ್ವವಿದ್ಯಾಲಯದ ಪ್ರಾಧಿಕಾರಗಳು

20. ವಿಶ್ವವಿದ್ಯಾನಿಲಯದ ಪ್ರಾಧಿಕಾರಗಳು.– ಈ ಮುಂದಿನ ನಿಕಾಯಗಳು ಪ್ರತಿಯೊಂದು ವಿಶ್ವವಿದ್ಯಾನಿಲಯದ ಪ್ರಾಧಿಕಾರಗಳಾಗಿರತಕ್ಕದ್ದು, ಎಂದರೆ:–

(1) ಕಾಯನಿರ್ವಾಹಕ ಪರಿಷತ್ತು;

(2) ವಿದ್ಯಾವಿಷಯಕ ಪರಿಷತ್ತು;

(3) ಅಧ್ಯಯನಗಳ ಮಂಡಲಿ;

(4) ಸಂಶೋಧನಾ ಪರಿಷತ್ತು;

(5) ಹಣಕಾಸು ಸಮಿತಿ;

(6) ವಿಶ್ವವಿದ್ಯಾನಿಲಯದ ಪ್ರಾಧಿಕಾರಗಳೆಂದು ಪರಿನಿಯಮಗಳ ಮೂಲಕ ಘೋಷಿಸಬಹುದಾದ ಅಂಥ ಇತರ ನಿಕಾಯಗಳು.

21. ಕಾರ್ಯನಿರ್ವಾಹಕ ಪರಿಷತ್ತು.– ವಿಶ್ವವಿದ್ಯಾಲಯದ ಕಾರ್ಯನಿರ್ವಾಹಕ ಪರಿಷತ್ತು ಈ ಮುಂದಿನ ಸದಸ್ಯರನ್ನು ಒಳಗೊಂಡಿರತಕ್ಕದ್ದು, ಎಂದರೆ:–

(1) ಕುಲಪತಿಯು ಅಧ್ಯಕ್ಷರಾಗಿರತಕ್ಕದ್ದು.

(2) ಬ್ಯಾಂಕಿಂಗ್, ಮಾಹಿತಿ ತಂತ್ರಜ್ಞಾನ, ಉದ್ಯಮ, ಕಾನೂನು ಮತ್ತು ಬಂಡವಾಳ ಮಾರುಕಟ್ಟೆ ವಲಯಗಳನ್ನು ಪ್ರತಿನಿಧಿಸುವ, ರಾಜ್ಯ ಸರ್ಕಾರದ ಮೂಲಕ ನಾಮನಿರ್ದೇಶನಗೊಂಡ ಐವರು ಶ್ರೇಷ್ಠ ವ್ಯಕ್ತಿಗಳು, ಅವರಲ್ಲಿ ಒಬ್ಬರು ಅನುಸೂಚಿತ ಜಾತಿಗಳಿಗೆ, ಒಬ್ಬರು ಅನುಸೂಚಿತ ಬುಡಕಟ್ಟುಗಳಿಗೆ, ಒಬ್ಬರು ಇತರ ಹಿಂದುಳಿದ ವರ್ಗಗಳಿಗೆ ಅಥವಾ ಅಲ್ಪಸಂಖ್ಯಾತರಿಗೆ ಹಾಗೂ ಇಬ್ಬರು ಸಾಮಾನ್ಯ ವರ್ಗಕ್ಕೆ ಸೇರಿದವರಾಗಿರತಕ್ಕದ್ದು. ಮೇಲಿನವರಲ್ಲಿ ಒಬ್ಬರು ಮಹಿಳೆಯಾಗಿರತಕ್ಕದ್ದು:

ಪರಂತು, ನಾಮನಿರ್ದೇಶನಗೊಂಡ ಸದಸ್ಯರು ಅರ್ಥಶಾಸ್ತ್ರಗಳ ಅಥವಾ ಯಾವುದೇ ಸಮಾಜ ವಿಜ್ಞಾನಗಳ ವಿಷಯದಲ್ಲಿ ಸ್ನಾತಕೋತ್ತರ ಪದವಿಯನ್ನ ಅಥವಾ ವೃತ್ತಿಪರ ಕೋರ್ಸುಗಳಲ್ಲಿ ಪದವಿಯನ್ನು ಕನಿಷ್ಠ ವಿದ್ಯಾರ್ಹತೆಯನ್ನಾಗಿ ಹೊಂದಿರತಕ್ಕದ್ದು.

(3) ಇಬ್ಬರು ವ್ಯಕ್ತಿಗಳು, ಇವರಲ್ಲಿ, ಮೂರು ವರ್ಷಗಳವರೆಗೆ ಅಥವಾ ಸಂಬಂಧಿಸಿದ ಸದನಗಳ ಸದಸ್ಯರಾಗಿ ಮುಂದುವರೆಯುವವರೆಗೆ, ಇವುಗಳಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ, ಸಭಾಧ್ಯಕ್ಷರು ನಾಮನಿರ್ದೇಶಿಸಿದ ವಿಧಾನಸಭೆಯ ಸದಸ್ಯರಾಗಿರತಕ್ಕ ಒಬ್ಬರು ಹಾಗೂ ಕರ್ನಾಟಕ ವಿಧಾನ ಪರಿಷತ್ತಿನ ಸಭಾಪತಿಯವರು ನಾಮನಿರ್ದೇಶಿಸಿದ ವಿಧಾನಪರಿಷತ್ತಿನ ಸದಸ್ಯರಾಗಿರತಕ್ಕ ಮತ್ತೊಬ್ಬರು.

(4) ಉನ್ನತ ಶಿಕ್ಷಣ, ಹಣಕಾಸು ಮತ್ತು ಸಮಾಜ ಕಲ್ಯಾಣ ಈ ಪ್ರತಿಯೊಂದು ಇಲಾಖೆಗಳಿಂದ ಅಪರ ಮುಖ್ಯ ಕಾರ್ಯದರ್ಶಿ ಅಥವಾ ಪ್ರಧಾನ ಕಾರ್ಯದರ್ಶಿ ಅಥವಾ ಕಾರ್ಯದರ್ಶಿ ಹಂತದ ರಾಜ್ಯ ಸರ್ಕಾರವನ್ನು ಪ್ರತಿನಿಧಿಸುವ ಮೂವರು ಅಧಿಕಾರಿಗಳು ಅಥವಾ ಉಪ ಕಾರ್ಯದರ್ಶಿ ದರ್ಜೆಗೆ ಕಡಿಮೆಯಲ್ಲದ ಅವರ ನಾಮನಿರ್ದೇಶಿತರು.

(5) ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನ ಉಪಾಧ್ಯಕ್ಷ ಅಥವಾ ಕಾರ್ಯನಿರ್ವಾಹಕ ನಿರ್ದೇಶಕ.

(6) ಕುಲಪತಿಗಳು ವಿಶ್ವವಿದ್ಯಾಲಯದಲ್ಲಿ ಜೇಷ್ಠತೆಯ ಆಧಾರದಲ್ಲಿ ಸರದಿಯ ಮೇರೆಗೆ ನಾಮನಿರ್ದೇಶಿಸಿದ ವ್ಯಾಸಂಗ ವಿಭಾಗದ ಡೀನ್.

(7) ಕುಲಪತಿಗಳು ಪ್ರತಿ ಒಂದು ವರ್ಷದ ಅವಧಿಯವರೆಗೆ ವಿಶ್ವವಿದ್ಯಾಲಯದಲ್ಲಿ ಜೇಷ್ಠತೆಯ ಆಧಾರದಲ್ಲಿ ಸರದಿಯ ಮೇರೆಗೆ ನಾಮನಿರ್ದೇಶಿಸಿದ ಇಬ್ಬರು ಪ್ರಾಧ್ಯಾಪಕರು.

(8) ಕುಲಸಚಿವರು ಕಾರ್ಯದರ್ಶಿಯಾಗಿರತಕ್ಕದ್ದು.

22. ಕಾರ್ಯನಿರ್ವಾಹಕ ಪರಿಷತ್ತಿನ ಪದಾವಧಿ.– (1) ಯಾವೊಬ್ಬ ವ್ಯಕ್ತಿಯು, ಆತನು ಹೊಂದಿರುವ ಪದ ಅಥವಾ ನೇಮಕಾತಿಯ ಕಾರಣದ ಮೂಲಕ ಕಾರ್ಯನಿರ್ವಾಹಕ ಪರಿಷತ್ತಿನ ಸದಸ್ಯನಾಗಿದ್ದರೆ, ಆತನು ಹೊಂದಿದ ಪದ ಅಥವಾ ನೇಮಕಾತಿಯು ಮುಕ್ತಾಯಗೊಂಡಲ್ಲಿ, ಆತನ ಸದಸ್ಯತ್ವವು ಕೊನೆಗೊಳ್ಳತಕ್ಕದ್ದು.

(2) ಕಾರ್ಯನಿರ್ವಾಹಕ ಪರಿಷತ್ತಿನ ಅಧಿಕಾರೇತರ ಸದಸ್ಯನು ರಾಜೀನಾಮೆಯನ್ನು ನೀಡಿದ್ದಲ್ಲಿ ಅಥವಾ ಅಸ್ವಸ್ಥ ಚಿತ್ತನಾಗಿದ್ದರೆ ಅಥವಾ ಅವಿಮುಕ್ತ ದಿವಾಳಿಯಾಗಿದ್ದರೆ ಅಥವಾ ನೈತಿಕ ಅದಪತನವುಳ್ಳ ಅಪರಾಧ ಪ್ರಕರಣದಲ್ಲಿ ಅಪರಾಧ ನಿರ್ಣೀತನಾಗಿದ್ದರೆ ಕುಲಪತಿ, ಡೀನ್ ಅಥವಾ ಪ್ರಾಧ್ಯಾಪಕನ ಹೊರತಾಗಿ ವಿಶ್ವವಿದ್ಯಾಲಯದಲ್ಲಿ ಪೂರ್ಣಾವಧಿ ನೇಮಕಾತಿಯನ್ನು ಒಪ್ಪಿಕೊಂಡ ಸದಸ್ಯನಾಗಿದ್ದಲ್ಲಿ ಅಥವಾ ಕಾರ್ಯನಿರ್ವಾಹಕ ಪರಿಷತ್ತಿನ ಅಧ್ಯಕ್ಷರಿಂದ ರಜೆಯ ಒಪ್ಪಿಗೆಯನ್ನು ಪಡೆಯದೆ ಕಾರ್ಯನಿರ್ವಾಹಕ ಪರಿಷತ್ತಿನ ಮೂರು ನಿರಂತರ ಸಭೆಗಳಿಗೆ ಗೈರುಹಾಜರಾದಲ್ಲಿ ಅವನ ಸದಸ್ಯತ್ವವು ನಿಂತುಹೋಗತಕ್ಕದ್ದು.

(3) ಮೇಲಿನ ಉಪಖಂಡಗಳಲ್ಲಿ ಉಪಬಂಧಿಸಲಾದಂತೆ ಕಾರ್ಯನಿರ್ವಾಹಕ ಪರಿಷತ್ತಿನ ಅವರ ಸದಸ್ಯತ್ವವನ್ನು ಈ ಹಿಂದೆಯೇ ಕೊನೆಗೊಳಿಸಿದ್ದ ಹೊರತು, ಅವರು ಕಾರ್ಯನಿರ್ವಾಹಕ ಪರಿಷತ್ತಿನ ಸದಸ್ಯರಾದ ದಿನಾಂಕದಿಂದ ಮೂರು ವರ್ಷಗಳು ಮುಗಿದ ನಂತರ ತಮ್ಮ ಸದಸ್ಯತ್ವವನ್ನು ತ್ಯಜಿಸತಕ್ಕದ್ದು. ಆದರೆ ಅವರು ಸಂದರ್ಭಾನುಸಾರ ಪುನರ್ ನಾಮನಿರ್ದೇಶನಕ್ಕೆ ಅಥವಾ ಪುನರ್ ನೇಮಕಾತಿಗೆ ಅರ್ಹರಾಗಿರತಕ್ಕದ್ದು.

(4) ಪದನಿಮಿತ್ತ ಸದಸ್ಯನನ್ನು ಹೊರತುಪಡಿಸಿ ಕಾರ್ಯನಿರ್ವಾಹಕ ಪರಿಷತ್ತಿನ ಒಬ್ಬ ಅಧಿಕಾರೇತರ ಸದಸ್ಯನು, ಕಾರ್ಯನಿರ್ವಾಹಕ ಪರಿಷತ್ತಿನ ಅಧ್ಯಕ್ಷನಿಗೆ ಪತ್ರ ಬರೆದು ತನ್ನ ಪದಕ್ಕೆ ರಾಜೀನಾಮೆ ನೀಡಬಹುದು ಮತ್ತು ಅಧ್ಯಕ್ಷನು ಅಂಥ ರಾಜೀನಾಮೆಯನ್ನು ಅಂಗೀಕರಿಸಿದ ಕೂಡಲೇ ಅದು ಜಾರಿಗೆ ಬರತಕ್ಕದ್ದು.

(5) ಕಾರ್ಯನಿರ್ವಾಹಕ ಪರಿಷತ್ತಿನ ಯಾವುದೇ ಖಾಲಿ ಸ್ಥಾನವನ್ನು ಸಂದರ್ಭಾನುಸಾರ ನೇಮಕಾತಿಯ ಮೂಲಕ ಅಥವಾ ನಾಮನಿರ್ದೇಶನದ ಮೂಲಕ ಅದನ್ನು ಮಾಡಲು ಹಕ್ಕು ಹೊಂದಿರುವ ಸಂಬಂಧಪಟ್ಟ ಪ್ರಾಧಿಕಾರವು ಭರ್ತಿ

ಮಾಡತಕ್ಕದ್ದು ಮತ್ತು ಖಾಲಿ ಸ್ಥಾನದ ಅವಧಿಯು ಮುಗಿದ ನಂತರ ಅಂಥ ನೇಮಕಾತಿ ಅಥವಾ ನಾಮನಿರ್ದೇಶನವು ಜಾರಿಯಲ್ಲಿರುವುದು ನಿಂತು ಹೋಗತಕ್ಕದ್ದು.

23. ಕಾರ್ಯನಿರ್ವಾಹಕ ಪರಿಷತ್ತಿನ ಅಧಿಕಾರಗಳು ಮತ್ತು ಪ್ರಕಾರ್ಯಗಳು.– (1) ಕಾರ್ಯನಿರ್ವಾಹಕ ಪರಿಷತ್ತು, ವಿಶ್ವವಿದ್ಯಾನಿಲಯದ ಪ್ರಧಾನ ಕಾರ್ಯನಿರ್ವಾಹಕ ನಿಕಾಯವಾಗತಕ್ಕದ್ದು. ಕಾರ್ಯನಿರ್ವಾಹಕ ಪರಿಷತ್ತು ವಿಶ್ವವಿದ್ಯಾನಿಲಯದ ವ್ಯವಹಾರಗಳ ನಿರ್ವಹಣೆಯ ಅಧಿಕಾರಗಳನ್ನು ಹೊಂದಿರತಕ್ಕದ್ದು ಮತ್ತು ವಿಶ್ವವಿದ್ಯಾನಿಲಯದ ಕ್ರಮಬದ್ಧ ಪ್ರಕಾರ್ಯ ನಿರ್ವಹಣೆಗೆ ಹೊಣೆಯಾಗಿರತಕ್ಕದ್ದು.

(2) ಹಿಂದೆ ಹೇಳಿದ ಸಾಮಾನ್ಯಾನ್ವಯಕ್ಕೆ ಬಾಧಕವಾಗದಂತೆ, ಕಾರ್ಯನಿರ್ವಾಹಕ ಪರಿಷತ್ತು ಈ ಮುಂದಿನ ಅಧಿಕಾರಗಳನ್ನು, ಪ್ರಕಾರ್ಯಗಳನ್ನು ಮತ್ತು ಕರ್ತವ್ಯಗಳನ್ನು ಹೊಂದಿರತಕ್ಕದ್ದು, ಎಂದರೆ:–

(i) ವಿಶ್ವವಿದ್ಯಾನಿಲಯದ ನಿಧಿಗಳು ಮತ್ತು ಸ್ವತ್ತುಗಳನ್ನು ಸ್ವೀಕರಿಸುವುದು, ಆರ್ಜಿಸುವುದು, ಧಾರಣ ಮಾಡುವುದು, ನಿಯಂತ್ರಿಸುವುದು, ಆಡಳಿತ ನಡೆಸುವುದು, ನಿರ್ವಹಿಸುವುದು ಮತ್ತು ವಿನಿಯಮಿಸುವುದು ಹಾಗೂ ಆ ಉದ್ದೇಶಕ್ಕಾಗಿ ಅದು ಅವಶ್ಯಕ ಮತ್ತು ಸೂಕ್ತವೆಂದು ಭಾವಿಸಬಹುದಾದ ಅಂಥ ಏಜಂಟರನ್ನು ನೇಮಕ ಮಾಡುವುದು;

(ii) ವಿಶ್ವವಿದ್ಯಾನಿಲಯದ ಸ್ವತ್ತುಗಳು ಮತ್ತು ನಿಧಿಗಳ ಸೂಕ್ತ ದಾಖಲೆಗಳನ್ನು ನಿರ್ವಹಿಸುವಂತೆ ಮಾಡುವುದು ಮತ್ತು ರಾಜ್ಯ ಸರ್ಕಾರಕ್ಕೆ ಅವುಗಳ ಮೇಲೆ ಶಿಫಾರಸುಗಳನ್ನು ಮಾಡುವ ಮೊದಲು ಹಣಕಾಸು ಸಮಿತಿಯು ಮಂಡಿಸಿದಂತೆ, ಕಳೆದ ವರ್ಷಕ್ಕಾಗಿ ಅದರ ವಾರ್ಷಿಕ ಲೆಕ್ಕಪತ್ರಗಳು ಮತ್ತು ಲೆಕ್ಕಪರಿಶೋಧನಾ ವರದಿಯನ್ನು ಹಾಗೂ ಮುಂಬರುವ ವರ್ಷಕ್ಕೆ ಅದರ ಆಯವ್ಯಯ ಅಂದಾಜುಗಳನ್ನು ಪರಿಶೀಲಿಸುವುದು:

ಪರಂತು, ಕಾರ್ಯನಿರ್ವಾಹಕ ಪರಿಷತ್ತು, ಈ ಅಧಿನಿಯಮವು ಜಾರಿಗೆ ಬಂದ ದಿನಾಂಕದಿಂದ ಒಂದು ವರ್ಷದೊಳಗಾಗಿ ರಾಜ್ಯ ಸರ್ಕಾರವು ನಿರ್ದೇಶಿಸಬಹುದಾದಂತೆ ಸಾರ್ವಜನಿಕ ಹಣಕಾಸು ವ್ಯವಸ್ಥಾಪನಾ ವ್ಯವಸ್ಥೆಯನ್ನು (PFMS) ಅಳವಡಿಸಿಕೊಳ್ಳುವಂತೆ ಮಾಡತಕ್ಕದ್ದು.

(iii) ವಿಶ್ವವಿದ್ಯಾನಿಲಯದ ಪರವಾಗಿ ಒಪ್ಪಂದಗಳನ್ನು ಮಾಡಿಕೊಳ್ಳುವುದು, ಮಾರ್ಪಡಿಸುವುದು ಮತ್ತು ರದ್ದುಗೊಳಿಸುವುದು;

(iv) ವಿಶ್ವವಿದ್ಯಾನಿಲಯವು ಸ್ಥಾಪಿಸಿದ ಅಥವಾ ನಿರ್ವಹಿಸುತ್ತಿರುವ ಕಾಲೇಜುಗಳು, ವಿದ್ಯಾರ್ಥಿನಿಲಯಗಳು, ಗ್ರಂಥಾಲಯಗಳು, ಪ್ರಯೋಗ ಶಾಲೆಗಳು, ವಸ್ತು ಸಂಗ್ರಹಾಲಯಗಳು ಮತ್ತು ಇತರ ಸಂಸ್ಥೆಗಳ ಆಡಳಿತ ಮತ್ತು ನಿಯಂತ್ರಣ ಕೈಗೊಳ್ಳುವುದು;

(v) ಕ್ಯಾಂಪಸ್‌ನೊಳಗೆ ಹಾಗೂ ಅದರ ಅನೆಕ್ಸ್‌ಗಳೊಳಗೆ ಮತ್ತು ಎಲ್ಲಿಯಾದರೂ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳ ನಿವಾಸ ಮತ್ತು ಶಿಸ್ತನ್ನು ಗುರುತಿಸುವುದು, ವಿನಿಯಮಿಸುವುದು, ಮೇಲ್ವಿಚಾರಣೆ ಮಾಡುವುದು ಮತ್ತು ನಿಯಂತ್ರಿಸುವುದು ಹಾಗೂ ಅವರ ಆರೋಗ್ಯ ಮತ್ತು ಯೋಗಕ್ಷೇಮಕ್ಕೆ ಉತ್ತೇಜನ ನೀಡಲು ವ್ಯವಸ್ಥೆ ಮಾಡುವುದು;

(vi) ವಿದ್ಯಾವಿಷಯಕ ಪರಿಷತ್ತಿನ ಶಿಫಾರಸ್ಸುಗಳನ್ನಾಧರಿಸಿ ಮತ್ತು ಪರಿನಿಯಮಗಳು, ಆರ್ಡಿನೆನ್ಸ್‌ಗಳು ಮತ್ತು ವಿನಿಯಮಗಳಲ್ಲಿ ಉಪಬಂಧಿಸಬಹುದಾದಂತೆ ಗೌರವ ಅಥವಾ ವಿಶ್ರಾಂತ ಮಹೋಪಾಧ್ಯಾಯ (ಇಮೆರಿಟಿಸ್) ಅಥವಾ ಹಂಗಾಮಿ ಪ್ರಾದ್ಯಾಪಕರುಗಳನ್ನು ಒಳಗೊಂಡಂತೆ ಪ್ರಾಧ್ಯಾಪಕರು ಅಥವಾ ಸಹಪ್ರಾಧ್ಯಾಪಕರು, ಸಹಾಯಕ ಪ್ರಾಧ್ಯಾಪಕರು, ಉಪನ್ಯಾಸಕರಂಥ ಬೋಧಕ ಮತ್ತು ವಿದ್ಯಾವಿಷಯಕ ಹುದ್ದೆಗಳನ್ನು ಮತ್ತು ಯಾವುವೇ ಇತರ ಹುದ್ದೆಗಳನ್ನು ಸೃಜಿಸುವುದು ಹಾಗೂ ಅಂಥ ಹುದ್ದೆಗಳ ಸಂಖ್ಯೆಯನ್ನು ನಿರ್ಧರಿಸುವುದು, ಅವರ ಕರ್ತವ್ಯಗಳು ಮತ್ತು ಸೇವಾ ಷರತ್ತುಗಳನ್ನು ನಿರ್ದಿಷ್ಟಪಡಿಸುವುದು ಮತ್ತು ಅವಶ್ಯವಿದ್ದಂತೆ ಮತ್ತು ಅವಶ್ಯವಿದ್ದಾಗಲೆಲ್ಲಾ ಅವರನ್ನು ನೇಮಿಸಿಕೊಳ್ಳಲು ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳುವುದು;

(vii) ರಾಜ್ಯ ಸರ್ಕಾರದ ಅನುಮೋದನೆಗೆ ಒಳಪಟ್ಟು, ಆಡಳಿತಾತ್ಮಕ, ಲಿಪಿಕ, ಇತರ ಅವಶ್ಯಕ ಹುದ್ದೆಗಳನ್ನು ಪರಿನಿಯಮಗಳು, ಆರ್ಡಿನೆನ್ಸ್‌ಗಳು ಮತ್ತು ವಿನಿಯಮಗಳಲ್ಲಿ ಉಪಬಂಧಿಸಬಹುದಾದಂಥ ರೀತಿಯಲ್ಲಿ ಸೃಜಿಸುವುದು ಮತ್ತು ಅವುಗಳಿಗೆ ನೇಮಕಾತಿಗಳನ್ನು ಮಾಡುವುದು;

(viii) ವಿದ್ಯಾವಿಷಯಕ ಪರಿಷತ್ತಿನ ಶಿಫಾರಸ್ಸಿನ ಮೇಲೆ ಫೆಲೋಶಿಪ್‌ಗಳು, ಸಂಚಾರಿ ಫೆಲೋಶಿಪ್‌ಗಳು, ವಿದ್ಯಾರ್ಥಿ ವೇತನಗಳು, ಶಿಷ್ಯವೇತನಗಳು, ಪ್ರವೇತನಗಳು, ಪದಕಗಳು ಮತ್ತು ಪಾರಿತೋಷಕಗಳನ್ನು ಸ್ಥಾಪಿಸುವುದು;

(ix) ಪರಿನಿಯಮಗಳು, ಆರ್ಡಿನೆನ್ಸ್‌ಗಳು ಮತ್ತು ವಿನಿಯಮಗಳ ಮೂಲಕ ನಿಯಮಿಸಬಹುದಾದಂತೆ ಕ್ಯಾಂಪಸ್‌ನ ಒಳಗೆ ಮತ್ತು ಹೊರಗೆ ಎಲ್ಲಾ ಪ್ರವರ್ಗಗಳ ಬೋಧಕರು, ಸಿಬ್ಬಂದಿ ಮತ್ತು ವಿದ್ಯಾರ್ಥಿಗಳಲ್ಲಿ ಶಿಸ್ತನ್ನು ವಿನಿಯಮಿಸುವುದು ಮತ್ತು ಜಾರಿಗೊಳಿಸುವುದು;

(x) ಪಾಠ (ಟ್ಯೂಷನ್), ಸಂಶೋಧನೆ, ಪರೀಕ್ಷೆ, ತಪಾಸಣೆ ಮತ್ತು ಇತರ ಕಾರ್ಯಗಳ ಸಂಬಂಧದಲ್ಲಿ, ಪರಿನಿಯಮಗಳ ಮೂಲಕ ನಿಯಮಿಸಬಹುದಾದಂತೆ ಶುಲ್ಕ ಸ್ವರೂಪವನ್ನು ಕಾಲಕಾಲಕ್ಕೆ ವಿಧಿಸುವುದು ಮತ್ತು ಪರಿಷ್ಕರಿಸುವುದು;

(xi) ಆರ್ಡಿನೆನ್ಸುಗಳು ಮತ್ತು ವಿನಿಯಮಗಳ ಮೂಲಕ ನಿಯಮಿಸಬಹುದಾದಂತೆ ಪರೀಕ್ಷೆಗಳನ್ನು ನಡೆಸುವುದು;

(xii) ಆರ್ಡಿನೆನ್ಸ್‌ಗಳ ಮತ್ತು ವಿನಿಯಮಗಳ ಉಪಬಂಧಗಳಿಗೆ ಒಳಪಟ್ಟು, ಪರೀಕ್ಷಕರು ಮತ್ತು ಮಾಡರೇಟರುಗಳನ್ನು ನೇಮಕಮಾಡುವುದು ಮತ್ತು ಅವಶ್ಯವೆನಿಸಿದರೆ ಅವರನ್ನು ಬದಲಾಯಿಸುವುದು ಅಥವಾ ತೆಗೆದುಹಾಕುವುದು ಹಾಗೂ ಅವರ ಫೀಜುಗಳು, ಉಪಲಬ್ಧಿಗಳು ಮತ್ತು ಪ್ರವಾಸ ಮತ್ತು ಇತರ ಭತ್ಯೆಗಳನ್ನು ಸಹ ನಿಗದಿಪಡಿಸುವುದು;

(xiii) ಗೌರವ ಪದವಿಗಳು, ಬಿರುದುಗಳು ಅಥವಾ ಇತರೆ ಶೈಕ್ಷಣಿಕ ಪ್ರಶಸ್ತಿಗಳನ್ನು ಪ್ರದಾನ ಮಾಡುವುದಕ್ಕೆ ಸಂಬಂಧಿಸಿದಂತೆ ವಿದ್ಯಾವಿಷಯಕ ಪರಿಷತ್ತಿನ ಶಿಫಾರಸುಗಳನ್ನು ಪರಿಗಣಿಸುವುದು ಮತ್ತು ಅದರ ತೀರ್ಮಾನವನ್ನು ಕುಲಾಧಿಪತಿಗೆ ಕಳುಹಿಸುವುದು;

(xiv) ವಿದ್ಯಾರ್ಥಿಗಳ ತರಬೇತಿ ಮತ್ತು ನಿಯೋಜನೆ, ಪ್ರಕಟಣೆಗಳು ಮತ್ತು ಮಾಹಿತಿ, ಪ್ರಾಯೋಜಿತ ಸಂಶೋಧನೆ ಮತ್ತು ಸಮಾಲೋಚನೆ, ಬೌದ್ಧಿಕ ಸ್ವತ್ತು ಹಕ್ಕುಗಳ, ಶಿಕ್ಷಣ ಮುಂದುವರಿಕೆ ಮತ್ತು ಇತರ ನಾವಿನ್ಯತಾ ಚಟುವಟಿಕೆಗಳ ಕಾರ್ಯನಿರ್ವಹಣೆಗಾಗಿ ಕೇಂದ್ರಗಳನ್ನು ರಚಿಸುವುದು, ಅವುಗಳ ಆಡಳಿತವನ್ನು ನಡೆಸುವುದು, ಅವುಗಳನ್ನು ನಿರ್ವಹಿಸುವುದು ಮತ್ತು ನಿಯಂತ್ರಿಸುವುದು;

(xv) ಪರಿನಿಯಮಗಳ, ಆರ್ಡಿನೆನ್ಸ್‌ಗಳ ಮತ್ತು ವಿನಿಯಮಗಳ ಮೂಲಕ ನಿಯಮಿಸಬಹುದಾದಂತೆ ಅಂಥ ತನ್ನ ಅಧಿಕಾರಗಳು, ಪ್ರಕಾರ್ಯಗಳು ಮತ್ತು ಕರ್ತವ್ಯಗಳನ್ನು ಕುಲಪತಿಗೆ ಪ್ರತ್ಯಾಯೋಜಿಸುವುದು;

(xvi) ವಿಶ್ವವಿದ್ಯಾನಿಲಯಕ್ಕಾಗಿ ಸಾಮಾನ್ಯ ಮುದ್ರೆಯನ್ನು ಆಯ್ಕೆ ಮಾಡುವುದು ಮತ್ತು ಅದರ ಅಭಿರಕ್ಷೆ ಮತ್ತು ಉಪಯೋಗಕ್ಕಾಗಿ ಉಪಬಂಧ ಕಲ್ಪಿಸುವುದು;

(xvii) ವಿಶ್ವವಿದ್ಯಾನಿಲಯದಿಂದ ಅಥವಾ ಅದರ ವಿರುದ್ಧ ಕಾನೂನು ವ್ಯವಹರಣೆ ನಡೆಸಲು ವ್ಯವಸ್ಥೆ ಮಾಡುವುದು;

(xviii) ಪರಿನಿಯಮಗಳನ್ನು, ಆರ್ಡಿನೆನ್ಸ್‌ಗಳನ್ನು ಮತ್ತು ವಿನಿಯಮಗಳನ್ನು ರಚಿಸುವುದು, ಅಧಿನಿಯಮಿತಗೊಳಿಸುವುದು, ಅವುಗಳ ತಿದ್ದುಪಡಿ ಮಾಡುವುದು ಮತ್ತು ನಿರಸನಗೊಳಿಸುವುದು;

(3) ಈ ಅಧಿನಿಯಮ, ಅನುಸೂಚಿ, ಪರಿನಿಯಮಗಳ, ಆರ್ಡಿನೆನ್ಸ್‌ಗಳ ಮತ್ತು ವಿನಿಯಮಗಳ ಮೂಲಕ ತನಗೆ ಪ್ರದಾನ ಮಾಡಬಹುದಾದ ಅಥವಾ ವಿಧಿಸಬಹುದಾದ ಅಂಥ ಇತರ ಅಧಿಕಾರಗಳನ್ನು ಚಲಾಯಿಸುವುದು ಮತ್ತು ಅಂಥ ಇತರ ಪ್ರಕಾರ್ಯಗಳನ್ನು ಮತ್ತು ಕರ್ತವ್ಯಗಳನ್ನು ನಿರ್ವಹಿಸುವುದು:

ಪರಂತು, (2)ನೇ ಉಪಪ್ರಕರಣದಲ್ಲಿ ಒಳಗೊಂಡಿರುವುದು ಯಾವುದೂ, ಯಾವುದೇ ನೌಕರರ ವೇತನ ಶ್ರೇಣಿಗಳನ್ನು ಪರಿಷ್ಕರಿಸುವ ಅಥವಾ ಅವರಿಗೆ ಯಾವುವೇ ಭತ್ಯೆಗಳನ್ನು ಅಥವಾ ಉಪಲಬ್ಧಿಗಳನ್ನು ನೀಡುವ ಅಧಿಕಾರವನ್ನು ಕಾರ್ಯನಿರ್ವಾಹಕ ಪರಿಷತ್ತಿಗೆ ಪ್ರದಾನ ಮಾಡಿರುವುದಾಗಿ ಭಾವಿಸತಕ್ಕದ್ದಲ್ಲ:

24. ಕಾರ್ಯನಿರ್ವಾಹಕ ಪರಿಷತ್ತಿನ ಸಭೆಗಳು.– (1) ಕಾರ್ಯನಿರ್ವಾಹಕ ಪರಿಷತ್ತು ಕಡೇ ಪಕ್ಷ ವರ್ಷದಲ್ಲಿ ನಾಲ್ಕು ಬಾರಿಯಾದರೂ ಸಭೆ ಸೇರತಕ್ಕದ್ದು ಮತ್ತು ಅಂಥ ಸಭೆಗೆ ಹದಿನೈದು ದಿನಗಳಿಗಿಂತ ಕಡಿಮೆ ಇರದಂತೆ ಮುಂಚಿತವಾಗಿ ನೋಟೀಸನ್ನು ನೀಡತಕ್ಕದ್ದು. ಎರಡು ನಿಕಟ ಸಭೆಗಳ /ಅವಧಿಯ ನಡುವಿನ ಸಾಮಾನ್ಯವಾಗಿ ಹದಿನೈದು ವಾರಗಳನ್ನು ಮೀರತಕ್ಕದ್ದಲ್ಲ.

(2) ಕಾರ್ಯನಿರ್ವಾಹಕ ಪರಿಷತ್ತಿನ ಆರು ಜನ ಸದಸ್ಯರು ಅದರ ಯಾವುದೇ ಸಭೆಗೆ ಕೋರಂ ಆಗಿರತಕ್ಕದ್ದು.

(3) ಸದಸ್ಯರ ನಡುವೆ ಅಭಿಪ್ರಾಯಭೇದ ಉಂಟಾದ ಸಂದರ್ಭದಲ್ಲಿ ಬಹುಮತದ ಅಭಿಪ್ರಾಯವು ಮಾನ್ಯತೆ ಪಡೆಯತಕ್ಕದ್ದು.

(4) ಕಾರ್ಯನಿರ್ವಾಹಕ ಪರಿಷತ್ತಿನ ಪ್ರತಿಯೊಬ್ಬ ಸದಸ್ಯರು ಒಂದು ಮತವನ್ನು ಹೊಂದಿರತಕ್ಕದ್ದು ಮತ್ತು ಕಾರ್ಯನಿರ್ವಾಹಕ ಪರಿಷತ್ತು ನಿರ್ಧರಿಸಬೇಕಾಗಿರುವ ಯಾವುದೇ ಪ್ರಶ್ನೆಗೆ ಸಂಬಂಧಿಸಿದಂತೆ ಮತಗಳು ಸಮವಾಗಿ ಬಂದಿದ್ದರೆ ಕಾರ್ಯನಿರ್ವಾಹಕ ಪರಿಷತ್ತಿನ ಅಧ್ಯಕ್ಷನು ಅಥವಾ ಸಂದರ್ಭಾನುಸಾರವಾಗಿ ಆ ಸಭೆಯ ಅಧ್ಯಕ್ಷತೆಯನ್ನು ವಹಿಸಿರುವ ಸದಸ್ಯನು ಹೆಚ್ಚುವರಿಯಾಗಿ ಒಂದು ನಿರ್ಣಾಯಕ ಮತವನ್ನು ಹೊಂದಿರತಕ್ಕದ್ದು.

(5) ಕಾರ್ಯನಿರ್ವಾಹಕ ಪರಿಷತ್ತಿನ ಪ್ರತಿಯೊಂದು ಸಭೆಗೆ ಕುಲಪತಿಯು ಅಧ್ಯಕ್ಷತೆಯನ್ನು ವಹಿಸತಕ್ಕದ್ದು ಮತ್ತು ಆತನ ಗೈರುಹಾಜರಿಯಲ್ಲಿ, ಹಾಜರಿರುವ ಸದಸ್ಯರು ಆ ಸಂದರ್ಭದಲ್ಲಿ ಅಧ್ಯಕ್ಷತೆ ವಹಿಸುವುದಕ್ಕಾಗಿ ಆಯ್ಕೆ ಮಾಡಿದ ಒಬ್ಬ ಸದಸ್ಯನು ಅಧ್ಯಕ್ಷತೆಯನ್ನು ವಹಿಸತಕ್ಕದ್ದು.

(6) ಕಾರ್ಯನಿರ್ವಾಹಕ ಪರಿಷತ್ತು ತುರ್ತು ಕ್ರಮ ಕೈಗೊಳ್ಳುವ ಅಗತ್ಯತೆ ಉಂಟಾದರೆ, ಕಾರ್ಯನಿವಾಹಕ ಪರಿಷತ್ತಿನ ಸದಸ್ಯರಿಗೆ ಪತ್ರಗಳನ್ನು ಪರಿಚಲನೆ ಮಾಡುವ ಮೂಲಕ ಕಾರ್ಯಕಲಾಪವನ್ನು ನಡೆಸಲು ಕುಲಪತಿಯು

ಅನುಮತಿಯನ್ನು ನೀಡಬಹುದು. ಕೈಗೊಳ್ಳಲು ಉದ್ದೇಶಿಸಿದ ಕ್ರಮವನ್ನು, ಕಾರ್ಯನಿರ್ವಾಹಕ ಪರಿಷತ್ತಿನ ಸದಸ್ಯರ ಬಹುಮತದ ಮೂಲಕ ಒಪ್ಪಿಗೆ ದೊರೆತ ಹೊರತು ಕೈಗೊಳ್ಳತಕ್ಕದ್ದಲ್ಲ. ಹಾಗೆ ಕೈಗೊಂಡ ಕ್ರಮವನ್ನು ಕಾರ್ಯನಿರ್ವಾಹಕ ಪರಿಷತ್ತಿನ ಎಲ್ಲ ಸದಸ್ಯರಿಗೆ ಕೂಡಲೇ ತಿಳಿಸತಕ್ಕದ್ದು. ಸ್ಥಿರೀಕರಣಕ್ಕಾಗಿ ಕಾಗದಪತ್ರಗಳನ್ನು ಕಾರ್ಯನಿರ್ವಾಹಕ ಪರಿಷತ್ತಿನ ಮುಂದಿನ ಸಭೆಯಲ್ಲಿ ಮಂಡಿಸತಕ್ಕದ್ದು.

25. ವಿದ್ಯಾವಿಷಯಕ ಪರಿಷತ್ತು.– (1) ವಿದ್ಯಾವಿಷಯಕ ಪರಿಷತ್ತು ವಿಶ್ವವಿದ್ಯಾಲಯದ ಪ್ರಧಾನ ಶೈಕ್ಷಣಿಕ ನಿಕಾಯಯಾಗಿರತಕ್ಕದ್ದು ಮತ್ತು ಅದು ಈ ಮುಂದಿನ ಸಂಯೋಜನೆಯನ್ನು ಒಳಗೊಂಡಿರತಕ್ಕದ್ದು, ಎಂದರೆ:–

(ಎ)	ಕುಲಪತಿ	–	ಅಧ್ಯಕ್ಷ
(ಬಿ)	ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಅಥವಾ ಪ್ರಧಾನ ಕಾರ್ಯದರ್ಶಿ ಅಥವಾ ಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾಖೆ ಅಥವಾ ಉಪ ಕಾರ್ಯದರ್ಶಿ ದರ್ಜೆಗಿಂತ ಕಡಿಮೆಯಲ್ಲದ ಆತನ ನಾಮನಿರ್ದೇಶಿತ	–	ಸದಸ್ಯ
(ಸಿ)	ಕುಲಾಧಿಪತಿಯವರು ಮೂರು ವರ್ಷಗಳ ಅವಧಿಗಾಗಿ ನಾಮನಿರ್ದೇಶಿಸಿದ, ಸಂಶೋಧನಾ ಮತ್ತು ಅಭಿವೃದ್ಧಿ, ಉದ್ಯಮ, ವಾಣಿಜ್ಯ, ಬ್ಯಾಂಕಿಂಗ್ ಇವುಗಳಲ್ಲಿ ಡಾಕ್ಟೋರಲ್ ಪದವಿಯನ್ನು ಹೊಂದಿರುವ ಇಬ್ಬರು ಶ್ರೇಷ್ಠ ಮತ್ತು ಅನುಭವಿ ವ್ಯಕ್ತಿಗಳು.	–	ಸದಸ್ಯರು
(ಡಿ)	ರಾಜ್ಯ ಸರ್ಕಾರವು ನಾಮನಿರ್ದೇಶಿಸಿದ ಐವರು ವ್ಯಕ್ತಿಗಳು, ಅವರಲ್ಲಿ ಇಬ್ಬರು ನಿವೃತ್ತ ಕುಲಪತಿಗಳು/ಪ್ರಾಧ್ಯಾಪಕರು ಹಾಗೂ ಸಂಶೋಧನಾ ಮತ್ತು ಅಭಿವೃದ್ಧಿ, ಉದ್ಯಮ, ಬ್ಯಾಂಕಿಂಗ್ ಇವುಗಳಲ್ಲಿ ಡಾಕ್ಟೋರಲ್ ಪದವಿಯನ್ನು ಹೊಂದಿರುವ ಮೂವರು ವ್ಯಕ್ತಿಗಳು. ಅವರಲ್ಲಿ ಅನುಸೂಚಿತ ಜಾತಿಗಳು/ಅನುಸೂಚಿತ ಪಂಗಡಗಳಿಗೆ ಸೇರಿದ ಒಬ್ಬರು, ಹಿಂದುಳಿದ ವರ್ಗಗಳಿಗೆ/ಅಲ್ಪಸಂಖ್ಯಾತರುಗಳಿಗೆ ಸೇರಿದ ಒಬ್ಬರು ಇರತಕ್ಕದ್ದು ಮತ್ತು ಉಳಿದ ಮೂವರು ಸಾಮಾನ್ಯ ವರ್ಗಕ್ಕೆ ಸೇರಿದ್ದು, ಅವರಲ್ಲಿ ಕನಿಷ್ಠ ಒಬ್ಬರು ಮಹಿಳೆಯಾಗಿರತಕ್ಕದ್ದು.	–	ಸದಸ್ಯರು
(ಇ)	ವಿಶ್ವವಿದ್ಯಾಲಯದ ಡೀನ್ (ಡೀನರುಗಳು)	–	ಸದಸ್ಯ
(ಎಫ್)	ಕುಲಪತಿಯವರು ಸರದಿಯ ಮೇರೆಗೆ ಜೇಷ್ಠತೆ ಆಧಾರದಲ್ಲಿ ಒಂದು ವರ್ಷದ ಅವಧಿಗಾಗಿ ನಾಮನಿರ್ದೇಶಿಸಿದ ವಿಶ್ವವಿದ್ಯಾಲಯದ ಇಬ್ಬರು ಪ್ರಾಧ್ಯಾಪಕರು, ಅವರಲ್ಲಿ ಒಬ್ಬರು ಆದ್ಯತಾನುಸಾರ ಮಹಿಳೆಯಾಗಿರತಕ್ಕದ್ದು: ಪರಂತು, ವಿಶ್ವವಿದ್ಯಾಲಯದಲ್ಲಿ ಪ್ರಸ್ತುತ ಯಾವುದೇ ಸಾಮರ್ಥ್ಯದಲ್ಲಿ ಉದ್ಯೋಗದಲ್ಲಿರುವ ಯಾವೊಬ್ಬ ವ್ಯಕ್ತಿಯು ಈ ಪ್ರಕರಣದ (ಸಿ) ಮತ್ತು (ಡಿ) ಖಂಡಗಳ ಅಡಿಯಲ್ಲಿ ನಾಮನಿರ್ದೇಶನಕ್ಕೆ ಅರ್ಹನಾಗಿರತಕ್ಕದ್ದಲ್ಲ.	–	ಸದಸ್ಯರು
(ಜಿ)	ವಿಶ್ವವಿದ್ಯಾಲಯ ಗ್ರಂಥಪಾಲಕರು	–	ಸದಸ್ಯ
(ಹೆಚ್)	ವಿದ್ಯಾರ್ಥಿ ಕಲ್ಯಾಣದ ಗ್ರಂಥಪಾಲಕರು	–	ಸದಸ್ಯ
(ಐ)	ತರಬೇತಿ ಮತ್ತು ಉದ್ಯೋಗದಾಯಿ ಕೇಂದ್ರದ ನಿರ್ದೇಶಕರು	–	ಸದಸ್ಯ
(ಜೆ)	ದೈಹಿಕ ಶಿಕ್ಷಣ ನಿರ್ದೇಶಕರು	–	ಸದಸ್ಯ
(ಕೆ)	ಪರೀಕ್ಷೆಗಳ ನಿಯಂತ್ರಕರು	–	ಸದಸ್ಯ
(ಎಲ್)	ಕುಲಸಚಿವರು	–	ಕಾರ್ಯದರ್ಶಿ
(ಎಂ)	ಹಣಕಾಸು ಅಧಿಕಾರಿ	–	ಆಹ್ವಾನಿತ

(2) ಒಂದು ಶೈಕ್ಷಣಿಕ ವರ್ಷದಲ್ಲಿ ವಿದ್ಯಾವಿಷಯಕ ಪರಿಷತ್ತು ಸಾಮಾನ್ಯವಾಗಿ ಮೂರು ಬಾರಿಯಾದರೂ ಸಭೆ ಸೇರತಕ್ಕದ್ದು ಮತ್ತು ಎರಡು ನಿಕಟ ಸಭೆಗಳ ನಡುವಿನ ಅವಧಿಯು ಇಪ್ಪತ್ತು ವಾರಗಳನ್ನು ಮೀರತಕ್ಕದ್ದಲ್ಲ:

ಪರಂತು, ಕುಲಪತಿಯು ವಿದ್ಯಾವಿಷಯಕ ಪರಿಷತ್ತಿನ ಪರವಾಗಿ ನಿರ್ಧರಿಸಬೇಕಾದ ಯಾವುದೇ ತುರ್ತು ವಿಷಯಕ್ಕೆ ಸಂಬಂಧಿಸಿದಂತೆ ತಾತ್ಪೂರ್ತಿಕ (ಅಡ್–ಹಾಕ್) ಸಮಿತಿಯನ್ನು ರಚಿಸಬಹುದು:

ಮತ್ತು ಪರಂತು, ಅಂಥ ತಾತ್ಪೂರ್ತಿಕ ಸಮಿತಿಯು ತೆಗೆದುಕೊಂಡ ತೀರ್ಮಾನಗಳನ್ನು ಒಳಗೊಂಡ ಸಭೆಗಳ ನಡವಳಿಗಳ ಸ್ಥಿರೀಕರಣಕ್ಕಾಗಿ ವಿದ್ಯಾವಿಷಯಕ ಪರಿಷತ್ತಿನ ಮುಂದಿನ ನಿಕಟ ಸಭೆಗಳ ಮುಂದಿಡತಕ್ಕದ್ದು.

(3) ತುರ್ತು ಸಂದರ್ಭದಲ್ಲಿ, ಕುಲಪತಿಯು ವಿದ್ಯಾವಿಷಯಕ ಪರಿಷತ್ತಿನ ವಿಶೇಷ ಸಭೆಗಳನ್ನು ಕರೆಯಬಹುದು.

(4) ವಿದ್ಯಾವಿಷಯಕ ಪರಿಷತ್ತಿನ ಮತ್ತು ತಾತ್ಪರ್ತಿಕ (ಅಡ್–ಹಾಕ್) ಸಮಿತಿಯ ಸಭೆಗಳನ್ನು ನಡೆಸುವ ಕಾರ್ಯವಿಧಾನ ಮತ್ತು ನಿಯಮಗಳನ್ನು ಪರಿನಿಯಮಗಳ ಮೂಲಕ ಉಪಬಂಧಿಸಬಹುದು.

(5) ಕುಲಾಧಿಪತಿ ಅಥವಾ ರಾಜ್ಯ ಸರ್ಕಾರವು, ನಿರ್ದಿಷ್ಟಪಡಿಸಬಹುದಾದ ಅಂಥ ಪರಿಶೀಲನಾಂಶಗಳನ್ನು ಕುರಿತು ಚರ್ಚಿಸಲು ವಿದ್ಯಾವಿಷಯಕ ಪರಿಷತ್ತಿನ ಸಭೆಗಳನ್ನು ನಡೆಸುವಂತೆ ವಿಶ್ವವಿದ್ಯಾಲಯಕ್ಕೆ ಆದೇಶದ ಮೂಲಕ ನಿರ್ದೇಶಿಸಬಹುದು ಮತ್ತು ಕುಲಪತಿಯು ಅಂಥ ನಿರ್ದೇಶನಗಳನ್ನು ಪಾಲಿಸತಕ್ಕದ್ದು.

26. ವಿದ್ಯಾವಿಷಯಕ ಪರಿಷತ್ತಿನ ಅಧಿಕಾರಗಳು.– (1) ವಿದ್ಯಾವಿಷಯಕ ಪರಿಷತ್ತು, ವಿಶ್ವವಿದ್ಯಾನಿಲಯದ ಬೋಧನೆ, ಶಿಕ್ಷಣ ಮತ್ತು ಪರೀಕ್ಷೆಗಳ ನಿಯಂತ್ರಣ ಹಾಗೂ ಸಾಮಾನ್ಯ ನಿಯಂತ್ರಣವನ್ನು ಹೊಂದಿರತಕ್ಕದ್ದು ಮತ್ತು ಅದು ವಿದ್ಯಾವಿಷಯಕ ವಿಷಯಗಳ ಮೇಲೆ ವಿಶ್ವವಿದ್ಯಾನಿಲಯಕ್ಕೆ ಸಾಮಾನ್ಯವಾಗಿ ಸಲಹೆ ನೀಡುವ ಜವಾಬ್ದಾರಿಯನ್ನು ಹೊಂದಿರತಕ್ಕದ್ದು.

(2) ಹಿಂದೆ ಹೇಳಿದವುಗಳ ಸಾಮಾನ್ಯ ಅನ್ವಯಕ್ಕೆ ಬಾಧಕವಾಗದಂತೆ ಹಾಗೂ ಈ ಅಧಿನಿಯಮದ ಉಪಬಂಧಗಳ ಮೂಲಕ ಅಥವಾ ಅದರ ಅಡಿಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಷರತ್ತುಗಳಿಗೊಳಪಟ್ಟು, ವಿದ್ಯಾವಿಷಯಕ ಪರಿಷತ್ತು ಈ ಮುಂದಿನ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಪ್ರಕಾರ್ಯಗಳನ್ನು ಹಾಗೂ ಕರ್ತವ್ಯಗಳನ್ನು ನಿರ್ವಹಿಸತಕ್ಕದ್ದು, ಎಂದರೆ:–

(ಎ) ಶೈಕ್ಷಣಿಕ ವಿಷಯಗಳಿಗೆ ಸಂಬಂಧಿಸಿದಂತೆ ಆರ್ಡಿನೆನ್ಸ್‌ಗಳನ್ನು ಹೊರಡಿಸಲು ಪ್ರಸ್ತಾವನೆಗಳನ್ನು ಸಲ್ಲಿಸುವುದು;

(ಬಿ) ಅಧ್ಯಯನ ವ್ಯಾಸಂಗ ಕ್ರಮಗಳು, ಅನುಮೋದಿತ ವ್ಯಾಸಂಗ ಕ್ರಮಗಳಿಂದ ವಿನಾಯಿತಿಗಳನ್ನು ನೀಡುವುದು, ಯಾವ ಷರತ್ತುಗಳಿಗೆ ಒಳಪಟ್ಟು ವಿದ್ಯಾರ್ಥಿಗಳಿಗೆ ಪ್ರವೇಶ ಕೊಡತಕ್ಕದ್ದೋ ಅಂಥ ಷರತ್ತುಗಳನ್ನು ಒಳಗೊಂಡಂತೆ ಪರೀಕ್ಷಾ ಸ್ಕೀಂಗಳ, ತತ್ಸಮಾನವಾದ ಪರೀಕ್ಷೆಗಳ, ಪರೀಕ್ಷೆಗಳ ಫಲಿತಾಂಶಗಳ ಘೋಷಣೆ ಹಾಗೂ ಪದವಿಗಳ, ಡಿಪ್ಲೊಮಾಗಳ, ಪ್ರಮಾಣಪತ್ರಗಳ ಅಥವಾ ಇತರ ಶೈಕ್ಷಣಿಕ ಪ್ರಶಸ್ತಿಗಳನ್ನು ಪ್ರದಾನ ಮಾಡುವ ಸಂಬಂಧದಲ್ಲಿ, ಅವುಗಳಿಗೆ ಆರ್ಡಿನೆನ್ಸ್‌ಗಳಲ್ಲಿ ಒಳಗೊಳ್ಳದಿರುವಷ್ಟರಮಟ್ಟಿಗೆ, ವಿನಿಯಮಗಳನ್ನು ರಚಿಸುವುದು;

(ಸಿ) ಸಂಶೋಧನಾ ಮತ್ತು ವಿಶೇಷ ಅಧ್ಯಯನಗಳ ವಿಭಾಗಗಳನ್ನು ಸ್ಥಾಪಿಸುವುದು ಮತ್ತು ನಿರ್ವಹಿಸುವುದು;

(ಡಿ) ಕಾಲೇಜುಗಳಲ್ಲಿ ಮತ್ತು ಮನ್ನಣೆ ಪಡೆದ ಸಂಸ್ಥೆಗಳಲ್ಲಿ, ಅಧ್ಯಯನ ಹಾಗೂ ಬೋಧನೆ–ಕಲಿಕೆಯ ಸಮನ್ವಯತೆಗಾಗಿ ವ್ಯವಸ್ಥೆ ಮಾಡುವುದು;

(ಇ) ವಿಶ್ವವಿದ್ಯಾಲಯದ ಒಳಗೆ, ಅದರ ಸಂಯೋಜಿತ ಕಾಲೇಜುಗಳಲ್ಲಿ ಮತ್ತು ಮನ್ನಣೆ ನೀಡಲಾದ ಸಂಸ್ಥೆಗಳಲ್ಲಿ ಸಂಶೋಧನೆ ಮತ್ತು ಇತರ ವಿಶೇಷ ಅಧ್ಯಯನಗಳಿಗೆ ಹಾಗೂ ಕಾರ್ಯಚಟುವಟಿಕೆಗಳಿಗೆ ಪ್ರೋತ್ಸಾಹ ನೀಡಲು ಸ್ಕೀಂಗಳನ್ನು ರೂಪಿಸುವುದು ಮತ್ತು ಇದನ್ನು ಕೈಗೊಳ್ಳಲು ಸೂಕ್ತ ಉಪಬಂಧಗಳನ್ನು ಕಲ್ಪಿಸುವುದು ಅಷ್ಟೇ ಅಲ್ಲದೆ ಅದರ ಫಲಿತಾಂಶವನ್ನು ಪ್ರಸಾರ ಮಾಡುವುದು;

(ಎಫ್) ವ್ಯಾಸಂಗ ವಿಭಾಗಗಳಿಗೆ ವಿಷಯಗಳನ್ನು ಹಂಚಿಕೆ ಮಾಡಲು ಮತ್ತು ವ್ಯಾಸಂಗ ವಿಭಾಗಗಳಿಗೆ ತನ್ನದೇ ಆದ ಸದಸ್ಯರುಗಳನ್ನು ನೇಮಿಸುವುದಕ್ಕೆ ಪ್ರಸ್ತಾವನೆಗಳನ್ನು ಮಾಡುವುದು;

(ಜಿ) ವಿಶ್ವವಿದ್ಯಾಲಯಕ್ಕೆ ಅಗತ್ಯವಿರುವ ಪ್ರಾಧ್ಯಾಪಕರುಗಳ, ಸಹ ಪ್ರಾಧ್ಯಾಪಕರುಗಳ ಅಥವಾ ಸಹಾಯಕ ಪ್ರಾಧ್ಯಾಪಕರುಗಳ ಅಥವಾ ಉಪನ್ಯಾಸಕರ ಮತ್ತು ಇತರ ಬೋಧಕರ ಹುದ್ದೆಗಳನ್ನು ಸ್ಥಾಪನೆ ಮಾಡುವುದಕ್ಕಾಗಿ ಮತ್ತು ಅಂಥ ಹುದ್ದೆಗಳ ಕರ್ತವ್ಯಗಳನ್ನು ನಿಯಮಿಸುವುದಕ್ಕಾಗಿ ಪ್ರಸ್ತಾವನೆಗಳನ್ನು ಮಾಡುವುದು;

(ಎಚ್) ಫೆಲೋಷಿಪ್‌ಗಳು, ಸಂಚಾರಿ ಫೆಲೋಷಿಪ್‌ಗಳು, ವಿದ್ಯಾರ್ಥಿ ವೇತನ, ಶಿಷ್ಯ ವೇತನ ಅಥವಾ ಪ್ರವೇತನಗಳನ್ನು ಸ್ಥಾಪಿಸಿಸುವುದಕ್ಕಾಗಿ ಮತ್ತು ಅವುಗಳನ್ನು ನೀಡುವುದಕ್ಕಾಗಿ ಪ್ರಸ್ತಾವನೆಗಳನ್ನು ಮಾಡುವುದು;

(ಐ) ಸಮಗ್ರವಾದ (broad) ಶೈಕ್ಷಣಿಕ ನೀತಿಗಳನ್ನು ಮತ್ತು ವಿಶ್ವವಿದ್ಯಾಲಯದ ಕಾರ್ಯಕ್ರಮಗಳನ್ನು ಕಾಲಕಾಲಕ್ಕೆ ಪರಿಶೀಲಿಸಲು ಹಾಗೂ ಅವುಗಳನ್ನು ಮತ್ತಷ್ಟು ಸುಧಾರಣೆಗೊಳಿಸಲು ಮತ್ತು ಅಭಿವೃದ್ಧಿಪಡಿಸಲು ಕ್ರಮಗಳನ್ನು ಸೂಚಿಸುವುದು;

(ಜೆ) ಯಾವುದೇ ವಿನಿಯಮವನ್ನು ತಿದ್ದುಪಡಿ ಮಾಡುವುದು ಅಥವಾ ನಿರಸನಗೊಳಿಸುವುದು; ಮತ್ತು

(ಕೆ) ವಿಶ್ವವಿದ್ಯಾಲಯದ ವಿವಿಧ ಪ್ರಾಧಿಕಾರಗಳಿಗೆ ಸದಸ್ಯರುಗಳನ್ನು ನಾಮನಿರ್ದೇಶಿಸುವುದು ಮತ್ತು ಈ ಅಧಿನಿಯಮ ಅಥವಾ ಅದರ ಅಡಿಯಲ್ಲಿ ರಚಿಸಿದ ಪರಿನಿಯಮಗಳು, ಆರ್ಡಿನೆನ್ಸ್‌ಗಳು ಅಥವಾ ವಿನಿಯಮಗಳಿಂದ ಅದಕ್ಕೆ ಪ್ರದಾನ ಮಾಡಬಹುದಾದ ಅಂಥ ಇತರ ಅಧಿಕಾರಗಳನ್ನು ಚಲಾಯಿಸುವುದು ಮತ್ತು ಅದರ ಮೇಲೆ ವಿಧಿಸಬಹುದಾದ ಅಂಥ ಇತರ ಪ್ರಕಾರ್ಯಗಳು ಮತ್ತು ಕರ್ತವ್ಯಗಳನ್ನು ನೆರವೇರಿಸುವುದು.

27. ಹಣಕಾಸು ಸಮಿತಿ.– (1) ವಿಶ್ವವಿದ್ಯಾಲಯವು ಈ ಮುಂದಿನ ಸದಸ್ಯರನ್ನು ಒಳಗೊಂಡ ಒಂದು ಹಣಕಾಸು ಸಮಿತಿಯನ್ನು ಹೊಂದಿರತಕ್ಕದ್ದು, ಎಂದರೆ:–

(ಎ)	ಕುಲಪತಿ	–	ಅಧ್ಯಕ್ಷ
(ಬಿ)	ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಅಥವಾ ಪ್ರಧಾನ ಕಾರ್ಯದರ್ಶಿ ಅಥವಾ ಕಾರ್ಯದರ್ಶಿ, ಆರ್ಥಿಕ ಇಲಾಖೆ ಅಥವಾ ಉಪಕಾರ್ಯದರ್ಶಿಯ ದರ್ಜೆಗಿಂತ ಕಡಿಮೆಯಿಲ್ಲದ ದರ್ಜೆಯ ಆತನ ನಾಮನಿರ್ದೇಶಿತ	–	ಸದಸ್ಯರು
(ಸಿ)	ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಅಥವಾ ಪ್ರಧಾನ ಕಾರ್ಯದರ್ಶಿ ಅಥವಾ ಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾಖೆ ಅಥವಾ ಉಪ ಕಾರ್ಯದರ್ಶಿಯ ದರ್ಜೆಗಿಂತ ಕಡಿಮೆಯಿಲ್ಲದ ದರ್ಜೆಯ ಆತನ ನಾಮನಿರ್ದೇಶಿತ	–	ಸದಸ್ಯರು
(ಡಿ)	ಕುಲಪತಿಯು ಸಲ್ಲಿಸಿದ ಪಟ್ಟಿಯಿಂದ ಕುಲಾಧಿಪತಿಯು ನಾಮನಿರ್ದೇಶಿಸಿದ ವಿಶ್ವವಿದ್ಯಾನಿಲಯದ ಹಣಕಾಸು ಅಥವಾ ಲೆಕ್ಕಪತ್ರಗಳ ಸೇವೆಯಲ್ಲಿರುವ ಒಬ್ಬ ಪರಿಣಿತ	–	ಸದಸ್ಯರು
(ಇ)	ಕುಲಪತಿಯು ನಾಮನಿರ್ದೇಶಿಸಿದ ಕಾರ್ಯನಿರ್ವಾಹಕ ಪರಿಷತ್ತಿನ ಒಬ್ಬ ಸದಸ್ಯ	–	ಸದಸ್ಯರು
(ಎಫ್)	ಕುಲಸಚಿವರು	–	ಸದಸ್ಯರು
(ಜಿ)	ಹಣಕಾಸು ಅಧಿಕಾರಿ	–	ಕಾರ್ಯದರ್ಶಿ

(2) ವಿಶ್ವವಿದ್ಯಾಲಯದ ಹಣಕಾಸು ಸುಸ್ಥಿತಿ ಮತ್ತು ಶಿಸ್ತನ್ನು ನಿರ್ವಹಿಸುವ ಜವಾಬ್ದಾರಿಯು ಹಣಕಾಸು ಸಮಿತಿಯದ್ದಾಗಿರತಕ್ಕದ್ದು.

(3) ಹಣಕಾಸು ಸಮಿತಿಯು, ಶೈಕ್ಷಣಿಕ ವರ್ಷದಲ್ಲಿ ಕನಿಷ್ಠಪಕ್ಷ ನಾಲ್ಕು ಬಾರಿ ಸಭೆ ಸೇರತಕ್ಕದ್ದು ಮತ್ತು ಎರಡು ನಿರಂತರ ಸಭೆಗಳ ನಡುವಿನ ಅವಧಿಯು ಹದಿನೈದು ವಾರಗಳನ್ನು ಮೀರತಕ್ಕದ್ದಲ್ಲ.

(4) ಹಣಕಾಸು ಸಮಿತಿಯು ಈ ಮುಂದಿನ ಅಧಿಕಾರಗಳು, ಪ್ರಕಾರ್ಯಗಳು ಮತ್ತು ಕರ್ತವ್ಯಗಳನ್ನು ಹೊಂದಿರತಕ್ಕದ್ದು, ಎಂದರೆ:–

(ಎ) ವಿಶ್ವವಿದ್ಯಾನಿಲಯದ ವಾರ್ಷಿಕ ಬಜೆಟ್ ಅಂದಾಜುಗಳನ್ನು ಮತ್ತು ವಾರ್ಷಿಕ ಲೆಕ್ಕಪತ್ರಗಳನ್ನು ಪರಿಶೀಲಿಸುವುದು, ವಾರ್ಷಿಕ ಲೆಕ್ಕಪರಿಶೋಧನೆಯ ವರದಿಗಳನ್ನು ಪುನರವಲೋಕಿಸುವುದು ಮತ್ತು ಅದರ ಮೇಲೆ ಶಿಫಾರಸ್ಸುಗಳನ್ನು ಮಾಡುವುದು;

(ಬಿ) ವಿಶ್ವವಿದ್ಯಾನಿಲಯದಲ್ಲಿ ಹುದ್ದೆಗಳ ಸೃಜನೆ, ಮೇಲ್ದರ್ಜೆಗೇರಿಸುವುದು ಮತ್ತು ರದ್ದಿಯಾತಿಯೂ ಒಳಗೊಂಡಂತೆ, ಬಜೆಟ್‌ನಲ್ಲಿ ಅವಕಾಶವನ್ನು ಒದಗಿಸಿಲ್ಲದ ಮತ್ತು ಬಜೆಟ್‌ನಲ್ಲಿ ಒದಗಿಸಿದ ಮೊಬಲಗಿಗಿಂತ ಹೆಚ್ಚುವರಿ ವೆಚ್ಚವನ್ನು ಒಳಗೊಂಡ ವಿಶ್ವವಿದ್ಯಾನಿಲಯದ ಎಲ್ಲ ಪ್ರಸ್ತಾವಗಳನ್ನು ಪರಿಶೀಲಿಸುವುದು ಮತ್ತು ಅವುಗಳ ಮೇಲೆ ಶಿಫಾರಸ್ಸುಗಳನ್ನು ಮಾಡುವುದು;

(ಸಿ) ವಿಶ್ವವಿದ್ಯಾನಿಲಯಕ್ಕೆ ನಿಧಿಗಳನ್ನು ಸಂಗ್ರಹಿಸುವುದಕ್ಕಾಗಿ ಪ್ರಾಯೋಗಿಕ ಮತ್ತು ಅನುಷ್ಠಾನಸಾಧ್ಯವಿರುವ ಕಾರ್ಯತಂತ್ರಗಳನ್ನು ಯೋಜಿಸುವುದು ಮತ್ತು ವಿಶ್ವವಿದ್ಯಾನಿಲಯದ ವಶದಲ್ಲಿರುವ ಹೆಚ್ಚುವರಿ ನಿಧಿಗಳ ಹೂಡಿಕೆಗೆ ಸೂಕ್ತ ಯೋಜನೆಗಳನ್ನು ಸಿದ್ಧಪಡಿಸುವುದು ಹಾಗೂ ಅದರ ಮೇಲೆ ಶಿಫಾರಸ್ಸುಗಳನ್ನು ಮಾಡುವುದು;

(ಡಿ) ವಿಶ್ವವಿದ್ಯಾಲಯವು ಭರಿಸಬೇಕಾದ ಪ್ರಸ್ತಾವನೆಗಳುಳ್ಳ ಎಲ್ಲಾ ವೆಚ್ಚಗಳನ್ನು ಪರಿಶೀಲಿಸುವುದು ಮತ್ತು ಅನುಮೋದಿಸುವುದು, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ, 1999ರ (2000ರ ಕರ್ನಾಟಕ ಅಧಿನಿಯಮ 29) ಅಡಿಯಲ್ಲಿ ನಿಯಮಿಸಲಾದ ನಿಯಮಗಳೊಂದಿಗೆ ಕೈಗೊಳ್ಳಲಾಗಿದೆಯೇ ಎಂಬುದನ್ನು ಸಹ ಖಚಿತಪಡಿಸಿಕೊಳ್ಳುವುದು;

(ಇ) ಪರಿನಿಯಮಗಳ ಮೂಲಕ ನಿಯಮಿಸಬಹುದಾದ ಅಂಥ ಇತರ ಪ್ರಕಾರ್ಯಗಳು:

ಪರಂತು, ಮೇಲಿನ ಶಿಫಾರಸುಗಳನ್ನು ಕಾರ್ಯನಿರ್ವಾಹಕ ಪರಿಷತ್ತಿನ ಸಭೆಗಳಲ್ಲಿ ಅದರ ಪರಿಶೀಲನೆಗಾಗಿ ಮಂಡಿಸತಕ್ಕದ್ದು.

(5) (2)ನೇ ಉಪಪ್ರಕರಣದಲ್ಲಿ ಏನೇ ಒಳಗೊಂಡಿದ್ದರೂ, ಕುಲಪತಿಯು, ತುರ್ತು ಸಂದರ್ಭಗಳಲ್ಲಿ ಮತ್ತು ಲಿಖಿತದಲ್ಲಿ ಕಾರಣಗಳನ್ನು ದಾಖಲಿಸಿ, ಹಣಕಾಸು ಸಮಿತಿಯ ಒಪ್ಪಿಗೆ ಇಲ್ಲದೆ, ಬಜೆಟ್ಟಿನಲ್ಲಿ ಹಣ ಒದಗಿಸಿಲ್ಲದ ಅಥವಾ ಬಜೆಟ್ಟಿನಲ್ಲಿ ಒದಗಿಸಿದ ಹಣಕ್ಕಿಂತ ಹೆಚ್ಚುವರಿಯಾದ ಯಾವುದೇ ಒಂದು ಸಂದರ್ಭದಲ್ಲಿ, ಪರಿನಿಯಮಗಳಲ್ಲಿ ನಿರ್ದಿಷ್ಟಪಡಿಸಿದ ಮಿತಿಯವರೆಗೆ ಯಾವುದೇ ವೆಚ್ಚವನ್ನು ಭರಿಸಬಹುದು:

ಪರಂತು, ಅಂಥ ವೆಚ್ಚವನ್ನು ಸ್ಥಿರೀಕರಣಕ್ಕಾಗಿ ಹಣಕಾಸು ಸಮಿತಿಯ ಮುಂದಿನ ಸಭೆಯಲ್ಲಿ ಮಂಡಿಸತಕ್ಕದ್ದು:

ಮತ್ತು ಪರಂತು, ಕುಲಪತಿಯವರ ಮೂಲಕ ಆದ ವೆಚ್ಚದ ಭರಿಸುವಿಕೆಯು ತೃಪ್ತಿಕರವಾಗಿಲ್ಲದಿದ್ದಲ್ಲಿ, ಹಣಕಾಸು ಸಮಿತಿಯು ಅದನ್ನು ಕುಲಾಧಿಪತಿಯವರಿಗೆ ಉಲ್ಲೇಖಿಸಬಹುದು, ಈ ವಿಷಯದಲ್ಲಿ ಅವರ ತೀರ್ಮಾನವೇ ಅಂತಿಮವಾಗಿರತಕ್ಕದ್ದು.

28. **ಮೂಲಸೌಕರ್ಯ ಅಭಿವೃದ್ಧಿ ಮತ್ತು ಖರೀದಿ ಸಮಿತಿ.**– (1) ರಾಜ್ಯ ಸರ್ಕಾರವು ಕಾಲಬದ್ಧ ವಿಧಾನದಲ್ಲಿ ರಚಿಸಿದ ಅಂಥ ನಿಯಮಗಳಿಗೆ ಒಳಪಟ್ಟು ವಿಶ್ವವಿದ್ಯಾನಿಲಯದ ಸಣ್ಣ ಮತ್ತು ದೊಡ್ಡ ಮೂಲಸೌಕರ್ಯ ಅಭಿವೃದ್ಧಿಯನ್ನು ಮತ್ತು ಖರೀದಿಗಳು/ನಿರ್ವಹಣಾ ಚಟುವಟಿಕೆಗಳನ್ನು (ವಾಹನಗಳ ಖರೀದಿ, ಗ್ಯಾಡ್ಜೆಟ್‌ಗಳು, ಉಪಕರಣಗಳು, ಪೀಠೋಪಕರಣ ಅಥವಾ ಯಾವುದೇ ಇತರ ನಿರ್ವಹಣಾ ಸಾಮಗ್ರಿಗಳು) ದಕ್ಷತೆಯಿಂದ ಕೈಗೊಳ್ಳಲು ಮೂಲಸೌಕರ್ಯ ಅಭಿವೃದ್ಧಿ ಮತ್ತು ಖರೀದಿ ಸಮಿತಿಯನ್ನು ರಚಿಸತಕ್ಕದ್ದು.

(2) ಮೂಲಸೌಕರ್ಯ ಅಭಿವೃದ್ಧಿ ಮತ್ತು ಖರೀದಿ ಸಮಿತಿಯು ಈ ಮುಂದಿನ ಸದಸ್ಯರನ್ನು ಒಳಗೊಂಡಿರತಕ್ಕದ್ದು, ಎಂದರೆ:–

(ಎ) ಕುಲಪತಿ – ಅಧ್ಯಕ್ಷ

(ಬಿ) ಉನ್ನತ ಶಿಕ್ಷಣ ಇಲಾಖೆಯ ಪ್ರಧಾನ ಕಾರ್ಯದರ್ಶಿ ಅಥವಾ ಆತನ ನಾಮನಿರ್ದೇಶಿತ – ಸದಸ್ಯ

(ಸಿ) ವಿಶ್ವವಿದ್ಯಾನಿಲಯವು ಇರುವ ಪ್ರದೇಶದ ಪ್ರಭಾರದಲ್ಲಿರುವ ಲೋಕೋಪಯೋಗಿ ಇಲಾಖೆಯ ಮುಖ್ಯ ಇಂಜಿನಿಯರ್ ಅಥವಾ ಆ ಪ್ರದೇಶದ ಕಾರ್ಯಪಾಲಕ ಇಂಜಿನಿಯರ್ ದರ್ಜೆಗೆ ಕಡಿಮೆಯಿಲ್ಲದ ಆತನ ನಾಮನಿರ್ದೇಶಿತ – ಸದಸ್ಯ

(ಡಿ) ಖಾಸಗಿ ವಲಯದಿಂದ ರಾಜ್ಯ ಸರ್ಕಾರವು ನಾಮನಿರ್ದೇಶಿಸಿದ ಒಬ್ಬ ಸುಪ್ರಸಿದ್ಧ ಸಿವಿಲ್ ಇಂಜಿನಿಯರ್ – ಸದಸ್ಯ

(ಇ) ರಾಜ್ಯದ ಮುಖ್ಯ ವಾಸ್ತುಶಿಲ್ಪಿ ಅಥವಾ ಆತನ ನಾಮನಿರ್ದೇಶಿತ – ಸದಸ್ಯ

(ಎಫ್) ಖಾಸಗಿ ವಲಯದಿಂದ ರಾಜ್ಯ ಸರ್ಕಾರವು ನಾಮನಿರ್ದೇಶಿಸಿದ ಒಬ್ಬ ಸುಪ್ರಸಿದ್ಧ ವಾಸ್ತುಶಿಲ್ಪಿ – ಸದಸ್ಯ

(ಜಿ) ಕುಲಸಚಿವ – ಸದಸ್ಯ

(ಎಚ್) ಹಣಕಾಸು ಅಧಿಕಾರಿ – ಸದಸ್ಯ

(ಐ) ವಿಶ್ವವಿದ್ಯಾನಿಲಯದ ಇಂಜಿನಿಯರ್ – ಕಾರ್ಯದರ್ಶಿ

(3) ಪದನಿಮಿತ್ತ ಸದಸ್ಯರುಗಳನ್ನು ಹೊರತುಪಡಿಸಿ, ಸಮಿತಿಯ ಎಲ್ಲಾ ಸದಸ್ಯರು ಮೂರು ವರ್ಷಗಳ ಅವಧಿಯವರೆಗೆ ಹುದ್ದೆಯನ್ನು ಹೊಂದಿರತಕ್ಕದ್ದು ಮತ್ತು ಎರಡನೇ ಅವಧಿಯ ಸದಸ್ಯತ್ವಕ್ಕಾಗಿ ಅರ್ಹರಾಗಿರತಕ್ಕದ್ದಲ್ಲ.

(4) ಮೂಲಸೌಕರ್ಯ ಅಭಿವೃದ್ಧಿ ಮತ್ತು ಖರೀದಿ ಸಮಿತಿಯ ಕಾರ್ಯನಿರ್ವಹಣೆಗಾಗಿ ನಿಯಮಗಳು ಮತ್ತು ಕಾರ್ಯವಿಧಾನವು ರಾಜ್ಯ ಸರ್ಕಾರವು ನಿಯಮಗಳ ಮೂಲಕ ನಿಯಮಿಸಿದಂತೆ ಇರತಕ್ಕದ್ದು (ವಿಶ್ವವಿದ್ಯಾನಿಲಯವು ಕೈಗೊಳ್ಳುವ ಕಟ್ಟಡಗಳು, ರಸ್ತೆಗಳು ಅಥವಾ ಯಾವುದೇ ಇತರ ಮೂಲಸೌಕರ್ಯದ ಅಂದಾಜುಗಳನ್ನು ರಾಜ್ಯ ಸರ್ಕಾರದ ಲೋಕೋಪಯೋಗಿ ಇಲಾಖೆಯ ಗುಣಮಟ್ಟ ದರಗಳಿಗೆ ಹೊಂದಿಕೆಯಾಗುವ ದರಗಳಲ್ಲಿ ಸಿದ್ಧಪಡಿಸತಕ್ಕದ್ದು).

(5) ಸಮಿತಿಯು, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ, 1999 (2000ರ ಕರ್ನಾಟಕ ಅಧಿನಿಯಮ 29) ಮತ್ತು ರಾಜ್ಯ ಸರ್ಕಾರವು ಈ ಸಂಬಂಧದಲ್ಲಿ ಕಾಲಕಾಲಕ್ಕೆ ರಚಿಸುವ ನಿಯಮಗಳಿಗೆ ಒಳಪಡತಕ್ಕದ್ದು.

29. **ಇತರ ಮಂಡಲಿಗಳು, ಸಮಿತಿಗಳು ಮತ್ತು ಪರಿಷತ್ತುಗಳು.**– ವಿಶ್ವವಿದ್ಯಾನಿಲಯವು, ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಬಹುದಾದ ಅಂಥ ಇತರ ಮಂಡಲಿಗಳನ್ನು, ಸಮಿತಿಗಳನ್ನು ಮತ್ತು ಪರಿಷತ್ತುಗಳನ್ನು ಸ್ಥಾಪಿಸಬಹುದು.

ಅಧ್ಯಾಯ V

ಪರಿನಿಯಮಗಳು, ಆರ್ಡಿನೆನ್ಸ್‌ಗಳು, ವಿನಿಯಮಗಳು ಮತ್ತು ನಿಯಮಗಳು

30. **ಪರಿನಿಯಮಗಳು.**– (1) ಈ ಅಧಿನಿಯಮದ ಉಪಬಂಧಗಳಿಗೊಳಪಟ್ಟು, ಪರಿನಿಯಮಗಳು, ವಿಶ್ವವಿದ್ಯಾಲಯಕ್ಕೆ ಸಂಬಂಧಿಸಿದ ಈ ಮುಂದಿನ ಎಲ್ಲ ಅಥವಾ ಯಾವುವೇ ವಿಷಯಗಳಿಗೆ ಉಪಬಂಧಿಸಬಹುದು, ಎಂದರೆ:–

(i) ವಿಶ್ವವಿದ್ಯಾಲಯದ ಪ್ರಾಧಿಕಾರಗಳ ಮತ್ತು ವಿಶ್ವವಿದ್ಯಾಲಯದ ಪ್ರಾಧಿಕಾರಗಳೆಂದು ಕಾಲಕಾಲಕ್ಕೆ ಘೋಷಿಸಬಹುದಾದ ಅಂಥ ಇತರ ನಿಕಾಯಗಳ ರಚನೆ, ಅಧಿಕಾರಗಳು, ಪ್ರಕಾರ್ಯಗಳು ಮತ್ತು ಕರ್ತವ್ಯಗಳು;

(ii) ಮೊದಲಿನ ಸದಸ್ಯರು ಪದದಲ್ಲಿ ಮುಂದುವರಿಯುವುದು ಒಳಗೊಂಡಂತೆ ಸದರಿ ಪ್ರಾಧಿಕಾರಗಳ ಅಥವಾ ನಿಕಾಯಗಳ ಸದಸ್ಯರ ನೇಮಕಾತಿ, ಅವರು ಪದದಲ್ಲಿ ಮುಂದುವರೆಯುವಿಕೆ ಅಥವಾ ಹಿಂದೆ ಪಡೆಯುವುದು ಅಥವಾ ತೆಗೆದು ಹಾಕುವುದು ಮತ್ತು ಸದಸ್ಯರ ಖಾಲಿ ಸ್ಥಾನಗಳನ್ನು ತುಂಬುವುದು ಹಾಗೂ ಪ್ರಾಧಿಕಾರಗಳಿಗೆ ಅಥವಾ ನಿಕಾಯಗಳಿಗೆ ಸಂಬಂಧಪಟ್ಟಂತೆ ಯಾವ ವಿಷಯಗಳಿಗೆ ಉಪಬಂಧಿಸುವುದು ಅವಶ್ಯವಾಗಬಹುದೋ ಅಥವಾ ಅಪೇಕ್ಷಣೀಯವಾಗಬಹುದೋ ಆ ಎಲ್ಲ ಇತರ ವಿಷಯಗಳ ಬಗ್ಗೆ ಉಪಬಂಧಿಸುವುದು;

(iii) ಗೌರವ ಪದವಿಗಳನ್ನು ಪ್ರದಾನ ಮಾಡುವುದು;

(iv) ಪದವಿ ಮತ್ತು ಡಿಪ್ಲೋಮಾಗಳನ್ನು ಪ್ರದಾನ ಮಾಡಲು ಘಟಿಕೋತ್ಸವಗಳನ್ನು ನಡೆಸುವುದು ಮತ್ತು ತುರ್ತು ಸಂದರ್ಭದಲ್ಲಿ ಘಟಿಕೋತ್ಸವಕ್ಕೆ ಮೊದಲು ಪದವಿ ಪ್ರಮಾಣಪತ್ರಗಳನ್ನು ನೀಡುವುದು;

(v) ಪದವಿಗಳ, ಡಿಪ್ಲೋಮಾಗಳ, ಸರ್ಟಿಫಿಕೇಟ್‌ಗಳ ಹಾಗೂ ಇತರ ಶೈಕ್ಷಣಿಕ ಮನ್ನಣೆಗಳನ್ನು ಹಿಂತೆಗೆದುಕೊಳ್ಳುವುದು;

(vi) ವ್ಯಾಸಂಗ ವಿಭಾಗಗಳು, ವಿಭಾಗಗಳು, ವಿದ್ಯಾರ್ಥಿ ನಿಲಯಗಳ ಸ್ಥಾಪನೆ, ನಿರ್ವಹಣೆ ಮತ್ತು ಅವುಗಳನ್ನು ರದ್ದುಪಡಿಸುವುದು;

(vii) ಫೆಲೋಶಿಪ್‌ಗಳು, ವಿದ್ಯಾರ್ಥಿ ವೇತನಗಳು, ಶಿಷ್ಯ ವೇತನಗಳು, ಪ್ರವೇತನಗಳು, ಪದಕಗಳು ಮತ್ತು ಪಾರಿತೋಷಕಗಳ ಸ್ಥಾಪನೆ;

(viii) ವಿಶ್ವವಿದ್ಯಾನಿಲಯ ವಿಭಾಗಗಳು ಮತ್ತು ಘಟಕ ಕಾಲೇಜುಗಳ ಗೌರವ ಅಥವಾ ವಿಶ್ರಾಂತ ಅಥವಾ ಹಂಗಾಮಿ (adjunct) ಪ್ರಾಧ್ಯಾಪಕರನ್ನೊಳಗೊಂಡ ಪ್ರಾಧ್ಯಾಪಕರು, ಸಹಪ್ರಾಧ್ಯಾಪಕರು, ಸಹಾಯಕ ಪ್ರಾಧ್ಯಾಪಕರು, ಉಪನ್ಯಾಸಕರು ಮತ್ತು ಇತರ ಲಿಪಿಕ ಮತ್ತು ಬೋಧಕೇತರ ಹುದ್ದೆಗಳ ಸೃಜನೆ, ಅಮಾನತ್ತು ಅಥವಾ ರದ್ದತಿ;

(ix) ವಿಶ್ವವಿದ್ಯಾಲಯದಲ್ಲಿ ಅಧ್ಯಾಪಕರ ನೇಮಕಾತಿಯ ವಿಧಾನ:

ಪರಂತು, ವಿಶ್ವವಿದ್ಯಾನಿಲಯ ಅನುದಾನ ಆಯೋಗದ ವೇತನ ಶ್ರೇಣಿಗಳನ್ನು ಪಡೆಯುತ್ತಿರುವವರನ್ನು ಹೊರತುಪಡಿಸಿ, ನೌಕರರ ವೇತನ ಶ್ರೇಣಿಗಳು, ರಾಜ್ಯ ಸರ್ಕಾರಿ ನೌಕರರಿಗೆ ಅನ್ವಯವಾಗುವ ವೇತನ ಶ್ರೇಣಿಗಳಿಗೆ ಅನುಗುಣವಾಗಿರತಕ್ಕದ್ದು.

(x) ಮರಣ ಶಾಸನ ಮೂಲಕದ ಸ್ವತ್ತಿನ, ದೇಣಿಗೆಗಳ ಮತ್ತು ದತ್ತಿಗಳ ಸ್ವೀಕಾರ ಮತ್ತು ನಿರ್ವಹಣೆ;

(xi) ವಿಶ್ವವಿದ್ಯಾನಿಲಯದಲ್ಲಿ ಪ್ರವೇಶ ಮತ್ತು ಶುಲ್ಕ ಸ್ವರೂಪ ಹಾಗೂ ವಿಶ್ವವಿದ್ಯಾನಿಲಯದ ಪರೀಕ್ಷೆಗಳು, ಪದವಿಗಳು ಮತ್ತು ಡಿಪ್ಲೋಮಾಗಳ ಪ್ರವೇಶಗಳಿಗಾಗಿ ನಿಯಂತ್ರಣ;

(xii) ವಿಶ್ವವಿದ್ಯಾನಿಲಯವು ಸಲ್ಲಿಸಿದ ಸೇವೆಗಳಿಗಾಗಿ ವಿಧಿಸಬೇಕಾದ ಶುಲ್ಕಗಳು;

(xiii) ವಿಶ್ವವಿದ್ಯಾನಿಲಯದ ಪ್ರಾಯೋಜಿತ ಸಂಶೋಧನೆ, ಸಮಾಲೋಚನೆ, ಪೇಟೆಂಟುಗಳು ಮತ್ತು ಬೌದ್ಧಿಕ ಸ್ವತ್ತು ಹಕ್ಕುಗಳು, ಮುಂದುವರಿಕೆ ಶಿಕ್ಷಣ ಹಾಗೂ ಇತರ ವಿಸ್ತರಣಾ ಸೇವೆಗಳ ವಿಧಾನ ಮತ್ತು ನಿರ್ವಹಣೆ;

(xiv) ಉಪಲಬ್ಧಿಗಳನ್ನು ಒಳಗೊಂಡಂತೆ ವಿಶ್ವವಿದ್ಯಾನಿಲಯದ ನೌಕರರ ಜೇಷ್ಠತೆಯ ನಿರ್ಧರಣೆಯನ್ನು ಒಳಗೊಂಡ ಸೇವಾ ಷರತ್ತುಗಳು; ಮತ್ತು

(xv) ಈ ಅಧಿನಿಯಮದ ಮೂಲಕ ಅಥವಾ ಪರಿನಿಯಮಗಳ ಮೂಲಕ ಉಪಬಂಧಿಸಬೇಕಾದ ಅಥವಾ ಉಪಬಂಧಿಸಬಹುದಾದ ಎಲ್ಲ ಇತರ ವಿಷಯಗಳು.

(2) ಪರಿನಿಯಮಗಳು, ಕುಲಾಧಿಪತಿಯವರ ಅನುಮೋದನೆಯ ದಿನಾಂಕದಿಂದ ಅಥವಾ ಕುಲಾಧಿಪತಿಯವರು ನಿರ್ದೇಶಿಸಬಹುದಾದ ಇತರ ಅಂಥ ದಿನಾಂಕದಿಂದ ಮಾತ್ರ ಜಾರಿಗೆ ಬರತಕ್ಕದ್ದು.

(3) ಉಪಲಬ್ಧಿಗಳು ಒಳಗೊಂಡಂತೆ ನೌಕರರ ಸೇವಾಷರತ್ತುಗಳನ್ನು ನಿಯಂತ್ರಿಸುವುದನ್ನು ಒಳಗೊಂಡ ಪರಿನಿಯಮಗಳು ರಾಜ್ಯ ಸರ್ಕಾರದ ಕಾರ್ಯನೀತಿಗೆ ಸುಸಂಗತವಾಗಿರತಕ್ಕದ್ದು.

31. ಪರಿನಿಯಮಗಳ ರಚನೆ ಮತ್ತು ಅವುಗಳ ಅಧಿನಿಯಮಿತಿ.– (1) ಕಾರ್ಯನಿರ್ವಾಹಕ ಪರಿಷತ್ತು ಕಾಲಕಾಲಕ್ಕೆ ಹೊಸ ಅಥವಾ ಹೆಚ್ಚುವರಿ ಪರಿನಿಯಮಗಳನ್ನು ರಚಿಸಬಹುದು ಅಥವಾ ಮೇಲೆ ಉಲ್ಲೇಖಿಸಿದಂತೆ ಪರಿನಿಯಮಗಳನ್ನು ತಿದ್ದುಪಡಿ ಮಾಡಬಹುದು ಅಥವಾ ನಿರಸನಗೊಳಿಸಬಹುದು:

ಪರಂತು, ವಿಶ್ವವಿದ್ಯಾಲಯದ ಯಾವುದೇ ಪ್ರಾಧಿಕಾರದ ಸ್ಥಾನಮಾನ, ಅಧಿಕಾರಗಳು ಅಥವಾ ಸ್ಥಾಪನೆಗೆ ಪರಿಣಾಮ ಬೀರುವ ಯಾವುದೇ ಪರಿನಿಯಮಗಳನ್ನು ಅಂಥ ಪ್ರಾಧಿಕಾರಕ್ಕೆ ಉದ್ದೇಶಿತ ಬದಲಾವಣೆಗಳ ಮೇಲೆ ಅಭಿಪ್ರಾಯವನ್ನು ಲಿಖಿತದಲ್ಲಿ ಹೇಳಿಕೊಳ್ಳುವ ಅವಕಾಶವನ್ನು ನೀಡಿದ ಹೊರತು ಕಾರ್ಯನಿರ್ವಾಹಕ ಪರಿಷತ್ತು ಪರಿನಿಯಮಗಳ ರಚನೆ,

ತಿದ್ದುಪಡಿ ಅಥವಾ ನಿರಸನವನ್ನು ಮಾಡತಕ್ಕದ್ದಲ್ಲ ಮತ್ತು ಹಾಗೆ ನೀಡಿದ ಯಾವುದೇ ಅಭಿಪ್ರಾಯವನ್ನು ಕಾರ್ಯನಿರ್ವಾಹಕ ಪರಿಷತ್ತು ಪರಿಗಣಿಸತಕ್ಕದ್ದು.

(2) ಕಾರ್ಯನಿರ್ವಾಹಕ ಪರಿಷತ್ತು ಪರಿನಿಯಮದ ಕರಡನ್ನು ತಾನಾಗಿಯೇ ಅಥವಾ ವಿದ್ಯಾವಿಷಯಕ ಪರಿಷತ್ತು ಮಾಡಿರುವ ಪ್ರಸ್ತಾವನೆಯ ಮೇರೆಗೆ ಪರಿಗಣನೆಗೆ ತೆಗೆದುಕೊಳ್ಳಬಹುದು. ವಿದ್ಯಾವಿಷಯಕ ಪರಿಷತ್ತು ಕರಡಿಗಾಗಿ ಪ್ರಸ್ತಾವನೆಯನ್ನು ಸಲ್ಲಿಸದಿದ್ದಾಗ, ಅದನ್ನು ಪರಿಗಣಿಸುವ ಮೊದಲು ಕಾರ್ಯನಿರ್ವಾಹಕ ಪರಿಷತ್ತು ವಿದ್ಯಾವಿಷಯಕ ಪರಿಷತ್ತಿನ ಅಭಿಪ್ರಾಯವನ್ನು ಪಡೆಯತಕ್ಕದ್ದು.

(3) ಹಣಕಾಸು ತೊಡಕುಗಳನ್ನು ಒಳಗೊಂಡ ಅಂಥ ಪರಿನಿಯಮಗಳ ಸಂಬಂಧದಲ್ಲಿ ಹಣಕಾಸು ಸಮಿತಿಯ ಅಭಿಪ್ರಾಯವನ್ನು ಕಾರ್ಯನಿರ್ವಾಹಕ ಪರಿಷತ್ತು ಪಡೆಯತಕ್ಕದ್ದು.

(4) ಕಾರ್ಯನಿರ್ವಾಹಕ ಪರಿಷತ್ತು ಪರಿನಿಯಮದ ಕರಡನ್ನು ಪರಿಗಣನೆಗಾಗಿ ತೆಗೆದುಕೊಳ್ಳುವಾಗ ಅದು ಅಗತ್ಯವೆಂದು ಭಾವಿಸಿದರೆ ವಿಶ್ವವಿದ್ಯಾನಿಲಯದ ಯಾವುದೇ ಅಧಿಕಾರಿ, ಪ್ರಾಧಿಕಾರ ಅಥವಾ ನಿಕಾಯದ ಅಭಿಪ್ರಾಯವನ್ನು ಸಹ ಪಡೆಯಬಹುದಾಗಿದೆ.

(5) ಪ್ರತಿಯೊಂದು ಹೊಸ ಪರಿನಿಯಮ ಅಥವಾ ಪರಿನಿಯಮಗಳಿಗೆ ಹೆಚ್ಚುವರಿ ಸೇರಿಸುವಿಕೆ ಅಥವಾ ಪರಿನಿಯಮಕ್ಕೆ ಮಾಡಿದ ಯಾವುದೇ ತಿದ್ದುಪಡಿಯನ್ನು ಅಥವಾ ಅದರ ನಿರಸನವನ್ನು ಕಾರ್ಯನಿರ್ವಾಹಕ ಪರಿಷತ್ತು ಕುಲಾಧಿಪತಿಯವರಿಗೆ ಅವರ ಒಪ್ಪಿಗೆಗಾಗಿ ಸಲ್ಲಿಸತಕ್ಕದ್ದು. ಅವರು ಒಪ್ಪಿಗೆಯನ್ನು ನೀಡಬಹುದು ಅಥವಾ ಒಪ್ಪಿಗೆಯನ್ನು ಕಾಯ್ದಿರಿಸಬಹುದು ಅಥವಾ ಎರಡು ತಿಂಗಳೊಳಗಾಗಿ ಮರುಪರಿಗಣನೆಗೆ ಕಾರ್ಯನಿರ್ವಾಹಕ ಪರಿಷತ್ತಿಗೆ ಹಿಂದಿರುಗಿಸಬಹುದು.

(6) ಕುಲಾಧಿಪತಿಯು ಒಪ್ಪಿಗೆ ನೀಡದ ಹೊರತು ಯಾವುದೇ ಪರಿನಿಯಮವು ಸಿಂಧುವಾಗತಕ್ಕದ್ದಲ್ಲ.

32. ಆರ್ಡಿನೆನ್ಸ್‌ಗಳು.– (1) ಈ ಅಧಿನಿಯಮದ ಮತ್ತು ಪರಿನಿಯಮಗಳ ಉಪಬಂಧಗಳಿಗೊಳಪಟ್ಟು, ಆರ್ಡಿನೆನ್ಸ್‌ಗಳು ಈ ಮುಂದಿನ ಎಲ್ಲ ಅಥವಾ ಯಾವುವೇ ವಿಷಯಗಳ ಬಗ್ಗೆ ಉಪಬಂಧಿಸಬಹುದು, ಎಂದರೆ:–

(ಎ) ವಿಶ್ವವಿದ್ಯಾನಿಲಯಕ್ಕೆ ವಿದ್ಯಾರ್ಥಿಗಳಿಗೆ ಪ್ರವೇಶ ನೀಡುವುದು;

(ಬಿ) ವಿಶ್ವವಿದ್ಯಾನಿಲಯದ ಎಲ್ಲ ಪದವಿಗಳ, ಡಿಪ್ಲೊಮಾಗಳ ಮತ್ತು ಪ್ರಮಾಣಪತ್ರಗಳ ಬಗ್ಗೆ ವ್ಯಾಸಂಗ ಕ್ರಮಗಳು;

(ಸಿ) ವಿದ್ಯಾರ್ಥಿಗಳ ಸಾಮರ್ಥ್ಯವನ್ನು ಅಳೆಯಲು ಸೆಮಿಸ್ಟರ್ ವ್ಯವಸ್ಥೆ, ಆಯ್ಕೆ ಆಧಾರಿತ ಶ್ರೇಣಿ ವ್ಯವಸ್ಥೆ, ಆಧುನಿಕ ಶ್ರೇಣಿ ನೀಡಿಕೆ ಪದ್ಧತಿಗಳು ಮತ್ತು ಇತರ ನಾವಿನ್ಯತೆಗಳನ್ನು ಜಾರಿಗೊಳಿಸುವುದು.

(ಡಿ) ಪದವಿಗಳು, ಡಿಪ್ಲೊಮಾಗಳು ಮತ್ತು ಪ್ರಮಾಣಪತ್ರಗಳು ಹಾಗೂ ಅವುಗಳಿಗಾಗಿ ಇತರ ಅಗತ್ಯತೆಗಳು ಮತ್ತು ಅವುಗಳನ್ನು ನೀಡುವುದಕ್ಕೆ ಮತ್ತು ಪಡೆಯುವುದಕ್ಕೆ ಸಂಬಂಧಿಸಿದಂತೆ ಕೈಗೊಳ್ಳಬೇಕಾದ ಕ್ರಮಗಳು;

(ಇ) ಫೆಲೋಶಿಪ್‌ಗಳು, ವಿದ್ಯಾರ್ಥಿ ವೇತನಗಳು, ಶಿಷ್ಯ ವೇತನಗಳು, ಪ್ರವೇತನಗಳು, ಪದಕಗಳು ಮತ್ತು ಪಾರಿತೋಷಕಗಳನ್ನು ನೀಡುವುದಕ್ಕೆ ಸಂಬಂಧಿಸಿದ ಷರತ್ತುಗಳು;

(ಎಫ್) ಪರೀಕ್ಷಾ ನಿಕಾಯಗಳು, ಪರೀಕ್ಷಕರು, ಮತ್ತು ಮಾಡರೇಟರುಗಳ ಪದಾವಧಿ ಹಾಗೂ ಕರ್ತವ್ಯಗಳು ಸೇರಿದಂತೆ, ಪರೀಕ್ಷೆಗಳನ್ನು ನಡೆಸುವುದು;

(ಜಿ) ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳ ನಿವಾಸದ ಬಗ್ಗೆ ಷರತ್ತುಗಳು;

(ಹೆಚ್) ವಿದ್ಯಾರ್ಥಿನಿಯರ ಮತ್ತು ವಿಕಲ ಚೇತನ ವಿದ್ಯಾರ್ಥಿಗಳ ನಿವಾಸ, ಶಿಸ್ತು ಮತ್ತು ಬೋಧನೆಗೆ ಸಂಬಂಧಿಸಿದಂತೆ ಮಾಡಬಹುದಾದ ವಿಶೇಷ ವ್ಯವಸ್ಥೆಗಳು, ಏನಾದರೂ ಇದ್ದರೆ, ಅವುಗಳನ್ನು ಮತ್ತು ಅವಶ್ಯವಿರುವಲ್ಲಿ ಅವರಿಗಾಗಿ ವಿಶೇಷ ವ್ಯಾಸಂಗ ಕ್ರಮಗಳನ್ನು ನಿಯಮಿಸುವುದು;

(ಜೆ) ವಿಶ್ವವಿದ್ಯಾನಿಲಯವು ನಿರ್ವಹಿಸದೆ ಇರುವ ವಿದ್ಯಾರ್ಥಿನಿಲಯಗಳ ಮನ್ನಣೆಗಾಗಿ ಷರತ್ತುಗಳು;

(ಕೆ) ವಿಶ್ವವಿದ್ಯಾಲಯದಲ್ಲಿ ಇರುವ ವಿದ್ಯಾರ್ಥಿಗಳ ಆರೋಗ್ಯ ಮತ್ತು ಶಿಸ್ತು ಹಾಗೂ ಅವರ ವಿರುದ್ಧ ಶಿಸ್ತು ವ್ಯವಹರಣೆಗಳು;

(ಎಲ್) ಈ ಅಧಿನಿಯಮದ ಅಥವಾ ಪರಿನಿಯಮಗಳ ಮೂಲಕ, ಆರ್ಡಿನೆನ್ಸ್‌ಗಳಿಂದ ಉಪಬಂಧಿಸಬೇಕಾದ ಅಥವಾ ಉಪಬಂಧಿಸಬಹುದಾದ ಇತರ ಎಲ್ಲ ವಿಷಯಗಳು.

(2) ಜಾರಿಯಲ್ಲಿರುವ ವಿನಿಯಮಗಳ ಅಥವಾ ಪರಿನಿಯಮಗಳ ತಿದ್ದುಪಡಿಗಾಗಿ ಯಾವುದೇ ಆರ್ಡಿನೆನ್ಸನ್ನು ರಚಿಸತಕ್ಕದ್ದಲ್ಲ.

33. ಆರ್ಡಿನೆನ್ಸ್‌ಗಳ ರಚನೆಯ ಕಾರ್ಯವಿಧಾನ.– (1) ಕಾರ್ಯನಿರ್ವಾಹಕ ಪರಿಷತ್ತು, ಇದರಲ್ಲಿ ಇನ್ನು ಮುಂದೆ ಉಪಬಂಧಿಸಿದ ರೀತಿಯಲ್ಲಿ ಆರ್ಡಿನೆನ್ಸ್‌ಗಳನ್ನು ರಚಿಸಬಹುದು.

(2) ಆರ್ಡಿನೆನ್ಸುಗಳನ್ನು ರಚಿಸುವಲ್ಲಿ ಕಾರ್ಯನಿರ್ವಾಹಕ ಪರಿಷತ್ತು,–

(i) ಪರೀಕ್ಷಕರ ಕರ್ತವ್ಯಗಳ ಮೇಲೆ ಅಂಥ ಆರ್ಡಿನೆನ್ಸುಗಳು ಪರಿಣಾಮ ಬೀರುವಲ್ಲಿ, ಸಂಬಂಧಪಟ್ಟ ಮಂಡಲಿಗಳೊಡನೆ; ಮತ್ತು

(ii) ವ್ಯಾಸಂಗ ಕ್ರಮಗಳು, ಸೆಮಿಸ್ಟರ್ ಸ್ಕೀಮು ಅಥವಾ ಕ್ರೆಡಿಟ್ ಪದ್ಧತಿ, ಪರೀಕ್ಷೆಗಳನ್ನು ನಡೆಸುವುದು ಅಥವಾ ಅವುಗಳ ಗುಣಮಟ್ಟ ಅಥವಾ ವಿದ್ಯಾರ್ಥಿಗಳ ನಿವಾಸದ ಷರತ್ತುಗಳ ಮೇಲೆ ಅಂಥ ಆರ್ಡಿನೆನ್ಸ್‌ಗಳು ಪರಿಣಾಮ ಬೀರುವಲ್ಲಿ ವಿದ್ಯಾವಿಷಯಕ ಪರಿಷತ್ತಿನೊಡನೆ,

– ಸಮಾಲೋಚಿಸತಕ್ಕದ್ದು.

(3) ವಿದ್ಯಾವಿಷಯಕ ಪರಿಷತ್ತು ಪ್ರಸ್ತಾಪಿಸಿದ ಯಾವುದೇ ಆರ್ಡಿನೆನ್ಸಿನ ಕರಡನ್ನು ತಿದ್ದುಪಡಿ ಮಾಡಲು ಕಾರ್ಯನಿರ್ವಾಹಕ ಪರಿಷತ್ತಿಗೆ ಅಧಿಕಾರವಿರತಕ್ಕದ್ದಲ್ಲ. ಆದರೆ, ಅದು ಪ್ರಸ್ತಾವವನ್ನು ತಿರಸ್ಕರಿಸಬಹುದು ಅಥವಾ ಕಾರ್ಯನಿರ್ವಾಹಕ ಪರಿಷತ್ತು ಸೂಚಿಸಬಹುದಾದ ಅಂಥ ತಿದ್ದುಪಡಿಗಳೊಂದಿಗೆ, ಸಂಪೂರ್ಣವಾಗಿ ಅಥವಾ ಭಾಗಶ: ಮರುಪರಿಶೀಲನೆಗಾಗಿ ಕರಡನ್ನು ವಿದ್ಯಾವಿಷಯಕ ಪರಿಷತ್ತಿಗೆ ಹಿಂದಿರುಗಿಸಬಹುದು.

(4) ಕಾರ್ಯನಿರ್ವಾಹಕ ಪರಿಷತ್ತು ರಚಿಸಿದ ಎಲ್ಲಾ ಆರ್ಡಿನೆನ್ಸ್‌ಗಳು ಅದು ನಿರ್ದೇಶಿಸಬಹುದಾದ ಅಂಥ ದಿನಾಂಕದಿಂದ ಪರಿಣಾಮಕಾರಿಯಾಗಿರತಕ್ಕದ್ದು. ಎಲ್ಲಾ ಆರ್ಡಿನೆನ್ಸ್‌ಗಳು ಭವಿಷ್ಯವರ್ತಿಯಾಗಿ ಮಾತ್ರ ಜಾರಿಗೆ ಬರತಕ್ಕದ್ದು:

ಪರಂತು, ಹಣಕಾಸು ತೊಡಕುಗಳುಳ್ಳ ಪ್ರಸ್ತಾವನೆಯನ್ನು ಒಳಗೊಂಡ ಆರ್ಡಿನೆನ್ಸ್ ಸಂಬಂಧದಲ್ಲಿ, ವಿಶ್ವವಿದ್ಯಾಲಯವು ಕುಲಾಧಿಪತಿಯವರ ಅನುಮೋದನೆಯನ್ನು ಪಡೆಯತಕ್ಕದ್ದು.

(5) ವಿದ್ಯಾವಿಷಯಕ ಪರಿಷತ್ತು ಪ್ರಸ್ತಾವಿಸಿದ ಆರ್ಡಿನೆನ್ಸಿನ ಕರಡನ್ನು ಕಾರ್ಯನಿರ್ವಾಹಕ ಪರಿಷತ್ತು ತಿರಸ್ಕರಿಸಿದಲ್ಲಿ, ವಿದ್ಯಾವಿಷಯಕ ಪರಿಷತ್ತು, ಕುಲಾಧಿಪತಿಯವರಿಗೆ ಮೇಲ್ಮನವಿಯನ್ನು ಮಾಡಿಕೊಳ್ಳಬಹುದು.

(6) ಕುಲಾಧಿಪತಿಯವರು, ಕಾರ್ಯನಿರ್ವಾಹಕ ಪರಿಷತ್ತಿನ ಟೀಕೆ-ಟಿಪ್ಪಣಿಗಳನ್ನು ಪಡೆದ ತರುವಾಯ, ಮೇಲ್ಮನವಿಯನ್ನು ತಿರಸ್ಕರಿಸಬಹುದು ಅಥವಾ ವಿದ್ಯಾವಿಷಯಕ ಪರಿಷತ್ತು ಪ್ರಸ್ತಾವಿಸಿದಂತೆ ಆರ್ಡಿನೆನ್ಸನ್ನು ಅನುಮೋದಿಸಬಹುದು. ಅನಂತರ ಆರ್ಡಿನೆನ್ಸನ್ನು ಕಾರ್ಯನಿರ್ವಾಹಕ ಪರಿಷತ್ತು ರಚಿಸಿದ್ದರೆ ಹೇಗೋ ಹಾಗೆ ಅದು ಪರಿಣಾಮಕಾರಿಯಾಗಿರತಕ್ಕದ್ದು.

(7) ಮೊದಲ ಆರ್ಡಿನೆನ್ಸನ್ನು ಕಾರ್ಯನಿರ್ವಾಹಕ ಪರಿಷತ್ತಿನ ಪೂರ್ವಾನುಮೋದನೆಯೊಂದಿಗೆ ಕುಲಪತಿಯವರು ರಚಿಸತಕ್ಕದ್ದು ಮತ್ತು ಹಾಗೆ ರಚಿಸಲಾದ ಆರ್ಡಿನೆನ್ಸನ್ನು, ಪರಿನಿಯಮಗಳಲ್ಲಿ ಉಪಬಂಧಿಸಲಾದ ವಿಧಾನದಲ್ಲಿ ಕಾರ್ಯನಿರ್ವಾಹಕ ಪರಿಷತ್ತು ಯಾವುದೇ ಸಮಯದಲ್ಲಿ ತಿದ್ದುಪಡಿಯನ್ನು ಮಾಡಬಹುದು, ನಿರಸನಗೊಳಿಸಬಹುದು ಅಥವಾ ಸೇರಿಸಲೂಬಹುದು.

34. ವಿನಿಯಮಗಳು.– (1) ಈ ಅಧಿನಿಯಮದಲ್ಲಿ ನಮೂದಿಸಲಾದ ಎಲ್ಲಾ ಅಥವಾ ಯಾವುವೇ ಅಧಿಕಾರಗಳನ್ನು ಚಲಾಯಿಸಲು ಉಪಬಂಧಿಸಲಾದ ಮತ್ತು ವಿಶೇಷವಾಗಿ ಈ ಮುಂದಿನ ವಿಷಯಗಳ ಬಗ್ಗೆ ಈ ಅಧಿನಿಯಮ, ಪರಿನಿಯಮಗಳಿಗೆ ಮತ್ತು ಆರ್ಡಿನೆನ್ಸ್‌ಗಳಿಗೆ ಸುಸಂಗತವಾಗಿರುವ ವಿನಿಯಮಗಳನ್ನು ವಿದ್ಯಾವಿಷಯಕ ಪರಿಷತ್ತು ರಚಿಸಬಹುದು, ಎಂದರೆ:–

(i) ವಿಶ್ವವಿದ್ಯಾಲಯಕ್ಕೆ ವಿದ್ಯಾರ್ಥಿಗಳ ಪ್ರವೇಶ;

(ii) ಇತರ ವಿಶ್ವವಿದ್ಯಾಲಯಗಳ ಪರೀಕ್ಷೆಗಳು ಮತ್ತು ಪದವಿಗಳನ್ನು ವಿಶ್ವವಿದ್ಯಾಲಯದ ಪರೀಕ್ಷೆ ಮತ್ತು ಪದವಿಗಳಿಗೆ ಸಮಾನವಾದುವುಗಳೆಂದು ಮನ್ನಣೆ ನೀಡುವುದು;

(iii) ವಿಶ್ವವಿದ್ಯಾಲಯದ ವ್ಯಾಸಂಗ ಕ್ರಮಗಳು ಮತ್ತು ಪರೀಕ್ಷೆಗಳು ಹಾಗೂ ವಿಶ್ವವಿದ್ಯಾಲಯದ ಅಥವಾ ಇತರ ವಿಶ್ವವಿದ್ಯಾಲಯಗಳ ಸಂಸ್ಥೆಗಳ ವಿದ್ಯಾರ್ಥಿಗಳನ್ನು ಯಾವ ಷರತ್ತುಗಳ ಮೇಲೆ ವಿಶ್ವವಿದ್ಯಾನಿಲಯದ ಪರೀಕ್ಷೆಗಳು ಅಥವಾ ಪದವಿಗಳು, ಡಿಪ್ಲೊಮೋಗಳು ಮತ್ತು ಇತರ ಸರ್ಟಿಫಿಕೇಟುಗಳಿಗೆ ಸೇರಿಸಿಕೊಳ್ಳತಕ್ಕದ್ದೋ ಆ ಷರತ್ತುಗಳು; ಮತ್ತು

(iv) ವಿನಾಯಿತಿಗಳನ್ನು ನೀಡುವುದು.

(2) ವಿಶ್ವವಿದ್ಯಾಲಯವು ರಚಿಸಿದ ಎಲ್ಲಾ ವಿನಿಯಮಗಳು ಸಂಬಂಧಪಟ್ಟ ರಾಷ್ಟ್ರೀಯ ನಿಯಂತ್ರಕ ನಿಕಾಯಗಳು ಹೊರಡಿಸಿದ ನಿರ್ದೇಶನಗಳೊಂದಿಗೆ ಅನುರೂಪವಾಗಿರತಕ್ಕದ್ದು. ನಂತರ ಅವು, ರಾಜ್ಯ ಸರ್ಕಾರವು ಹೊರಡಿಸಿದ ಆದೇಶಗಳಿಗೆ ಹಾಗೂ ಕುಲಾಧಿಪತಿಯವರು ಅನುಮೋದಿಸಿದ ಪರಿನಿಯಮಗಳಿಗೆ ವಿರುದ್ಧವಾಗಿರತಕ್ಕದ್ದಲ್ಲ.

(3) ಪ್ರತಿಯೊಂದು ವಿನಿಯಮವು, ಕಾರ್ಯನಿರ್ವಾಹಕ ಪರಿಷತ್ತು ಅದನ್ನು ಅನುಮೋದಿಸಿದ ತಕ್ಷಣದಿಂದ ಜಾರಿಗೆ ಬರತಕ್ಕದ್ದು.

35. ನಿಯಮಗಳ ರಚನಾಧಿಕಾರ.– (1) ರಾಜ್ಯ ಸರ್ಕಾರವು, ಅಧಿಸೂಚನೆಯ ಮೂಲಕ, ಪೂರ್ವಪ್ರಕಟಣೆಯ ತರುವಾಯ, ಈ ಅಧಿನಿಯಮದ ಎಲ್ಲಾ ಅಥವಾ ಯಾವುದೇ ಉದ್ದೇಶಗಳನ್ನು ಈಡೇರಿಸಲು ನಿಯಮಗಳನ್ನು ರಚಿಸಬಹುದು.

(2) ಈ ಅಧಿನಿಯಮದ ಅಡಿಯಲ್ಲಿ ಹೊರಡಿಸಲಾದ ಪ್ರತಿಯೊಂದು ನಿಯಮವನ್ನು, ಅದನ್ನು ರಚಿಸಿದ ತರುವಾಯ, ಆದಷ್ಟು ಬೇಗನೆ, ರಾಜ್ಯ ವಿಧಾನಮಂಡಲದ ಪ್ರತಿಯೊಂದು ಸದನದ ಮುಂದೆ, ಒಂದು ಅಧಿವೇಶನದಲ್ಲಿ ಅಥವಾ ಎರಡು ಅಥವಾ ಹೆಚ್ಚು ನಿರಂತರ ಅಧಿವೇಶನಗಳಲ್ಲಿ ಅಡಕವಾಗಿರಬಹುದಾದ ಒಟ್ಟು ಮೂವತ್ತು ದಿನಗಳ ಅವಧಿಯವರೆಗೆ ಅದು ಅಧಿವೇಶನದಲ್ಲಿರುವಾಗ ಮಂಡಿಸತಕ್ಕದ್ದು ಮತ್ತು ಮೇಲೆ ಹೇಳಿದ ಅಧಿವೇಶನ ಅಥವಾ ನಿರಂತರ ಅಧಿವೇಶನಗಳ ನಿಕಟ

ತರುವಾಯದ ಅಧಿವೇಶನವು ಮುಕ್ತಾಯವಾಗುವುದಕ್ಕೆ ಮೊದಲು ಉಭಯ ಸದನಗಳು ನಿಯಮದಲ್ಲಿ ಯಾವುದೇ ಮಾರ್ಪಾಡು ಮಾಡಲು ಒಪ್ಪಿದರೆ ಅಥವಾ ಆ ನಿಯಮವನ್ನು ರಚಿಸತಕ್ಕದ್ದಲ್ಲವೆಂದು ಉಭಯ ಸದನಗಳು ಒಪ್ಪಿದರೆ ತದನಂತರ ಅಂಥ ನಿಯಮವು ಹಾಗೆ ಮಾರ್ಪಾಟಾದ ರೀತಿಯಲ್ಲಿ ಪರಿಣಾಮಕಾರಿಯಾಗತಕ್ಕದ್ದು ಅಥವಾ ಸಂದರ್ಭಾನುಸಾರವಾಗಿ ಪರಿಣಾಮಕಾರಿಯಾಗತಕ್ಕದ್ದಲ್ಲ. ಆದಾಗ್ಯೂ, ಯಾವುದೇ ಅಂಥ ಮಾರ್ಪಾಡು ಅಥವಾ ರದ್ದತಿಯು ಆ ನಿಯಮದ ಅಡಿಯಲ್ಲಿ ಈ ಮೊದಲು ಮಾಡಲಾದ ಯಾವುದೇ ಕಾರ್ಯದ ಮಾನ್ಯತೆಗೆ ಬಾಧಕವನ್ನು ಉಂಟುಮಾಡತಕ್ಕದ್ದಲ್ಲ.

36. ರಚನೆ, ರಿಕ್ತಸ್ಥಾನ, ಇತ್ಯಾದಿಗಳಲ್ಲಿನ ದೋಷದ ಆಧಾರದ ಮೇಲೆ ಮಾತ್ರವೇ ಕಾರ್ಯವು ಅಸಿಂಧುವಾಗತಕ್ಕದ್ದಲ್ಲ.– (1) ವಿಶ್ವವಿದ್ಯಾನಿಲಯದ ಕಾರ್ಯನಿರ್ವಾಹಕ ಪರಿಷತ್ತು, ವಿದ್ಯಾವಿಷಯಕ ಪರಿಷತ್ತು ಅಥವಾ ಯಾವುದೇ ಇತರ ಪ್ರಾಧಿಕಾರ ಅಥವಾ ನಿಕಾಯವನ್ನು ಯುಕ್ತವಾಗಿ ರಚಿಸಿರದಿದ್ದರೆ ಅಥವಾ ಯಾವುದೇ ಕಾಲದಲ್ಲಿ ಅದರ ರಚನೆಯಲ್ಲಿ ಅಥವಾ ಪುನರ್‌ರಚನೆಯಲ್ಲಿ ಯಾವುದೇ ದೋಷವಿದ್ದರೆ ಮತ್ತು ಯಾವುದೇ ಅಂಥ ಪ್ರಾಧಿಕಾರದ ಸದಸ್ಯರ ಸ್ಥಾನವು ಖಾಲಿಯಿದ್ದರೆ, ಅಂಥ ಪ್ರಾಧಿಕಾರದ ಅಥವಾ ನಿಕಾಯದ ಯಾವುದೇ ಕಾರ್ಯ ಅಥವಾ ವ್ಯವಹರಣೆಯು, ಅಂಥ ಯಾವುದೇ ಕಾರಣ ಅಥವಾ ಕಾರಣಗಳ ಆಧಾರದ ಮೇಲೆ ಅಸಿಂಧುವಾಗತಕ್ಕದ್ದಲ್ಲ.

(2) ಯಾವುದೇ ಸದಸ್ಯನಿಗೆ ತಿಳಿವಳಿಕೆ ಪತ್ರ ರವಾನಿಸುವುದಲ್ಲಿನ ಯಾವುದೇ ಅಕ್ರಮದ ನಿಮಿತ್ತ ವಿಶ್ವವಿದ್ಯಾಲಯದ ಯಾವುದೇ ಪ್ರಾಧಿಕಾರದ ಅಥವಾ ನಿಕಾಯದ ಯಾವುದೇ ನಿರ್ಣಯವು ಅಸಿಂಧುವೆಂದು ಪರಿಭಾವಿಸತಕ್ಕದ್ದಲ್ಲ. ಆದರೆ, ಅಂತಹ ಪ್ರಾಧಿಕಾರ ಅಥವಾ ನಿಕಾಯದ ನಡವಳಿಗಳು ಅಂಥ ಅಕ್ರಮದಿಂದ ಪೂರ್ವಗ್ರಹವಾಗಿ ಬಾಧಿತವಾಗಿರುವಂತಿಲ್ಲ.

ಅಧ್ಯಾಯ VI

ಹಣಕಾಸು ಮತ್ತು ಲೆಕ್ಕಪತ್ರಗಳು

37. ವಿಶ್ವವಿದ್ಯಾನಿಲಯದ ನಿಧಿಗಳು.– (1) ಈ ಕೆಳಕಂಡ ಯಾವುವೇ ಮೂಲಗಳಿಂದ ಸ್ವೀಕರಿಸಿದ ಮೊಬಲಗುಗಳು ವಿಶ್ವವಿದ್ಯಾನಿಲಯದ ನಿಧಿಯ ಭಾಗವಾಗಿರತಕ್ಕದ್ದು:–

(i)ವಿಶ್ವವಿದ್ಯಾನಿಲಯದ ಅನುದಾನಗಳ ಆಯೋಗವು ಅಥವಾ ಕೇಂದ್ರ ಸರ್ಕಾರವು ನೀಡಿದ ಯಾವುದೇ ವಂತಿಗೆ ಅಥವಾ ಅನುದಾನ;

(ii)ರಾಜ್ಯ ಸರ್ಕಾರವು ನೀಡಿದ ಯಾವುದೇ ವಂತಿಗೆ ಅಥವಾ ಅನುದಾನ;

(iii) ಖಾಸಗಿ ವ್ಯಕ್ತಿಗಳು ಅಥವಾ ಸಂಸ್ಥೆಗಳು ನೀಡಿದ ಯಾವುದೇ ಮರಣ ಶಾಸನ ಮೂಲಕವಾಗಿ ದೊರೆತ ಸ್ವತ್ತುಗಳು, ದೇಣಿಗೆಗಳು, ದತ್ತಿಗಳು ಅಥವಾ ಇತರ ಅನುದಾನಗಳು;

(iv) ಶುಲ್ಕಗಳು ಮತ್ತು ಚಾರ್ಜುಗಳ ಮೂಲಕ ವಿಶ್ವವಿದ್ಯಾನಿಲಯವು ಸ್ವೀಕರಿಸಿದ ಆದಾಯ;

(v)ಕೈಗಾರಿಕೆಗಳು, ವ್ಯಾಪಾರಿಗಳು ಅಥವಾ ಉದ್ದಿಮೆದಾರರಿಂದ ಯಾವುದೇ ವಂತಿಗೆ ಅಥವಾ ಮರಣ ಶಾಸನ ಮೂಲಕವಾಗಿ ದೊರೆತ ಸ್ವತ್ತುಗಳ;

(vi) ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿಗೆ ಒಳಪಟ್ಟು ವಿದೇಶಿ ಸರ್ಕಾರಗಳಿಂದ ಅಥವಾ ಯಾವುದೇ ವಿದೇಶಿ ಸಂಸ್ಥೆಗಳಿಂದ ಅಥವಾ ಕಂಪನಿಗಳಿಂದ ಸ್ವೀಕರಿಸಿದ ಯಾವುದೇ ವಂತಿಗೆ ಅಥವಾ ದತ್ತಿಗಳು, ಮತ್ತು

(vii) ಯಾವುದೇ ಇತರ ಮೂಲದಿಂದ ಸ್ವೀಕರಿಸಿದ ಮೊಬಲಗುಗಳು.

(2) ಕಾರ್ಯನಿರ್ವಾಹಕ ಪರಿಷತ್ತು ತೀರ್ಮಾನಿಸಬಹುದಾದಂತೆ ಸದರಿ ನಿಧಿಯನ್ನು, ಭಾರತದ ರಿಜರ್ವ್ ಬ್ಯಾಂಕ್ ಅಧಿನಿಯಮ, 1934ರಲ್ಲಿ ಪರಿಭಾಷಿಸಿದಂತೆ ಅನುಸೂಚಿತ ಬ್ಯಾಂಕಿನಲ್ಲಿ ಅಥವಾ ಬ್ಯಾಂಕಿಂಗ್ ಕಂಪನಿಗಳ (ಉದ್ಯಮಗಳ ಅರ್ಜನೆ ಮತ್ತು ವರ್ಗಾವಣೆ) ಅಧಿನಿಯಮ, 1970ರ ಮೇರೆಗೆ ರಚಿತವಾದ ಹೊಸ ಸಂವಾದಿ ಬ್ಯಾಂಕಿನಲ್ಲಿ ಇಡತಕ್ಕದ್ದು.

(3) ವಿಶ್ವವಿದ್ಯಾನಿಲಯದ ನಿಧಿಗಳು ಮತ್ತು ಆದಾಯವನ್ನು ವಿಶ್ವವಿದ್ಯಾನಿಲಯದ ಉದ್ದೇಶಗಳನ್ನು ಈಡೇರಿಸುವುದಕ್ಕಾಗಿ ಮಾತ್ರವೇ ಉಪಯೋಗಿಸತಕ್ಕದ್ದು ಮತ್ತು ಲಾಭ, ಬಡ್ಡಿ ಅಥವಾ ಡಿವೆಡೆಂಡ್‌ಗಳು ಇತ್ಯಾದಿಯ ರೂಪದಲ್ಲಿ ಟ್ರಸ್ಟಿಗಳಿಗೆ ಅಥವಾ ಸದಸ್ಯರಿಗೆ ಯಾವುದೇ ಸಂದಾಯವನ್ನು ಮಾಡತಕ್ಕದ್ದಲ್ಲ.

(4) ಪರಿನಿಯಮಗಳ ಮೂಲಕ ಉಪಬಂಧಿಸಬಹುದಾದ ರೀತಿಯಲ್ಲಿ ವಿಶ್ವವಿದ್ಯಾನಿಲಯದ ಯಾವುವೇ ಉದ್ದೇಶಗಳಿಗಾಗಿ ಸದರಿ ನಿಧಿಯನ್ನು ವಿನಿಯೋಗಿಸಬಹುದು.

38. ವಿಶ್ವವಿದ್ಯಾನಿಲಯದ ವಿಘಟನೆ ಅಥವಾ ಸಮಾಪ್ತಿ.– ವಿಶ್ವವಿದ್ಯಾಲಯದ ವಿಘಟನೆ ಅಥವಾ ಸಮಾಪ್ತಿಯ ಸಂದರ್ಭದಲ್ಲಿ, ವಿಘಟನೆಯ ದಿನಾಂಕದಂದು ಉಳಿದ ಸ್ವತ್ತುಗಳನ್ನು ಯಾವುದೇ ಸನ್ನಿವೇಶಗಳಲ್ಲಿಯೂ, ಕಾರ್ಯನಿರ್ವಾಹಕ ಪರಿಷತ್ತಿನ ಅಥವಾ ಹಣಕಾಸು ಸಮಿತಿಯ ಸದಸ್ಯರ ಪೈಕಿ ಹಂಚಿಕೆ ಮಾಡತಕ್ಕದ್ದಲ್ಲ, ಆದರೆ ಅದನ್ನು, ಈ ವಿಶ್ವವಿದ್ಯಾಲಯಕ್ಕೆ ಸದೃಶವಾದ ಉದ್ದೇಶಗಳನ್ನು ಹೊಂದಿರುವ ಮತ್ತೊಂದು ವಿಶ್ವವಿದ್ಯಾಲಯಕ್ಕೆ ವರ್ಗಾವಣೆ ಮಾಡತಕ್ಕದ್ದು.

39. ವಾರ್ಷಿಕ ಲೆಕ್ಕಪತ್ರಗಳು ಮತ್ತು ಲೆಕ್ಕಪರಿಶೋಧನೆ.– (1) ಕಾರ್ಯನಿರ್ವಾಹಕ ಪರಿಷತ್ತಿನ ನಿರ್ದೇಶನದ ಮೇರೆಗೆ ವಿಶ್ವವಿದ್ಯಾನಿಲಯದ ವಾರ್ಷಿಕ ಲೆಕ್ಕಪತ್ರಗಳನ್ನು ತಯಾರಿಸತಕ್ಕದ್ದು.

(2) ಹಾಗೆ ತಯಾರಿಸಿದ ವಾರ್ಷಿಕ ಲೆಕ್ಕಪತ್ರಗಳನ್ನು ಹಣಕಾಸು ಸಮಿತಿಯು ತನ್ನ ಮುಂದಿನ ನಿಕಟ ಸಭೆಯಲ್ಲಿ ಪರಿಗಣಿಸತಕ್ಕದ್ದು. ಹಣಕಾಸು ಸಮಿತಿಯು ಆ ಸಂಬಂಧವಾಗಿ ಒಂದು ಗೊತ್ತುವಳಿಯನ್ನು ಅಂಗೀಕರಿಸಬಹುದು ಮತ್ತು ಅದನ್ನು ಕಾರ್ಯನಿರ್ವಾಹಕ ಪರಿಷತ್ತಿಗೆ ತಿಳಿಸತಕ್ಕದ್ದು. ಹಣಕಾಸು ಸಮಿತಿಯು ಮಾಡಿದ ಸಲಹೆಗಳನ್ನು ಕಾರ್ಯನಿರ್ವಾಹಕ ಪರಿಷತ್ತು ಪರಿಗಣಿಸತಕ್ಕದ್ದು ಮತ್ತು ಅದರ ಮೇಲೆ ತಾನು ಸೂಕ್ತವೆಂದು ಭಾವಿಸುವಂಥ ರೀತಿಯಲ್ಲಿ ಕ್ರಮ ಕೈಗೊಳ್ಳತಕ್ಕದ್ದು ಹಾಗೂ ತಾನು ಕೈಗೊಂಡ ಕ್ರಮದ ಬಗ್ಗೆ ಅಥವಾ ಕ್ರಮ ಕೈಗೊಳ್ಳದಿರಲು ಇರುವ ಕಾರಣಗಳನ್ನು ತನ್ನ ಮುಂದಿನ ಸಭೆಯಲ್ಲಿ ಹಣಕಾಸು ಸಮಿತಿಗೆ ತಿಳಿಸತಕ್ಕದ್ದು.

(3) ವಿಶ್ವವಿದ್ಯಾನಿಲಯದ ಲೆಕ್ಕಪತ್ರಗಳನ್ನು ವರ್ಷಕ್ಕೊಮ್ಮೆ, ಆದ್ಯತೆಯ ಮೇರೆಗೆ (preferably) ಏಪ್ರಿಲ್ ತಿಂಗಳಲ್ಲಿ ರಾಜ್ಯ ಲೆಕ್ಕಪತ್ರ ನಿಯಂತ್ರಕನು ಪರಿಶೋಧಿಸತಕ್ಕದ್ದು.

(4) ಹಾಗೆ ಪರಿಶೋಧಿಸಿದ ಲೆಕ್ಕ ಪತ್ರಗಳನ್ನು ಲೆಕ್ಕ ಪರಿಶೋಧನಾ ವರದಿಯೊಡನೆ ಹಣಕಾಸು ಸಮಿತಿಯ ಮತ್ತು ಕಾರ್ಯನಿರ್ವಾಹಕ ಪರಿಷತ್ತಿನ ಮುಂದೆ ಮಂಡಿಸತಕ್ಕದ್ದು ಹಾಗೂ ತದನಂತರ ಪ್ರತಿ ವರ್ಷ ಸೆಪ್ಟೆಂಬರ್ ಕೊನೆಯೊಳಗೆ ತನ್ನ ಆಕ್ಷೇಪಗಳೊಡನೆ ರಾಜ್ಯ ಸರ್ಕಾರಕ್ಕೆ ಕಳುಹಿಸತಕ್ಕದ್ದು. ರಾಜ್ಯ ಸರ್ಕಾರವು ಅದನ್ನು ರಾಜ್ಯ ವಿಧಾನಮಂಡಲದ ಉಭಯ ಸದನಗಳ ಮುಂದೆ ಶೀಘ್ರದಲ್ಲಿ ಬರುವ ಮುಂದಿನ ಅಧಿವೇಶನದಲ್ಲಿ ಮಂಡಿಸತಕ್ಕದ್ದು.

40. ಹಣಕಾಸು ಅಂದಾಜುಗಳು.– (1) ಕಾರ್ಯನಿರ್ವಾಹಕ ಪರಿಷತ್ತು, ಪರಿನಿಯಮಗಳ ಮೂಲಕ ನಿಯಮಿಸಬಹುದಾದ ಅಂಥ ದಿನಾಂಕದ ಮೊದಲು ಹಣಕಾಸು ಅಧಿಕಾರಿಯ ನೆರವಿನೊಂದಿಗೆ, ಮುಂಬರುವ ವರ್ಷಕ್ಕಾಗಿ ಹಣಕಾಸು ಅಂದಾಜುಗಳನ್ನು ಸಿದ್ಧಪಡಿಸತಕ್ಕದ್ದು ಮತ್ತು ಹಣಕಾಸು ಸಮಿತಿಯ ಮೂಲಕ ಅವುಗಳನ್ನು ಪರಿಶೀಲನೆ ಮಾಡಿಸತಕ್ಕದ್ದು ಹಾಗೂ ಕಾರ್ಯನಿರ್ವಾಹಕ ಪರಿಷತ್ತಿನ ಮುಂದೆ ಅದನ್ನು ಮಂಡಿಸತಕ್ಕದ್ದು.

(2) ಕಾರ್ಯನಿರ್ವಾಹಕ ಪರಿಷತ್ತು, ಬಜೆಟ್ಟಿನಲ್ಲಿ ಒದಗಿಸಲಾದ ಮೊಬಲಗಿಗಿಂತ ಹೆಚ್ಚಿನ ಖರ್ಚನ್ನು ವಹಿಸಬೇಕಾಗಿರುವಲ್ಲಿ ಅಥವಾ ಜರೂರು ಸಂದರ್ಭದಲ್ಲಿ ಕಾರಣಗಳನ್ನು ಲಿಖಿತದಲ್ಲಿ ದಾಖಲಿಸಿ ಪರಿನಿಯಮಗಳಲ್ಲಿ ನಿರ್ದಿಷ್ಟಪಡಿಸಿದ ಅಂಥ ನಿರ್ಬಂಧಗಳು ಮತ್ತು ಷರತ್ತುಗಳಿಗೊಳಪಟ್ಟು ವೆಚ್ಚವನ್ನು ವಹಿಸಬಹುದು. ಅಂಥ ಹೆಚ್ಚಿನ ವೆಚ್ಚಕ್ಕೆ ಸಂಬಂಧಿಸಿದಂತೆ, ಬಜೆಟ್ಟಿನಲ್ಲಿ ಯಾವುದೇ ಅವಕಾಶವನ್ನು ಮಾಡಿಲ್ಲದಿದ್ದರೆ, ಹಣಕಾಸು ಸಮಿತಿಗೆ ಅದರ ಪರಿಗಣನೆ ಮತ್ತು ಸಲಹೆಗಾಗಿ ಅದರ ಮುಂದಿನ ಸಭೆಯಲ್ಲಿ ವರದಿಯನ್ನು ಮಾಡತಕ್ಕದ್ದು.

(3) ವಿಶ್ವವಿದ್ಯಾನಿಲಯದ ಬಜೆಟ್ ಅಂದಾಜನ್ನು, ತನ್ನ ಸಂಪನ್ಮೂಲಗಳ ಸಂಗ್ರಹಣೆ ಮಾಡುವುದೂ ಒಳಗೊಂಡಂತೆ ರಾಜ್ಯ ಸರ್ಕಾರ ಮತ್ತು ಎಲ್ಲಾ ಇತರ ಮೂಲಗಳಿಂದ ನಿರೀಕ್ಷಿಸಲಾದ ಅನುದಾನಗಳನ್ನು ಗಮನದಲ್ಲಿಟ್ಟು ತಯಾರಿಸತಕ್ಕದ್ದು. ಆದಾಗ್ಯೂ, ಪೂರಕ ಬಜೆಟನ್ನು, ಹೆಚ್ಚಿನ ಅನುದಾನಗಳ ನಿರೀಕ್ಷೆಯಿಂದ ಪ್ರತಿ ವರ್ಷ ಅಕ್ಟೋಬರ್‌ನಲ್ಲಿ ಕಾರ್ಯನಿರ್ವಾಹಕ ಪರಿಷತ್ತಿನ ಮುಂದೆ ಇಡಬಹುದು; ಆದರೆ, ಈ ಬಗ್ಗೆ ಯಾವುದೇ ವೆಚ್ಚವನ್ನು, ಅಂಥ ಹೆಚ್ಚಿನ ಅನುದಾನ ಸ್ವೀಕರಿಸಿದ ಹೊರತು ಭರಿಸತಕ್ಕದ್ದಲ್ಲ.

(4) ವಿಶ್ವವಿದ್ಯಾನಿಲಯವು, ರಾಜ್ಯ ಸರ್ಕಾರದ ಪೂರ್ವಾನುಮೋದನೆಯಿಲ್ಲದೆ, ಮೀಸಲಿಟ್ಟ ನಿಧಿಗಳನ್ನು ಇತರ ಉದ್ದೇಶಗಳಿಗಾಗಿ ಪಲ್ಲಟ ಮಾಡತಕ್ಕದ್ದಲ್ಲ ಅಥವಾ ಅದರ ಸಿಬ್ಬಂದಿ ವರ್ಗದ ವೇತನ ಶ್ರೇಣಿಗಳನ್ನು ಪರಿಷ್ಕರಿಸತಕ್ಕದ್ದಲ್ಲ ಅಥವಾ ರಾಜ್ಯ ಸರ್ಕಾರದಿಂದ ಯಾವುದೇ ಸರಿಸಮಾನ ವಂತಿಗೆಗಳನ್ನು ಒಳಗೊಳ್ಳುವಂಥ ಯಾವುವೇ ಯೋಜನೆಗಳನ್ನು ಅಥವಾ ಪ್ರಾಯೋಜಿತ ಪ್ರಾಧಿಕಾರಗಳಿಂದ ಸಹಾಯವು ನಿಂತುಹೋದ ತರುವಾಯ ರಾಜ್ಯ ಸರ್ಕಾರದ ಮೇಲೆ ಆವರ್ತಕ ಹೊಣೆಗಾರಿಕೆಯನ್ನು ವಿಧಿಸುವಂಥ ಯಾವುದೇ ಯೋಜನೆಯನ್ನು ಕಾರ್ಯಗತಗೊಳಿಸತಕ್ಕದ್ದಲ್ಲ:

ಪರಂತು, ವಿಶ್ವವಿದ್ಯಾಲಯದ ಮೇಲೆ ಆವರ್ತಕ ಹೊಣೆಗಾರಿಕೆಯನ್ನು ವಿಧಿಸುವ ಯೋಜನೆ ಅಥವಾ ಕಾರ್ಯಕ್ರಮಕ್ಕೆ, ಆದರೆ, ವಿಶ್ವವಿದ್ಯಾನಿಲಯ ಅನುದಾನ ಆಯೋಗ ಅಥವಾ ಕೇಂದ್ರ ಸರ್ಕಾರದಿಂದ ದತ್ತಿಯಾಗಿ ಬಂದ ಅಥವಾ ಖಾಸಗಿ ವಲಯ ಅಥವಾ ಉದ್ಯಮ ಅಥವಾ ವ್ಯಕ್ತಿಗಳು ಅಥವಾ ಸಂಸ್ಥೆಗಳು ಸೇರಿಸಿದ ಒಟ್ಟು ಮೊತ್ತದಲ್ಲಿ ಹುಟ್ಟಬಹುದಾದ ಬಡ್ಡಿ ಅಥವಾ ವಂತಿಗೆಯಿಂದ ಅಥವಾ ದೇಣಿಗೆಗಳ ಮೂಲಕ ಪ್ರಾಪ್ತವಾದುದಕ್ಕೆ ಪೂರ್ವಾನುಮೋದನೆಯ ಅವಶ್ಯಕತೆ ಇರುವುದಿಲ್ಲ ಹಾಗೂ ಅಂಥ ಆವರ್ತಕ ಹೊಣೆಗಾರಿಕೆಯು ರಾಜ್ಯ ಸರ್ಕಾರಕ್ಕೆ ಯಾವುದೇ ಹೊರೆಯಾಗುವುದಿಲ್ಲ ಮತ್ತು ಆ ಸಂಬಂಧದಲ್ಲಿ ಸಂಪೂರ್ಣ ವೆಚ್ಚವನ್ನು ವಿಶ್ವವಿದ್ಯಾನಿಲಯದ ನಿಧಿಯಿಂದ ಭರಿಸತಕ್ಕದ್ದು.

41. ಲೆಕ್ಕಪರಿಶೋಧನೆಗೆ ನಿರ್ದೇಶಿಸಲು ಸರ್ಕಾರದ ಅಧಿಕಾರ.– (1) ವಿಶ್ವವಿದ್ಯಾಲಯದ ಲೆಕ್ಕಪತ್ರಗಳ ಪರಿಶೋಧನೆ ಅವಶ್ಯವೆಂದು ಭಾವಿಸಿದಾಗಲೆಲ್ಲಾ ಅದು ನಿರ್ದಿಷ್ಟಪಡಿಸಬಹುದಾದಂತೆ ಅಂಥ ಲೆಕ್ಕಪರಿಶೋಧಕರಿಂದ ಲೆಕ್ಕ ಪರಿಶೋಧನೆಯಾಗಬೇಕೆಂದು ನಿರ್ದೇಶಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವಿರತಕ್ಕದ್ದು.

(2) ಮಹಾಲೇಖಪಾಲರಿಂದ ವಿಶ್ವವಿದ್ಯಾನಿಲಯದ ಲೆಕ್ಕಪತ್ರಗಳ ಪರಿಶೋಧನೆಯಾದಾಗ ಮತ್ತು ಪರಿಶೀಲನಾಂಶಗಳೊಡನೆ (observations) ವರದಿಯನ್ನು ಅಥವಾ ಸ್ಪಷ್ಟೀಕರಣಗಳಿಗಾಗಿ ತಡೆಹಿಡಿದ ಬಾಬುಗಳ ಸಂಬಂಧದಲ್ಲಿ ಹೆಚ್ಚಿನ ಆಕ್ಷೇಪಗಳು ಅಥವಾ ಷರಾಗಳಿಗಾಗಿ ವಿಶ್ವವಿದ್ಯಾನಿಲಯಕ್ಕೆ ಲಭ್ಯವಾಗುವಂತೆ ಮಾಡತಕ್ಕದ್ದು. ವಿಶ್ವವಿದ್ಯಾನಿಲಯವು ಅಂಥ ವರದಿಯನ್ನು ಸ್ವೀಕರಿಸಿದ ದಿನದಿಂದ ಮೂವತ್ತು ದಿನಗಳ ಒಳಗಾಗಿ ತನ್ನ ಆಕ್ಷೇಪಗಳನ್ನು ಅಥವಾ ಷರಾಗಳನ್ನು ರಾಜ್ಯ ಸರ್ಕಾರದ ಮೂಲಕ ಮಹಾಲೇಖಪಾಲರಿಗೆ ಕಳುಹಿಸತಕ್ಕದ್ದು.

42. ವಾರ್ಷಿಕ ವರದಿ.– (1) ಕಾರ್ಯನಿರ್ವಾಹಕ ಪರಿಷತ್ತು, ಪ್ರತಿ ಹಣಕಾಸು ವರ್ಷಕ್ಕೆ, ವಿಶ್ವವಿದ್ಯಾನಿಲಯದ ಚಟುವಟಿಕೆಗಳು, ಗುರಿ ಮತ್ತು ಸಾಧನೆಗಳನ್ನು ಸ್ಪಷ್ಟವಾಗಿ ವಿವರಿಸುವ ಎಲ್ಲಾ ವಿವರಗಳನ್ನು ಒಳಗೊಂಡ ಒಂದು ವಾರ್ಷಿಕ ವರದಿಯನ್ನು ತಯಾರಿಸತಕ್ಕದ್ದು ಮತ್ತು ಪ್ರತಿ ವರ್ಷ ಜೂನ್ 30ನೇ ದಿನಾಂಕದೊಳಗೆ ವಿದ್ಯಾವಿಷಯಕ ಪರಿಷತ್ತಿಗೆ ಸಲ್ಲಿಸತಕ್ಕದ್ದು. ವಿದ್ಯಾವಿಷಯಕ ಪರಿಷತ್ತು ಅದರ ಮೇಲೆ ಗೊತ್ತುವಳಿಗಳನ್ನು ಅಂಗೀಕರಿಸಬಹುದು ಮತ್ತು ಅದನ್ನು ಕಾರ್ಯನಿರ್ವಾಹಕ ಪರಿಷತ್ತಿಗೆ ಕಳುಹಿಸತಕ್ಕದ್ದು. ಕಾರ್ಯನಿರ್ವಾಹಕ ಪರಿಷತ್ತು ಅದರಂತೆ ಕ್ರಮ ಕೈಗೊಳ್ಳತಕ್ಕದ್ದು. ಅದರ ಮೇಲೆ ಕೈಗೊಂಡ ಕ್ರಮದ ಬಗ್ಗೆ ವಿದ್ಯಾವಿಷಯಕ ಪರಿಷತ್ತಿಗೆ, ಅದರ ಮುಂಬರುವ ಸಭೆಯಲ್ಲಿ ತಿಳಿಸತಕ್ಕದ್ದು. ವಾರ್ಷಿಕ ವರದಿಯನ್ನು ವಿಶ್ವವಿದ್ಯಾನಿಲಯದ ಜಾಲತಾಣದಲ್ಲಿ ಕೂಡಾ ನಿಯತವಾಗಿ ಅಪಲೋಡ್ ಮಾಡತಕ್ಕದ್ದು.

(2) ವಿಶ್ವವಿದ್ಯಾನಿಲಯದ ವಿದ್ಯಾವಿಷಯಕ ಪರಿಷತ್ತಿನ ಗೊತ್ತುವಳಿಗಳನ್ನು ಅಳವಡಿಸಿದ ವಾರ್ಷಿಕ ವರದಿಯ ಮತ್ತು ವಿದ್ಯಾವಿಷಯಕ ಪರಿಷತ್ತು ತೆಗೆದುಕೊಂಡ ಕ್ರಮಗಳ ವರದಿಯ ಪ್ರತಿಗಳನ್ನು ಪ್ರತಿ ವರ್ಷದ ಸೆಪ್ಟೆಂಬರ್ 30ನೇ ದಿನಾಂಕಕ್ಕೆ ಮೊದಲು ರಾಜ್ಯ ಸರ್ಕಾರಕ್ಕೆ ಸಲ್ಲಿಸತಕ್ಕದ್ದು. ರಾಜ್ಯ ಸರ್ಕಾರವು, ಅದನ್ನು ರಾಜ್ಯ ವಿಧಾನಮಂಡಲದ ಉಭಯ ಸದನಗಳ ಮುಂದೆ, ಅವುಗಳ ಮುಂಬರುವ ಅಧಿವೇಶನದಲ್ಲಿ ಮಂಡಿಸತಕ್ಕದ್ದು.

ಅಧ್ಯಾಯ VII
ಸಂಕೀರ್ಣ ಮತ್ತು ತಾತ್ಕಾಲಿಕ ಉಪಬಂಧಗಳು

43. ಖರೀದಿಗಳ ಕಾರ್ಯಗತಗೊಳಿಸುವಿಕೆ.– ವಿಶ್ವವಿದ್ಯಾಲಯದ ವ್ಯವಸ್ಥಾಪನೆ ಮತ್ತು ಆಡಳಿತಕ್ಕೆ ಸಂಬಂಧಿಸಿದ ಎಲ್ಲಾ ಖರೀದಿಗಳು, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ, 1999ರಲ್ಲಿ (2000ರ ಕರ್ನಾಟಕ ಅಧಿನಿಯಮ 29) ನಿರ್ವಹಿಸುವಂತೆ ಇರತಕ್ಕದ್ದು.

44. ತಾತ್ಕಾಲಿಕ ಉಪಬಂಧಗಳು.– ಈ ಅಧಿನಿಯಮ ಮತ್ತು ಪರಿನಿಯಮಗಳಲ್ಲಿ ಏನೇ ಒಳಗೊಂಡಿದ್ದರೂ,–

(i) ಮೊದಲ ಕುಲಪತಿಯನ್ನು ಸರ್ಕಾರವು ಸೂಕ್ತವೆಂದು ಭಾವಿಸಬಹುದಾದ ಅಂಥ ವಿಧಾನದಲ್ಲಿ ಮತ್ತು ಅಂಥ ಷರತ್ತುಗಳ ಮೇಲೆ ನೇಮಕ ಮಾಡತಕ್ಕದ್ದು;

(ii) ಮೊದಲ ಕುಲಸಚಿವ, ಮೊದಲ ಪರೀಕ್ಷೆಗಳ ನಿಯಂತ್ರಕ ಮತ್ತು ಮೊದಲ ಹಣಕಾಸು ಅಧಿಕಾರಿಯನ್ನು ಸರ್ಕಾರವು ನೇಮಕ ಮಾಡತಕ್ಕದ್ದು;

(iii) ಈ ಅಧಿನಿಯಮವು ಪ್ರಾರಂಭವಾದ ಮೇಲೆ, ಸೊಸೈಟಿಯ ಎಲ್ಲಾ ಬೋಧನಾ ಚಟುವಟಿಕೆಗಳು, ಮಾನವ ಸಂಪನ್ಮೂಲಗಳು, ಆಸ್ತಿಗಳು ಮತ್ತು ಹೊಣೆಗಾರಿಕೆಗಳು ಈ ಅಧಿನಿಯಮದ ಅಡಿಯಲ್ಲಿ ಸ್ಥಾಪಿಸಲಾದ ವಿಶ್ವವಿದ್ಯಾಲಯಕ್ಕೆ ವರ್ಗಾವಣೆಗೊಳ್ಳತಕ್ಕದ್ದು; ಮತ್ತು

(iv) ಪರಿನಿಯಮಗಳು, ಆರ್ಡಿನೆನ್ಸ್‌ಗಳು ಮತ್ತು ವಿನಿಯಮಗಳನ್ನು ಕುಲಪತಿಯು ಕುಲಾಧಿಪತಿಯ ಪೂರ್ವಾನುಮೋದನೆಯೊಂದಿಗೆ ಮತ್ತು ನಿಧಿಗಳ ಲಭ್ಯತೆಗೆ ಒಳಪಟ್ಟು, ಈ ಅಧಿನಿಯಮದ, ಪರಿನಿಯಮಗಳ, ಆರ್ಡಿನೆನ್ಸ್‌ಗಳ ಮತ್ತು ವಿನಿಯಮಗಳ ಉಪಬಂಧಗಳನ್ನು ಕೈಗೊಳ್ಳುವ ಉದ್ದೇಶಕ್ಕಾಗಿ ವಿಶ್ವವಿದ್ಯಾಲಯದ ಎಲ್ಲಾ ಅಥವಾ ಯಾವುದೇ ಪ್ರಕಾರ್ಯಗಳನ್ನು ನಿರ್ವಹಿಸುವುದು ಹಾಗೂ ಈ ಅಧಿನಿಯಮದ, ಪರಿನಿಯಮಗಳ, ಆರ್ಡಿನೆನ್ಸ್‌ಗಳ ಮತ್ತು ವಿನಿಯಮಗಳ ಆಯಾ ಉದ್ದೇಶಕ್ಕಾಗಿ ವಿಶ್ವವಿದ್ಯಾಲಯದ ಯಾವುದೇ ಪ್ರಾಧಿಕಾರವು ಚಲಾಯಿಸಬೇಕಾದ ಅಥವಾ ನಿರ್ವಹಿಸಬೇಕಾದ ಯಾವುದೇ ಅಧಿಕಾರಗಳನ್ನು ಈ ಅಧಿನಿಯಮದ, ಪರಿನಿಯಮಗಳ, ಆರ್ಡಿನೆನ್ಸ್‌ಗಳ ಮತ್ತು ವಿನಿಯಮಗಳಲ್ಲಿ ಕಲ್ಪಿಸಲಾದಂತೆ ಅಸ್ತಿತ್ವಕ್ಕೆ ಬರುವವರೆಗೆ ಅಂಥ ಪ್ರಾಧಿಕಾರವು ಚಲಾಯಿಸಬಹುದು ಅಥವಾ ಯಾವುದೇ ಕರ್ತವ್ಯಗಳನ್ನು ನಿರ್ವಹಿಸಬಹುದು.

45. ವಿಶ್ವವಿದ್ಯಾಲಯದ ಪ್ರಾಧಿಕಾರಗಳು ಮತ್ತು ಅಧಿಕಾರಿಗಳು ಹಾಗೂ ಇತರ ವಿಷಯಗಳು.– ವಿಶ್ವವಿದ್ಯಾಲಯದ ಪ್ರಾಧಿಕಾರಗಳು ಮತ್ತು ಅವುಗಳ ರಚನೆ, ಅಧಿಕಾರಗಳು, ಪ್ರಕಾರ್ಯಗಳು ಮತ್ತು ಅವುಗಳಿಗೆ ಸಂಬಂಧಿಸಿದ ಇತರ

ವಿಷಯಗಳು, ವಿಶ್ವವಿದ್ಯಾಲಯದ ಅಧಿಕಾರಿಗಳು ಮತ್ತು ಅವರ ನೇಮಕಾತಿ, ಅಧಿಕಾರಗಳು, ಪ್ರಕಾರ್ಯಗಳು ಮತ್ತು ಅವರಿಗೆ ಸಂಬಂಧಿಸಿದ ಇತರ ವಿಷಯಗಳು ಹಾಗೂ ವಿಶ್ವವಿದ್ಯಾಲಯದ ಹಣಕಾಸು, ಅಧಿಕಾರಗಳು, ಬೋಧನೆ, ಆಡಳಿತ ಮತ್ತು ವ್ಯವಸ್ಥಾಪನೆಗೆ ಸಂಬಂಧಿಸಿದ ಎಲ್ಲ ಇತರ ವಿಷಯಗಳು ಈ ಅಧಿನಿಯಮದ ಉಪಬಂಧಗಳಿಗೆ ಒಳಪಟ್ಟು ಅನುಸೂಚಿಯಲ್ಲಿ ನಿರ್ದಿಷ್ಟ ಪಡಿಸಿರುವಂತೆ ಅಥವಾ ಪರಿನಿಯಮಗಳು, ಆರ್ಡಿನೆನ್ಸ್‌ಗಳು ಮತ್ತು ವಿನಿಯಮಗಳ ಮೂಲಕ ಉಪಬಂಧಿಸಬಹುದಾದಂತೆ ಇರತಕ್ಕದ್ದು.

46. ನಷ್ಟಭರ್ತಿ.– ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಿದ ಯಾವುದೇ ಪರಿನಿಯಮಗಳು, ಆರ್ಡಿನೆನ್ಸ್‌ಗಳು ಅಥವಾ ವಿನಿಯಮಗಳ ಅನುಸರಣೆಯಲ್ಲಿ ಸದ್ಭಾವನೆಯಿಂದ ಮಾಡಿದ ಅಥವಾ ಮಾಡಲಾಗಿದೆಯೆಂದು ತಾತ್ಪರ್ಯವಾಗುವ ಯಾವುದೇ ಕಾರ್ಯದ ಸಂಬಂಧದಲ್ಲಿ ವಿಶ್ವವಿದ್ಯಾಲಯದ ಕುಲಪತಿಯ, ಪ್ರಾಧಿಕಾರಗಳ ಅಥವಾ ಅಧಿಕಾರಿಗಳ ಅಥವಾ ಇತರ ಯಾರೇ ವ್ಯಕ್ತಿಯ ವಿರುದ್ಧ ಯಾವುದೇ ದಾವೆ, ಪ್ರಾಸಿಕ್ಯೂಷನ್ ಅಥವಾ ಇತರ ಕಾನೂನು ವ್ಯವಹರಣೆಯನ್ನು ಹೂಡತಕ್ಕದ್ದಲ್ಲ ಮತ್ತು ಅವುಗಳಿಂದ/ ಅವರಿಂದ ಯಾವುದೇ ನಷ್ಟ ಪರಿಹಾರವನ್ನು ಕ್ಲೇಮು ಮಾಡತಕ್ಕದ್ದಲ್ಲ.

47. ಅನುಸೂಚಿಯನ್ನು ತಿದ್ದುಪಡಿ ಮಾಡಲು ಅಧಿಕಾರ.– (1) ಕಾರ್ಯನಿರ್ವಾಹಕ ಷರಿಷತ್ತು, ಕುಲಾಧಿಪತಿಯ ಮತ್ತು ರಾಜ್ಯ ಸರ್ಕಾರದ ಪೂರ್ವಾನುಮೋದನೆಯೊಂದಿಗೆ ಅಧಿಸೂಚನೆಯ ಮೂಲಕ ಅನುಸೂಚಿಯನ್ನು ತಿದ್ದುಪಡಿ ಮಾಡಬಹುದು.

(2) (1)ನೇ ಉಪಪ್ರಕರಣದ ಅಡಿಯಲ್ಲಿ ಮಾಡಲಾದ ಪ್ರತಿಯೊಂದು ಅಧಿಸೂಚನೆಯ ಒಂದು ಪ್ರತಿಯನ್ನು, ಅದನ್ನು ಮಾಡಿದ ತರುವಾಯ ಸಾಧ್ಯವಾದಷ್ಟು ಬೇಗನೆ ರಾಜ್ಯ ವಿಧಾನಮಂಡಲದ ಪ್ರತಿಯೊಂದು ಸದನದ ಮುಂದೆ ಮಂಡಿಸತಕ್ಕದ್ದು.

48. ಪ್ರಾರಂಭದಲ್ಲಿ ತೊಂದರೆಗಳನ್ನು ನಿವಾರಿಸಲು ಅಧಿಕಾರ.– (1) ವಿಶ್ವವಿದ್ಯಾನಿಲಯದ ಯಾವುದೇ ಪ್ರಾಧಿಕಾರದ ಪ್ರಥಮ ರಚನೆ ಅಥವಾ, ಪುನರ್ ರಚನೆಗೆ ಅಥವಾ ಈ ಅಧಿನಿಯಮದ ಉಪಬಂಧಗಳನ್ನು ಜಾರಿಗೊಳಿಸುವುದಕ್ಕೆ ಸಂಬಂಧಿಸಿದಂತೆ ಯಾವುದೇ ತೊಂದರೆ ಉದ್ಭವಿಸಿದರೆ, ರಾಜ್ಯ ಸರ್ಕಾರವು ಅಂಥ ತೊಂದರೆಯನ್ನು ನಿವಾರಿಸುವುದಕ್ಕಾಗಿ ಅವಶ್ಯಕವೆಂದು ಅಥವಾ ಸೂಕ್ತವೆಂದು ತನಗೆ ಕಂಡುಬರಬಹುದಾದ, ಈ ಅಧಿನಿಯಮದ ಉಪಬಂಧಗಳಿಗೆ ಅಸಂಗತವಾಗಿರದ ಅಂಥ ಉಪಬಂಧಗಳನ್ನು ಅಧಿಸೂಚನೆಯ ಮೂಲಕ ರಚಿಸಬಹುದು:

ಪರಂತು, ಈ ಅಧಿನಿಯಮದ ಪ್ರಾರಂಭದ ದಿನಾಂಕದಿಂದ ಐದು ವರ್ಷಗಳ ಅವಧಿಯು ಮುಕ್ತಾಯವಾದ ತರುವಾಯ ಅಂಥ ಯಾವುದೇ ಅಧಿಸೂಚನೆಯನ್ನು ಹೊರಡಿಸತಕ್ಕದ್ದಲ್ಲ.

(2) (1)ನೇ ಉಪಪ್ರಕರಣದ ಅಡಿಯಲ್ಲಿ ಹೊರಡಿಸಲಾದ ಪ್ರತಿಯೊಂದು ಅಧಿಸೂಚನೆಯನ್ನು ಅದನ್ನು ಹೊರಡಿಸಿದ ತರುವಾಯ ಆದಷ್ಟು ಬೇಗನೇ ರಾಜ್ಯ ವಿಧಾನಮಂಡಲದ ಪ್ರತಿಯೊಂದು ಸದನದ ಮುಂದೆ, ಒಂದು ಅಧಿವೇಶನ ಅಥವಾ ಎರಡು ನಿರಂತರ ಅಧಿವೇಶನಗಳಲ್ಲಿ ಅಡಕವಾಗಬಹುದಾದ ಮೂವತ್ತು ದಿನಗಳ ಒಟ್ಟು ಅವಧಿಯಲ್ಲಿ ಅದು ಅಧಿವೇಶನದಲ್ಲಿರುವಾಗ ಮಂಡಿಸತಕ್ಕದ್ದು ಮತ್ತು ಅದನ್ನು ಹಾಗೆ ಮಂಡಿಸಿದ ಅಧಿವೇಶನ ಅಥವಾ ನಿಕಟೋತ್ತರ ಅಧಿವೇಶನಗಳು ಮುಕ್ತಾಯವಾಗುವ ಮೊದಲು ವಿಧಾನಮಂಡಲದ ಯಾವುದೇ ಸದನವು ಆ ಅಧಿಸೂಚನೆಯಲ್ಲಿ ಯಾವುದೇ ಮಾರ್ಪಾಟನ್ನು ಅಥವಾ ನಿರ್ದೇಶನವನ್ನು ಮಾಡಬೇಕೆಂದು ಒಪ್ಪಿದರೆ ಅಥವಾ ಅಧಿಸೂಚನೆಯನ್ನು ಮಾಡಬಾರದೆಂದು ತೀರ್ಮಾನಿಸಿದರೆ ಮತ್ತು ಇನ್ನೊಂದು ಸದನವು ಅಂಥ ಮಾರ್ಪಾಟನ್ನು ಅಥವಾ ನಿರ್ದೇಶನವನ್ನು ಒಪ್ಪಿದರೆ ಆ ತರುವಾಯ ಅಂಥ ಅಧಿಸೂಚನೆಯು ಅಂಥ ಮಾರ್ಪಾಟಾದ ರೀತಿಯಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕದ್ದು ಅಥವಾ ಸಂದರ್ಭಾನುಸಾರವಾಗಿ ಪರಿಣಾಮಕಾರಿಯಾಗತಕ್ಕದಲ್ಲ. ಆದಾಗ್ಯೂ ಅಂಥ ಮಾರ್ಪಾಟು ಅಥವಾ ರದ್ದಿಯಾತಿಯು ಆ ಅಧಿಸೂಚನೆಯ ಅಡಿಯಲ್ಲಿ ಈ ಹಿಂದೆ ಮಾಡಲಾದ ಯಾವುದರ ಮಾನ್ಯತೆಗೂ ಪ್ರತಿಕೂಲವಾಗಿರತಕ್ಕದ್ದಲ್ಲ.

ಅನುಸೂಚಿ
(29ನೇ ಪ್ರಕರಣವನ್ನು ನೋಡಿ)

1. ಸ್ಥಾಯಿ ಸಮಿತಿಯ ರಚನೆ ಮತ್ತು ಅಡ್–ಹಾಕ್ ಸಮಿತಿಗಳ ನೇಮಕಾತಿ.– (1) ಈ ಅಧಿನಿಯಮದ ಮತ್ತು ಈ ಸಂಬಂಧದಲ್ಲಿ ರಚಿಸಲಾದ ಪರಿನಿಯಮಗಳು, ಆರ್ಡಿನೆನ್ಸ್‌ಗಳು ಮತ್ತು ವಿನಿಯಮಗಳ ಉಪಬಂಧಗಳಿಗೆ ಒಳಪಟ್ಟು, ಕಾರ್ಯನಿರ್ವಾಹಕ ಪರಿಷತ್ತು, ವಿದ್ಯಾಲಯದ ಯಾವುದೇ ಅಧಿಕಾರವನ್ನು ಚಲಾಯಿಸಲು ಅಥವಾ ಯಾವುದೇ

ಪ್ರಕಾರ್ಯವನ್ನು ನಿರ್ವಹಿಸಲು ಅಥವಾ ವಿದ್ಯಾಲಯಕ್ಕೆ ಸಂಬಂಧಿಸಿದ ಯಾವುದೇ ವಿಷಯದ ಬಗ್ಗೆ ವಿಚಾರಣೆ ನಡೆಸಲು, ವರದಿ ಮಾಡಲು ಅಥವಾ ಸಲಹೆ ನೀಡಲು ಕಾರ್ಯನಿರ್ವಾಹಕ ಪರಿಷತ್ತು ಸೂಕ್ತವೆಂದು ಆಲೋಚಿಸುವ ಅಂಥ ಉದ್ದೇಶಗಳಿಗಾಗಿ ಮತ್ತು ಅಂಥ ಅಧಿಕಾರಗಳೊಂದಿಗೆ ನಿರ್ಣಯದ ಮೂಲಕ ಅಂಥ ಸ್ಥಾಯಿ ಸಮಿತಿಗಳನ್ನು ರಚಿಸಬಹುದು ಅಥವಾ ಅಡ್– ಹಾಕ್ ಸಮಿತಿಗಳನ್ನು ನೇಮಕ ಮಾಡಬಹುದು.

(2) ಕಾರ್ಯನಿರ್ವಾಹಕ ಪರಿಷತ್ತು, ತಾನು ಸೂಕ್ತವೆಂದು ಪರಿಗಣಿಸುವಂಥ ವ್ಯಕ್ತಿಗಳನ್ನು ಸ್ಥಾಯಿ ಸಮಿತಿಗೆ ಅಥವಾ ಅಡ್–ಹಾಕ್ ಸಮಿತಿಗೆ ಸಹ–ಸದಸ್ಯರನ್ನಾಗಿ ಸೇರಿಸಿಕೊಳ್ಳಬಹುದು ಮತ್ತು ಕಾರ್ಯನಿರ್ವಾಹಕ ಪರಿಷತ್ತಿನ ಆಹ್ವಾನಿತರಾಗಿ ಸಭೆಗಳಿಗೆ ಹಾಜರಾಗಲು ಅವರಿಗೆ ಅನುಮತಿ ನೀಡಬಹುದು.

2. ಆಯ್ಕೆ ಸಮಿತಿ.– (1) ವಿಶ್ವವಿದ್ಯಾಲಯದ ಪ್ರಾಧ್ಯಾಪಕರುಗಳು, ಸಹ ಪ್ರಾಧ್ಯಾಪಕರು, ಸಹಾಯಕ ಪ್ರಾಧ್ಯಾಪಕರು, ಬೋಧಕರು ಮತ್ತು ಇತರ ಬೋಧನಾ ಹುದ್ದೆಗಳ ನೇಮಕಾತಿಗಾಗಿ ಕಾರ್ಯನಿರ್ವಾಹಕ ಪರಿಷತ್ತಿಗೆ ಶಿಫಾರಸುಗಳನ್ನು ಮಾಡಲು ಕಾರ್ಯನಿರ್ವಾಹಕ ಪರಿಷತ್ತು ಆಯ್ಕೆ ಸಮಿತಿಯನ್ನು ರಚಿಸತಕ್ಕದ್ದು.

(2) ಆಯ್ಕೆ ಸಮಿತಿಯು ಈ ಮುಂದಿನ ಸದಸ್ಯರುಗಳನ್ನು ಒಳಗೊಂಡಿರತಕ್ಕದ್ದು, ಎಂದರೆ:–

(ಎ)	ಕುಲಪತಿ	–	ಅಧ್ಯಕ್ಷ
(ಬಿ)	ವ್ಯಾಸಂಗ ವಿಭಾಗದ ಡೀನ್(ಗಳು)	–	ಸದಸ್ಯರು
(ಸಿ)	ಸಂಬಂಧಪಟ್ಟ ವಿಷಯದ ಪ್ರಾಧ್ಯಾಪಕ ಅಥವಾ ವಿಶ್ವವಿದ್ಯಾಲಯದಲ್ಲಿ ಲಭ್ಯವಿಲ್ಲದಿದ್ದರೆ ಕುಲಪತಿಯು ನಾಮನಿರ್ದೇಶಿಸಿದ ಇತರ ಪ್ರಾಧ್ಯಾಪಕ	–	ಸದಸ್ಯ
(ಡಿ)	ವಿದ್ಯಾವಿಷಯಕ ಪರಿಷತ್ತು ಶಿಫಾರಸ್ಸು ಮಾಡಿದ ಹೆಸರುಗಳ ಪಟ್ಟಿಯ ಪೈಕಿ ಕುಲಾಧಿಪತಿಯವರು ಕುಲಪತಿಯೊಂದಿಗೆ ಸಮಾಲೋಚಿಸಿ ನಾಮನಿರ್ದೇಶಿಸಿದ ವಿಶ್ವವಿದ್ಯಾಲಯದ ಹೊರಗಿನ ಮೂವರು ವಿಷಯ ತಜ್ಞರು	–	ಸದಸ್ಯರು

(3) ಕುಲಸಚಿವನು ಆಯ್ಕೆ ಸಮಿತಿಯ ಸಭೆಗಳನ್ನು ಅಗತ್ಯವಿದ್ದಾಗಲೆಲ್ಲ ಕರೆಯತಕ್ಕದ್ದು.

3. ಸಂಶೋಧನಾ ಪರಿಷತ್ತು.– (1) ಸಂಶೋಧನಾ ಪರಿಷತ್ತು ವಿಶ್ವವಿದ್ಯಾಲಯದ ಪ್ರಧಾನ ಸಂಶೋಧನಾ ನಿಕಾಯವಾಗಿರತಕ್ಕದ್ದು ಮತ್ತು ಅದು ಈ ಮುಂದಿನ ಸಂಯೋಜನೆಯನ್ನು ಹೊಂದಿರತಕ್ಕದ್ದು, ಎಂದರೆ:–

(ಎ)	ಕುಲಪತಿ	–	ಅಧ್ಯಕ್ಷ
(ಬಿ)	ರಾಜ್ಯ ಸರ್ಕಾರದ ಆರ್ಥಿಕ ಮತ್ತು ಸಾಂಖ್ಯಿಕ ಇಲಾಖೆಯ ನಿರ್ದೇಶಕ, ಭಾರತೀಯ ಸಾಂಖ್ಯಿಕ ಸಂಸ್ಥೆಯ ನಿರ್ದೇಶಕ, ಭಾರತೀಯ ವ್ಯವಸ್ಥಾಪನಾ ಸಂಸ್ಥೆಯ ನಿರ್ದೇಶಕ	–	ಪದನಿಮಿತ್ತ–ಸದಸ್ಯ
(ಸಿ)	ಆರ್ಥಿಕ ತಜ್ಞರು, ಸಾಮಾಜಿಕ ವಿಜ್ಞಾನ ತಜ್ಞರು ಮತ್ತು ಸಂಬಂಧಿಸಿದ ಕ್ಷೇತ್ರಗಳ ಪೈಕಿ ಕುಲಪತಿಯು ನಾಮನಿರ್ದೇಶಿಸಿದ ಮೂವರು ಶ್ರೇಷ್ಠ ತಜ್ಞರು/ಸಂಶೋಧಕರು	–	ಸದಸ್ಯ
(ಡಿ)	ವ್ಯಾಸಂಗ ವಿಭಾಗದ ಡೀನ್‌ಗಳು	–	ಸದಸ್ಯ
(ಇ)	ಕುಲಪತಿಯು, ಅವರ ಸಂಶೋಧನಾ ಕೊಡುಗೆಗಳ ಆಧಾರದ ಮೇಲೆ ನಾಮನಿರ್ದೇಶಿಸಿದ ಮೂವರು ಪ್ರಾಧ್ಯಾಪಕರು/ಸಹಾಯಕ ಪ್ರಾಧ್ಯಾಪಕರು	–	ಸದಸ್ಯ
(ಎಫ್)	ಪ್ರಾಯೋಜಿತ ಸಂಶೋಧನೆ ಮತ್ತು ಸಮಾಲೋಚನೆಯ ನಿರ್ದೇಶಕ	–	ಸದಸ್ಯ
(ಜಿ)	ಕುಲಸಚಿವ	–	ಕಾರ್ಯದರ್ಶಿ
(ಹೆಚ್)	ಸಂಶೋಧನಾ ಪರಿಷತ್ತಿನ ಸಭೆಗಳಲ್ಲಿ ಪರೀಕ್ಷೆಗಳ ನಿಯಂತ್ರಕ ಮತ್ತು ಹಣಕಾಸು ಅಧಿಕಾರಿಯು ಆಹ್ವಾನಿತರಾಗಿರಬಹುದು	–	ಆಹ್ವಾನಿತರು

(2) ಸಂಶೋಧನಾ ಪರಿಷತ್ತು, ಒಂದು ಶೈಕ್ಷಣಿಕ ವರ್ಷದಲ್ಲಿ ಸಾಮಾನ್ಯವಾಗಿ ಮೂರು ಬಾರಿ ಸಭೆ ಸೇರತಕ್ಕದ್ದು ಮತ್ತು ಎರಡ ನಿಕಟ ಸಭೆಗಳ ನಡುವಿನ ಆ ಅವಧಿಯು ಇಪ್ಪತ್ತು ವಾರಗಳನ್ನು ಮೀರತಕ್ಕದ್ದಲ್ಲ.

(3) ತುರ್ತು ಸಂದರ್ಭದಲ್ಲಿ ಕುಲಪತಿಯು ಸಂಶೋಧನಾ ಪರಿಷತ್ತಿನ ವಿಶೇಷ ಸಭೆಯನ್ನು ಕರೆಯಬಹದು.

4. ಸಂಶೋಧನಾ ಪರಿಷತ್ತಿನ ಅಧಿಕಾರಿಗಳು ಮತ್ತು ಪ್ರಕಾರ್ಯಗಳು.– (1) ಈ ಅಧಿನಿಯಮದ, ಪರಿನಿಯಮಗಳ, ಆರ್ಡಿನೆನ್ಸ್‌ಗಳು ಮತ್ತು ವಿನಿಯಮಗಳ ಉಪಬಂಧಗಳಿಗೆ ಒಳಪಟ್ಟು ವಿಶ್ವವಿದ್ಯಾಲಯದ ಸಂಶೋಧನಾ ಕಾರ್ಯ ಮತ್ತು ಕೊಡುಗೆಗಳ ಗುಣಮಟ್ಟ ಮತ್ತು ಮಾನಕಗಳ ನಿರ್ವಹಣೆಯ ನಿಯಂತ್ರಣ ಮತ್ತು ಪ್ರಧಾನ ನಿಯಂತ್ರಣದ ಅಧಿಕಾರಗಳನ್ನು ಹೊಂದಿರುವುದು ಮತ್ತು ಅದಕ್ಕೆ ಜವಾಬ್ದಾರಿಯಾಗಿರುವುದು.

(2) ವಿಶ್ವವಿದ್ಯಾಲಯದ ಸಂಶೋಧನಾ ಕಾರ್ಯ ಮತ್ತು ಕೊಡುಗೆಗಳಿಗೆ ಸಂಬಂಧಿಸಿದ ಎಲ್ಲಾ ವಿಷಯಗಳ ಮೇಲೆ ಕಾರ್ಯನಿರ್ವಾಹಕ ಪರಿಷತ್ತಿಗೆ ಸಲಹೆ ನೀಡುವ ಅಧಿಕಾರವನ್ನು ಸಂಶೋಧನಾ ಪರಿಷತ್ತು ಹೊಂದಿರತಕ್ಕದ್ದು.

(3) ಸಂಶೋಧನಾ ಪರಿಷತ್ತಿನ ರಚನೆ, ಕಾಲಾವಧಿ, ಅಧಿಕಾರಗಳು, ಪ್ರಕಾರ್ಯಗಳು, ಕರ್ತವ್ಯಗಳು ಮತ್ತು ಜವಾಬ್ದಾರಿಗಳು ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದಂತೆ ಇರತಕ್ಕದ್ದು.

(4) ಸಂಶೋಧನಾ ಪರಿಷತ್ತಿನ ಪ್ರಕಾರ್ಯಗಳು, ಈ ಮುಂದಿನವುಗಳನ್ನು ಒಳಗೊಂಡಿದ್ದು, ಆದರೆ ಈ ಮುಂದಿನ ಕ್ಷೇತ್ರಗಳಿಗೆ ಮಿತಿಗೊಳಿಸತಕ್ಕದ್ದಲ್ಲ,–

(i) ರಾಷ್ಟ್ರೀಯ ಮತ್ತು ದೇಶದಾದ್ಯಂತ ಶ್ರೇಷ್ಠ ಸಾರ್ವಜನಿಕರು ಮತ್ತು ವಿಶೇಷವಾಗಿ ಸಮಾಜ ವಿಜ್ಞಾನಗಳು ಮತ್ತು ಅರ್ಥಶಾಸ್ತ್ರಗಳ ಕ್ಷೇತ್ರಗಳಲ್ಲಿ ಕಾರ್ಯನಿರ್ವಹಿಸುವ ಖಾಸಗಿ ಸಂಸ್ಥೆಗಳು ಮತ್ತು ವಿಜೆನ್ಸಿಗಳೊಂದಿಗೆ ಅನುಭವಗಳು ಮತ್ತು ಪರಸ್ಪರ ಚರ್ಚೆಗಳ ಮೂಲಕ ಪುನರಾವಲೋಕನದ ಆಧಾರದ ಮೇಲೆ ಆದ್ಯತೆಯ ಸಂಶೋಧನಾ ಕ್ಷೇತ್ರಗಳನ್ನು ಗುರುತಿಸುವುದು;

(ii) ವಿಶ್ವವಿದ್ಯಾಲಯದಲ್ಲಿ ಪ್ರಸ್ತುತ ಮತ್ತು ಪ್ರಸ್ತಾವಿತ ಸಂಶೋಧನಾ ಕಾರ್ಯಕ್ರಮಗಳು ಮತ್ತು ಚಟುವಟಿಕೆಗಳಿಗಾಗಿ ವಿಸೃತ ಮಾರ್ಗಸೂಚಿಗಳನ್ನು ರೂಪಿಸುವುದು ಹಾಗೂ ಅವುಗಳ ಸುಧಾರಣೆಗಾಗಿ ಸೂಕ್ತ ಸಲಹೆ ಮತ್ತು ಮಾರ್ಗದರ್ಶನವನ್ನು ನೀಡುವುದು;

(iii) ರಾಷ್ಟ್ರೀಯ/ಅಂತರಾಷ್ಟ್ರೀಯ ಯೋಜನೆ ನಿಧಿನೀಡಿಕೆ ಏಜೆನ್ಸಿಗಳ ಮತ್ತು ವಿಶ್ವವಿದ್ಯಾಲಯದ ನಡುವೆ ಹೆಚ್ಚುವರಿ ಸಂಪನ್ಮೂಲಗಳನ್ನು ಕ್ರೋಢಿಕರಿಸಲು ನಿಕಟ ಸಂಬಂಧ ಮತ್ತು ಸಮನ್ವಯ ಶಕ್ತಿಯನ್ನು ಬೆಳೆಸುವಲ್ಲಿ ನೇರ ನೀಡುವುದು; ಮತ್ತು

(iv) ಅರ್ಥಶಾಸ್ತ್ರ ಶಿಕ್ಷಣ, ಸಂಶೋಧನೆ, ಸಮಾಲೋಚನೆ ಮತ್ತು ವಿಸ್ತರಣೆ ಸೇವೆಗಳಲ್ಲಿ ಶ್ರೇಷ್ಠ ಕೇಂದ್ರವಾಗಿಸುವುದಕ್ಕಾಗಿ ದೀರ್ಘಾವಧಿ ಸಂಶೋಧನಾ ನೀತಿ ಮತ್ತು ಕಾರ್ಯತಂತ್ರಗಳನ್ನು ರೂಪಿಸುವಲ್ಲಿ ವಿಶ್ವವಿದ್ಯಾಲಯವನ್ನು ಸಶಕ್ತಗೊಳಿಸುವುದು.

(5) ಸಂಶೋಧನಾ ಪರಿಷತ್ತಿನ ಸಭೆಗಳನ್ನು ನಡೆಸುವುದಕ್ಕಾಗಿ ನಿಯಮಗಳು ಮತ್ತು ಕಾರ್ಯವಿಧಾನಗಳನ್ನು ಪರಿನಿಯಮಗಳಲ್ಲಿ ಉಪಬಂಧಿಸಬಹುದು.

(6) ಕುಲಾಧಿಪತಿ ಅಥವಾ ರಾಜ್ಯ ಸರ್ಕಾರವು ಆದೇಶದ ಮೂಲಕ ನಿರ್ದಿಷ್ಟಪಡಿಸಬಹುದಾದ ಅಂಥ ಉಲ್ಲೇಖದ ನಿಬಂಧನೆಗಳನ್ನು ಚರ್ಚಿಸಲು ಸಂಶೋಧನಾ ಪರಿಷತ್ತಿನ ಸಭೆಗಳನ್ನು ನಡೆಸಲು ನಿರ್ದೇಶಿಸಬಹುದು ಹಾಗೂ ಅಂಥ ನಿರ್ದೇಶನಗಳನ್ನು ಕುಲಪತಿಯು ಅನುಸರಿಸತಕ್ಕದ್ದು.

5. ಅಧ್ಯಯನಗಳ ಮಂಡಲಿ.– (1) ವಿನಿಯಮಗಳ ಮೂಲಕ ನಿಯಮಿಸಬಹುದಾದಂತೆ ಪ್ರತಿಯೊಂದು ವ್ಯಾಸಂಗ ವಿಷಯ ಅಥವಾ ವ್ಯಾಸಂಗ ವಿಷಯಗಳ ಸಮೂಹಕ್ಕಾಗಿ ಅಧ್ಯಯನಗಳ ಮಂಡಲಿಯು ಇರತಕ್ಕದ್ದು:

ಪರಂತು, ಕಾರ್ಯನಿರ್ವಾಹಕ ಪರಿಷತ್ತು ಅಗತ್ಯವಿದ್ದಾಗಲೆಲ್ಲಾ ಪ್ರತ್ಯೇಕ ಅಂತರ–ವಿಷಯ ಅಧ್ಯಯನಗಳ ಮಂಡಲಿಯನ್ನು ರಚಿಸಬಹುದು.

(2) ವಿಶ್ವವಿದ್ಯಾಲಯದ ಅಧ್ಯಯನಗಳ ಮಂಡಲಿಯು ಈ ಮುಂದಿನ ಸಂಯೋಜನೆಯನ್ನು ಹೊಂದಿರತಕ್ಕದ್ದು, ಎಂದರೆ:–

(ಎ)	ಸಂಬಂಧಪಟ್ಟ ವ್ಯಾಸಂಗ ವಿಭಾಗದ ಡೀನ್	–	ಅಧ್ಯಕ್ಷ
(ಬಿ)	ಕುಲಪತಿಯು ಎರಡು ವರ್ಷಗಳ ಅವಧಿಗಾಗಿ ವಿಶ್ವವಿದ್ಯಾಲಯದ ಪ್ರಾಧ್ಯಾಪಕರು ಮತ್ತು ಸಹ ಪ್ರಾಧ್ಯಾಪಕರ ಪೈಕಿ ನಾಮನಿರ್ದೇಶಿಸಿದ ಐವರು	–	ಸದಸ್ಯರು
(ಸಿ)	ಕುಲಪತಿಯು ಎರಡು ವರ್ಷಗಳ ಅವಧಿಗಾಗಿ ಸರದಿಯ ಆಧಾರದ ಮೇರೆಗೆ ನಾಮನಿರ್ದೇಶಿಸಿದ ವ್ಯಾಸಂಗ ಇಲಾಖೆಯ ಇಬ್ಬರು ಸಹಾಯಕ ಪ್ರಾಧ್ಯಾಪಕರು	–	ಸದಸ್ಯರು

(ಡಿ)	ಕುಲಪತಿಯು ಎರಡು ವರ್ಷಗಳ ಅವಧಿಗಾಗಿ ನಾಮನಿರ್ದೇಶಿಸಿದ ವಿಶ್ವವಿದ್ಯಾಲಯದ ಹೊರಗಿನ ಮೂವರು ತಜ್ಞರು	–	ಸದಸ್ಯರು
(ಇ)	ಕುಲಪತಿಯು ನಾಮನಿರ್ದೇಶಿಸಿದ ಸಂಬಂಧಪಟ್ಟ ವಿಷಯ ಪತ್ರಿಕೆಗಳ/ವ್ಯಾಸಂಗ ವಿಷಯಗಳ ಇಬ್ಬರು ಆಹ್ವಾನಿತರು	–	ಆಹ್ವಾನಿತರು
(ಎಫ್)	ಉಪ/ಸಹಾಯಕ ಕುಲಸಚಿವ	–	ಕಾರ್ಯದರ್ಶಿ

(3) ಅಧ್ಯಯನಗಳ ಮಂಡಲಿಗಳ ಅಧಿಕಾರಗಳು ಮತ್ತು ಪ್ರಕಾರ್ಯಗಳು ಹಾಗೂ ಸಭೆಗಳ ಆವೃತ್ತಿಯು ಆರ್ಡಿನೆನ್ಸ್‌ಗಳು ಮತ್ತು ವಿನಿಯಮಗಳಲ್ಲಿ ನಿಯಮಿಸಿದಂತೆ ಇರತಕ್ಕದ್ದು.

6. ಕಾರ್ಯನಿರ್ವಾಹಕ ಪರಿಷತ್ತು ಅಧಿಕಾರಗಳನ್ನು ಪ್ರತ್ಯಾಯೋಜಿಸುವುದು.– ಕಾರ್ಯನಿರ್ವಾಹಕ ಪರಿಷತ್ತು ತಾನು ಸೂಕ್ತವೆಂದು ಭಾವಿಸುವ ಅಂಥ ತನ್ನ ಅಧಿಕಾರಗಳನ್ನು, ಹಾಗೆ ಪ್ರತ್ಯಾಯೋಜಿಸಲಾಗುವ ಅಧಿಕಾರಗಳನ್ನು ಚಲಾಯಿಸುವಲ್ಲಿ ಕುಲಪತಿಯು ಅಥವಾ ಅಂಥ ಸಮಿತಿಯು ಕೈಗೊಂಡ ಕ್ರಮಗಳನ್ನು ಕಾರ್ಯನಿರ್ವಾಹಕ ಪರಿಷತ್ತಿನ ಮುಂದಿನ ಸಭೆಯಲ್ಲಿ ವರದಿ ಮಾಡತಕ್ಕದ್ದೆಂಬ ಷರತ್ತಿಗೆ ಒಳಪಟ್ಟು, ನಿರ್ಣಯದ ಮೂಲಕ ಕುಲಪತಿಗೆ ಅಥವಾ ಸಮಿತಿಗೆ ಪ್ರತ್ಯಾಯೋಜಿಸಬಹುದು.

7. ಇತರ ಅಧಿಕಾರಿಗಳು ಮತ್ತು ನೌಕರರು.– ಸೇವಾ ಷರತ್ತುಗಳ ಉದ್ದೇಶಕ್ಕಾಗಿ ಮಾಡಲಾದ ಪರಿನಿಯಮಗಳು, ಆರ್ಡಿನೆನ್ಸ್‌ಗಳು ಮತ್ತು ವಿನಿಯಮಗಳಿಗೆ ಒಳಪಟ್ಟು, ವಿಶ್ವವಿದ್ಯಾಲಯದ ಪ್ರತಿಯೊಬ್ಬ ಇತರ ಅಧಿಕಾರಿ ಅಥವಾ ನೌಕರನು, ವಿನಿಯಮಗಳ ಮೂಲಕ ನಿಯಮಿಸಲಾದಂತೆ ಸೇವಾ ಷರತ್ತುಗಳನ್ನು ನಿರೂಪಿಸುವ ಲಿಖಿತ ಕರಾರಿನ ಮೇರೆಗೆ ನೇಮಕ ಮಾಡಿಕೊಳ್ಳತಕ್ಕದ್ದು ಮತ್ತು ಆ ಲಿಖಿತ ಕರಾರನ್ನು ವಿಶ್ವವಿದ್ಯಾಲಯದಲ್ಲಿ ಇಡತಕ್ಕದ್ದು ಮತ್ತು ಸಂಬಂಧಪಟ್ಟ ಅಧಿಕಾರಿಗೆ ಅಥವಾ ನೌಕರನಿಗೆ ಅದರ ಒಂದು ಪ್ರತಿಯನ್ನು ಒದಗಿಸತಕ್ಕದ್ದು.

8. ಭವಿಷ್ಯನಿಧಿ, ಉಪದಾನ, ನಿವೃತ್ತಿ ವೇತನ ಮತ್ತು ಇತರ ಯಾವುದೇ ಲಾಭಕರ ಯೋಜನೆ.– ಕಾರ್ಯನಿರ್ವಾಹಕ ಪರಿಷತ್ ಈ ನಿಟ್ಟಿನಲ್ಲಿ ರಚಿಸಬಹುದಾದ ಅಂಥ ಪರಿನಿಯಮಗಳು, ಆರ್ಡಿನೆನ್ಸ್‌ಗಳು ಮತ್ತು ವಿನಿಯಮಗಳ ಅನುಸಾರವಾಗಿ ವಿಶ್ವವಿದ್ಯಾಲಯದ ಎಲ್ಲಾ ಖಾಯಂ ನೌಕರರು ನಿವೃತ್ತಿ ವೇತನ, ಭವಿಷ್ಯನಿಧಿ ಮತ್ತು ಉಪದಾನದ ಪ್ರಯೋಜನ ಪಡೆಯಲು ಅರ್ಹರಾಗಿರತಕ್ಕದ್ದು.

9. ವಿದ್ಯಾರ್ಥಿಗಳ ವಾಸಸ್ಥಳ.– ವಿಶ್ವವಿದ್ಯಾಲಯದ ಪ್ರತಿಯೊಬ್ಬ ವಿದ್ಯಾರ್ಥಿಯು, ವಿಶ್ವವಿದ್ಯಾಲಯವು ನಿರ್ವಹಿಸುತ್ತಿರುವ ಅಥವಾ ಮಾನ್ಯತೆ ನೀಡಿರುವ ವಿದ್ಯಾರ್ಥಿ ನಿಲಯದಲ್ಲಿ ಅಥವಾ ಆರ್ಡಿನೆನ್ಸ್‌ಗಳು ಮತ್ತು ವಿನಿಯಮಗಳ ಮೂಲಕ ನಿಯಮಿಸಬಹುದಾದ ಅಂಥ ಷರತ್ತುಗಳ ಮೇರೆಗೆ ವಾಸಿಸತಕ್ಕದ್ದು.

10. ಪದವಿ ಅಥವಾ ಡಿಪ್ಲೊಮಾಗಳನ್ನು ಹಿಂತೆಗೆದುಕೊಳ್ಳುವುದು.– (1) ಯಾವೊಬ್ಬ ವ್ಯಕ್ತಿಯು, ಒಂದು ಅಪರಾಧಕ್ಕಾಗಿ, ಕಾನೂನುಬದ್ಧ ನ್ಯಾಯಾಲಯದ ಮೂಲಕ ಅಪರಾಧ ನಿರ್ಣೀತನಾಗಿದ್ದಲ್ಲಿ, ಕಾರ್ಯನಿರ್ವಾಹಕ ಪರಿಷತ್ತಿನ ಅಭಿಪ್ರಾಯದಲ್ಲಿ ನೈತಿಕ ಅಧ:ಪತನವನ್ನು ಒಳಗೊಂಡಿದ್ದು ಅಥವಾ ಅತಿ ದುರ್ನಡತೆಯ ತಪ್ಪಿತಸ್ಥರೆಂದು ಕಂಡುಬಂದಲ್ಲಿ, ಕಾರ್ಯನಿರ್ವಾಹಕ ಪರಿಷತ್ತಿನ ಒಟ್ಟು ಸದಸ್ಯರ ಬಹುಮತದಿಂದ ಮತ್ತು ಆ ಸಭೆಯಲ್ಲಿ ಹಾಜರಿದ್ದು ಮತ ಚಲಾಯಿಸುವ ಮೂರನೆಯ ಎರಡು ಅಂಶಕ್ಕಿಂತ ಕಡಿಮೆಯಿಲ್ಲದ ಸದಸ್ಯರ ಬಹುಮತದಿಂದ ಅಂಗೀಕೃತವಾದ ನಿರ್ಣಯದ ಮೂಲಕ ವಿದ್ಯಾವಿಷಯಕ ಪರಿಷತ್ತಿನ ಶಿಫಾರಸ್ಸಿನ ಮೇಲೆ ಕಾರ್ಯನಿರ್ವಾಹಕ ಪರಿಷತ್ತು, ಅಂಥ ಯಾವೊಬ್ಬ ವ್ಯಕ್ತಿಗೆ ಪ್ರದಾನ ಮಾಡಲಾಗಿದ್ದ ಅಥವಾ ಕೊಡಲಾಗಿದ್ದ ಅಂಥ ಯಾವುದೇ ಪ್ರಶಸ್ತಿ, ಪದವಿ, ಡಿಪ್ಲೊಮಾ ಅಥವಾ ವಿಶೇಷಾಧಿಕಾರವನ್ನು ಹಿಂತೆಗೆದುಕೊಳ್ಳಬಹುದು.

(2) ಕಾರ್ಯನಿರ್ವಾಹಕ ಪರಿಷತ್ತು ಅಂಗೀಕರಿಸುವ ನಿರ್ಣಯವು, ಈ ವಿಷಯದ ಮೇಲೆ ಕ್ರಮಕೈಗೊಳ್ಳುವ ಮೊದಲು ಕುಲಾಧಿಪತಿಯವರು ಅನುಮೋದಿಸಿರತಕ್ಕದ್ದು.

(3) ಈ ಪ್ರಕರಣದ ಅಡಿಯಲ್ಲಿ ಯಾವೊಬ್ಬ ವ್ಯಕ್ತಿಯ ವಿರುದ್ಧ, ಕೈಗೊಳ್ಳಬೇಕೆಂದು ಪ್ರಸ್ತಾವಿಸಿದ ಕ್ರಮದ ವಿರುದ್ಧ ಕಾರಣ ತೋರಿಸಲು ಅವನಿಗೆ ಅವಕಾಶವನ್ನು ಕೊಟ್ಟ ಹೊರತು, ಯಾವುದೇ ಕ್ರಮವನ್ನು ಕೈಗೊಳ್ಳತಕ್ಕದ್ದಲ್ಲ.

(4) ಕಾರ್ಯನಿರ್ವಾಹಕ ಪರಿಷತ್ತು ಅಂಗೀಕರಿಸಿದ ನಿರ್ಣಯದ ಪ್ರತಿಯೊಂದನ್ನು ಸಂಬಂಧಪಟ್ಟ ವ್ಯಕ್ತಿಗೆ ಕಾರಣ ಕೇಳುವ ನೋಟೀಸಿನೊಂದಿಗೆ ಕೂಡಲೇ ಕಳುಹಿಸತಕ್ಕದ್ದು.

11. ಶಿಸ್ತು.– (1) ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳಲ್ಲಿ ಶಿಸ್ತನ್ನು ಕಾಯ್ದುಕೊಂಡು ಬರುವ ಅಂತಿಮ ಪ್ರಾಧಿಕಾರಿಯು ಕುಲಪತಿಯಾಗಿರತಕ್ಕದ್ದು. ಈ ಸಂಬಂಧದಲ್ಲಿ ಅವನ ನಿರ್ದೇಶನಗಳನ್ನು ವಿಭಾಗಗಳ ಮುಖ್ಯಸ್ಥರು ಮತ್ತು ವಿದ್ಯಾರ್ಥಿನಿಲಯಗಳು ಕಾರ್ಯಗತಗೊಳಿಸತಕ್ಕದ್ದು.

(2) (1)ನೇ ಉಪ ಪ್ರಕರಣಲ್ಲಿ ಏನೇ ಒಳಗೊಂಡಿದ್ದರೂ, ಪರೀಕ್ಷೆಯ ಹಾಜರಾತಿಯಿಂದ ಒಬ್ಬ ವಿದ್ಯಾರ್ಥಿಯನ್ನು ಡಿಬಾರ್ ಮಾಡುವ ಅಥವಾ ವಿಶ್ವವಿದ್ಯಾಲಯದಿಂದ ಹೊರಹಾಕುವ ಶಿಕ್ಷೆಯನ್ನು ಕುಲಪತಿಯ ವರದಿಯ ಆಧಾರದ ಮೇಲೆ ಕಾರ್ಯನಿರ್ವಾಹಕ ಪರಿಷತ್ತು ಪರಿಗಣಿಸತಕ್ಕದ್ದು ಮತ್ತು ವಿಧಿಸತಕ್ಕದ್ದು:

ಪರಂತು, ಸಂಬಂಧಪಟ್ಟ ವಿದ್ಯಾರ್ಥಿಗೆ ಆತನ ವಿರುದ್ಧ ಕೈಗೊಳ್ಳಬೇಕಾದ ಪ್ರಸ್ತಾವಿತ ಕ್ರಮದ ಪ್ರತಿಯಾಗಿ ಅಹವಾಲನ್ನು ಹೇಳಿಕೊಳ್ಳಲು ಸೂಕ್ತ ಅವಕಾಶವನ್ನು ನೀಡಿದ ಹೊರತು ಅಂಥ ಶಿಕ್ಷೆಯನ್ನು ವಿಧಿಸತಕ್ಕದ್ದಲ್ಲ.

12. ಪ್ರಾಯೋಜಿತ ಯೋಜನೆಗಳು.– ಈ ಅಧಿನಿಯಮದ, ಪರಿನಿಯಮಗಳು, ಆರ್ಡಿನೆನ್ಸ್‌ಗಳು ಮತ್ತು ವಿನಿಯಮಗಳಲ್ಲಿ ಏನೇ ಒಳಗೊಂಡಿದ್ದರೂ, ವಿಶ್ವವಿದ್ಯಾಲಯದಿಂದ ಜಾರಿಗೊಳಿಸಬೇಕಿರುವ ಪ್ರಾಯೋಜಿತ ಯೋಜನೆಗೆ ಯಾವುದೇ ಸರ್ಕಾರದಿಂದ, ವಿಶ್ವವಿದ್ಯಾಲಯ ಅನುದಾನ ಆಯೋಗದಿಂದ ಅಥವಾ ಇತರ ಏಜೆನ್ಸಿಗಳಿಂದ ನಿಧಿಗಳನ್ನು ವಿಶ್ವವಿದ್ಯಾಲಯವು ಸ್ವೀಕರಿಸಿದಾಗಲೆಲ್ಲಾ,–

(i) ವಿಶ್ವವಿದ್ಯಾಲಯವು ಸ್ವೀಕರಿಸಿದ ಮೊಬಲಗನ್ನು ವಿಶ್ವವಿದ್ಯಾಲಯ ನಿಧಿಯಿಂದ ಪ್ರತ್ಯೇಕವಾಗಿಡತಕ್ಕದ್ದು ಮತ್ತು ಸ್ಕೀಮಿನ ಉದ್ದೇಶಕ್ಕಾಗಿ ಮಾತ್ರ ವಿನಿಯೋಗಿಸತಕ್ಕದ್ದು:

